ಶುಕ್ರವಾರ, ಏಪ್ರಿಲ್ 29, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬಿಸಿಲಿನ ಬೇಗೆ

ದೆಹಲಿಯ ಹೊರವಲಯದ ಗುರುಗ್ರಾಮದಲ್ಲಿ ಬಿಸಿಲಿನ ಬೇಗೆಯಿಂದ ರಕ್ಷಣೆ ಪಡೆದುಕೊಳ್ಳಲು ಗುರುವಾರ ಯುವತಿಯರಿಬ್ಬರು ಶಾಲಿನ ಮೊರೆ ಹೋಗಿದ್ದರು



ಶುಕ್ರವಾರ, ಏಪ್ರಿಲ್ 29, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 118 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಮನುಷ್ಯ ಬೆಳವಣಿಗೆಯಾಗ ಬೇಕಾದರೆ ಯಾರಾದರೂ ಬಡಿದೆಬ್ಬಿಸಬೇಕು ಎಂದು ಹೇಳುತ್ತಲೇ ನಿರ್ದೇಶಕರಾಗಿದ್ದಾರೆ ವಿಕ್ಕಿ ವರುಣ್



ಯುದ್ಧ: ಉಕ್ರೇನ್‌ಗೆ ನ್ಯಾಟೊ ಬೆಂಬಲ 6
ಆಳ-ಅಗಲ: ಬಿಸಿಲ ಬೇಗೆಯ ಬವಣೆ
ಕ.ವಿ.ವಿ ಕುಲಸಚಿವ ಬಂಧನ: ಹತ್ತು ದಿನ ಕಸ್ಟಡಿಗೆ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,521 ▲	17,245 ▲	₹53,100 (ಬೆಂಗಳೂರು)	₹66,100 (ಬೆಂಗಳೂರು)	76.61 ▼

ಹಿಂದಿ ರಾಷ್ಟ್ರಭಾಷೆಯಲ್ಲ: ಚರ್ಚೆಗೆ ಗ್ರಾಸವಾದ ನಟ ಸುದೀಪ್ ಹೇಳಿಕೆ

ಹಿಂದಿ: ಬಿಜೆಪಿಯ ಭಿನ್ನ ಸ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದಿ ರಾಷ್ಟ್ರ ಭಾಷೆ ಹೌದೇ ಅಲ್ಲವೇ ಎಂಬ ಬಗ್ಗೆ ಕನ್ನಡದ ನಟ ಸುದೀಪ್ ಮತ್ತು ಹಿಂದಿ ನಟ ಅಜಯ್ ದೇವಗನ್ ಮಧ್ಯೆ ನಡೆದ ಟ್ವೀಟ್ ಸಮರ ಈಗ ರಾಜಕೀಕರಣಗೊಂಡಿದೆ. ಈ ವಿಚಾರವಾಗಿ ಬಿಜೆಪಿಯಲ್ಲೂ ಭಿನ್ನ ಅಭಿಪ್ರಾಯಗಳೂ ವ್ಯಕ್ತವಾಗಿವೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು 'ಕನ್ನಡವೇ ಸಾರ್ವಭೌಮ ಭಾಷೆ. ಎಲ್ಲರೂ ಇದನ್ನು ಮನಗಂಡು ಗೌರವಿಸಬೇಕು' ಎನ್ನುವ ಮುಖೇನ ಸುದೀಪ್ ಅವರನ್ನು ಬೆಂಬಲಿಸಿದ್ದಾರೆ. ಬೆಂಗಳೂರಿನಲ್ಲಿ ಮಾತನಾಡಿದ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು 'ಹಿಂದಿ ರಾಷ್ಟ್ರೀಯ ಭಾಷೆ ಅಲ್ಲ, ಹಿಂದಿ ಹೇರಿಕೆ ಕೂಡಾ ಮಾಡುವುದಿಲ್ಲ' ಎಂದಿದ್ದಾರೆ. ಬಿಜೆಪಿಯ ಹಲವು ನಾಯಕರು ಸಂಪರ್ಕ ಭಾಷೆಯಾಗಿ ಹಿಂದಿ ಬಳಕೆಯಾಗುವ ಅಗತ್ಯವಿದೆ ಎಂದಿದ್ದರೂ, ಕರ್ನಾಟಕದಲ್ಲಿ ಕನ್ನಡಕ್ಕೆ ಅಗ್ರಸ್ಥಾನ ಎಂದಿದ್ದಾರೆ.

6ನೇ ಪುಟ ನೋಡಿ

ಸುದೀಪ್ ಹೇಳಿಕೆಗೆ ಬೊಮ್ಮಾಯಿ ಬೆಂಬಲ

ಹುಬ್ಬಳ್ಳಿ: 'ಅಜಯ್ ದೇವಗನ್ ಟ್ವೀಟ್‌ಗೆ ಪ್ರತಿಯಾಗಿ ನಟ ಸುದೀಪ್ ಟ್ವೀಟ್ ಮಾಡಿರುವುದು ಸರಿಯಾಗಿದೆ. ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಭಾಷೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

'ಸುದೀಪ್ ಹೇಳಿದ್ದು ಸರಿಯಾಗಿಯೇ ಇದೆ. ಭಾಷಾವಾರು ಆಧಾರದಲ್ಲಿ ರಾಜ್ಯಗಳು ರಚನೆಯಾದ ಮೇಲೆ ಮಾತೃಭಾಷೆಗೆ ಮಹತ್ವ ನೀಡಲಾಗುತ್ತಿದೆ. ಇದನ್ನು ಎಲ್ಲರೂ ಅರ್ಥಮಾಡಿಕೊಂಡು ಗೌರವಿಸಬೇಕು' ಎಂದರು.

ಹಿಂದಿ ರಾಷ್ಟ್ರೀಯ ಭಾಷೆ ಅಲ್ಲ: ಪ್ರಧಾನ್

ಬೆಂಗಳೂರು: 'ಹಿಂದಿ ರಾಷ್ಟ್ರೀಯ ಭಾಷೆಯಲ್ಲ. ಅದು ರಾಷ್ಟ್ರೀಯ ಭಾಷೆ ಎಂದು ಯಾರೂ ಹೇಳಿಲ್ಲ. ಹಿಂದಿ ಹೇರಿಕೆ ಕೂಡಾ ನಾವು ಮಾಡುವುದಿಲ್ಲ. ಇಂಥದ್ದೇ ಭಾಷೆ ಕಲಿಯಬೇಕು ಎಂದು ಯಾರ ಮೇಲೂ ಒತ್ತಡ ಹಾಕಲು ಆಗುವುದಿಲ್ಲ' ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದರು. 'ಹಿಂದಿ ರಾಷ್ಟ್ರ ಭಾಷೆ' ಎಂಬ ನಟ ಅಜಯ್ ದೇವಗನ್ ಹೇಳಿಕೆ ಕುರಿತು ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಹೊಸ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಕೂಡಾ ಮಾತೃಭಾಷೆ ಹಾಗೂ ಸ್ಥಳೀಯ ಭಾಷೆಗೆ ಹೆಚ್ಚಿನ ಆದ್ಯತೆ ನೀಡುತ್ತದೆ. ವಿದ್ಯಾರ್ಥಿಗಳು ಇಚ್ಛಿಸುವ ಭಾಷೆಯಲ್ಲಿ ಕಲಿಯಬಹುದು. ಯಾರು ಕೂಡಾ ಯಾವ ಭಾಷೆಯನ್ನೂ ಹೇರಿಕೆ ಮಾಡಲು ಸಾಧ್ಯವಿಲ್ಲ' ಎಂದರು.

> ಉತ್ತರ ಭಾರತದಲ್ಲಿ ಹಿಂದಿ ಮುಖ್ಯವಾಗಿರುವಂತೆ, ಕರ್ನಾಟಕದಲ್ಲಿ ಕನ್ನಡವೇ ಮುಖ್ಯ. ಅದಕ್ಕೆ ಧಕ್ಕೆಯಾದರೆ ಸುಮ್ಮನಿರಲಾಗದು
>
> **ಸುಮಲತಾ,** ಸಂಸದೆ, ಮಂಡ್ಯ

'ಹಿಂದಿ ಸಂಪರ್ಕ ಭಾಷೆಯಾಗಲಿ'

'ರಾಜ್ಯದಲ್ಲಿ ಕನ್ನಡಕ್ಕೆ ಅಗ್ರಸ್ಥಾನ ಇರಲಿದೆ. ರಾಷ್ಟ್ರ ಮಟ್ಟದಲ್ಲಿ ಹಿಂದಿ ಸಂಪರ್ಕ ಭಾಷೆಯಾಗುವ ಅಗತ್ಯವಿದೆ. ನಮ್ಮ ಭಾಷೆಯನ್ನು ಗಟ್ಟಿಗೊಳಿಸಲು ನಾವು ಬೇರೆ ಭಾಷೆಯನ್ನು ದ್ವೇಷಿಸಬೇಕಾಗಿಲ್ಲ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ. ಎನ್.ಅಶ್ವತ್ಥ ನಾರಾಯಣ ಹೇಳಿದ್ದಾರೆ. 'ದೇಶದಲ್ಲಿ ಇಂಗ್ಲಿಷ್‌ಗೆ ವಿಪರೀತ ಒತ್ತುಕೊಡುವ ನಾವು ಭಾರತೀಯ ಭಾಷೆಯಾದ ಹಿಂದಿಯನ್ನು ಬಳಸುವುದರಲ್ಲಿ ತಪ್ಪೇನಿಲ್ಲ' ಎಂದು ತಿಳಿಸಿದರು

ಕನ್ನಡ ಪ್ರಾದೇಶಿಕ ಭಾಷೆ:ನಿರಾಣಿ

ಮೈಸೂರು: 'ಕನ್ನಡ ಪ್ರಾದೇಶಿಕ ಭಾಷೆ, ಹಿಂದಿ ರಾಷ್ಟ್ರ ಭಾಷೆ. ಬೇರೆ ಭಾಷೆಗಳನ್ನು ಕಲಿಯುವುದರಲ್ಲಿ ತಪ್ಪಿಲ್ಲ' ಎಂದು ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಪ್ರತಿಪಾದಿಸಿದರು. 'ಹಿಂದಿ ರಾಷ್ಟ್ರ ಭಾಷೆ ಎಂಬ ತಿಳಿವಳಿಕೆ ಮೊದಲಿನಿಂದಲೂ ಇದೆ. ಅದರಲ್ಲಿ ತಪ್ಪೇನಿಲ್ಲ. ಆದರೆ, ಮೊದಲ ಆದ್ಯತೆಯನ್ನು ಕನ್ನಡಕ್ಕೆ ಕಡ್ಡಾಯವಾಗಿ ನೀಡಬೇಕು. ನಂತರ ಹಿಂದಿ, ಇಂಗ್ಲಿಷ್ ಕಲಿಯಬೇಕು' ಎಂದು ಅವರು ತಿಳಿಸಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಏಕರೂಪ ನಾಗರಿಕ ಸಂಹಿತೆ ಬಿಜೆಪಿಯ ಮುಂದಿನ ಅಸ್ತ್ರ?

• ಆನಂದ್ ಮಿಶ್ರಾ

ನವದೆಹಲಿ: ಬಿಜೆಪಿ ಆಳ್ವಿಕೆ ಇರುವ ಕೆಲವು ರಾಜ್ಯಗಳ ಮುಖ್ಯಮಂತ್ರಿಗಳು, ಕೆಲವು ಸಚಿವರು ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಜಾರಿಯ ಬಗ್ಗೆ ಮಾತನಾಡಲು ಆರಂಭಿಸಿದ್ದಾರೆ. ಬಿಜೆಪಿಯ ಪ್ರಧಾನ ಮೂರು ಭರವಸೆಗಳಲ್ಲಿ ಒಂದಾಗಿರುವ ಯುಸಿಸಿಯ ಜಾರಿಯ ಬಗ್ಗೆ ಕೇಂದ್ರ ಸರ್ಕಾರವು ಗಂಭೀರವಾಗಿದೆ ಎಂಬ ಸೂಚನೆಯನ್ನು ಈ ಹೇಳಿಕೆಗಳು ನೀಡುತ್ತಿವೆ.

ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣವು ಸುಪ್ರೀಂ ಕೋರ್ಟ್ ತೀರ್ಪು ಮೂಲಕ ಸಾಧ್ಯವಾಗಿದೆ. ಜಮ್ಮು ಮತ್ತು ಕಾಶ್ಮೀರಕ್ಕೆ ಇದ್ದ ವಿಶೇಷ ಸ್ಥಾನಮಾನವನ್ನು ರದ್ದು ಪಡಿಸಲಾಗಿದೆ.

4ನೇ ಪುಟ ನೋಡಿ

'ಸಂಪುಟ ವಿಸ್ತರಣೆ ಬಗ್ಗೆ ಚರ್ಚೆಯಾಗಿಲ್ಲ'

ಬೆಳಗಾವಿ: 'ಸಚಿವ ಸಂಪುಟ ವಿಸ್ತರಣೆ ಬಗ್ಗೆ ಇನ್ನೂ ಚರ್ಚೆಯಾಗಿಲ್ಲ. ಶುಕ್ರವಾರ ದೆಹಲಿಯಲ್ಲಿ ಮುಖ್ಯ ನ್ಯಾಯಮೂರ್ತಿಗಳ ಸಮ್ಮೇಳನದಲ್ಲಿ ಭಾಗವಹಿಸಿ ವಾಪಸ್ ಬರುತ್ತೇನೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

'ಸಂಪುಟ ವಿಸ್ತರಣೆ ಕುರಿತಾಗಿ ಹೈಕಮಾಂಡ್ ಜೊತೆ ಚರ್ಚಿಸಿದ ನಂತರ ನಿರ್ಣಯ ಕೈಗೊಳ್ಳಲಾಗುವುದು' ಎಂದು ಅವರು ಸುದ್ದಿಗಾರರಿಗೆ ಗುರುವಾರ ತಿಳಿಸಿದರು.

'ರಾಜ್ಯದಲ್ಲಿ ಸಾರಿಗೆ ನೌಕರರು ಮತ್ತೆ ಕೈಗೊಳ್ಳುತ್ತಿರುವ ಮುಷ್ಕರದ ಬಗ್ಗೆ ಸಾರಿಗೆ ಸಚಿವರು ನೋಡಿಕೊಳ್ಳುತ್ತಾರೆ' ಎಂದು ಅವರು ಪ್ರತಿಕ್ರಿಯಿಸಿದರು.

'ಬೆಳಗಾವಿಯ ಸಾಂಬ್ರಾ ವಿಮಾನ ನಿಲ್ದಾಣಕ್ಕೆ ರಾಣಿ ಚನ್ನಮ್ಮ ಹೆಸರಿಡುವ ಸಂಬಂಧ ಇಲ್ಲಿನ ಎಲ್ಲ ನಾಯಕರ ಜೊತೆ ಚರ್ಚಿಸಿ ತೀರ್ಮಾನಿಸಲಾಗುವುದು' ಎಂದು ಹೇಳಿದರು.

ನೈರುತ್ಯ ರೈಲ್ವೆ

Azadi Ka Amrit Mahotsav

ಪಾರ್ಸೆಲ್ ಸ್ಪೇಸ್, ಪಾರ್ಕಿಂಗ್ ಮತ್ತು ಮನೆಯಿಂದ ಹೊರಗಿನ ಜಾಹೀರಾತು / ಪ್ರಚಾರದ ಗುತ್ತಿಗೆಗೆ ಇ–ಹರಾಜು

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಿನ ಹರಾಜುಗಳ ಹರಾಜಿಗೆ ಬಿಡ್ಡರ್‌ಗಳನ್ನು ಆಹ್ವಾನಿಸಿದ್ದಾರೆ.

1. (ಎ) ರೈಲು ಸಂಖ್ಯೆ. 19302 ಎಕ್ಸ್‌ಪ್ರೆಸ್ ಯಶವಂತಪುರ – ಡಾ. ಅಂಬೇಡ್ಕರ್ ನಗರ ಮತ್ತು (ಬಿ) ರೈಲು ಸಂಖ್ಯೆ. 22352 ಎಕ್ಸ್‌ಪ್ರೆಸ್ ಯಶವಂತಪುರ – ಪಾಟಲಿಪುತ್ರ ಜಂ. ನಲ್ಲಿ ಎರಡು ವರ್ಷಗಳ ಅವಧಿಗೆ 3.9 ಟನ್ ಎಫ್‌ಎಸ್‌ಎಲ್‌ಆರ್ ಜಾಗದ ಪಾರ್ಸೆಲ್ ಲೀಸಿಂಗ್.
2. 90 ದಿನಗಳ ಅವಧಿಗೆ ಬೆಂಗಳೂರು ವಿಭಾಗದ (ಎ) ತೊಂಡೇಭಾವಿ ಮತ್ತು (ಬಿ) ಗೌರಿಬಿದನೂರು ರೈಲು ನಿಲ್ದಾಣಗಳಲ್ಲಿ ದ್ವಿಚಕ್ರ ವಾಹನ ನಿಲುಗಡೆಯನ್ನು ನಿರ್ವಹಿಸುವುದು.
3. (ಎ) ದೊಡ್ಡಜಾಲದಿಂದ ದೇವನಹಳ್ಳಿ ರೈಲು ನಿಲ್ದಾಣ ವಿಭಾಗ ಮತ್ತು (ಬಿ) ಕಾರ್ಮೆಲರಾಮ್ ರೈಲು ನಿಲ್ದಾಣದಿಂದ ಓಮಲೂರು ನಿಲ್ದಾಣದ ವಿಭಾಗದ ಹೊರಭಾಗಲ್ಲಿ ಮೂರು ವರ್ಷಗಳ ಅವಧಿಗೆ ಮನೆಯಿಂದ ಹೊರಗಿರುವ ಜಾಹೀರಾತು.

ಮನೆಯಿಂದ ಹೊರಗಿನ ಜಾಹೀರಾತಿನ ಇ – ಹರಾಜಿಗಾಗಿ ದಿನಾಂಕ ಮತ್ತು ಸಮಯ:	07.05.2022 ರ 11.00 ಗಂಟೆಯಿಂದ ಪ್ರಾರಂಭವಾಗುತ್ತದೆ
ದ್ವಿಚಕ್ರ ವಾಹನ ನಿಲ್ದಾಣದ ನಿರ್ವಹಣೆಯ ಇ–ಹರಾಜಿನ ದಿನಾಂಕ ಮತ್ತು ಸಮಯ:	10.05.2022 ರ 12.00 ಗಂಟೆಯಿಂದ ಪ್ರಾರಂಭವಾಗುತ್ತದೆ
ಪಾರ್ಸೆಲ್ ಸ್ಪೇಸ್ ಗುತ್ತಿಗೆಯ ಇ–ಹರಾಜಿನ ದಿನಾಂಕ ಮತ್ತು ಸಮಯ:	12.05.2022 ರ 12.00 ಗಂಟೆಯಿಂದ ಪ್ರಾರಂಭವಾಗುತ್ತದೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ವೆಬ್‌ಸೈಟ್‌ಗೆ ಲಾಗಿನ್ ಆಗಿ

PUB/68/AAV/PRB/SWR/2022-23 — ಹಿರಿಯ ವಿಭಾಗೀಯ ವಾಣಿಜ್ಯ ಪ್ರಬಂಧಕರು / ಬೆಂಗಳೂರು

S.W.Railways | sw_rly | SWRRLY | southwesternrailway | SWRRLY

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಯೋಜನಾ ವಿಭಾಗ, ಯಲಹಂಕ ವಲಯ, ಬಿಬಿಎಪಿ ಕಛೇರಿ, ಬೆಂಗಳೂರು – 560 092.

ಸಂ.: ಬಿಬಿಎಂಪಿ/ಕಾಪಾಅ/ಯೋ/ಯವ/ಟೆಂಡರ್/03/2022–23 ದಿನಾಂಕ: 27.04.2022

ಆಸಕ್ತಿ ಅಭಿವ್ಯಕ್ತಿ (ಇಒಐ) ಅಧಿಸೂಚನೆ

ಅಲ್ಪಾವಧಿ ಟೆಂಡರ್

(ದ್ವಿ–ಲಕೋಟೆ ಪದ್ಧತಿ)

(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಯೋಜನಾ ವಿಭಾಗ) ಯಲಹಂಕ ವಲಯ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಕಾಯ್ದೆ 2000ರ ಅಡಿಯಲ್ಲಿ ಕೆಳಗೆ ನಮೂದಿಸಲಾದ ಸೇವೆಗಳಿಗೆ ಎಲೆಕ್ಟ್ರಾನಿಕ್ ದ್ವಿ–ಲಕೋಟೆಗಳ ಟೆಂಡರಿಂಗ್ ಪದ್ಧತಿ (ಇ–ಪ್ರೊಕ್ಯೂರ್‌ಮೆಂಟ್) ಮೂಲಕ ಇಎಸ್‌ಐ, ಪಿಎಫ್, ಕಾರ್ಮಿಕ ಇಲಾಖೆ ಮತ್ತು ಕರ್ನಾಟಕ ಸರ್ಕಾರದ ಇತರ ಶಾಸನಬದ್ಧ ಪ್ರಾಧಿಕಾರದ ನೋಂದಾಯಿತ ಏಜೆನ್ಸಿಯಿಂದ ನಿಗದಿತ ನಮೂನೆಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ಕಾಮಗಾರಿಯ ಹೆಸರು	ಇಎಂಡಿ (ರೂ.ಗಳಲ್ಲಿ)
1	ವಾರ್ಡ್ ನಂ. 04ರ ಯಲಹಂಕ ನ್ಯೂ ಟೌನ್‌ನಲ್ಲಿರುವ ಹೊಯ್ಸಳ ಸ್ಟೇಡಿಯಂನ ಒಳಾಂಗಣ ಜಿಮ್‌ನ ನಿರ್ವಹಣೆ, ಮೇಲ್ವಿಚಾರಣೆ ಮತ್ತು ಕಾರ್ಯಾಚರಣೆಗಾಗಿ (ಕರೆ–2)	1,00,000/–
2	ಬ್ಯಾಟರಾಯನಪುರದ ಅಮೃತಹಳ್ಳಿ, ಕಾಫಿ ಬೋರ್ಡ್ ಬಡಾವಣೆಯಲ್ಲಿರುವ ಸ್ಟೇಡಿಯಂನ ಒಳಾಂಗಣ ಮತ್ತು ಈಜುಕೊಳ ನಿರ್ವಹಣೆ, ಮೇಲ್ವಿಚಾರಣೆ ಮತ್ತು ಕಾರ್ಯಾಚರಣೆಗಾಗಿ	1,00,000/–
	ಕೆಲಸವನ್ನು ಪೂರ್ಣಗೊಳಿಸುವ ಅವಧಿ: 5 ವರ್ಷಗಳು / 60 ತಿಂಗಳುಗಳು	

ವೇಳಾಪಟ್ಟಿ: (1) ವಿಚಾರಣೆಗಳಿಗೆ (ಪ್ರಶ್ನೆ) ಕೊನೆಯ ದಿನಾಂಕ ಮತ್ತು ಸಮಯ (ಆನ್‌ಲೈನ್ ಮೂಲಕ ಮಾತ್ರ) **09.05.2022 ಮಧ್ಯಾಹ್ನ 3.00 ಗಂಟೆಗೆ.** (2) ಪೂರ್ವಭಾವಿ ಸಭೆ **09.05.2022**ರ **ಮಧ್ಯಾಹ್ನ 3.30 ಗಂಟೆ**ಗೆ ಮುಖ್ಯ ಅಭಿಯಂತರರ ಕಛೇರಿ, ಯಲಹಂಕ ವಲಯ ಇಲ್ಲಿ ನಡೆಯಲಿದೆ. (3) ಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸಲು ಕೊನೆಯ ದಿನಾಂಕ **13.05.2022** ರಿಂದ **ಸಂಜೆ 4.00 ಗಂಟೆ**ವರೆಗೆ (4) ತಾಂತ್ರಿಕ ಬಿಡ್ **16.05.2022**ರ **ಸಂಜೆ 4.30 ಗಂಟೆ**ಗೆ ತೆರೆಯಲಾಗುವುದು. (5) ಆರ್ಥಿಕ ಬಿಡ್ಡನ್ನು **19.05.2022**ರ **ಸಂಜೆ 4.00 ಗಂಟೆ**ಗೆ ಸಾಧ್ಯವಾದಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ, ಯಲಹಂಕ ವಲಯ, ಬಿಬಿಎಂಪಿ

ಕೋವಿಡ್‌-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅಬಕಾರಿ ಜಂಟಿ ಆಯುಕ್ತ ಹುದ್ದೆಗೆ ಬಡ್ತಿ

ಬೆಂಗಳೂರು: ಅಬಕಾರಿ ಇಲಾಖೆಯ ಎಂಟು ಉಪ ಆಯುಕ್ತರನ್ನು ಜಂಟಿ ಆಯುಕ್ತ ಹುದ್ದೆಗೆ ಬಡ್ತಿ ನೀಡಿ ವರ್ಗಾವಣೆ ಮಾಡಲಾಗಿದೆ.

ಜಂಟಿ ಆಯುಕ್ತರಾಗಿ ಬಡ್ತಿ: ಬೆಂಗಳೂರು (ಉತ್ತರ)–ಫಕ್ಕೀರಪ್ಪ ಎಚ್. ಚಲವಾದಿ, ಅಬಕಾರಿ ಆಯುಕ್ತರ ಕಚೇರಿ (ಡಿಸ್ಟಲರಿ ಮತ್ತು ಬ್ರಿವರೇಜಿಸ್)– ಎನ್. ನಿರ್ಮಲಾ, ಬೆಂಗಳೂರು (ದಕ್ಷಿಣ)– ಎ.ಎಲ್. ನಾಗೇಶ್.

PUBLIC NOTICE

The property bearing PID Numbers 46-7-73, 46-7-73/1-2 & 46-7-73/1-3 situated on 5th Main Road, Chamrajapet, Bangalore 560018, of Late Sri. D.R. Madhavakrishnaiah.

SCHEDULE PROPERTY

East by : Property bearing 73/1, 5th Main Road
West by : Devanathachar Street, Chamrajapet
South by : Private Property
North by : 5th Main Road, Chamrajapet.

One D.A. Rajakumar and several unrelated people on the basis of fraudulent documents are offering to deal / sell the said schedule property illegally to 3rd parties. Public are hereby warned not to purchase /deal with the property and same would be at their risk and cost.

Ph: 8050751026
L.M. CHIDANANDAYYA,
Advocate
003, Embassy Square, Infantry Road, Bangalore.

‘ಎ’ ಖಾತಾ ಪರಿವರ್ತನೆಯಲ್ಲಿ ಅಕ್ರಮ: ಎಎಪಿ ಆರೋಪ

ಬೆಂಗಳೂರು: ‘ಎ ಖಾತಾ ಪರಿವರ್ತನೆಗೆ ಲಂಚ ಪಡೆಯುವ ಮೂಲಕ ಬಿಜೆಪಿ ಸರ್ಕಾರ ಮುಂದಿನ ಚುನಾವಣೆಗೆ ಅಕ್ರಮವಾಗಿ ಹಣ ಸಂಗ್ರಹಿಸುತ್ತಿದೆ’ ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ಬೆಂಗಳೂರು ಘಟಕದ ಅಧ್ಯಕ್ಷ ಮೋಹನ್ ದಾಸರಿ ಆರೋಪಿಸಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬಿ ಖಾತಾ ಆಸ್ತಿ ಮಾಲೀಕರಿಂದ ಸುಧಾರಣಾ ಶುಲ್ಕ ಪಾವತಿಸಿಕೊಂಡು ಎ ಖಾತಾ ನೀಡಲಾಗುತ್ತಿದೆ. 30x40 ನಿವೇಶನಕ್ಕೆ ₹25 ಸಾವಿರ ಹಾಗೂ 40x60 ನಿವೇಶನಕ್ಕೆ ₹50 ಸಾವಿರದವರೆಗೆ ಅಧಿಕಾರಿಗಳು ಲಂಚ ಪಡೆಯುತ್ತಿದ್ದು, ಅದು ಮೂರೂ ಪಕ್ಷಗಳ ಶಾಸಕರ ಪಾಲಾಗುತ್ತಿದೆ’ ಎಂದು ದೂರಿದರು.

‘ಪ್ರತಿ ವಾರ್ಡ್‌ನ ಕಚೇರಿಗಳಲ್ಲಿ ಖಾತಾ ಮಾಡಿಕೊಡಲು ಸೇವಾ ಶುಲ್ಕದ ಹೆಸರಿನಲ್ಲಿ ಲಂಚ ಪಡೆಯುತ್ತಿದ್ದಾರೆ. ದಾಸರಹಳ್ಳಿ, ಬೊಮ್ಮನಹಳ್ಳಿ, ರಾಜರಾಜೇಶ್ವರಿನಗರ ಹಾಗೂ ಯಶವಂತಪುರ ವಲಯಗಳಲ್ಲಿ ಈ ದಂಧೆ ಅವ್ಯಾಹತವಾಗಿ ನಡೆಯುತ್ತಿದ್ದು, ಎಸಿಬಿ ದಾಳಿ ನಡೆಸಬೇಕು’ ಎಂದು ಆಗ್ರಹಿಸಿದರು.

ಎಎಪಿ ಮಹದೇವಪುರ ಘಟಕದ ಅಧ್ಯಕ್ಷ ಅಶೋಕ್ ಮೃತ್ಯುಂಜಯ, ‘ಬೆಂಗಳೂರಿನಲ್ಲಿ 8 ಲಕ್ಷಕ್ಕೂ ಹೆಚ್ಚು ಇದ್ದ ಬಿ ಖಾತಾ ಆಸ್ತಿಗಳ ಸಂಖ್ಯೆ 6.18 ಲಕ್ಷಕ್ಕೆ ಇಳಿಕೆಯಾಗಿದೆ. ಹತ್ತು ವರ್ಷಗಳಲ್ಲಿ 2 ಲಕ್ಷ ಬಿ ಖಾತಾಗಳನ್ನು ಅಕ್ರಮವಾಗಿ ಎ ಖಾತಾ ಮಾಡಲಾಗಿದೆ’ ಎಂದು ಆರೋಪಿಸಿದರು.

‘ಖಾತಾ ಪರಿವರ್ತನೆ ಬಗ್ಗೆ ಮಾಹಿತಿ ನೀಡಲು ಹಾಗೂ ಲಂಚ ಕೇಳಿದರೆ ದೂರು ನೀಡಲು ಸಹಾಯವಾಣಿ ಆರಂಭಿಸಬೇಕು. ಖಾತಾ ಪರಿವರ್ತನೆ ಪ್ರಕ್ರಿಯೆಗೆ ಆನ್‌ಲೈನ್‌ನಲ್ಲಿ ಅವಕಾಶ ಕಲ್ಪಿಸಬೇಕು. ಸಾರ್ವಜನಿಕರು ಕಚೇರಿಗಳಿಗೆ ಅಲೆಯದೆ, ಖಾತಾ ಪರಿವರ್ತನೆ ಆಗುವಂತೆ ಮಾಡಬೇಕು’ ಎಂದರು.

ಮೇ 1: ಕಾರ್ಮಿಕರ ಮೆರವಣಿಗೆಗೆ ಅನುಮತಿ ನಕಾರ

ಬೆಂಗಳೂರು: ‘ಮೇ 1ರಂದು ನಗರದಲ್ಲಿ ಶಾಂತಿಯುತ ಮೆರವಣಿಗೆ ನಡೆಸಲು ಅನುಮತಿ ನೀಡಲು ನಿರ್ದೇಶಿಸಬೇಕು’ ಎಂದು ಕೋರಿದ್ದ ಕಾರ್ಮಿಕ ಸಂಘಟನೆಗಳ ಮನವಿಯನ್ನು ಹೈಕೋರ್ಟ್ ತಿರಸ್ಕರಿಸಿದೆ.

ಮೇ 1ರಂದು ನಗರದಲ್ಲಿ ಶಾಂತಿಯುತ ಮೆರವಣಿಗೆ ನಡೆಸಲು ಪೊಲೀಸರು ಅನುಮತಿ ನಿರಾಕರಿಸಿರುವುದನ್ನು ಪ್ರಶ್ನಿಸಿ ‘ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್’ ಸೇರಿ ಹಲವು ಕಾರ್ಮಿಕ ಸಂಘಟನೆಗಳು ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು ನ್ಯಾಯಮೂರ್ತಿ ಆರ್. ದೇವದಾಸ್ ನೇತೃತ್ವದ ರಜಾಕಾಲದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

‘ಮೆರವಣಿಗೆಯಿಂದ ವಾಹನ ಮತ್ತು ಸಾರ್ವಜನಿಕರ ಸಂಚಾರಕ್ಕೆ ತೊಂದರೆ ಆಗಲಿದೆ. ಕಾರ್ಮಿಕರ ಮೆರವಣಿಗೆಯನ್ನು ಕರಗ ಮೆರವಣಿಗೆಯೊಂದಿಗೆ ಹೋಲಿಕೆ ಮಾಡಲಾಗದು. ಮಧ್ಯಂತರ ಅರ್ಜಿದಾರರ ಸಂಘಟನೆಗಳ ಸದಸ್ಯರು ಸ್ವಾತಂತ್ರ್ಯ ಉದ್ಯಾನದ ಆವರಣದಲ್ಲಿ ಸೇರಿ ಸಭೆ ನಡೆಸುವುದಾದರೆ, ಅದಕ್ಕೆ ಅನುಮತಿ ನೀಡಬಹುದು’ ಎಂದು ನ್ಯಾಯಪೀಠ ಹೇಳಿದೆ.

‘ಸ್ವಾತಂತ್ರ್ಯ ಉದ್ಯಾನ ಹೊರತುಪಡಿಸಿ ನಗರದಲ್ಲಿ ಮೆರವಣಿಗೆ, ಪ್ರತಿಭಟನೆ, ಬಹಿರಂಗ ಸಭೆ ನಡೆಸದಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು’ ಎಂದು ನಿರ್ದೇಶಿಸಿ ಹೈಕೋರ್ಟ್, ಮಾರ್ಚ್ 3ರಂದು ಆದೇಶಿಸಿರುವುದನ್ನು ಇಲ್ಲಿ ಸ್ಮರಿಸಬಹುದು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರವರ ಕಚೇರಿ, ಚಿಕ್ಕಪೇಟೆ ವಿಭಾಗ, 8ನೇ ಮುಖ್ಯ ರಸ್ತೆ, ಕನಕನಪಾಳ್ಯ, ಜಯನಗರ 2ನೇ ಬ್ಲಾಕ್, ಬೆಂಗಳೂರು–11.

ಸಂ. ಕಾಪಾಅ/ಚಿಕ್ಕಪೇಟೆ/ಇ–ಪ್ರೋ/01/2022–23 ದಿನಾಂಕ: 28–04–2022

ತಿದ್ದುಪಡಿ

ವಿಷಯ: ಸಂ. ಕಾಪಾಅ/ಚಿಕ್ಕಪೇಟೆ/ಇ–ಪ್ರೋ/01/2022–23, ದಿನಾಂಕ: 27–04–2022

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ಟೆಂಡರ್‌ನ್ನು ಪ್ರಜಾವಾಣಿ ದಿನಪತ್ರಿಕೆಯಲ್ಲಿ 28–04–2022ರಂದು ಪ್ರಕಟಿಸಲಾಗಿದ್ದು **ಕ್ರ.ಸಂ. 7 ರ ಅಂದಾಜು ಮೊತ್ತ: 200.00 ಲಕ್ಷ, ಇಎಂಡಿ ರೂ.10,000** ಮತ್ತು **ಕ್ರ.ಸಂ. 8ರ ಅಂದಾಜು ಮೊತ್ತ 1000.00 ಲಕ್ಷ ಮತ್ತು ಇಎಂಡಿ ರೂ.25,000 ಎಂದು ಓದಿಕೊಳ್ಳತಕ್ಕದ್ದು.** ಉಳಿದಂತೆ ಟೆಂಡರ್‌ನಲ್ಲಿ ಬೇರೆ ಯಾವುದೇ ಬದಲಾವಣೆ ಇರುವುದಿಲ್ಲ.

ಕಾರ್ಯಪಾಲಕ ಅಭಿಯಂತರರು, ಚಿಕ್ಕಪೇಟೆ ವಿಭಾಗ, ಬೃಬೆಂಮಪಾ.

ಕೋವಿಡ್‌-19 - ಗಾಬರಿ ಪಡದಿರಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅಣ್ಣೇಶ್ವರ ಗ್ರಾಮ ಪಂಚಾಯತ್ ಕಾರ್ಯಾಲಯ

ಅಣ್ಣೇಶ್ವರ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
Email: pdodev.anneshwara@gmail.com

ನಂ.ಅಗ್ರಾಪಂ/ಪ್ರಕಟಣೆ/ 01/2022–23 ದಿನಾಂಕ:– 29–04–2022

ಟೆಂಡರ್ ಪ್ರಕಟಣೆ

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ ಅಣ್ಣೇಶ್ವರ ಗ್ರಾಮ ಪಂಚಾಯಿತಿಯಲ್ಲಿ ದಿನಾಂಕ:13/04/2022 ರಂದು ನಡೆದ ಸಾಮಾನ್ಯ ಸಭೆಯ ನಡವಳಿಯಂತೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳಿಗೆ ಕುಡಿಯುವ ನೀರಿನ ಸ್ಥಾವರಗಳ ನಿರ್ವಹಣೆ ಮತ್ತು ಇತರೆ ಸಾಮಗ್ರಿಗಳ ಸರಬರಾಜು ಮಾಡಲು ಕೆಪಿಡಬ್ಲ್ಯುಯಲ್ಲಿ ನೊಂದಾಯಿತರಾದ ದರ್ಜೆ–3 ಮತ್ತು ಮೇಲ್ಪಟ್ಟ ಸೂಕ್ತ ತಾಂತ್ರಿಕ ಹಣಕಾಸು ವ್ಯವಸ್ಥಾಪನೆ ಸಾಮರ್ಥ್ಯವುಳ್ಳ ಗುತ್ತಿಗೆದಾರರು ಮತ್ತು ನೊಂದಾಯಿತ ಸರಬರಾಜುದಾರರಿಗೆ ಈ ಕೆಳಕಂಡ ಸಾಮಗ್ರಿಗಳನ್ನು ಸರಬರಾಜು ಮಾಡಲು ವಾರ್ಷಿಕ ದರದಲ್ಲಿ ಅರ್ಜಿಗಳನ್ನು ಸಲ್ಲಿಸಲು ಟೆಂಡರ್ ಆಹ್ವಾನಿಸಲಾಗಿದೆ.

ಕ್ರ ಸಂ	ಕಾಮಗಾರಿಗಳು ಮತ್ತು ಸರಕು ಸರಬರಾಜು ವಿವರಗಳು	ಅಂದಾಜು ಮೊತ್ತ (ಲಕ್ಷಗಳಲ್ಲಿ) ಬೇಡಿಕೆಗೆ ತಕ್ಕಂತೆ	ಇ.ಎಂ.ಡಿ (ರೂ.ಗಳಲ್ಲಿ)	ಟೆಂಡರ್ ಫಾರಂ ಬೆಲೆ (ರೂ.ಗಳಲ್ಲಿ)
1	1 ವರ್ಷದ ಅವಧಿಗೆ ಕುಡಿಯುವ ನೀರಿನ ಪಂಪು & ಮೋಟಾರ್ ರಿಪೇರಿ ಮತ್ತು ನಿರ್ವಹಣೆ	4.90	9800	100/–
2	2 ಇಂಚು ಜಿ.ಐ ಪೈಪ್ ಮತ್ತು ಬಿಡಿ ಭಾಗಗಳ ಸರಬರಾಜು	4.50	9000	100/–
3	ಪಿವಿಸಿ ಪೈಪ್ ಮತ್ತು ಬಿಡಿ ಭಾಗಗಳ ಸರಬರಾಜು	4.50	9000	100/–
4	ವಿವಿಧ ಸಾಮರ್ಥ್ಯದ ಮೋಟಾರ್ ಮತ್ತು ಪಂಪ್‌ಗಳ ಸರಬರಾಜು	4.90	9800	100/–
5	ವಿವಿಧ ಸಾಮರ್ಥ್ಯದ ಕೇಬಲ್ ಮತ್ತು ಕಂಟ್ರೋಲ್ ಪ್ಯಾನಲ್‌ಗಳ ಸರಬರಾಜು	4.80	9600	100/–
6	ವಿವಿಧ ಸಾಮರ್ಥ್ಯದ ಸಿ.ಎಫ್.ಎಲ್ ಬಲ್ಬ್‌ಗಳು ಮತ್ತು ಇತರೆ ಬಿಡಿ ಭಾಗಗಳ ಸರಬರಾಜು	4.95	9900	100/–
7	ವಿವಿಧ ಸಾಮರ್ಥ್ಯದ ಎಲ್.ಇ.ಡಿ ಬಲ್ಬ್‌ಗಳು ಮತ್ತು ಇತರೆ ವಿದ್ಯುತ್ ಸಾಮಗ್ರಿಗಳ ಸರಬರಾಜು	4.90	9800	100/–
8	ಸೋಲಾರ್ ದೀಪಗಳ ದುರಸ್ಥಿ & ಬಿಡಿ ಭಾಗಗಳ ಸರಬರಾಜು	4.50	9000	100/–
9	ನೈರ್ಮಲ್ಯಕ್ಕೆ ಸಂಬಂಧಿಸಿದ ಸಾಮಗ್ರಿಗಳ ಸರಬರಾಜು	4.90	9800	100/–
10	ಬ್ಲಿಚಿಂಗ್/ಮೆಲಾಥಿನ್/ ಫಿನಾಯಿಲ್ ಸರಬರಾಜು	4.90	9800	100/–
11	ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ವಹಣೆ ಮತ್ತು ದುರಸ್ಥಿ	4.90	9800	100/–
12	ಎಸ್.ಡಬ್ಲ್ಯೂ.ಎಮ್ ಘಟಕಕ್ಕೆ ಸಾವಯವ ದ್ರಾವಣ ಸರಬರಾಜು ಮಾಡುವ ಬಗ್ಗೆ.	3.00	6000	100/–

ಷರತ್ತುಗಳು:–

1. ಸದರಿ ಸಾಮಗ್ರಿಗಳು ಉತ್ತಮ ಗುಣಮಟ್ಟದಿಂದ ಕೂಡಿರಬೇಕು. 2. ಸದರಿ ಸಾಮಗ್ರಿಗಳನ್ನು ದೋಷಪೂರಿತವಾದಲ್ಲಿ ಬೇರೆ ಸಾಮಗ್ರಿಗಳನ್ನು ಸರಬರಾಜು ಮಾಡಬೇಕು. 3. ಸಾಮಗ್ರಿ ಸರಬರಾಜುದಾರರು ಟಿನ್/ಪಾನ್/ಜಿ.ಎಸ್.ಟಿ ನಂಬರ್ ಕಡ್ಡಾಯವಾಗಿ ಹೊಂದಿರತಕ್ಕದ್ದು. 4. ಟೆಂಡರ್ ಆಯ್ಕೆಯಾದ ಸರಬರಾಜುದಾರರು ಕಡ್ಡಾಯವಾಗಿ ಟೆಂಡರ್ ನಲ್ಲಿ ನಮೂದಿರುವ 2022–23ರ ವರ್ಷಾಂತ್ಯದವರೆಗೆ ಸಾಮಗ್ರಿಗಳನ್ನು ಸರಬರಾಜು ಮಾಡುವುದು. 5. ಟೆಂಡರ್ ದಾರರು ಐ ಎಸ್ ಐ ಮುದ್ರೆ ಇರುವ ಸಾಮಗ್ರಿಗಳನ್ನೇ ಸರಬರಾಜು ಮಾಡತಕ್ಕದ್ದು. 6. ಟೆಂಡರ್‌ನ್ನು, ಪುರಸ್ಕರಿಸುವ, ತಿರಸ್ಕರಿಸುವ ಅಥವಾ ಮುಂದೂಡುವ ಅಧಿಕಾರ ಗ್ರಾಮ ಪಂಚಾಯಿತಿಗೆ ಇರುತ್ತದೆ. 7. ದಿನಾಂಕಃ 28/04/2022 ರಿಂದ 16/05/2022 ರ ಸಂಜೆ 5.00 ಗಂಟೆಯವರೆಗೆ ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ಟೆಂಡರ್ ಫಾರಂ ನೀಡಲಾಗುವುದು. 8. ಭರ್ತಿ ಮಾಡಿದ ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ: 16/05/2022 ಅಂತಿಮ ದಿನವಾಗಿರುತ್ತದೆ. 9. ದಿನಾಂಕ: 19/05/2022 ರಂದು ಬೆಳಿಗ್ಗೆ 11.30 ಗಂಟೆಗೆ ಟೆಂಡರ್ ತೆರೆಯಲಾಗುವುದು. 10. ಹೆಚ್ಚಿನ ಮಾಹಿತಿಗಾಗಿ/ ಟೆಂಡರ್ ಫಾರಂ ನ್ನು ಪಡೆಯಲು ಕಛೇರಿ ವೇಳೆಯಲ್ಲಿ ಗ್ರಾಮ ಪಂಚಾಯಿತಿಯನ್ನು ಸಂಪರ್ಕಿಸುವುದು.

ಸಹಿ/– ಅಧ್ಯಕ್ಷರು, ಅಣ್ಣೇಶ್ವರ ಗ್ರಾಮ ಪಂಚಾಯಿತಿ, ದೇವನಹಳ್ಳಿ ತಾಲ್ಲೂಕು
ಹೆಚ್ಚಿನ ಮಾಹಿತಿಗಾಗಿ 9538345909 / 9740401497 “ಕೋವಿಡ್–19 ಬಗ್ಗೆ ಭಯಬೇಡ, ಎಚ್ಚರವಿರಲಿ”
ಸಹಿ/– ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಅಣ್ಣೇಶ್ವರ ಗ್ರಾಮ ಪಂಚಾಯಿತಿ, ಅಣ್ಣೇಶ್ವರ ತಾಲ್ಲೂಕು

ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ

ನಸದೊ/ಕಂ.ಶಾ/ಬ.ಹ/ಸಿಆರ್/42/2021–22 ದಿನಾಂಕ: 27–04–2022

2022–23ನೇ ಸಾಲಿನ ವಾರ್ಷಿಕ ಮರು ಬಹಿರಂಗ ಹರಾಜು

ಈ ಮೂಲಕ ದೊಡ್ಡಬಳ್ಳಾಪುರದ ಸಮಸ್ತ ನಾಗರೀಕರಿಗೆ ತಿಳಿಯಪಡಿಸುವುದೇನೆಂದರೆ, ದೊಡ್ಡಬಳ್ಳಾಪುರ ನಗರಸಭೆಗೆ ಸೇರಿದ ಈ ಕೆಳಕಂಡ ಬಾಬ್ತುಗಳ ನಿರ್ವಹಣೆಯ ಅವದಿಯು ಒಂದು ವರ್ಷದ ಕಾಲಾವಧಿಗೆ ಸುಂಕ/ಶುಲ್ಕ ವಸೂಲಿ ಮಾಡುವ ಹಕ್ಕನ್ನು ಬಹಿರಂಗ ಹರಾಜಿನ **ದಿನಾಂಕ: 11–05–2022 ರಿಂದ 31–03–2023 ರವರೆಗೆ ಪಡೆಯಲು ದಿನಾಂಕ: 11–05–2022ರಂದು ಬುಧವಾರ ಬೆಳಿಗ್ಗೆ 11:30 ಗಂಟೆಗೆ** ಹಳೇಬಸ್ ನಿಲ್ದಾಣದ ಬಳಿ ಇರುವ ಡಾ॥ ರಾಜ್‌ಕುಮಾರ್ ಕಲಾಮಂದಿರದಲ್ಲಿ (ಪುರಭವನ) ಮಾನ್ಯ ನಗರಸಭಾ ಅಧ್ಯಕ್ಷರಿಂದಾಗಲಿ, ಪೌರಾಯುಕ್ತರಿಂದಾಗಲಿ ಅಥವಾ ಅವರಿಂದ ಅಧಿಕಾರ ಪಡೆದ ಅಧಿಕಾರಿಗಳಿಂದಾಗಲಿ ಬಹಿರಂಗ ಹರಾಜು ನಡೆಸಲಾಗುವುದು. ಆಸಕ್ತಿಯುಳ್ಳವರು ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಷರತ್ತುಗಳಿಗೆ ಒಳಪಟ್ಟು ವಸೂಲಿ ಹಕ್ಕನ್ನು ಬಹಿರಂಗ ಹರಾಜಿನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ಸಮಯದಲ್ಲಿ ಕಂದಾಯ ಶಾಖೆಯ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

ಹರಾಜು ಬಾಬ್ತುಗಳ ವಿವರ: ಬಹಿರಂಗ ಹರಾಜು ಮೂಲಕ ಬಾಬ್ತುವಾರು ಠೇವಣಿ ಈ ಕೆಳಕಂಡಂತೆ ಪಾವತಿಸಿ ಬಿಡ್‌ದಾರರು ಹರಾಜಿನಲ್ಲಿ ಭಾಗವಹಿಸತಕ್ಕದ್ದು.

ಕ್ರ.ಸಂ.	ಬಹಿರಂಗ ಹರಾಜು ಮಾಡುವ ಬಾಬ್ತುಗಳ ವಿವರ	ಹರಾಜಿನಲ್ಲಿ ನಿಗಧಿಪಡಿಸಿರುವ ಮುಂಗಡ ಠೇವಣಿ ಮೊತ್ತ	ಹರಾಜಿನ ಕಾಲಾವಧಿ
1.	ನಗರಸಭಾ ವ್ಯಾಪ್ತಿಯಲ್ಲಿ ಬರುವ ತರಕಾರಿ ಮತ್ತು ರಸ್ತೆ ಅಕ್ಕಪಕ್ಕ ಮಾರಾಟಗಾರರಿಂದ ನೆಲವಳಿ ಶುಲ್ಕ ವಸೂಲಿ ಮಾಡುವ ಹಕ್ಕು.	100000.00	(1 ವರ್ಷ)
2.	ಡಾ॥ ರಾಜ್‌ಕುಮಾರ್ ಕಲಾ ಮಂದಿರದ (ಪುರಭವನ) ದಕ್ಷಿಣ ಭಾಗದಲ್ಲಿರುವ ಸ್ಥಳದಲ್ಲಿ ದ್ವಿಚಕ್ರ ವಾಹನದ ನೆಲವಳಿ ಶುಲ್ಕ ವಸೂಲಿ ಮಾಡುವ ಹಕ್ಕು.	50000.00	(1 ವರ್ಷ)
3.	ಡಾ॥ ರಾಜ್‌ಕುಮಾರ್ ಕಲಾಮಂದಿರದ (ಪುರಭವನ) ಹಿಂಭಾಗದಲ್ಲಿರುವ ಸುಲಭ್ ಶೌಚಾಲಯ ಶುಲ್ಕ ವಸೂಲಿ ಮಾಡುವ ಹಕ್ಕು.	50000.00	(1 ವರ್ಷ)
4.	ನಗರಸಭಾ ಹಳೇ ಬಸ್ ನಿಲ್ದಾಣದಲ್ಲಿರುವ ಸುಲಭ್ ಶೌಚಾಲಯ ಶುಲ್ಕ ವಸೂಲಿ ಮಾಡುವ ಹಕ್ಕು.	50000.00	(1 ವರ್ಷ)
5.	ಶ್ರೀ ಕೊಂಗಾಡಿಯಪ್ಪ ಬಸ್ ನಿಲ್ದಾಣದಲ್ಲಿ ಹೊಸದಾಗಿ ನಿರ್ಮಿಸಿರುವ ನಗರಸಭೆಯ ಕಟ್ಟಡದ ಸೆಲ್ಲರ್ ಹಾಗೂ ಮೊದಲನೆ ಮಹಡಿಯಲ್ಲಿ ದ್ವಿಚಕ್ರ ವಾಹನದ ನೆಲವಳಿ ಶುಲ್ಕ ವಸೂಲಿ ಮಾಡುವ ಹಕ್ಕು.	50000.00	(1 ವರ್ಷ)
6.	ಡಾ॥ ರಾಜ್‌ಕುಮಾರ್ ಕಲಾಮಂದಿರದ (ಪುರಭವನ) ಹಿಂಭಾಗದಲ್ಲಿರುವ ತೆಂಗಿನ ಮರಗಳ ಫಸಲು ವಸೂಲಿ ಮಾಡುವ ಹಕ್ಕು.	15000.00	(3 ವರ್ಷ)

ಹರಾಜು ಷರತ್ತುಗಳಿಗೆ ಒಳಪಟ್ಟಿರುತ್ತದೆ.

ಸಹಿ/– (ಶ್ರೀಮತಿ ಎಸ್. ಸುಧಾರಾಣಿ ಲಕ್ಷ್ಮೀನಾರಾಯಣ್) ಅಧ್ಯಕ್ಷರು, ನಗರಸಭೆ, ದೊಡ್ಡಬಳ್ಳಾಪುರ.
ಸಹಿ/– (ಶ್ರೀಮತಿ ಫರ್ಹಾನಾತಾಜ್) ಉಪಾಧ್ಯಕ್ಷರು, ನಗರಸಭೆ, ದೊಡ್ಡಬಳ್ಳಾಪುರ.
ಸಹಿ/– (ಶ್ರೀ ಶಿವಶಂಕರ್ ಕೆ.ಜಿ.) ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ.

DIPR/CP/RO324/AAPL/2022-23

ಕೋವಿಡ್‌-19 - ಗಾಬರಿ ಪಡದಿರಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಸ್ಥಾಪನೆ : 1907

ಆಡಳಿತ ಕಛೇರಿ: ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–18
ಕಛೇರಿ : 26678572 : 26600512 : 26609066.

ಈ–ಹರಾಜು ಮುಖಾಂತರ ಸ್ಥಿರಾಸ್ತಿ ಸ್ವತ್ತುಗಳ ಮಾರಾಟದ ಸೂಚನೆ

ಸೆಕ್ಯೂರಿಟೈಜೇಷನ್ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ನಿಯಮ 8(6) ನಿಬಂಧನೆಗಳನ್ನು ಓದಿಕೊಂಡು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್, 2002ರ ಅಡಿಯಲ್ಲಿ ಸ್ಥಿರಾಸ್ತಿ ಸ್ವತ್ತುಗಳ ಮಾರಾಟ ಸೂಚನೆ (ಈ–ಹರಾಜು).

ಸಾರ್ವಜನಿಕರಿಗೆ ಸಾರ್ವಜನಿಕವಾಗಿ ಸೂಚನೆ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು)ರಿಗೆ ಮತ್ತು ಜಾಮೀನುದಾರ(ರು)ರಿಗೆ ಈ ಮೂಲಕ ತಿಳಿಸುದೇನೆಂದರೆ ಈ ಕೆಳಗೆ ತಿಳಿಸಿದ ಸ್ಥಿರಾಸ್ತಿ ಸ್ವತ್ತನ್ನು ಭದ್ರತಾ ಸಾಲಗಾರರಿಗೆ ಅಡಮಾನ / ಚಾರ್ಜ್ ಮಾಡಲಾಗಿದೆ. ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ, ಅಧಿಕೃತ ಅಧಿಕಾರಿಯವರಿಂದ ಸಾಂಕೇತಿಕವಾಗಿ/ರಚನಾತ್ಮಕ/ಭೌತಿಕ ಸ್ವಾಧೀನತೆಯನ್ನು ತೆಗೆದುಕೊಳ್ಳಲಾಗಿದೆ. (ವಿವರಗಳನ್ನು ಈ ಕೆಳಗೆ ನೀಡಿರುವ ಕೋಷ್ಟಕದಲ್ಲಿ ತಿಳಿಸಲಾಗಿದೆ.) ಈ ಕೆಳಕಂಡ ಸಾಲಗಳ ವಸೂಲಾತಿಗಾಗಿ ಹಾಗೂ ಮುಂದಿನ ಬಡ್ಡಿ ಮತ್ತು ವೆಚ್ಚಗಳಿಗಾಗಿ ಈ ಕೆಳಗೆ ತಿಳಿಸಿದ ಸ್ಥಿರಾಸ್ತಿ ಸ್ವತ್ತನ್ನು **“ಎಲ್ಲಿ ಹೇಗಿದೆಯೋ ಹಾಗೆ”, “ಎಲ್ಲಿ ಏನಿದೆಯೋ ಹಾಗೆ”, ಮತ್ತು “ಅಲ್ಲಿ ಏನೇ ಇರಲಿ ಹಾಗೆ”** ಆಧಾರದ ಮೇಲೆ ದಿನಾಂಕ : **18.05.2022, 02.06.2022 & 03.06.2022** ರಂದು ಈ ಕೆಳಗೆ ನೀಡಿರುವ ಸಮಯದಲ್ಲಿ ಮಾರಾಟ ಮಾಡಲಾಗುವುದು. ಮೀಸಲು ಬೆಲೆ ಮತ್ತು ಇಎಂಡಿ ಠೇವಣಿಗಳ ವಿವರಗಳು ಈ ಕೆಳಗಿನಂತಿವೆ : ಇಎಂಡಿ ಡೆಪಾಸಿಟ್ (ಆಯಾ ಸ್ವತ್ತುಗಳಿಗೆ ಅನ್ವಯಿಸುವಂತೆ) ದಿನಾಂಕ: **17.05.2022, 01.06.2022 & 02.06.2022** ರಂದು ಸಂಜೆ **5:00** ಗಂಟೆಯ ಒಳಗೆ ಆನ್‌ಲೈನ್ ಮೂಲಕ (RTGS/NEFT) ಈ ಕೆಳಗೆ ನಮೂದಿಸಿರುವ ಖಾತೆಯ ಸಂಖ್ಯೆಗೆ ಪಾವತಿಸುವುದು ಅಥವಾ ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಪರವಾಗಿ DD ಮೂಲಕ ಸಂದಾಯ ಮಾಡಬಹುದಾಗಿದೆ.

ಕ್ರ ಸಂ.	ಸಾಲಗಾರರ ಹೆಸರು, ವಿಳಾಸ ಮತ್ತು ಶಾಖೆ.	ಸ್ಥಿರಾಸ್ತಿಯ ವಿವರಗಳು ಎಲ್ಲೆ ಮತ್ತು ವಿಸ್ತೀರ್ಣ	ಕಾಯ್ದಿಟ್ಟ ಬೆಲೆ	ಇಡಗಂಟು ಠೇವಣಿ ಹಣ (ಇಎಂಡಿ)	ಬ್ಯಾಂಕಿಗೆ ಬರಬೇಕಾದ ಬಾಕಿ ಮೊಬಲಗು	ಹರಾಜು ಸಮಯ ಮತ್ತು ದಿನಾಂಕ
1.	ಶ್ರೀ. ವಿಜಯ್ ಕುಮಾರ್ .ಎಂ ನಂ.1229, 17ನೇ ಮುಖ್ಯ ರಸ್ತೆ, 1ನೇ ಹಂತ, 1ನೇ ಘಟ್ಟ, ಬಿ.ಟಿ.ಎಂ. ಲೇಔಟ್, ಬೆಂಗಳೂರು. ಶಾಖೆ : ಕೋರಮಂಗಲ	ನಂ.1229, ಬಿ.ಟಿ.ಎಂ. 1ನೇ ಹಂತ, 1ನೇ ಘಟ್ಟ, ಬಿ.ಬಿ.ಎಂ.ಪಿ. ವಾರ್ಡ್ ನಂ. 65 ಬಿ.ಟಿ.ಎಂ. ಲೇಔಟ್, ಪಿ.ಐ.ಡಿ. ನಂ. 65–45–1229, ಬೆಂಗಳೂರು. ಪೂರ್ವ–ಪಶ್ಚಿಮ : $\frac{55+48}{2}$ ಅಡಿಗಳು & ಉತ್ತರ –ದಕ್ಷಿಣ : $\frac{46+58}{2}$ ಅಡಿಗಳು ಪೂರ್ವಕ್ಕೆ : ಸೈಟ್ ನಂ. 1228, ಪಶ್ಚಿಮಕ್ಕೆ : ರಸ್ತೆ ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಸೈಟ್ ನಂ. 1230	ರೂ. 2,67,87,000/– (ಎರಡು ಕೋಟಿ ಅರವತ್ತೇಳು ಲಕ್ಷ ಎಂಭತ್ತೇಳು ಸಾವಿರ ಮಾತ್ರ)	ರೂ. 26,78,700/– (ಇಪ್ಪತ್ತಾರು ಲಕ್ಷ ಎಪ್ಪತ್ತೆಂಟು ಸಾವಿರದ ಏಳು ನೂರು ಮಾತ್ರ)	26.04.2022 ಕ್ಕೆ ರೂ. 4,35,19,354/– ನೋಟಿಸ್ ದಿನಾಂಕ 26.04.2022	18.05.2022 ಬೆಳಿಗ್ಗೆ : 10 : 00 ರಿಂದ 11 : 00 ರವರೆಗೆ
2.	ಮಿಸ್. ಶಿಲ್ಪ. ಎಸ್. ನಂ. 332, 15ನೇ ಮುಖ್ಯ ರಸ್ತೆ, 2ನೇ ಇ ಕ್ರಾಸ್, 1ನೇ ಬ್ಲಾಕ್ ಹಂತ, ಬಸವೇಶ್ವರನಗರ, ಬೆಂಗಳೂರು–560 079. ಶಾಖೆ : ವಿಜಯನಗರ	ಹೊಸ ನಂ. 13, ಹಳೇ ನಂ. 114, ಎಂ.ಐ.ಜಿ, 80 ಅಡಿ ರಸ್ತೆ, ಕೆ.ಹೆಚ್.ಬಿ. 2ನೇ ಹಂತ, ಬಿ.ಬಿ.ಎಂ.ಪಿ. ವಾರ್ಡ್ ನಂ. 21 ಇಂಡಸ್ಟ್ರಿಯಲ್ ಟೌನ್, ಪಿ.ಐ.ಡಿ. ನಂ. 21–97–13, ಬೆಂಗಳೂರು. 1) ನೆಲ ಮಾಳಿಗೆ : 86.96 ಚದರ ಮೀಟರ್‌ಗಳು 2) ನೆಲ ಮಹಡಿ : 119–71 ಚದರ ಮೀಟರ್‌ಗಳು 3) ಮೊದಲನೆಯ ಮಹಡಿ : 119.71 ಚದರ ಮೀಟರ್‌ಗಳು. 4) ಎರಡನೆಯ ಮಹಡಿ : 12.75 ಚದರ ಮೀಟರ್‌ಗಳು 5) ಮೂರನೆಯ ಮಹಡಿ : ವಾಣಿಜ್ಯ ಕಾಂಪ್ಲೆಕ್ಸ್. ಪೂರ್ವ–ಪಶ್ಚಿಮ : 64 ಅಡಿಗಳು & ಉತ್ತರ–ದಕ್ಷಿಣ : 44.9 ಅಡಿಗಳು. ಪೂರ್ವಕ್ಕೆ : ಸ್ವತ್ತಿನ ನಂ. 109, ಪಶ್ಚಿಮಕ್ಕೆ : ರಸ್ತೆ ಉತ್ತರಕ್ಕೆ : ಸ್ವತ್ತಿನ ನಂ. 113, ದಕ್ಷಿಣಕ್ಕೆ : ಸ್ವತ್ತಿನ ನಂ. 115	ರೂ. 4,66,80,000/– (ನಾಲ್ಕು ಕೋಟಿ ಅರವತ್ತಾರು ಲಕ್ಷ ಎಂಭತ್ತು ಸಾವಿರ ಮಾತ್ರ)	ರೂ. 46,68,000/– (ನಲವತ್ತಾರರು ಲಕ್ಷ ಅರವತ್ತೆಂಟು ಸಾವಿರ ಮಾತ್ರ)	25.04.2022 ಕ್ಕೆ ರೂ. 5,73,56,933/– ನೋಟಿಸ್ ದಿನಾಂಕ 26.04.2022	18.05.2022 ಬೆಳಿಗ್ಗೆ : 11 : 00 ರಿಂದ 12 : 00 ರವರೆಗೆ
3.	ಶ್ರೀಮತಿ. ವಿಜಯಲಕ್ಷ್ಮೀ ನಂ. 708/ಎ, 2ನೇ ಕ್ರಾಸ್, 1ನೇ ಮುಖ್ಯ ರಸ್ತೆ, ವೆಂಟೇಶ್ವರ ಶಾಲೆ, ಕೆ.ಆರ್.ಪುರಂ, ಬೆಂಗಳೂರು–36. ಶಾಖೆ : ಕೆ.ಆರ್. ಪುರಂ.	ಹೌಸ್ ಲಿಸ್ಟ್ ನಂ. 544/1, ಹಳೇ ಖಾತಾ ನಂ. 386, ಹೊಸ ಬಿ.ಬಿ.ಎಂ.ಪಿ. ಖಾತಾ ಎಸ್ ನಂ. 393, ವಾಸವಿಮಹಲ್ ಕೆ.ಆರ್. ಪುರಂ, ಬೆಂಗಳೂರು ಬಿ.ಬಿ.ಎಂ.ಪಿ. ವಾರ್ಡ್ ನಂ. 52 ಕೆ. ಆರ್. ಪುರಂ, ಮೊದಲಿಗೆ ಪಿ.ಐ.ಡಿ. ನಂ. 052–W0413–12, ಬೆಂಗಳೂರು. ಪೂರ್ವ–ಪಶ್ಚಿಮ: 55 ಅಡಿಗಳು ಮತ್ತು ಉತ್ತರ–ದಕ್ಷಿಣ: 12 ಅಡಿಗಳು. ಒಟ್ಟು 660 ಚದರ ಅಡಿಗಳು. ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ಅಯೋಧ್ಯ ರಾಮ ಶೆಟ್ಟಿ ರವರ ಸ್ವತ್ತು, ಉತ್ತರಕ್ಕೆ : ಕೆ. ರಾಮಯ್ಯ ರವರ ಸ್ವತ್ತು, ದಕ್ಷಿಣಕ್ಕೆ : ರಸ್ತೆ,	ರೂ. 43,57,000/– (ನಲವತ್ತಮೂರು ಲಕ್ಷ ಐವತ್ತೇಳು ಸಾವಿರ ಮಾತ್ರ)	ರೂ. 4,35,700/– (ನಾಲ್ಕು ಲಕ್ಷ ಮೂವತ್ತೈದು ಸಾವಿರದ ಏಳು ನೂರು ಮಾತ್ರ)	26.04.2022 ಕ್ಕೆ ರೂ. 45,12,753/– ನೋಟಿಸ್ ದಿನಾಂಕ 26.04.2022	02.06.2022 ಬೆಳಿಗ್ಗೆ : 10 : 00 ರಿಂದ 11 : 00 ರವರೆಗೆ
4.	ಶ್ರೀ. ಟಿ ವೆಂಕಟಚಲಯ್ಯ (ಪವತಿ), ಕಾನೂನುಬದ್ದ ವಾರಸೂದಾರರು, 1) ಶ್ರೀಮತಿ ಸಾವಿತ್ರಮ್ಮ (ಪತ್ನಿ), 2) ವಿ.ವಿಶ್ವನಾಥ, 3) ವಿ. ಭಾಸ್ಕರ್ (ಗಂಡು ಮಕ್ಕಳು) 4) ಪುಷ್ಪವತಿ 5) ಜಲಜ 6) ನಾಗಲಕ್ಷ್ಮಿ 7) ವಿ. ಮಂಜುಳ (ಹೆಣ್ಣು ಮಕ್ಕಳು) ನಂ.17/6, 18ನೇ ಕ್ರಾಸ್, ಭುವನೇಶ್ವರಿನಗರ, ಕೆ.ಪಿ. ಅಗ್ರಹಾರ, ಬೆಂಗಳೂರು–23. ಶಾಖೆ : ಪ್ರಧಾನ ಕಛೇರಿ	ನಂ.17/6, 18ನೇ ಕ್ರಾಸ್ ರಸ್ತೆ, ಭುವನೇಶ್ವರಿ ನಗರ, ಬೆಂಗಳೂರು. ಪೂರ್ವ–ಪಶ್ಚಿಮ : 16 ಅಡಿಗಳು ಮತ್ತು ಉತ್ತರ – ದಕ್ಷಿಣ : 60 ಅಡಿಗಳು ಪೂರ್ವಕ್ಕೆ : ಗಂಗಪ್ಪ ರವರ ಮನೆ ಪಶ್ಚಿಮಕ್ಕೆ : ನಾರಾಯಣಮ್ಮ ರವರ ಸೈಟ್ ಉತ್ತರಕ್ಕೆ : ನೀರಿನ ಒಳಚರಂಡಿ ದಕ್ಷಿಣಕ್ಕೆ : 20 ಅಡಿಗಳ ರಸ್ತೆ,	ರೂ. 91,25,000/– (ತೊಂಬತ್ತೊಂದು ಲಕ್ಷ ಇಪ್ಪತ್ತೈದು ಸಾವಿರ ಮಾತ್ರ)	ರೂ. 9,12,500/– (ಒಂಬತ್ತು ಲಕ್ಷ ಹನ್ನೇರಡು ಸಾವಿರದ ಐದು ನೂರು ಮಾತ್ರ)	25.04.2022 ಕ್ಕೆ ರೂ. 1,01,44,363/– ನೋಟಿಸ್ ದಿನಾಂಕ 26.04.2022	02.06.2022 ಬೆಳಿಗ್ಗೆ : 11 : 00 ರಿಂದ 12 : 00 ರವರೆಗೆ
5.	ಶ್ರೀಮತಿ. ಶುಭ ನಂ.57, ಹಲಗೇವಡೇರಹಳ್ಳಿ, ರಾಜರಾಜೇಶ್ವರಿನಗರ ಬೆಂಗಳೂರು–98. ಶಾಖೆ : ಪದ್ಮನಾಭನಗರ	ಹೊಸ ಮುನಿಸಿಪಾಲ್ ನಂ. 126/1/1277, ಬಿಬಿಎಂಪಿ ಖಾತಾ ನಂ. 1298, ಹಳೆ ನಂ. 38, ಹಲಗೆವಡೇರಹಳ್ಳಿ ವಿಲೇಜ್ ಹಳೆ ಖಾತಾ ನಂ. 125/1/126/1 ಮತ್ತು 1277/126/1/38, ರಾಜರಾಜೇಶ್ವರಿನಗರ, ವಾರ್ಡ್ ನಂ. 160, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು. ಪೂರ್ವ–ಪಶ್ಚಿಮ : 31.5 ಅಡಿಗಳು ಮತ್ತು ಉತ್ತರ – ದಕ್ಷಿಣ : 38 ಅಡಿಗಳು. ಪೂರ್ವಕ್ಕೆ : ಶ್ರೀ. ಗಂಗಣ್ಣ ರವರ ಸ್ವತ್ತು, ಪಶ್ಚಿಮಕ್ಕೆ : 3.6 ಅಡಿಗಳ ಕಾಮನ್ ಪ್ಯಾಸೇಜ್ ಮತ್ತು ಸಿದ್ಧ ಗಂಗಪ್ಪ ಹೆಚ್.ಬಿ ರವರ ಸ್ವತ್ತು. ಉತ್ತರಕ್ಕೆ : ಶ್ರೀ ಗಂಗಾಧರಯ್ಯ ರವರ ಸ್ವತ್ತು ದಕ್ಷಿಣಕ್ಕೆ : ಶ್ರೀನಿವಾಸಯ್ಯ ರವರ ಸ್ವತ್ತು	ರೂ. 70,00,000/– (ಎಪ್ಪತ್ತು ಲಕ್ಷ ಮಾತ್ರ)	ರೂ. 7,00,000/– (ಏಳು ಲಕ್ಷ ಮಾತ್ರ)	25.04.2022 ಕ್ಕೆ ರೂ. 81,51,055/– ನೋಟಿಸ್ ದಿನಾಂಕ 26.04.2022	02.06.2022 ಮಧ್ಯಾಹ್ನ: 12 : 00 ರಿಂದ 01 : 00 ರವರೆಗೆ
6.	ಶ್ರೀ. ಪಂಜು ಅಲಿಯಾಸ್ ಪಂಜಾಮ್ ನಂ.284, 26ನೇ ಮುಖ್ಯ ರಸ್ತೆ, ಬಿ.ಡಿ.ಬಿ. ಏರಿಯ ತಿಲಕ್‌ನಗರ, ಜಯನಗರ, ಬೆಂಗಳೂರು–41. ಶಾಖೆ : ಕೋರಮಂಗಲ	ಹೌಸ್ ಪ್ರಾಪರ್ಟಿ ನಂ.284, 30ನೇ ‘ಸಿ’ ಅಡ್ಡ ರಸ್ತೆ, ಹಟ್ಸ್ ಕಾಲೋನಿ ಮತ್ತು BTB ಏರಿಯಾ, 4ನೇ ಬ್ಲಾಕ್, ಜಯನಗರ ಪೂರ್ವ, ಹೊಂಬೇಗೌಡನಗರ ಬಿಎಂಪಿ ವಾರ್ಡ್ ನಂ. 62, ಪಿ.ಐ.ಡಿ. ನಂ. 62–97–284, ಬೆಂಗಳೂರು. ಪೂರ್ವ – ಪಶ್ಚಿಮ : 6.10 ಮೀಟರ್‌ಗಳು ಉತ್ತರ – ದಕ್ಷಿಣ : 9.14 ಮೀಟರ್‌ಗಳು ಪೂರ್ವಕ್ಕೆ : ಸೈಟ್ ನಂ. 285. ಪಶ್ಚಿಮಕ್ಕೆ : ಸೈಟ್ ನಂ. 283. ಉತ್ತರಕ್ಕೆ : ಹಿಂದೂ ರುದ್ರ ಭೂಮಿ. ದಕ್ಷಿಣಕ್ಕೆ : ರಸ್ತೆ.	ರೂ. 27,70,000/– (ಇಪ್ಪತ್ತೇಳು ಲಕ್ಷ ಎಪ್ಪತ್ತು ಸಾವಿರ ಮಾತ್ರ)	ರೂ. 2,77,000/– (ಎರಡು ಲಕ್ಷ ಎಪ್ಪತ್ತೇಳು ಸಾವಿರ ಮಾತ್ರ)	25.04.2022 ಕ್ಕೆ ರೂ. 28,86,437/– ನೋಟಿಸ್ ದಿನಾಂಕ 26.04.2022	02.06.2022 ಮಧ್ಯಾಹ್ನ: 02 : 00 ರಿಂದ 03 : 00 ರವರೆಗೆ
7.	ಶ್ರೀ ಸತ್ಯ ಶೀಲನ್.ಡಿ. ಎಂ (ಪವತಿ) ಕಾನೂನುಬದ್ದ ವಾರಸೂದಾರರು : 1ಎ) ಅಭಿಲಾಷ್ (ಮಗ) 1ಬಿ) ಅಭಿಷೇಕ್ (ಮಗ) ಶ್ರೀಮತಿ. ಅಂಬಿಕಾ. ಬಿ ನಂ.2/16, ಸಮೃದ್ದಿ ಮಾಗಡಿ ರಸ್ತೆ, ಕಡಬಗೆರೆ, ಬೆಂಗಳೂರು. ಶಾಖೆ : ಪ್ರಧಾನ ಕಛೇರಿ	ಇ–ಖಾತಾ ನಂ. 150200201400201747, ಹಳೆ ಸೈಟ್ ನಂ. 2 ಮತ್ತು 16, ಹಳೆ ಖಾತಾ ನಂ. 247/53, ಭೂ ಪರಿವರ್ತಿತ ಸೈಟ್ ಸರ್ವೆ ನಂ. 53, ಪರಿವರ್ತಿತ ಆದೇಶ ಆಫಿಷಿಯಲ್ ಮೆಮೊರಂಡಮ್ ನಂ. B.DS.ALN/SR/(N)196/04-05, Date : 04.12.2004, ವಿಶೇಷ ಉಪ ಆಯುಕ್ತರ (ರೆವಿನ್ಯೂ), ಬೆಂಗಳೂರು ಜಿಲ್ಲೆ, ಕಡಬಗೆರೆ ವಿಲೇಜ್, ದಾಸನಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಇಲಾಖೆ, ಸುಪರ್ದಿಗೆ ಒಳಪಟ್ಟಿರುತ್ತದೆ. ಬೆಂಗಳೂರು. ಪೂರ್ವ – ಪಶ್ಚಿಮ : 70 ಅಡಿಗಳು ಮತ್ತು ಉತ್ತರ – ದಕ್ಷಿಣ : 30 ಅಡಿಗಳು ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಸೈಟ್ ನಂ. 1 ಮತ್ತು 15, ದಕ್ಷಿಣಕ್ಕೆ : ಸೈಟ್ ನಂ. 3 ಮತ್ತು 17,	ರೂ. 70,00,000/– (ಎಪ್ಪತ್ತು ಲಕ್ಷ ಮಾತ್ರ)	ರೂ. 7,00,000/– (ಏಳು ಲಕ್ಷ ಮಾತ್ರ)	25.04.2022 ಕ್ಕೆ ರೂ. 1,39,16,353/– ನೋಟಿಸ್ ದಿನಾಂಕ 26.04.2022	02.06.2022 ಮಧ್ಯಾಹ್ನ: 03 : 00 ರಿಂದ 04 : 00 ರವರೆಗೆ
8.	ಶ್ರೀಮತಿ. ವಿಜಯಲಕ್ಷ್ಮೀ. ಹೆಚ್. ಎ ನಂ. 51/1ಎ, ಕೆ.ಆರ್. ರಸ್ತೆ, 7ನೇ ಬ್ಲಾಕ್, ಪಶ್ಚಿಮ ಜಯನಗರ, ಬೆಂಗಳೂರು. ಶಾಖೆ : ಜಯನಗರ	ನಂ.3004/3, (ಹಿಂದಿನ ನಂ. 4,(3004/4), 17ನೇ ಕ್ರಾಸ್, 2ನೇ ಮುಖ್ಯ ರಸ್ತೆ, ಬನಶಂಕರಿ, 2ನೇ ಹಂತ, ಬಿ.ಬಿ.ಎಂ.ಪಿ. ವಾರ್ಡ್ ನಂ. 56 ಗಣೇಶ ಮಂದಿರ, ಪಿ.ಐ.ಡಿ. ನಂ. 56–139–3004/4, ಬೆಂಗಳೂರು. ಪೂರ್ವ – ಪಶ್ಚಿಮ : 31.9 ಅಡಿಗಳು ಮತ್ತು ಉತ್ತರ – ದಕ್ಷಿಣ : 22.9 ಅಡಿಗಳು ಪೂರ್ವಕ್ಕೆ: ಶ್ರೀಮತಿ. ಕಲ್ಪನ. W ರವರಿಗೆ ಸೇರಿದ ಸ್ವತ್ತಿನ ಸಂಖ್ಯೆ 5, ಪಶ್ಚಿಮಕ್ಕೆ : 2ನೇ ಮುಖ್ಯ ರಸ್ತೆ, ಉತ್ತರಕ್ಕೆ: ಶ್ರೀ. ಮುಕುಂದ್ ರವರಿಗೆ ಸೇರಿದ ಸ್ವತ್ತಿನ ಸಂಖ್ಯೆ 3 ದಕ್ಷಿಣಕ್ಕೆ: ದಕ್ಷಿಣದ ಗೋಡೆ (ಕಾಪೌಂಡ ವಾಲ್) ಕಡೆಯಿಂದ 5 ಅಡಿ ಅಗಲದ ಕಾಮನ್ ಪ್ಯಾಸೇಜ್	ರೂ. 98,00,000/– (ತೊಂಬತ್ತೆಂಟು ಲಕ್ಷ ಮಾತ್ರ)	ರೂ. 9,80,000/– (ಒಂಬತ್ತು ಲಕ್ಷ ಎಂಬತ್ತು ಸಾವಿರದ ಮಾತ್ರ)	25.04.2022 ಕ್ಕೆ ರೂ. 1,28,44,451/– ನೋಟಿಸ್ ದಿನಾಂಕ 26.04.2022	03.06.2022 ಬೆಳ್ಳಿಗ್ಗೆ :– 10 : 00 ರಿಂದ 11 : 00 ರವರೆಗೆ
9.	ಶ್ರೀ. ರವೀಂದ್ರ. ಎನ್. ನಂ. 224, 2ನೇ ಕ್ರಾಸ್ ರಾಮಯ್ಯ ಲೇಔಟ್, ಕಲ್ಯಾಣ್ ನಗರ, ಹೊರಮಾವು ಅಗರ ಬೆಂಗಳೂರು–43. ಶಾಖೆ : ಹೆಚ್.ಆರ್.ಬಿ.ಆರ್. ಲೇಔಟ್.	ಖಾನೇಶುಮಾರಿ ನಂ. 132, ಹೌಸ್ ಲಿಸ್ಟ್ ಖಾತಾ ನಂ. 244/132, ಸರ್ವೆ ನಂ. 151/1, ಬಿ.ಬಿ.ಎಂ.ಪಿ. ಹಳೇ ಖಾತಾ ನಂ. 132/1, ಹಾಲಿ ಖಾತಾ ನಂ. 244, ಬಿ.ಬಿ.ಎಂ.ಪಿ. ವಾರ್ಡ್ ನಂ. 25 ಹೊರಮಾವು, ಹೊರಮಾವು ಅಗರ ವಿಲೇಜ್, ಕೆ.ಆರ್. ಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು. ಪೂರ್ವ–ಪಶ್ಚಿಮ : $\frac{83.6+88.4}{2}$ ಅಡಿಗಳು ಮತ್ತು ಉತ್ತರ–ದಕ್ಷಿಣ : $\frac{32.11+30.10}{2}$ ಅಡಿಗಳು ಪೂರ್ವಕ್ಕೆ : ಆರ್. ವೆಂಕಟೇಶ್ ರವರಿಗೆ ಸೇರಿದ ಸ್ವತ್ತು ಪಶ್ಚಿಮಕ್ಕೆ : ಶ್ರೀನಿವಾಸ ರವರಿಗೆ ಸೇರಿದ ಸ್ವತ್ತು ಉತ್ತರಕ್ಕೆ : ಆರ್. ವೆಂಕಟೇಶ್ ರವರಿಗೆ ಸೇರಿದ ಸ್ವತ್ತು ದಕ್ಷಿಣಕ್ಕೆ : ರಸ್ತೆ.	ರೂ. 1,45,00,000/– (ಒಂದು ಕೋಟಿ ನಲವತ್ತೈದು ಲಕ್ಷ ಮಾತ್ರ)	ರೂ. 14,50,000/– (ಹದಿನಾಲ್ಕು ಲಕ್ಷ ಐವತ್ತು ಸಾವಿರ ಮಾತ್ರ)	25.04.2022 ಕ್ಕೆ ರೂ. 1,38,20,119/– ನೋಟಿಸ್ ದಿನಾಂಕ 26.04.2022	03.06.2022 ಬೆಳ್ಳಿಗ್ಗೆ :– 11 : 00 ರಿಂದ 12 : 00 ರವರೆಗೆ
10.	ಶ್ರೀ ಭೋಜರಾಜು ಮತ್ತು ಶ್ರೀಮತಿ. ಲತಾ.ಸಿ ನಂ. 43, 35ನೇ ಕ್ರಾಸ್, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–10. ಶಾಖೆ : ಮಹಾಲಕ್ಷ್ಮೀಪುರ	ಪ್ಲಾಟ್ (ಷಡ್) ನಂ. ಪಿ–8, ಪೀಣ್ಯ ಇಂಡಸ್ಟ್ರೀಯಲ್ ಏರಿಯಾ, ಬೆಂಗಳೂರು–58. ಪೂರ್ವ–ಪಶ್ಚಿಮ: 17 ಅಡಿಗಳು, ಉತ್ತರ–ದಕ್ಷಿಣ: 128 ಅಡಿಗಳು ಪೂರ್ವಕ್ಕೆ : ನೀರಿನ ಚರಂಡಿ, ಪಶ್ಚಿಮಕ್ಕೆ : ಪ್ಲಾಟ್ ನಂ. ಪಿ–8 ರ ಸ್ವಲ್ಪ ಭಾಗ ಮಾರಿರುವುದು ನಂತರ ರಸ್ತೆ, ಉತ್ತರಕ್ಕೆ : ನೀರು ಸರಬರಾಜು ಮಾಡುವ ಜಾಗ ದಕ್ಷಿಣಕ್ಕೆ : ರಸ್ತೆ,	ರೂ. 1,07,80,000/– (ಒಂದು ಕೋಟಿ ಏಳು ಲಕ್ಷ ಎಂಬತ್ತು ಸಾವಿರ ಮಾತ್ರ)	ರೂ. 10,78,000/– (ಹತ್ತು ಲಕ್ಷ ಎಪತ್ತೇಂಟು ಸಾವಿರ ಮಾತ್ರ)	25.04.2022 ಕ್ಕೆ ರೂ. 1,21,92,802/– ನೋಟಿಸ್ ದಿನಾಂಕ 26.04.2022	03.06.2022 ಮಧ್ಯಾಹ್ನ :– 12 : 00 ರಿಂದ 01 : 00 ರವರೆಗೆ
11.	ಶ್ರೀ. ಷಣ್ಮುಗಂ. ಅರ್. ನಂ.20, 10ನೇ ಕ್ರಾಸ್, ಪೈಪ್ ಲೈನ್ ರಸ್ತೆ, ಚೋಳೂರುಪಾಳ್ಯ, ಮಾಗಡಿ ರಸ್ತೆ, ಬೆಂಗಳೂರು–23. ಶಾಖೆ : ಟಿ. ದಾಸರಹಳ್ಳಿ	ಹೊಸ ನಂ. 20, ಹಳೇ ಸ್ವತ್ತಿನ ನಂ. 40, ಸೈಟ್ ನಂ. 02, 10ನೇ ಕ್ರಾಸ್, ಪೈಪ್ ಲೇನ್ ರಸ್ತೆ, ಚೋಳೂರುಪಾಳ್ಯ, ಮಾಗಡಿ ರಸ್ತೆ, ಬೆಂಗಳೂರು–23. (ಮೊದಲಿಗೆ 4ನೇ ಎ ಕ್ರಾಸ್ ಹೊಸಹಳ್ಳಿ ಗ್ರಾಮ)ಹಾಲಿ ಬಿ.ಬಿ.ಎಂ.ಪಿ. ವಾರ್ಡ್ ನಂ. 33 ವಿಜಯನಗರ, ಪಿ.ಐ.ಡಿ. ನಂ. 33–65–20, ಬೆಂಗಳೂರು. ಪೂರ್ವ– ಪಶ್ಚಿಮ : ಉತ್ತರಾರ್ಧ ಭಾಗ : 38 ಅಡಿಗಳು & ದಕ್ಷಿಣಾರ್ಧ ಭಾಗ : 43 ಅಡಿಗಳು & ಉತ್ತರ – ದಕ್ಷಿಣ ಭಾಗ : 30 ಅಡಿಗಳು ಪೂರ್ವಕ್ಕೆ : 20 ಅಡಿಗಳು ರಸ್ತೆ ಪಶ್ಚಿಮಕ್ಕೆ : ಮುನಿ ರೆಡ್ಡಿ ರವರಿಗೆ ಸೇರಿದ ಸ್ವತ್ತು, ಉತ್ತರಕ್ಕೆ : ಸ್ವತ್ತಿನ ನಂ. 03. ದಕ್ಷಿಣಕ್ಕೆ : ಸ್ವತ್ತಿನ ನಂ. 01	ರೂ. 1,13,90,000/– (ಒಂದು ಕೋಟಿ ಹದಿಮೂರು ಲಕ್ಷ ತೊಂಬತ್ತು ಸಾವಿರ ಮಾತ್ರ)	ರೂ. 11,39,000/– (ಹನ್ನೊಂದು ಲಕ್ಷ ಮೂವತ್ತೊಂಬತ್ತು ಸಾವಿರ ಮಾತ್ರ)	25.04.2022 ಕ್ಕೆ ರೂ. 1,89,40,793/– ನೋಟಿಸ್ ದಿನಾಂಕ 26.04.2022	03.06.2022 ಮಧ್ಯಾಹ್ನ :– 02 : 00 ರಿಂದ 03 : 00 ರವರೆಗೆ

ಇಎಂಡಿ ಠೇವಣಿ ಪಾವತಿಯ ಕೊನೆಯ ದಿನಾಂಕ : (ಕ್ರ.ಸಂ. 1 ರಿಂದ 2 – 17.05.2022 ಸಂಜೆ : 5: 00 ರ ವರೆಗೆ) (ಕ್ರ.ಸಂ. 3 ರಿಂದ 7 – 01.06.2022 ಸಂಜೆ : 5: 00 ರ ವರೆಗೆ) (ಕ್ರ.ಸಂ. 8 ರಿಂದ 11 – 02.06.2022 ಸಂಜೆ : 5: 00 ರ ವರೆಗೆ)	ಬ್ಯಾಂಕಿನ ಹೆಸರು ಮತ್ತು ಖಾತೆಯ ವಿವರಗಳು (ಇಎಂಡಿ ಪಾವತಿಗಾಗಿ) IFSC ಕೋಡ್: ಬ್ಯಾಂಕಿನ ಹೆಸರು: ಇಂಡಸ್‌ಇಂಡ್ ಬ್ಯಾಂಕ್. ಶಾಖೆ ಹೆಸರು : ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಪ್ರಧಾನ ಕಛೇರಿ ಶಾಖೆ : ಖಾತೆ ಸಂಖ್ಯೆ : 000220105013061. IFSC ಕೋಡ್ : INDB0BCCB02
ತಪಾಸಣೆಯ ದಿನಾಂಕ ಮತ್ತು ಸಮಯ: (ಕ್ರ.ಸಂ. 1 ರಿಂದ 2 – 13.05.2022, ಬೆಳಿಗ್ಗೆ : 10.00 ರಿಂದ ಸಂಜೆ 5 : 00 ರ ವರೆಗೆ) (ಕ್ರ.ಸಂ. 3 ರಿಂದ 11 – 30.05.2022, ಬೆಳಿಗ್ಗೆ : 10.00 ರಿಂದ ಸಂಜೆ 5 : 00 ರ ವರೆಗೆ)	
ಬಿಡ್ ಗುಣಾಂಕ: ರೂ. 50,000/–	

ಸಾಲಗಾರರು/ ಅಡಮಾನದಾರರ ಗಮನಕ್ಕೆ ನಿಬಂಧನೆಗಳ ಉಪ–ವಿಭಾಗ (8) ರ ಸೆಕ್ಷನ್ 13ರ ಕಾಯಿದೆಯಲ್ಲಿ ಲಭ್ಯವಿರುವ ಸಮಯಕ್ಕೆ ಸಂಬಂಧಿಸಿದಂತೆ ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಲು ತಿಳಿಸಲಾಗಿದೆ. (ಈ ಪ್ರಕಟಣೆಯನ್ನು ನಿಯಮ (8) ಉಪನಿಯಮ (6) ಸೆಕ್ಯೂರಿಟಿ ಇಂಟರೆಸ್ಟ್ ಎನ್‌ಫೋರ್ಸ್‌ಮೆಂಟ್ ನಿಯಮ 2002ರಡಿಯಲ್ಲಿ ಸಾಲಗಾರರಿಗೆ ನೀಡುವ ಪ್ರಕಟಣೆ ಎಂದು ಪರಿಗಣಿಸತಕ್ಕದ್ದು) ಮಾರಾಟದ ವಿವರವಾದ ನಿಯಮ ಮತ್ತು ನಿಬಂಧನೆಗಳಿಗೆ, ದಯವಿಟ್ಟು ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ವೆಬ್‌ಸೈಟ್ ನಲ್ಲಿನ ಲಿಂಕನ್ನು ನೋಡಿ ಅಂದರೆ, “ ಅಡಮಾನ ಸ್ವತ್ತುಗಳ ಮಾರಾಟ “ಶೀರ್ಷಿಕೆಯ ಅಡಿಯಲ್ಲಿ **www.bccbl.co.in,** ಅನ್ನು ನೋಡಿ. ಈ– ಹರಾಜನ್ನು 05 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ ದಿನಾಂಕ: 18.05.2022, 02.06.2022 & 03.06.2022 ರಂದು ಬೆಳಿಗ್ಗೆ : 10.00 ರಿಂದ 05.00 ರವರೆಗೆ **https://bankauctions.in** ಪೋರ್ಟಲ್ ಮೂಲಕ ನಡೆಸಲಾಗುವುದು. ಉದ್ದೇಶಿತ ಬಿಡ್‌ದಾರರು ತಮ್ಮ ಹೆಸರನ್ನು **https://bankauctions.in** ನಲ್ಲಿ ನೊಂದಾಯಿಸಿಕೊಂಡು ಯೂಸರ್ ಐಡಿ ಮತ್ತು ಪಾಸ್‌ವರ್ಡನ್ನು ಉಚಿತವಾಗಿ ಪಡೆಯಬಹುದು ಮತ್ತು **E-auction (tentatively on 17.05.2022, 01.06.2022 & 02.06.2022) from M/s 4 Closure, Mr. Prakash Reddy /Bhaskar (Asst. Manager), No.22, 5th Cross, Gurumahal Extension, Opp. Indian Hotel, K.G. Halli, Jalahalli (West), Bengaluru-560015, Mobile No: 9515160061/9515160062, E-mail: prakash@bankauctions.in** & **bhaskar@bankauctions.in**.

ಹೆಚ್ಚಿನ ಮಾಹಿತಿಗಾಗಿ : bccbrec2021@gmail.com Mobile Number : 080-26600512, 26609066 & 9342781425.

ದಿನಾಂಕ : 28.04.2022
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಕಬ್ಬನ್ ಉದ್ಯಾನದಲ್ಲಿರುವ ಕೊಳ ● ಸ್ಮಾರ್ಟ್‌ಸಿಟಿ ಯೋಜನೆಯಡಿ ಕಾಮಗಾರಿ

‘ಜಲ ಮರುಪೂರಣ ಕೊಳ’ ಕಾಂಕ್ರೀಟು ಮುಕ್ತ

● ಮನೋಹರ್ ಎಂ.

ಬೆಂಗಳೂರು: ಕಬ್ಬನ್ ಉದ್ಯಾನದ ಚಾಮರಾಜೇಂದ್ರ ಒಡೆಯರ್ ಪ್ರತಿಮೆ ಬಳಿ ಇರುವ ಒಣ ಕೊಳ (ಡ್ರೈ ಪಾಂಡ್) ಈಗ ‘ಜಲ ಮರುಪೂರಣ ಕೊಳ’ವಾಗಿ ಹೊಸರೂಪ ಪಡೆದಿದೆ. ಸ್ಮಾರ್ಟ್‌ಸಿಟಿ ಯೋಜನೆಯಡಿ ಕಾಂಕ್ರೀಟು ಮುಕ್ತವಾಗಿ ಕೊಳದ ಕಾಮಗಾರಿ ಪೂರ್ಣಗೊಂಡಿದೆ.

ಸ್ಮಾರ್ಟ್‌ಸಿಟಿ ಯೋಜನೆಯ ಎರಡನೇ ಹಂತದಲ್ಲಿ ಈ ಕೊಳವೂ ಸೇರಿದಂತೆ ಉದ್ಯಾನದಲ್ಲಿರುವ ಮೂರು ಕೊಳಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಈ ಪೈಕಿ ಒಣ ಕೊಳದ ಕಾಮಗಾರಿ ಮುಗಿದಿದೆ.

ಕಮಲ ಕೊಳದ ಕಾಮಗಾರಿಯೂ ಚುರುಕಾಗಿದ್ದು, ಶೀಘ್ರದಲ್ಲೇ ಅಂತಿಮ ರೂಪ ಪಡೆಯಲಿದೆ. ಕರಗದ ಕುಂಟೆಯ ಕೆಲಸಗಳು ಆನಂತರ ಆರಂಭವಾಗಲಿವೆ.


‘ಕಬ್ಬನ್ ಉದ್ಯಾನದಲ್ಲಿ ಅಂತರ್ಜಲ ಮಟ್ಟ ಹೆಚ್ಚಿಸಲು ಈ ಕೊಳ ಹೆಚ್ಚು ಸಹಕಾರಿಯಾಗಿದೆ. ಮೂರು ತಿಂಗಳಲ್ಲಿ ಕೊಳದ ಕಾಮಗಾರಿ ಪೂರ್ಣಗೊಂಡಿದೆ’ ಎಂದು ತೋಟಗಾರಿಕೆ ಇಲಾಖೆ ಉಪನಿರ್ದೇಶಕ (ಕಬ್ಬನ್ ಉದ್ಯಾನ) ಎಚ್‌.ಟಿ.ಬಾಲಕೃಷ್ಣ ‘ಪ್ರಜಾವಾಣಿ’ಗೆ ತಿಳಿಸಿದರು.

‘ಪ್ರತಿ ವರ್ಷವೂ ಮಳೆಗಾಲದಲ್ಲಿ ಮಳೆ ನೀರಿನಿಂದ ಕೊಳ ಭರ್ತಿಯಾಗುತ್ತದೆ. ಬೇಸಿಗೆ ವೇಳೆಗೆ ನೀರು ಭೂಮಿಗೆ ಇಂಗುವ ಮೂಲಕ ಕೊಳ ಒಣಗುತ್ತದೆ. ಈ ಕಾರಣದಿಂದಲೇ ಇದನ್ನು ‘ಒಣ ಕೊಳ’ ಎಂದೇ ಕರೆಯಲಾಗುತ್ತದೆ’ ಎಂದರು.

ಮುಖ್ಯಾಂಶಗಳು
- ಕಲ್ಲುಗಳಿಂದ ನೈಸರ್ಗಿಕ ರೂಪ
- ಬಿದಿರು ಸಸಿಗಳಿಂದ ಕೊಳದ ಅಲಂಕಾರ
- ಚಿಟ್ಟೆಗಳನ್ನು ಸೆಳೆಯುವ ವಿಶೇಷ ಸಸಿಗಳ ಬಳಕೆ

ಸ್ಮಾರ್ಟ್‌ಸಿಟಿ ಯೋಜನೆಯಡಿ ಕೊಳಗಳ ಅಭಿವೃದ್ಧಿ ಹೊಣೆ ಹೊತ್ತಿರುವ ನೇಚರ್ ಫರ್ಸ್ಟ್ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪಂಚಾಕ್ಷರಿ ಹಿರೇಮಠ, ‘ಕೊಳದ ಮೂಲ ವಿನ್ಯಾಸದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಕೊಳವನ್ನು ಅಂದಗೊಳಿಸುವ ಕೆಲಸವನ್ನಷ್ಟೇ ಮಾಡಿದ್ದೇವೆ. ಕಾಂಕ್ರೀಟು ಮುಕ್ತವಾಗಿ ಕೊಳದ ಕಾಮಗಾರಿ ಪೂರ್ಣಗೊಳಿಸಿರುವುದು ವಿಶೇಷ’ ಎಂದರು.

‘ಕೊಳದಲ್ಲಿ ಸಂಗ್ರಹವಾಗಿದ್ದ ಹೂಳು ತೆರವು ಮಾಡಲಾಗಿದೆ. ಕಾಮಗಾರಿಯಿಂದಾಗಿ ಕೊಳದಲ್ಲಿ ಹೆಚ್ಚು ನೀರು ಸಂಗ್ರಹಗೊಳ್ಳಲಿದೆ. ನೀರಿನ ಮರುಪೂರಣ ಪ್ರಕ್ರಿಯೆಗೂ ಪೂರಕವಾಗಿದ್ದು, ಇದನ್ನು ಕಬ್ಬನ್ ಉದ್ಯಾನದ ನೀರು ಇಂಗಿಸುವ ಬೃಹತ್ ಗುಂಡಿ ಎನ್ನಬಹುದು’ ಎಂದು ಅವರು ಹೇಳಿದರು.


ಕೊಳಕ್ಕೆ ಮೆಟ್ಟಿಲುಗಳನ್ನು ನಿರ್ಮಿಸಿರುವುದು –ಪ್ರಜಾವಾಣಿ ಚಿತ್ರ/ಎಂ.ಎಸ್‌.ಮಂಜುನಾಥ್

ಪ್ರಜಾವಾಣಿ ವಿಶೇಷ

‘ಕೊಳದ ಸುತ್ತ 13ಕ್ಕೂ ಹೆಚ್ಚು ಬಗೆಯ ಹೂವಿನ ಸಸಿಗಳು ಹಾಗೂ ತರಹೇವಾರಿ ಅಲಂಕಾರಿಕ ಸಸಿಗಳನ್ನು ನೆಟ್ಟಿದ್ದೇವೆ. ಕೊಳದ ಬಳಿ ಇರುವ ಮರಗಳಿಗೆ ಪರ್ಯಾಯವಾಗಿ 12ಕ್ಕೂ ಹೆಚ್ಚು ಮರಗಳನ್ನು ನೆಡಲಾಗಿದೆ. ಕೊಳದ ಸುತ್ತಲಿನ ಭಾಗವನ್ನು ಹುಲ್ಲುಹಾಸು ಮತ್ತು ಕಲ್ಲುಗಳಿಂದಲೇ ನೈಸರ್ಗಿಕವಾಗಿ ಅಂದಗೊಳಿಸಿದ್ದೇವೆ. ಅಂದಾಜು ₹20 ಲಕ್ಷ ವೆಚ್ಚದಲ್ಲಿ ಕೊಳದ ಕಾಮಗಾರಿ ಪೂರ್ಣಗೊಂಡಿದೆ’ ಎಂದರು.

ಗಿಡಗಳಿಂದಲೇ ರಕ್ಷಣಾ ಬೇಲಿ: ‘ಕೊಳದ ಸುತ್ತಲೂ ರಕ್ಷಣೆಗಾಗಿ ಗಿಡಗಳಿಂದಲೇ ಬೇಲಿ ನಿರ್ಮಿಸುವ ‘ಬಯೋ ಫೆನ್ಸ್’ ವಿಧಾನವನ್ನು ಇಲ್ಲಿ ಅನುಸರಿಸಿದ್ದೇವೆ. ತಂತಿ ಬೇಲಿಯಿಂದ ಅಡಚಣೆ ಹೆಚ್ಚು. ಈ ಕಾರಣದಿಂದ ವಿಶೇಷ ಗಿಡಗಳನ್ನೇ ಬೇಲಿಯ ರೀತಿಯಲ್ಲಿ ಬೆಳೆಸಲಾಗುವುದು. ಇವು ರಕ್ಷಣಾತ್ಮಕವಾಗಿಯೂ ಇರುವುದಲ್ಲದೆ, ನೈಸರ್ಗಿಕವಾಗಿಯೂ ಕಾಣುತ್ತದೆ’ ಎಂದು ಹಿರೇಮಠ ಹೇಳಿದರು.

ಕಾಂಕ್ರೀಟು ಬೇಡವೇ ಬೇಡ: ಸಂಘ

‘ಕಾಂಕ್ರೀಟು ಬಳಸದೆ ಒಣ ಕೊಳದ ಅಭಿವೃದ್ಧಿಗೆ ಆಕ್ಷೇಪವಿಲ್ಲ. ಸ್ಮಾರ್ಟ್‌ಸಿಟಿ ಯೋಜನೆಯ ಕಾಮಗಾರಿಗಳೆಲ್ಲವೂ ಕಾಂಕ್ರೀಟುರಹಿತವಾಗಿಯೇ ನಡೆದರೆ ಒಳ್ಳೆಯದು. ಕೆಲ ಕಾಮಗಾರಿಗಳಲ್ಲಿ ಕಾಂಕ್ರೀಟು ಬಳಸಿರುವ ಅನುಮಾನ ಇದೆ. ಇದು ನಿಜವಾದರೆ ಕಾನೂನು ಹೋರಾಟ ಮಾಡಲಿದ್ದೇವೆ’ ಎಂದು ಕಬ್ಬನ್ ಪಾರ್ಕ್ ನಡಿಗೆದಾರರ ಸಂಘದ ಅಧ್ಯಕ್ಷ ಉಮೇಶ್ ಎಚ್ಚರಿಸಿದರು.

ಸಾರ್ವಜನಿಕರ ಕಟ್ಟಡ ಪಕ್ಷದ ಚಟುವಟಿಕೆಗಳಿಗೆ ಬಳಕೆ: ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದ ಮಲ್ಲೇಶ್ವರದ ವಾರ್ಡ್ ಸಂಖ್ಯೆ-45ರಲ್ಲಿನ ವಿವಿಧೋದ್ದೇಶದ ಕಟ್ಟಡಕ್ಕೆ ಸಾರ್ವಜನಿಕರಿಗೆ ಪ್ರವೇಶ ಇಲ್ಲ’ ಎಂದು ಬೆಂಗಳೂರು ನವನಿರ್ಮಾಣ ಪಕ್ಷ (ಬಿಎನ್‌ಪಿ)ದೂರಿದೆ.

ತೆರಿಗೆದಾರರ ಕೋಟ್ಯಂತರ ರೂಪಾಯಿ ವೆಚ್ಚ ಮಾಡಿ ನಿರ್ಮಿಸಿರುವ ಈ ಕಟ್ಟಡವನ್ನು ಸಾರ್ವಜನಿಕರ ಬಳಕೆಗೆ ನೀಡದೆ ಬೀಗ ಹಾಕಲಾಗಿದೆ. ಇದರಿಂದ ಏನು ಪ್ರಯೋಜನ ಎಂದು ಪ್ರಶ್ನಿಸಿದೆ.

ಈ ಜಾಗವನ್ನು ಪಕ್ಷಕ್ಕೆ ಸಂಬಂಧಿಸಿದ ಕಾರ್ಯಗಳಿಗೆ ಮಾತ್ರ ಬಳಸಲಾಗುತ್ತಿದೆ. ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ್ ಮತ್ತು ಪಾಲಿಕೆಯ ಮಾಜಿ ಸದಸ್ಯ ಎನ್. ಜಯಪಾಲ್ ಅವರ ಭಾವಚಿತ್ರಗಳು ಮಾತ್ರ ಕಟ್ಟಡದ ಮೇಲೆ ರಾರಾಜಿಸುತ್ತಿವೆ ಎಂದು ದೂರಿದೆ.

‘ಈ ಪ್ರದೇಶದಲ್ಲಿ ಕೆಲವು ಕಾರ್ಯಕ್ರಮಗಳು ನಡೆದಾಗ ಮಾತ್ರ ಪಕ್ಷದ ಕಾರ್ಯಕರ್ತರು ಈ ಕಟ್ಟಡವನ್ನು ಬಳಸುತ್ತಾರೆ. ಸ್ಥಳೀಯರಾದ ನಮಗೆ ಬಳಸಲು ಅವಕಾಶವೇ ಇಲ್ಲ ಎನ್ನುವುದು ಸಾರ್ವಜನಿಕರ ದೂರು’ ಎಂದು ಬಿಎನ್‌ಪಿ ಕಾರ್ಯಕಾರಿ ಸಮಿತಿಯ ಸದಸ್ಯರಾದ ಬಿ.ವಿ. ಲಲಿತಾಂಬ ತಿಳಿಸಿದ್ದಾರೆ.

‘ಬಿಬಿಎಂಪಿ ಈ ಕಟ್ಟಡಗಳನ್ನು ನಿರ್ಮಿಸಲು ತೆರಿಗೆದಾರರ ಹಣವನ್ನು ಖರ್ಚು ಮಾಡುತ್ತಿದೆ. ಸಾರ್ವಜನಿಕರಿಗಾಗಿ ಈ ಕಟ್ಟಡ ನಿರ್ಮಿಸಲಾಗಿದೆ ಎನ್ನುವುದಾದರೆ ಬಳಸಲು ಅವರಿಗೆ ಏಕೆ ಅವಕಾಶ ನೀಡಿಲ್ಲ. ಸಾರ್ವಜನಿಕರ ಹೆಸರಿನಲ್ಲಿ ಬಿಬಿಎಂಪಿ ಹಣ ವ್ಯರ್ಥ ಮಾಡುತ್ತಿರುವುದಕ್ಕೆ ಇದೊಂದು ಉದಾಹರಣೆಯಾಗಿದೆ. ಬಿಬಿಎಂಪಿ ತಾನು ಮಾಡುವ ವೆಚ್ಚದ ಬಗ್ಗೆ ಯಾವುದೇ ರೀತಿಯ ಪಾರದರ್ಶಕತೆ ಕಾಪಾಡಿಕೊಂಡಿಲ್ಲ. ಇಂತಹ ಯೋಜನೆಗಳಿಗೆ ಈಗಾಗಲೇ ಕೋಟ್ಯಂತರ ರೂಪಾಯಿ ವೆಚ್ಚ ಮಾಡಲಾಗಿದೆ. ಸಾರ್ವಜನಿಕರಿಗೆ ಇಂತಹ ಯೋಜನೆ ಮತ್ತು ಅವುಗಳಿಗೆ ಖರ್ಚು ಮಾಡಲಾದ ವಿವರಗಳ ಮಾಹಿತಿಯೇ ಇಲ್ಲ’ ಎಂದು ರಾಷ್ಟ್ರೀಯ ಕಾನೂನು ಶಾಲೆಯ ವಿದ್ಯಾರ್ಥಿ ರಿಷಿ ರಾಘವನ್ ಎಂದು ಕಿಡಿಕಾರಿದ್ದಾರೆ.

ಮಲ್ಲೇಶ್ವರ ವಾರ್ಡ್-45ಕ್ಕೆ ₹92 ಕೋಟಿ ಮೊತ್ತದ ಒಟ್ಟು 315 ಯೋಜನೆಗಳು ಮಂಜೂರಾಗಿವೆ. ಇವುಗಳಲ್ಲಿ ₹24 ಕೋಟಿ ಮೊತ್ತದ 116 ಯೋಜನೆಗಳನ್ನು ಕಾರ್ಯಗತಗೊಳಿಸಲಾಗಿದೆ ಎಂದು ಬಿಎನ್‌ಪಿ ತಿಳಿಸಿದೆ.

ಚಿತ್ರಾವಳಿ


ಸರ್ ಎಂ.ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಪ್ರತಿಷ್ಠಾನ ಟ್ರಸ್ಟ್ ನಗರದಲ್ಲಿ ಗುರುವಾರ ಆಯೋಜಿಸಿದ್ದ ತ್ರಿದಶಮಾನೋತ್ಸವ ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ರಂಗಭೂಮಿ ಕಲಾವಿದರಾದ ಕಮನಿಧರನ್ ಮತ್ತು ಶಂಕರ್ ಭಟ್ ಅವರಿಗೆ ರಾಷ್ಟ್ರೀಯ ಕಲಾ ವಿಭೂಷಣ ಪ್ರಶಸ್ತಿ ಪ್ರದಾನ ಮಾಡಲಾಯಿತು. ನಟಿ ಮೀನಾ, ಲೇಖಕಿ ವಸುಂಧರಾ ಭೂಪತಿ, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ಸಾರ್ವಜನಿಕ ಗ್ರಂಥಾಲಯ ಇಲಾಖೆ ನಿರ್ದೇಶಕ ಸತೀಶ್ ಕುಮಾರ್ ಎಸ್‌.ಹೊಸಮನಿ, ಟ್ರಸ್ಟ್‌ನ ಗೌರವ ಅಧ್ಯಕ್ಷ ಪ್ರಭುಸ್ವಾಮಿ ಸರಗಣಾಚಾರಿ ಮತ್ತು ಅಧ್ಯಕ್ಷ ರಮೇಶ್ ಸುರ್ವೆ ಇದ್ದಾರೆ –ಪ್ರಜಾವಾಣಿ ಚಿತ್ರ


ಅವೆನ್ಯೂ ರಸ್ತೆಯಲ್ಲಿನ ಕಾಮಗಾರಿಯನ್ನು ರಾಕೇಶ್ ಸಿಂಗ್ ಪರಿಶೀಲಿಸಿದರು

ಅವೆನ್ಯೂ ರಸ್ತೆ ಕಾಮಗಾರಿ: 20 ದಿನಗಳ ಗಡುವು

ಬೆಂಗಳೂರು: ನಗರದ ಅವೆನ್ಯೂ ರಸ್ತೆಯಲ್ಲಿ ಕೈಗೊಂಡಿರುವ ಕಾಮಗಾರಿಗಳನ್ನು 20 ದಿನಗಳಲ್ಲಿ ಪೂರ್ಣಗೊಳಿಸಬೇಕು ಎಂದು ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಅಧ್ಯಕ್ಷ ರಾಕೇಶ್ ಸಿಂಗ್ ಅವರು ಗುತ್ತಿಗೆದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

‘ವ್ಯಾಪಾರಿಗಳಿಗೆ ತೊಂದರೆಯಾಗದ ರೀತಿಯಲ್ಲಿ ತ್ವರಿತಗತಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು’ ಎಂದು ಅವರು ಸೂಚಿಸಿದ್ದಾರೆ.


ಕಾಮಗಾರಿಗಳ ಪ್ರಗತಿಯ ಪರಿಶೀಲನೆಗಾಗಿ ಬುಧವಾರ ತಡರಾತ್ರಿ ಅವೆನ್ಯೂ ರಸ್ತೆಗೆ ಅವರು ದಿಢೀರ್ ಭೇಟಿ ನೀಡಿದ್ದರು.

2021ರ ಜನವರಿಯಲ್ಲಿ ಇಲ್ಲಿ ಕಾಮಗಾರಿ ಆರಂಭಿಸಲಾಗಿತ್ತು. ಕಾಮಗಾರಿ ಪೂರ್ಣಗೊಳಿಸಲು ಹಲವು ಗಡುವುಗಳನ್ನು ನೀಡಲಾಗಿತ್ತು. ಫೆಬ್ರುವರಿಯಲ್ಲಿ ಇದೇ ಸ್ಥಳಕ್ಕೆ ಭೇಟಿ ನೀಡಿದ್ದ ರಾಕೇಶ್ ಸಿಂಗ್ ಅವರು ಮಾರ್ಚ್ 31ರ ಗಡುವು ನೀಡಿದ್ದರು.

‘ಒಳಚರಂಡಿ ಪೈಪ್‌ಗಳನ್ನು ಅಳವಡಿಕೆ ಮತ್ತು ರಾಜಕಾಲುವೆಗಳ ಕಾಮಗಾರಿಗಳು ಈಗಾಗಲೇ ಪೂರ್ಣಗೊಂಡಿವೆ. ಈಗ ಬೀದಿ ದೀಪಗಳನ್ನು ಅಳವಡಿಸುವ ಮತ್ತು ಪಾದಚಾರಿ ಮಾರ್ಗದ ಕಾರ್ಯ ನಡೆಯುತ್ತಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಿರ್ಮಲಾನಂದನಾಥ ಸ್ವಾಮೀಜಿ ಸೇರಿ ಮೂವರಿಗೆ ಗೌರವ ಡಾಕ್ಟರೇಟ್

ಪ್ರಜಾವಾಣಿ ವಾರ್ತೆ


ನಿರ್ಮಲಾನಂದನಾಥ ಸ್ವಾಮೀಜಿ


ಡಾ.ಬಿ.ಎನ್. ಗಂಗಾಧರ್


ರಾಜನ್ ದೇಶಪಾಂಡೆ

ಬೆಂಗಳೂರು: ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ, ನಿಮ್ಹಾನ್ಸ್ ನಿವೃತ್ತ ನಿರ್ದೇಶಕ ಡಾ. ಬಿ.ಎನ್. ಗಂಗಾಧರ್, ಧಾರವಾಡದ ಮಕ್ಕಳ ತಜ್ಞ ಡಾ. ರಾಜನ್ ದೇಶಪಾಂಡೆ ಅವರನ್ನು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿಗೆ ಆಯ್ಕೆ ಮಾಡಲಾಗಿದೆ.

‘ಇದೇ 30ರಂದು ನಿಮ್ಹಾನ್ಸ್ ಸಭಾಂಗಣದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಧ್ಯಕ್ಷತೆಯಲ್ಲಿ ನಡೆಯಲಿರುವ 24ನೇ ಘಟಿಕೋತ್ಸವದಲ್ಲಿ ಈ ಮೂವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗುವುದು’ ಎಂದು ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಕೆ. ರಮೇಶ್ ತಿಳಿಸಿದರು.

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ರಾಜ್ಯ ಸಚಿವರಾದ ಡಾ. ಭಾರತೀ ಪ್ರವೀಣ್ ಪವಾರ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಭಾಗವಹಿಸಲಿದ್ದಾರೆ. ‘82 ಪಿಎಚ್‌.ಡಿ, 146 ಸೂಪರ್ ಸ್ಪೆಷಾಲಿಟಿ, 6,796 ಸ್ನಾತಕೋತ್ತರ, 787 ಸ್ನಾತಕೋತ್ತರ ಡಿಪ್ಲೊಮಾ ಪದವಿ, 362 ಫೆಲೋಷಿಪ್ ಕೋರ್ಸ್, 10 ಸರ್ಟಿಫಿಕೆಟ್ ಕೋರ್ಸ್, 36,409 ಸ್ನಾತಕ ಅಭ್ಯರ್ಥಿಗಳು ಸೇರಿ ವಿವಿಧ ವಿಷಯಗಳಲ್ಲಿ 43,883 ಅಭ್ಯರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುವುದು. ಎಲ್ಲ ನಿಕಾಯಗಳ ಒಟ್ಟು ವಿದ್ಯಾರ್ಥಿಗಳ ಒಟ್ಟಾರೆ ಫಲಿತಾಂಶ ಶೇ 82.25. ಒಟ್ಟು 83 ವಿದ್ಯಾರ್ಥಿಗಳು 100 ಚಿನ್ನದ ಪದಕ ಪಡೆದಿದ್ದಾರೆ’ ಎಂದರು.

ಅತಿ ಹೆಚ್ಚು ಚಿನ್ನದ ಪದಕಕ್ಕೆ ಅರ್ಹರಾದವರು

ವಿದ್ಯಾರ್ಥಿ	ಪದಕ
ಎನ್. ಶ್ವೇತಾ (ಫಾರ್ಮ.ಡಿ ಕೋರ್ಸ್), ಶ್ರೀನಿವಾಸ ಕಾಲೇಜ್ ಆಫ್ ಫಾರ್ಮಸಿ, ಮಂಗಳೂರು	4
ಅಭಿಷೇಕ್ ಪಾಂಡೆ (ಬಿ. ಫಾರ್ಮ ಕೋರ್ಸ್), ಈಸ್ಟ್ ವೆಸ್ಟ್ ಆಫ್ ಫಾರ್ಮಸಿ, ಬೆಂಗಳೂರು	4
ಸುಮನ್ ಬಿ ಗೋದಿ (ಬಿಡಿಎಸ್ ಕೋರ್ಸ್), ಎಸ್‌ಜೆಎಂ ಡೆಂಟಲ್ ಕಾಲೇಜು ಆ್ಯಂಡ್ ಹಾಸ್ಪಿಟಲ್, ಚಿತ್ರದುರ್ಗ	3
ವಿ. ಶಶಿಕಲಾ (ಬಿಎಎಂಎಸ್ ಕೋರ್ಸ್), ಶ್ರೀ ಶ್ರೀ ಕಾಲೇಜು ಆಫ್ ಆಯುರ್ವೇದಿಕ್ ಸೈನ್ಸ್, ಬೆಂಗಳೂರು	3
ರೋಜಿನ ಮಾತಂಗುಲು (ಬಿಪಿಟಿ ಕೋರ್ಸ್), ಕಣಚೂರು ಕಾಲೇಜ್ ಆಫ್ ಫಿಸಿಯೋಥೆರಪಿ, ಮಂಗಳೂರು	3
ಶಮೀಯತ್ ನುಸೈಬಾ (ಬಿಎಸ್‌ಸಿ ಅಲೈಡ್ ಕೋರ್ಸ್), ಎ.ಜೆ. ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಮಂಗಳೂರು	3
ಪ್ರತೀಕ್ಷಾ ಜೆ.ಪೈ (ಎಂಬಿಬಿಎಸ್), ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು	2
ಸನ್ನಿಧಿ (ಎಂಬಿಬಿಎಸ್), ನವೋದಯ ವೈದ್ಯಕೀಯ ಕಾಲೇಜು, ರಾಯಚೂರು	2
ವೀಣಾ ಸುರೇಶ್ ಸಿಂಗ್ ಶಿಗ್ಗಾವಿ (ಬಿಎಸ್‌ಸಿ ನರ್ಸಿಂಗ್), ಕೆಎಲ್‌ಇ ಸೊಸೈಟಿ ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್, ಹುಬ್ಬಳ್ಳಿ	2

‘ವಿಪಕ್ಷಗಳ ಕ್ಷುಲ್ಲಕ ರಾಜಕಾರಣ’

ಬೆಂಗಳೂರು: ‘ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆ ಇಳಿಸಿ, ಜನರ ಮೇಲಿನ ಹೊರೆಯನ್ನು ಕಡಿಮೆ ಮಾಡುವಂತೆ ಪ್ರಧಾನಿ ಮೋದಿ ನೀಡಿದ ಕರೆಗೆ ಬಿಜೆಪಿಯೇತರ ರಾಜ್ಯಗಳು ಕ್ಷುಲ್ಲಕ ರಾಜಕಾರಣಕ್ಕಾಗಿ ಕೈ ಚೆಲ್ಲಿವೆ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರತಿಪಕ್ಷಗಳು ರಚನಾತ್ಮಕ ಕಾರ್ಯಕ್ರಮಗಳ ಬಗ್ಗೆ ಗಂಭೀರವಾಗಿಲ್ಲ. ತುಷ್ಟೀಕರಣ ಮತ್ತು ವೋಟ್‌ಬ್ಯಾಂಕ್ ರಾಜಕೀಯದಲ್ಲಿ ಮುಳುಗಿವೆ ಎಂದು ಟೀಕಿಸಿದ್ದಾರೆ.


ಬಂಜಾರ ಜನಸೇವಾ ಸಂಘವು ನಗರದಲ್ಲಿ ಗುರುವಾರ ಆಯೋಜಿಸಿದ್ದ ಅಂಬೇಡ್ಕರ್ ಜಯಂತಿ ಮತ್ತು ಬಂಜಾರ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ (ಎಡದಿಂದ) ವಕೀಲ ಎನ್‌.ಅನಂತ ನಾಯ್ಕ್ ಹಾಗೂ ಬಂಜಾರ ಗುರುಪೀಠದ ಸರ್ದಾರ್ ಸೇವಾಲಾಲ್ ಸ್ವಾಮೀಜಿ ಚರ್ಚಿಸಿದರು. ಎಸ್‌.ಕೆ.ರವಿಕುಮಾರ್, ದಲಿತ ಮುಖಂಡ ಎಂ. ವೆಂಕಟಸ್ವಾಮಿ, ರಂಗತಜ್ಞ ಎ.ಆರ್‌.ಗೋವಿಂದಸ್ವಾಮಿ ಮತ್ತು ಗಿರಿಜಾ ಗಣೇಶ್ ಇದ್ದಾರೆ –ಪ್ರಜಾವಾಣಿ ಚಿತ್ರ

ರಾಷ್ಟ್ರೀಯ ತನಿಖಾ ದಳದ ಮನವಿಯನ್ನು ತಳ್ಳಿಹಾಕಿದ ಹೈಕೋರ್ಟ್

‘ಉಗ್ರರು ಗುರುತಿನ ಚೀಟಿ ಹೊಂದಿರುತ್ತಾರೆಯೇ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯಾವುದೇ ಭಯೋತ್ಪಾದಕರು ತಮ್ಮ ಸಂಘಟನೆಗಳ ಸದಸ್ಯತ್ವ ಹೊಂದಿದ ಗುರುತಿನ ಚೀಟಿ ಇಟ್ಟುಕೊಂಡು ಅಡ್ಡಾಡುವುದಿಲ್ಲ. ಭಯೋತ್ಪಾದನಾ ಕೃತ್ಯಗಳ ತನಿಖೆಯಲ್ಲಿ ಪ್ರಕರಣದ ತೀವ್ರತೆ ಮತ್ತು ಸಾಕ್ಷ್ಯಾಧಾರಗಳನ್ನು ಗಮನಿಸಿ ಕಾರ್ಯ ನಿರ್ವಹಿಸಲಾಗುತ್ತದೆ. ಐ.ಎಸ್ ಸಂಘಟನೆಯ ಸಂಪರ್ಕ ಹೊಂದಿದ ಆರೋಪಿಗಳಿಗೆ ಜಾಮೀನು ನೀಡಬಾರದು’ ಎಂಬ ರಾಷ್ಟ್ರೀಯ ತನಿಖಾ ದಳ ಮನವಿಯನ್ನು ಹೈಕೋರ್ಟ್ ತಳ್ಳಿ ಹಾಕಿದೆ.

‘ಅಧಿಕಾರಿಗಳು ಮತ್ತು ಪೊಲೀಸರನ್ನು ಹತ್ಯೆಗೈಯ್ಯುವ ಸಂಚು, ಅಲ್‌-ಹಿಂದ್ ಮತ್ತು ಐ.ಎಸ್ ಸಂಘಟನೆಗಳ ಜೊತೆ ನಿಕಟ ಸಂಪರ್ಕ ಹೊಂದಿದ್ದರು, ಪಿಸ್ತೂಲ್ ಬಳಕೆಯ ತರಬೇತಿ ಪಡೆದಿದ್ದರು...’ ಎಂಬ ಆರೋಪಗಳಡಿ ‘ಕಾನೂನು ಬಾಹಿರ ಚಟುವಟಿಕೆಗಳ ನಿರ್ಬಂಧ ಕಾಯ್ದೆ–1967’ರ (ಯುಎಪಿಎ) ಅನ್ವಯ ನ್ಯಾಯಾಂಗ ಬಂಧನದಲ್ಲಿದ್ದ ಆರೋಪಿಗೆ ನ್ಯಾಯಮೂರ್ತಿ ಬಿ.ವೀರಪ್ಪ ಹಾಗೂ ನ್ಯಾಯಮೂರ್ತಿ ಎಸ್.ರಾಚಯ್ಯ ಅವರಿದ್ದ ವಿಭಾಗೀಯ ನ್ಯಾಯಪೀಠ ಷರತ್ತುಬದ್ಧ ಜಾಮೀನು ನೀಡಿದೆ.

ಕೋಲಾರದ ಬೀಡಿ ಕಾಲೋನಿಯ ಸಲೀಂ ಖಾನ್ ಮತ್ತು ಬೆಂಗಳೂರಿನ ಬನ್ನೇರುಘಟ್ಟ ಮುಖ್ಯ ರಸ್ತೆಯ ಟಿಂಬರ್ ಗಲ್ಲಿಯ ಮೊಹಮದ್ ಜೈದ್ ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪು ಪ್ರಕಟಿಸಿರುವ ನ್ಯಾಯಪೀಠ ಸಲೀಂ ಖಾನ್‌ಗೆ ಮಾತ್ರವೇ ಜಾಮೀನು ನೀಡುವ ಮೂಲಕ ಅರ್ಜಿದಾರರ ಮನವಿಯನ್ನು ಭಾಗಶಃ ಪುರಸ್ಕರಿಸಿದೆ.

‘ಅಲ್‌-ಹಿಂದ್ ನಿಷೇಧಿತ ಸಂಘಟನೆಯಲ್ಲ. ಅದರ ಸಭೆಗಳಲ್ಲಿ ಭಾಗವಹಿಸಿದಾಕ್ಷಣ ಅವರು ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿದ್ದರು ಎಂಬ ವಾದ ಒಪ್ಪಲಾಗದು’ ಎಂದಿದೆ.

ಪ್ರಕರಣದ ಹಿನ್ನೆಲೆ: ‘ತಮಿಳುನಾಡಿನ ಸಬ್ ಇನ್‌ಸ್ಪೆಕ್ಟರ್ ಕೊಲೆ, ಸರ್ಕಾರಿ ನೌಕರರು ಮತ್ತು ಪೊಲೀಸರನ್ನು ಹತ್ಯೆಗೈಯ್ಯಲು ಸಂಚು ರೂಪಿಸಿ ಅದಕ್ಕಾಗಿ ಬೆಂಗಳೂರಿನಲ್ಲಿ ತರಬೇತಿ, ಗೆರಿಲ್ಲಾ ಯುದ್ಧದ ಪರಿಕರಗಳನ್ನು ಸಂಗ್ರಹಿಸಿ ಇಟ್ಟುಕೊಂಡಿದ್ದರು, ಪಾಕಿಸ್ತಾನದ ಭಯೋತ್ಪಾದಕರ ಜೊತೆ ದೂರವಾಣಿ ಸಂಪರ್ಕ ಹೊಂದಿದ್ದರು...’ ಎಂಬ ಆರೋಪಗಳಡಿ 22 ಜನರ ವಿರುದ್ಧ ಎನ್‌ಐಎ ವಿಚಾರಣಾ ವಿಶೇಷ ನ್ಯಾಯಾಲಯಕ್ಕೆ 2020ರ ಜುಲೈನಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಿತ್ತು.

ಆರೋಪಿಗಳಲ್ಲಿ ಮೂವರು ತಲೆಮರೆಸಿಕೊಂಡಿದ್ದು, 16 ಜನ ಜೈಲಿನಲ್ಲಿದ್ದಾರೆ. ಇವರಲ್ಲಿ ಸಲೀಂ ಖಾನ್ ಮತ್ತು ಮೊಹಮದ್ ಜೈದ್ ಜಾಮೀನು ಕೋರಿದ್ದರು. ಆರೋಪಿಗಳ ಪರ ಎಸ್. ಬಾಲಕೃಷ್ಣನ್ ಮತ್ತು ಎನ್‌ಐಎ ಪರ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್ ವಾದ ಮಂಡಿಸಿದ್ದರು.

ನಗರದಲ್ಲಿ ಇಂದು

ಸಾಹಿತ್ಯ ಅಕಾಡೆಮಿ ಪ್ರಾದೇಶಿಕ ಕಚೇರಿಯ ಭೂಮಿಪೂಜೆ: ಚಂದ್ರಶೇಖರ ಕಂಬಾರ, ಅತಿಥಿಗಳು–ಮನು ಬಳಿಗಾರ್, ವೆಂಕಟೇಶಮೂರ್ತಿ, ಎಸ್.ಎನ್.ರೈ, ನರಹಳ್ಳಿ ಬಾಲಸುಬ್ರಹ್ಮಣ್ಯ, ಎಸ್.ಆರ್. ವಿಜಯಶಂಕರ್, ಸ್ಥಳ–ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಎದುರು, ಕೆಂಗೇರಿ ಮುಖ್ಯರಸ್ತೆ, ಮಲ್ಲತ್ತಹಳ್ಳಿ, ಬೆಳಿಗ್ಗೆ 8.30

ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಘಟಿಕೋತ್ಸವ: ಅತಿಥಿಗಳು–ಆರೋಗ್ಯ ಸಚಿವ ಕೆ.ಸುಧಾಕರ್, ವಿ.ಕೆ.ಆತ್ರೆ, ಎಂ.ಆರ್.ದೊರೆಸ್ವಾಮಿ, ಕೆ.ರವಿ, ಸ್ಥಳ–ಕೆ.ಆರ್.ರಸ್ತೆ, ಬೆಳಿಗ್ಗೆ 9

ನೃತ್ಯಾಂಜಲಿ ಅಂತರ ಕಾಲೇಜು ನೃತ್ಯ ಹಬ್ಬ: ಅತಿಥಿಗಳು–ಮೊಹಮ್ಮದ್ ಫರೂಕ್, ವೈಜಯಂತಿ ಕಾಶಿ, ಆಗಸ್ಟಿನ್ ಜಾರ್ಜ್, ಆಯೋಜನೆ–ಕ್ರಿಸ್ತು ಜಯಂತಿ ಕಾಲೇಜು, ಸ್ಥಳ–ಕಾಲೇಜು ಆವರಣ, ಕೆ.ನಾರಾಯಣಪುರ, ಬೆಳಿಗ್ಗೆ 9.30

‘ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ಮರೀಚಿಕೆ’ ಚಿಂತನ ಮಂಥನ: ಉದ್ಘಾಟನೆ–ಎಚ್.ಎನ್.ನಾಗಮೋಹನ್ ದಾಸ್, ವಿಷಯ ಮಂಡನೆ–ಎಸ್. ಬಿ.ದಿಂಡಿನ, ಪ್ರಕಾಶ್ ಕಮ್ಮರಡಿ, ಬಿ.ಎನ್. ಹುಂಬರವಾಡಿ, ಮಂಜುನಾಥ್, ಅಧ್ಯಕ್ಷತೆ–ಕುರುಬೂರು ಶಾಂತಕುಮಾರ್, ಆಯೋಜನೆ–ಸಂಯುಕ್ತ ಕಿಸಾನ್ ಮೋರ್ಚಾ, ರಾಜ್ಯ ಕಬ್ಬು ಬೆಳೆಗಾರರ ಸಂಘ, ಸ್ಥಳ–ಗಾಂಧಿಭವನ, ಬೆಳಿಗ್ಗೆ 10.30

ವಿಜ್ಞಾನ ಪತ್ರಿಕೋದ್ಯಮ ಕುರಿತು ಕಾರ್ಯಾಗಾರದ ಉದ್ಘಾಟನೆ: ಅತಿಥಿಗಳು–ಎ.ಎಚ್.ರಾಮರಾವ್, ಎಸ್. ನಾಗರಾಜರೆಡ್ಡಿ, ಸದಾನಂದ ಮಯ್ಯ, ಮಾತನಾಡುವವರು–ಎಂ.ಕೆ.ಭಾಸ್ಕರ ರಾವ್, ಎಚ್.ಆರ್.ಕೃಷ್ಣಮೂರ್ತಿ, ಎಚ್. ಎಸ್.ನಿರಂಜನಾರಾಧ್ಯ, ಎಂ.ಎಸ್. ಚೈತ್ರಾ, ಕೆ.ಜಿ.ಮಾನಸಿ, ಆಯೋಜನೆ–ಬಿ.ವಿ.ಜಗದೀಶ್ ಸೈನ್ಸ್ ಸೆಂಟರ್ (ಬಿವಿಜಿಎಸ್‌ಸಿ), ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಸ್ಥಳ–ಬಿವಿಜಿಎಸ್‌ಸಿ ಮಲ್ಟಿಮೀಡಿಯ ಸಭಾಂಗಣ, ಎನ್‌ಸಿಜೆ ಕ್ಯಾಂಪಸ್, ಜಯನಗರ, ಬೆಳಿಗ್ಗೆ 10.30ರಿಂದ

84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ: ಕರ್ನಾಟಕ ಸಂಗೀತ ಕಾರ್ಯಕ್ರಮ–ಎಲ್. ಶಂಕರ್, ಹರಿದ್ವಾರಮಂಗಲಂ ಎ.ಕೆ. ಪಳನಿವೇಲ್, ಸಾಯಿ ಗಿರಿಧರ್, ಆಯೋಜನೆ–ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್, ಸ್ಥಳ–ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಮೈದಾನ, ಸಂಜೆ 5ರಿಂದ


ಎಲ್‌.ಶಂಕರ್


ಒಡಿಸ್ಸಿ ಸಂಜೆ–ವಿಶ್ವ ನೃತ್ಯ ದಿನ

ಒಡಿಸ್ಸಿ ಸಂಜೆ–ವಿಶ್ವ ನೃತ್ಯ ದಿನ: ಒಡಿಸ್ಸಿ ನರ್ತಕಿ ಮಧುಲಿತಾ ಮೋಹಪಾತ್ರ ಹಾಗೂ ಅವರ ನೃತ್ಯಾಂತರ ಸಮೂಹದಿಂದ ನೃತ್ಯ ಪ್ರದರ್ಶನ, ಸ್ಥಳ–ಜಾಗೃತಿ ಥಿಯೇಟರ್, ರಾಮಗೊಂಡನಹಳ್ಳಿ, ವೈಟ್‌ಫೀಲ್ಡ್ ಹತ್ತಿರ, ರಾತ್ರಿ 7.30

ವೈಜಯಂತಿ ಬಿ.ದೇಸಾಯಿ ಅವರಿಂದ ಲಲಿತ ಕಲಾ ಪ್ರದರ್ಶನ: ಉದ್ಘಾಟನೆ–ಪಿ.ರವಿಕುಮಾರ್, ಅತಿಥಿಗಳು–ವಿವೇಕ್ ಕುಲಕರ್ಣಿ, ಇ.ವಿ.ರಮಣರೆಡ್ಡಿ, ಎ.ಸಿ. ಚಂದ್ರಶೇಖರ ರಾಜು, ಬಿ.ವಿ.ನಾಯ್ಡು, ಕೆ.ಆರ್.ಶೇಷಾಚಲ, ರಘೋತ್ತಮ ರಾವ್ ದೇಸಾಯಿ, ಸ್ಥಳ–ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪ ರಸ್ತೆ, ಬೆಳಿಗ್ಗೆ 11 (ಮೇ 1ರವರೆಗೆ ಪ್ರದರ್ಶನ ಇರಲಿದೆ)

ಬೆಂಗಳೂರು ವಿಶ್ವವಿದ್ಯಾಲಯದ ಘಟಿಕೋತ್ಸವ: ಅಧ್ಯಕ್ಷತೆ–ರಾಜ್ಯಪಾಲ ಥಾವರಚಂದ್ ಗೆಹಲೋತ್, ಭಾಷಣ–ಎಸ್.ಸಿ.ಶರ್ಮ, ಅತಿಥಿಗಳು–ಸಚಿವ ಸಿ.ಎನ್.ಅಶ್ವತ್ಥನಾರಾಯಣ, ಕುಲಪತಿ ಕೆ.ಆರ್.ವೇಣುಗೋಪಾಲ್, ಸ್ಥಳ–ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಅರಮನೆ ರಸ್ತೆ, ಬೆಳಿಗ್ಗೆ 11

ರಾಷ್ಟ್ರೀಯ ಶಿಕ್ಷಣ ನೀತಿಯಡಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಆದೇಶದ ದಾಖಲೆ ಬಿಡುಗಡೆ: ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್, ಕೆ.ಕಸ್ತೂರಿರಂಗನ್, ಬಿ.ಸಿ. ನಾಗೇಶ್, ಸಿ.ಎನ್.ಅಶ್ವತ್ಥನಾರಾಯಣ, ಸ್ಥಳ–ಭಾರತೀಯ ವಿಜ್ಞಾನ ಸಂಸ್ಥೆ ಆವರಣ, ಬೆಳಿಗ್ಗೆ 11

ಅಂತರರಾಷ್ಟ್ರೀಯ ಫ್ಯಾಷನ್ ವಿಚಾರ ಸಂಕಿರಣ ಮತ್ತು ಮಿರಾಕಿ–2022: ಅತಿಥಿಗಳು–ಸಿ.ಎನ್.ಅಶ್ವತ್ಥನಾರಾಯಣ, ಎಂ.ಆರ್.ಜಯರಾಂ, ಪ್ರೊ. ಕುಲದೀಪ್ ಕುಮಾರ್ ರೈನಾ, ಎಂ.ಸಾಯಿಬಾಬಾ, ಮಮತಾ ಹೆಗಡೆ, ಕೆ.ನಾಗವೇಣಿ, ಆಯೋಜನೆ–ರಾಮಯ್ಯ ವಿಶ್ವವಿದ್ಯಾಲಯದ ಫ್ಯಾಷನ್ ಡಿಸೈನಿಂಗ್ ವಿಭಾಗ, ಸ್ಥಳ–ದ್ವಾರಕಾ ಸಭಾಂಗಣ, ಬಿಇಎಲ್ ರಸ್ತೆ, ಮತ್ತಿಕೆರೆ, ಬೆಳಿಗ್ಗೆ 11

‘ವಜ್ರದ ಬೇರುಗಳು’ ಕನ್ನಡ ಸಾಹಿತ್ಯ ಪ್ರಕಾರ ಮಾಲಿಕೆ ಪುಸ್ತಕಗಳ ಬಿಡುಗಡೆ: ಎಂ.ಎನ್.ನಂದೀಶ್ ಹಂಚೆ, ಅತಿಥಿಗಳು–ಎಚ್.ಎಸ್.ರಾಘವೇಂದ್ರರಾವ್, ಬಸವರಾಜ ಕಲ್ಗುಡಿ, ಎನ್.ಕರಿಯಪ್ಪ, ಅಧ್ಯಕ್ಷತೆ–ಬಿ.ವಿ.ವಸಂತಕುಮಾರ್, ಆಯೋಜನೆ–ಕರ್ನಾಟಕ ಸಾಹಿತ್ಯ ಅಕಾಡೆಮಿ, ಸ್ಥಳ–ಮಹಿಳಾ ವಿಶ್ರಾಂತಿ ಗೃಹ, ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 11

ಅತಿಥಿಗಳು–ಸಚಿವ ವಿ.ಸುನಿಲ್ ಕುಮಾರ್, ಮಹೇಶ್ ಜೋಶಿ, ಪ್ರಕಾಶ್ ಜಿ.ಟಿ.ನಿಟ್ಟಾಳಿ, ವೈಜಯಂತಿ ಕಾಶಿ, ವಿವಿಧ ಕಲಾವಿದರಿಂದ ನೃತ್ಯ ಪ್ರದರ್ಶನ, ಆಯೋಜನೆ–ರೋಟರಿ ಇಂಟರ್‌ನ್ಯಾಷನಲ್, ಸೃಷ್ಟಿ ಅಭಿನಯ ಕಲಾವಿದರ ಕೇಂದ್ರ, ಸ್ಥಳ–ರವೀಂದ್ರ ಕಲಾಕ್ಷೇತ್ರ, ಸಂಜೆ 6

ಭಾವಕವಿ ನಮ್ಮ ಎನ್.ಎಸ್. ಎಲ್ ಭಾವಗೀತೆಗಳ ಗಾಯನ: ಅತಿಥಿ–ಬಿ.ಆರ್.ಲಕ್ಷ್ಮಣರಾವ್, ಅಧ್ಯಕ್ಷತೆ–ಸತೀಶ್ ಹಂಪಿಹೊಳಿ, ಕಾ.ವೆಂ.ಶ್ರೀನಿವಾಸಮೂರ್ತಿ, ಆನಂದ ಮಾದಲಗೆರೆ, ಜ್ಯೋತಿ ಲಕ್ಷ್ಮೀನಾರಾಯಣಭಟ್ಟರು, ಕ್ಷಮಾ, ಆಯೋಜನೆ–ಹಿರಿಯ ನಾಗರಿಕರ ವೇದಿಕೆ, ಸಂಗೀತಧಾಮ ಮ್ಯೂಸಿಕ್ ಅಕಾಡೆಮಿ ಟ್ರಸ್ಟ್, ಸ್ಥಳ–ಶಾಸಕರ ಭವನ, ಆರ್.ಬಿ.ಐ.ಬಡಾವಣೆ, ಸಂಜೆ 6

ವಿಶ್ವಸ್ಥ ಸಂಸ್ಥೆ ರಚನೆ: ಕಸಾಪ ಜಿಲ್ಲಾಧ್ಯಕ್ಷರ ಅಧಿಕಾರ ಮೊಟಕು – ಆರೋಪ

ಬೈ–ಲಾ ತಿದ್ದುಪಡಿ: ಅಧ್ಯಕ್ಷರಿಗೆ ಹೆಚ್ಚಿನ ಅಧಿಕಾರ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ(ಕಸಾಪ) ಬೈ-ಲಾಕ್ಕೆ ತಂದಿರುವ ಕೆಲ ತಿದ್ದುಪಡಿಗಳು ಮತ್ತೆ ಚರ್ಚೆಗೆ ಗ್ರಾಸವಾಗಿದೆ. ಕಾರ್ಯಕಾರಿ ಸಮಿತಿ ಮತ್ತು ಜಿಲ್ಲಾ ಅಧ್ಯಕ್ಷರ ಅಧಿಕಾರವನ್ನು ಮೊಟಕುಗೊಳಿಸುವ ಪ್ರಯತ್ನ ಇದಾಗಿದೆ ಎನ್ನುವ ಅಸಮಾಧಾನ ವ್ಯಕ್ತವಾಗಿದೆ.

ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಕಾಗಿನೆಲೆಯಲ್ಲಿ ಮೇ 1ರಂದು ಪರಿಷತ್ತಿನ ಕಾರ್ಯಕಾರಿ ಸಮಿತಿ ಮತ್ತು ವಾರ್ಷಿಕ ಸರ್ವ ಸದಸ್ಯರ ಸಭೆ ನಡೆಯಲಿದೆ. ಈ ಸಭೆಯಲ್ಲಿ ಬೈ-ಲಾ ತಿದ್ದುಪಡಿಗೆ ಅನುಮೋದನೆ ಪಡೆಯಲು ಕಸಾಪ ಕೇಂದ್ರ ಘಟಕ ಮುಂದಾಗಿರುವುದು ಚರ್ಚೆಯನ್ನು ಹುಟ್ಟುಹಾಕಿದೆ.

ಮಹತ್ವದ ವಿಷಯಗಳಿಗೆ ತಿದ್ದುಪಡಿ ಮಾಡುವ ಮೂಲಕ ಅಧ್ಯಕ್ಷರಿಗೆ ಹೆಚ್ಚಿನ ಅಧಿಕಾರ ನೀಡಲಾಗುತ್ತಿದೆ. ಈ ಮೂಲಕ ಅಧಿಕಾರ ಕೇಂದ್ರೀಕರಣಗೊಳಿಸುವ ಪ್ರಯತ್ನ ನಡೆದಿದೆ ಎಂದು ಸದಸ್ಯರು ದೂರಿದ್ದಾರೆ.

ಪರಿಷತ್ತಿನ ಧ್ಯೇಯೋದ್ದೇಶಗಳ ಈಡೇರಿಕೆಗಾಗಿ ವಿಶ್ವಸ್ಥ ಸಂಸ್ಥೆ (ಟ್ರಸ್ಟ್) ರಚಿಸಲು ಪ್ರಸ್ತಾಪಿಸಲಾಗಿದೆ.

‘ಪರಿಷತ್ತಿನ ಅಧೀನದಲ್ಲೊಂದು ವಿಶ್ವಸ್ಥ ಸಂಸ್ಥೆ ಅಗತ್ಯವೇ? ಪರಿಷತ್ತಿನೊಳಗೊಂದು ಸ್ವತಂತ್ರ ಸಂಸ್ಥೆಯನ್ನು ಹುಟ್ಟುಹಾಕಿದಂತಾಗುತ್ತದೆ. ಪರಿಷತ್ತಿನ ಕಾರ್ಯಕಾರಿ ಸಮಿತಿಯೇ ನಿಭಾಯಿಸಬಹುದಾದ ವಿಚಾರಕ್ಕೆ ಮತ್ತೊಂದು ಸಂಸ್ಥೆ ಹುಟ್ಟುಹಾಕುವುದು ಎಷ್ಟು ಸರಿ? ಈ ಸಂಸ್ಥೆಯ ವಿವರಗಳು ಸಹ ಗೊತ್ತಿಲ್ಲ’ ಎಂದು ಹೆಸರು ಬಹಿರಂಗಪಡಿಸಲು ಬಯಸದ ಜಿಲ್ಲಾಧ್ಯಕ್ಷರೊಬ್ಬರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಜಿಲ್ಲೆ, ತಾಲ್ಲೂಕು ಅಥವಾ ಕ್ಷೇತ್ರ, ಹೋಬಳಿ ಮತ್ತು ಗಡಿ ಘಟಕಗಳ ಕಾರ್ಯಕಾರಿ ಸಮಿತಿಗೆ ಚುನಾಯಿತ ಮತ್ತು ನಾಮನಿರ್ದೇಶನಗೊಳ್ಳುವ ಸದಸ್ಯರ ವಿವರಗಳನ್ನು ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ಅನುಮೋದನೆಗಾಗಿ ಕಳುಹಿಸಬೇಕು. ಕೇಂದ್ರ ಪರಿಷತ್ತಿನ ಅಧ್ಯಕ್ಷರು ಪರಿಶೀಲಿಸಿ ಮನವರಿಕೆಯಾದಲ್ಲಿ ಮಾತ್ರ ಅನುಮತಿ ನೀಡತಕ್ಕದ್ದು’ ಎಂದು ಉಲ್ಲೇಖಿಸಲಾಗಿದೆ.

‘ಇಂತಹ ಪ್ರಯತ್ನದ ಮೂಲಕ ಅಧಿಕಾರ ಕೇಂದ್ರೀಕರಣ ಮಾಡಲಾಗುತ್ತಿದೆ. ಹೋಬಳಿ ಘಟಕಗಳ ನೇಮಕದ ವಿಷಯದಲ್ಲೂ ಜಿಲ್ಲಾ ಘಟಕಗಳ ಅಧ್ಯಕ್ಷರಿಗೆ ಸ್ವಾತಂತ್ರ್ಯ ಇಲ್ಲ’ ಎಂದು ಅಸಮಾಧಾನ ವ್ಯಕ್ತವಾಗಿದೆ.

ಜಿಲ್ಲೆ, ತಾಲ್ಲೂಕು ಮತ್ತು ಹೋಬಳಿ ಕೇಂದ್ರಗಳಲ್ಲಿ ಪರಿಷತ್ತಿನ ಕಟ್ಟಡ ನಿರ್ಮಾಣಕ್ಕೆ ಸರ್ಕಾರ, ಸಂಘ–ಸಂಸ್ಥೆಗಳಿಂದ ಪಡೆದ ನಿವೇಶನವನ್ನು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಹೆಸರಿನಲ್ಲಿ ನೋಂದಾಯಿಸಬೇಕು. ಈ ಘಟಕಗಳಿಗೆ ಏಕರೂಪ ವಿನ್ಯಾಸ ನೀಲನಕ್ಷೆ ತಯಾರಿಸಬೇಕು. ಕಟ್ಟಡ ನಿರ್ಮಾಣಕ್ಕೆ ಸರ್ಕಾರ, ಸಂಘ–ಸಂಸ್ಥೆಗಳು ಮತ್ತು ಖಾಸಗಿ ವ್ಯಕ್ತಿಗಳಿಂದ ಸಂಗ್ರಹಿಸಲಾದ ದೇಣಿಗೆಯನ್ನು ಕೇಂದ್ರ ಪರಿಷತ್ತಿಗೆ ಕಳುಹಿಸಬೇಕು. ಕೇಂದ್ರ ಪರಿಷತ್ತು ಮತ್ತು ಜಿಲ್ಲಾ ಘಟಕ ಸಂಗ್ರಹಿಸಿದ ಒಟ್ಟಾರೆ ಮೊತ್ತವನ್ನು ಆಯಾ ಘಟಕದ ಕಟ್ಟಡ ನಿರ್ಮಾಣಕ್ಕೆ ಒದಗಿಸಲಾಗುವುದು ಎಂದು ಪ್ರಸ್ತಾಪಿಸಲಾಗಿದೆ.

‘ಚರ್ಚಿಸಿಯೇ ತಿದ್ದುಪಡಿ ಪ್ರಸ್ತಾವ’

‘ಬೈ-ಲಾ ತಿದ್ದುಪಡಿಯ ಅಂಶಗಳಿಗೆ ಕಾರ್ಯಕಾರಿ ಸಮಿತಿ ಮತ್ತು ಕನ್ನಡ ನಾಡುನುಡಿಗಾಗಿ ಶ್ರಮಿಸುತ್ತಿರುವ ಹಿರಿಯರು ಇದ್ದ ಚಿಂತನಾ ಸಭೆಯ ಒಪ್ಪಿಗೆ ಪಡೆಯಲಾಗಿದೆ. ಈ ಸಭೆಗಳಲ್ಲಿ ವಿರೋಧ ವ್ಯಕ್ತವಾಗಿಲ್ಲ’ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಶಿ ಪ್ರತಿಪಾದಿಸಿದರು.

‘ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಸ್ವರೂಪವನ್ನು ಬದಲಾಯಿಸಿಲ್ಲ. ಜತೆಗೆ, ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲೂ ತಿದ್ದುಪಡಿಗಳ ಬಗ್ಗೆ ಸಲಹೆ ನೀಡಬಹುದು. ಹೀಗಾಗಿ, ಪ್ರಜಾಸತ್ತಾತ್ಮಕ ರೀತಿಯಲ್ಲಿ ಆಧುನಿಕ ಜಗತ್ತಿಗೆ ತಕ್ಕಂತೆ ಬದಲಾವಣೆಗಳನ್ನು ಮಾಡಲಾಗುತ್ತಿದೆ’ ಎಂದು ತಿಳಿಸಿದರು.

‘ಬೈಲಾ ಪ್ರಕಾರವೇ ವಿಶ್ವಸ್ಥ ಸಂಸ್ಥೆ ರಚಿಸಲು ಉದ್ದೇಶಿಸಲಾಗಿದೆ. ಈ ಸಂಸ್ಥೆಯು ಪರಿಷತ್ತಿನ ಅವಿಭಾಜ್ಯ ಅಂಗವಾಗಿರುತ್ತದೆ’ ಎಂದರು.

ಮುಖ್ಯಾಂಶಗಳು

- ಅಧಿಕಾರ ಕೇಂದ್ರೀಕರಣ ಪ್ರಯತ್ನ– ಆರೋಪ
- ಕಸಾಪ ನಡೆಗೆ ಜಿಲ್ಲಾ ಘಟಕಗಳ ಅಧ್ಯಕ್ಷರ ಅಸಮಾಧಾನ
- ಮೇ 1ರಂದು ಕಾಗಿನೆಲೆಯಲ್ಲಿ ಕಾರ್ಯಕಾರಿ ಸಮಿತಿ ಸಭೆ: ಅನುಮೋದನೆ ಸಾಧ್ಯತೆ

ಪ್ರಮುಖ ಅಂಶಗಳು

- ಪರಿಷತ್ತಿನ ಸದಸ್ಯತ್ವಕ್ಕೆ ಕನಿಷ್ಠ ಪ್ರಾಥಮಿಕ ಶಿಕ್ಷಣ ಪಡೆದಿರಬೇಕು ಅಥವಾ ಪರಿಷತ್ತು ನಡೆಸುವ ಸರಳ ಕನ್ನಡ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ವಿವಿಧ ಕ್ಷೇತ್ರಗಳ ಸಾಧಕರಿಗೆ ಕನಿಷ್ಠ ವಿದ್ಯಾರ್ಹತೆ ಅನ್ವಯವಾಗುವುದಿಲ್ಲ.
- ಪರಿಷತ್ತಿನ ಸಿಬ್ಬಂದಿ ವೇತನ ಹೆಚ್ಚಳ, ಬಡ್ತಿ ನೀಡುವುದು, ಶಿಸ್ತು ಕ್ರಮ ಜರುಗಿಸುವ ಮತ್ತು ಕೆಲಸದಿಂದ ವಜಾಗೊಳಿಸುವ ಅಧಿಕಾರವನ್ನು ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ನೀಡಲು ಪ್ರಸ್ತಾಪಿಸಲಾಗಿದೆ. ಇಲ್ಲಿಯವರೆಗೆ ಕಾರ್ಯಕಾರಿ ಸಮಿತಿಗೆ ಈ ಅಧಿಕಾರವಿತ್ತು.
- ವಿವಿಧ ಘಟಕಗಳಿಗೆ ಅಗತ್ಯ ಸಿಬ್ಬಂದಿ ನೇಮಕ ಮಾಡಿಕೊಳ್ಳುವುದಕ್ಕೆ ಅನುಮತಿ ನೀಡುವ ಅಧಿಕಾರ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ.
- ಕಸಾಪದ ಗೌರವ ಕಾರ್ಯದರ್ಶಿ, ಗೌರವ ಸಂಘಟನಾ ಕಾರ್ಯದರ್ಶಿ, ಗೌರವ ಕೋಶಾಧ್ಯಕ್ಷ ಹಾಗೂ ಉಳಿದ ಪ್ರತಿನಿಧಿಗಳು ಅಥವಾ ಪದನಿಮಿತ್ತ ಸದಸ್ಯರನ್ನು ನಾಮನಿರ್ದೇಶನ ಮಾಡುವ ಅಧಿಕಾರ ಪರಿಷತ್ತಿನ ಅಧ್ಯಕ್ಷರ ಬಳಿ ಇರಲಿದೆ.
- ಪರಿಷತ್ತಿನ ಸದಸ್ಯತ್ವ ಶುಲ್ಕದಲ್ಲಿ ಇಳಿಕೆ ಹಾಗೂ ಆ್ಯಪ್ ಮೂಲಕ ಎಲ್ಲ ಹಂತದ ಮತದಾನ
- ವಿವಿಧ ಘಟಕಗಳು ಪ್ರತಿ ಮೂರು ತಿಂಗಳಿಗೊಮ್ಮೆ ಮತ್ತು ಹಣಕಾಸು ವರ್ಷದ ಅಂತ್ಯದ ನಂತರದ ಮೇ ತಿಂಗಳ ಕೊನೆಯ ಒಳಗೆ ಲೆಕ್ಕಪತ್ರಗಳನ್ನು ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ತಲುಪಿಸಬೇಕು.
- ಪರಿಷತ್ತಿನ ಕಾರ್ಯಚಟುವಟಿಕೆಗಳನ್ನು ಸದಸ್ಯರು ಮಾಹಿತಿ ಹಕ್ಕು ಅಧಿನಿಯಮದ ಅಡಿಯಲ್ಲಿ ಪಡೆಯಬಹುದು.

‘ಎರಡು ವರ್ಷದಲ್ಲಿ ಮನೆ ಬಿರುಕು’

ಕೆಎಚ್‌ಬಿ ವಸತಿ ಸಮುಚ್ಚಯದ ನಿವಾಸಿಗಳ ಅಳಲು

ಪ್ರಜಾವಾಣಿ ವಾರ್ತೆ



ಕಾಮಗಾರಿ ಪರಿಶೀಲನೆ ನಡೆಸಿದ ಸಚಿವ ವಿ.ಸೋಮಣ್ಣ ಅವರು ನಿವಾಸಿಗಳಿಂದ ಅಹವಾಲು ಸ್ವೀಕರಿಸಿದರು.

ಕೆಂಗೇರಿ: ಬಂಡೆಮಠ ಬಳಿಯ ಡೈಮಂಡ್ ಅಪಾರ್ಟ್‌ಮೆಂಟ್ ಸಮುಚ್ಚಯಕ್ಕೆ ವಸತಿ ಸಚಿವ ವಿ.ಸೋಮಣ್ಣ ಗುರುವಾರ ಭೇಟಿ ನೀಡಿ ಶಿಥಿಲಗೊಂಡಿದ್ದ ಚಾವಣಿ ದುರಸ್ತಿ ಕಾರ್ಯ ಪರಿಶೀಲನೆ ನಡೆಸಿದರು.

ಕೆಎಚ್‌ಬಿ ವತಿಯಿಂದ 2015ರಲ್ಲಿ ನಿರ್ಮಾಣವಾಗಿ 316 ಮನೆಗಳನ್ನು ಹೊಂದಿರುವ ಸಮುಚ್ಚಯದ ಚಾವಣಿ ಹಾಗೂ ಸೋಲಾರ್ ವ್ಯವಸ್ಥೆ ಶಿಥಿಲಗೊಂಡಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿದ್ದವು. ಕಟ್ಟಡದ 7ನೇ ಅಂತಸ್ತಿನ ಚಾವಣಿಯ ಕಳಪೆ ಕಾಮಗಾರಿಯಿಂದ 40ಕ್ಕೂ ಹೆಚ್ಚು ಮನೆಗಳು ಹಾನಿಗೊಳಗಾಗಿದ್ದವು. ಹೀಗಾಗಿ ಕೆ.ಎಚ್.ಬಿ ಹಾಗೂ ಬಿಬಿಎಂಪಿ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿದ ಸಚಿವರು, 2 ತಿಂಗಳ ಒಳಗಾಗಿ ಕಟ್ಟಡ ಕಾಮಗಾರಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ತಾಕೀತು ಮಾಡಿದರು. ಕಾಮಗಾರಿ ವಿಳಂಬ ಹಾಗೂ ಲೋಪದೋಷಗಳ ಆರೋಪ ಮತ್ತೊಮ್ಮೆ ಕೇಳಿ ಬಂದರೆ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದರು.

ನಿವಾಸಿಗಳ ಅಳಲು: ‘ಮನೆ ಖರೀದಿ ಮಾಡಿ ಕೇವಲ 2 ವರ್ಷವಾಗಿದೆ. ಮನೆ ಖರೀದಿಗಾಗಿ ಮಾಡಿರುವ ಸಾಲ ಇನ್ನು ಮುಗಿದಿಲ್ಲ. ಈಗಲೇ ಮನೆಯ ಗೋಡೆಗಳಲ್ಲಿ ಬಿರುಕು ಕಾಣಿಸುತ್ತಿದೆ. ಚಾವಣಿಯಲ್ಲಿ ನೀರು ನಿಂತು ಮನೆಯ ಗೋಡೆಗಳೆಲ್ಲ ಬಿರುಕು ಬಿಡುತ್ತಿದೆ. ಸೋಲಾರ್ ಕೂಡಾ ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ’ ಎಂದು ಇಲ್ಲಿನ ನಿವಾಸಿ ನಂದಿನಿ ಆಕ್ರೋಶ ವ್ಯಕ್ತ ಪಡಿಸಿದರು.

ದೂರು ನೀಡಿದರೂ ಕೆಎಚ್‌ಬಿ ಅಧಿಕಾರಿಗಳು ಸ್ಪಂದಿಸುತ್ತಿಲ್ಲ ಎಂದು ನಿವಾಸಿಯೊಬ್ಬರು ದೂರಿದರು.

ಸಚಿವರ ಭರವಸೆ: ಜೂನ್ 25ಕ್ಕೆ ಪುನಃ ಭೇಟಿ ನೀಡಿ ಕಾಮಗಾರಿಯ ಪರಿಶೀಲನೆ ನಡೆಸಲಾಗುವುದು. ಆ ವೇಳೆಗೆ ಕಾಮಗಾರಿ ಪೂರ್ಣಗೊಂಡಿರಬೇಕು ಎಂದು ಕೆಎಚ್‌ಬಿ ಅಧಿಕಾರಿಗಳಿಗೆ ಸಚಿವರು ಸೂಚಿಸಿದರು.

ವಿಮಾನದ ಟೈರ್ ಸ್ಫೋಟ: ತಪ್ಪಿದ ಅನಾಹುತ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಇಲ್ಲಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮಂಗಳವಾರ ರಾತ್ರಿ 11.30ರ ಸುಮಾರು ಬ್ಯಾಂಕಾಕ್‌ನಿಂದ ಬಂದ ಥಾಯ್ ಏರ್‌ವೇಸ್ ವಿಮಾನದ ಹಿಂಬದಿ ಟೈರ್ ಲ್ಯಾಂಡಿಂಗ್‌ಗೂ ಮುನ್ನವೇ ಸ್ಫೋಟಗೊಂಡಿದೆ. ಆದರೂ ಪೈಲಟ್ ಸಮಯಪ್ರಜ್ಞೆಯಿಂದ ವಿಮಾನ ಸುರಕ್ಷಿತವಾಗಿ ರನ್‌ವೇ ಸ್ಪರ್ಶಿಸಿದೆ.

ಥಾಯ್ ಏರ್‌ವೇಸ್‌ನ ಟಿಜಿ 325 ಬೋಯಿಂಗ್ 787-8 ಡ್ರೀಮ್ ಲೈನರ್ ವಿಮಾನದಲ್ಲಿ 150 ಪ್ರಯಾಣಿಕರು ಪ್ರಯಾಣಿಸುತ್ತಿದ್ದರು. ಎಲ್ಲರೂ ಸುರಕ್ಷಿತವಾಗಿದ್ದಾರೆ.

ಬುಧವಾರ ಸಂಜೆ ವಿಮಾನಯಾನ ಸಂಸ್ಥೆಯ ತಾಂತ್ರಿಕ ತಂಡ ಹೊಸ ಟೈರ್ ಜೋಡಣೆ ಮಾಡಿದ ನಂತರ ವಿಮಾನ ಬೆಂಗಳೂರಿನಿಂದ ಬ್ಯಾಂಕಾಕ್‌ನತ್ತ ಪ್ರಯಾಣ ಬೆಳೆಸಿತು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

NANDINI PUBLIC School Required Experienced English Medium Lady Teachers for Nursery, Primary, High School: 9448012263

TRIVENI MEMORIAL EDUCATIONAL TRUST TRIVENI INSTITUTE OF COMMERCE AND MANAGEMENT (AFFILIATED TO BANGALORE UNIVERSITY) #29/30 HESSARGHTATTA ROAD, MALLASANDRA, BAGALAGUNTE, BANGALORE– 560073 REQUIRE Professors, Associate/ Assistant Professors for following departments. Commerce, Management, Computer Applications and English. Qualification: Relevant post Graduation with NET/ SET and Ph.D preferred. And Also (1) Placement officer with experience. (2) Office staff- Good computer proficiency. (3) Telecallers Send CV:: trivenicollege123@gmail.com .

NEW HOLY Saint Vijaynagar English/ Social Mathamatics/ Science High School Teaches 16000- 18000 Contact: 7892461960

Accounts & Finance

WANTED EXPERIENCED Accountant with Computer Knowledge for Garments Show Room in Sultanpet Bengaluru Contact:9341254336

Engg/ Production Technical

REQUIRED AUTOCAD & Solid Modelling trained persons. Full time, Part time, WFH. Send your resume to jobs@innogp.com

Wanted

URGENT REQUIREMENT Specially for Retired & VRS, Job Opportunity to become an employee in a leading MNC. Fixed-Salary, Incentive, Foreign tours with Spouse. Call: 9591583662/ 9972169164.

WANTED FEMALE Office Assistant Qualification any Degree, Good Communication Skills: Kannada, English, Hindi. in around Rajajinagar Contact: 23307910/ 9108458798

General

PROSPECTIVE CAREER, Retired, VRS, Professionals, Senior Citizens, Business People, Substantial Income. International Recognition. 97400-90431/ 8884445665

JOB VACANCY IN CONSULATE-GENERAL OF JAPAN IN BENGALURU (CLERK)

1. Job Description:
Work Outline : Clerical work for our office.
Work Place : Consulate-General of Japan in Bengaluru (1st Floor Prestige Nebula, No. 8-14, Cubbon Road, Bengaluru-560001)
Work Hours: Monday to Friday (8:30am -12:30 pm & 1:30pm - 5:15pm)
2. No. of Vacancies : 1 (one)
3. Qualifications Required :
- **Work Experience:** Those who are eligible to work here in India (regardless of nationality).
- **Health:** Person should be physically fit & healthy
- **Language:** Fluent in writing and reading in Japanese and English.For non-Japanese nationals, JLPT N1/N2 is required. Kannada preferred.
- NO crime records both inside and outside of India

4. How to Apply / Application Procedure :
Those who wish to apply for this position required to send the following by post OR email
① CV/Resume (Passport size photograph attached)
② A copy of valid official identification card
③ Other documents that may need
(Copies of language qualifications, relevant educational certificates or reference from former work place, if applicable)
- **Postal Address :** Consulate-General of Japan in Bengaluru, 1st Floor, Prestige Nebula, No. 8-14, Cubbon Road, Bengaluru-560001.
- **Email Address: cgjapan-blr@ig.mofa.go.jp**

5. Last Date of Application : 10th May, 2022 by 12:00 PM

NOTE: ※Interviews will be conducted for those who have pass the document screening.

Multiple Vacancy

REQUIRED TELECALLERS, Customer Care, Manager at Attractive Salary Packages Call 9619676669 Live Wires Media Institute

EDUCATIONAL

Admission

DIRECT FINAL: LLB (Can Practice) B.Tech/M.Tech Diploma, MBA/MSc, BCA, BBA, BSc, B.Com, D.Pharm/ B.Pharm, PU/ SSLC. Recognised Govt /UGC. Asha Academy, Bangalore. Ph: 9448460103/ 08026699786

PUBLIC NOTICE

PUBLIC NOTICE

This is to inform the General Public that I, **RAVI KISHAN R S/o Late John Ramana Rao,** hereby informs that the Original Registered Sale Deed, bearing No. **2478/2003-2004/2-24-24, dated 17-05-2003** which has been lost/ misplaced during transact on **20-02-2022** near Ramamurthynagar, Bangalore, **Muncipal Khatha No.276, H.L. No.95/2D,** Konappana Agrahara, Begur Hobli, Bangalore South Taluk, Bangalore, Total extent of site area about 3265, I also lodged a Police complaint bearing Lost Report No. **0205005/2022 dated 19.04.2022,** before Bangalore City Police. Any person/s in possession of the aforesaid document may return the same to me or anyone having any sort of claim over the said property may lodge their objections in writing within 15 days from this day to the undersigned.

Mr. RAVI KISHAN R, S/o Late. John Ramana Rao, residing at No.109, Ganesha Temple Street, 2nd Cross, Bangalore-16.

ಸಾರ್ವಜನಿಕ ನೋಟೀಸ್

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಬೆಂಗಳೂರು–560094, ಬೆಂಗಳೂರು ಉತ್ತರ ತಾಲ್ಲೂಕು ಕಸಬಾ ಹೋಬಳಿ ಗೆದ್ದಲಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ 35/1, ನಿವೇಶನದ ಸಂಖ್ಯೆಗಳು 6 ಮತ್ತು 7ರಲ್ಲಿರುವ ವಿಸ್ತೀರ್ಣ: ಪೂ+ಪ. 50 ಅಡಿಗಳು, ಉ+ದ. 60 ಅಡಿಗಳ, ಸ್ವತ್ತಿನ ನೊಂದಣಿಯಾದ ಶುದ್ಧ ಕ್ರಯ ಪತ್ರದ ಸಂಖ್ಯೆ:421/1974–75 ದಿನಾಂಕ 24–4–1974 ಮತ್ತು 1698/1974–75 ದಿನಾಂಕ 24–06–1974 ರ ಮೂಲ ಕ್ರಯ ಪತ್ರಗಳು ದಿನಾಂಕ 21–12–2021 ರಂದು ಸಂಜಯನಗರದಿಂದ ಗೆದ್ದಲಹಳ್ಳಿಗೆ ಹೋಗುವ ಮಾರ್ಗದಲ್ಲಿ ಕಳೆದು ಹೋಗಿರುತ್ತದೆ. ಯಾರಿಗಾದರೂ ಸಿಕ್ಕಿದ್ದರೆ ಕೆಳಖಂಡವರನ್ನು ಸಂಪರ್ಕಿಸುವುದು.
ಸಹಿ/–
ಎನ್. ಬಾಬು, ವಕೀಲರು
ನಂ.1, ಹಳೆ ಮದ್ರಾಸು ರಸ್ತೆ, ಅವಲಹಳ್ಳಿ ವಿರ್ಗೋನಗರ ಅಂಚೆ, ಬೆಂಗಳೂರು–49
ಮೊಬೈಲ್ ನಂ. 9341860947
ಸ್ವತ್ತಿನ ಮಾಲೀಕರ ಮೊ. ನಂ, 9739033030
(ನಿಶಂತ್.ಎಂ)

PUBLIC NOTICE
To Place your Classified Ads Contact:
9880856233

REAL ESTATE SELLING

Commercial Building

Mysore

COMMERCIAL BUILDING FOR SALE IN MYSORE
Presently earning a Monthly Rent of ₹ 5 Lakhs / Month.
Tenant - Reputed Multi National Company.
Price - 12 Cr. Clear Papers.
Contact direct owner at **9108684084**

Commerical

Mysore

PRIME COMMERCIAL PROPERTY 2.1 ACRES IS FOR SALE/JV NEAR TO MYSORE ON EXPRESS HIGHWAY NEAR TO EXIT POINT AND UNDERPASS CONTACT OWNER 7676770503/ 9741019028

Flat

Hennur

HENNUR ROAD 2 & 3 BHK fully furnished BDA 'A' Katha Flats 55 & 65 Lakhs all Inclusive: 8050527550

House

Rajarajeshwari Nagar

BUILDING FOR Sale in Rajarajeshwarinagar, West facing, North Door, 20x40 3BHK Luxury Duplex with Lift. 2.25Cr Nego. 6364513513/ 9036513513

Sites

Arkavathi Layout

SEMI COMMERCIAL 40x60 BDA Site For Sale at Arkavathi Layout Near Hennur Main Road Contact: 7676900174 8892297674

Hosur Road

APPROX ONE Acre Industrial Land near Attibele Off: Hosur Road for Sale. Brokers Excuse. Contact: 9620938350/ 9844243147.

Vishweshwariah Layout

BDA SITE Sale Vishweshwaraiah Layout 6th Block 40x60 North Face Near BDAComplex Contact Gunuine Buyers 8892901567/ 9341733480

Hanumanthnagar

SALE BDA Allotted 30x41 North Facing Srinivasanagar 14,000 SFT, direct registration, No Brokers whatsapp 7760320891.

BEAUTY & HEALTH

Health Clinic

ANU SPA Massage Therapy Available near Ring RoadBharath Petrol Bunk, Koramangala. Contact: 9035930397/ 6364271680.

BUSINESS

Business to Business

Finance

WANTED INVESTOR 12Cr, 16 Flats Buy Back After 48 Months 10Cr with Flat: 8892501007/ 9606701007

Business Offers

Finance

NRI'S INVESTMENT And Finance Available On Low Interest Against Properties,Land & Building,Sites,Flats, Converted& Agriculture Lands Call: 7411265189

WANTED BUSINESS Partner Non Veg Hotel 10 Lakhs Investment Monthly Income 2 Lakhs: 9606701007/ 8892501007

TOURS & TRAVEL

Travel

SEND YOUR Parents to NEPAL MUKTINATH. We take care of them. We do Muktinath every month. NALANDA TRAVELS, Kundapura, Mobile: 8310028157

WEEKEND CORNER

ಕ್ಲಾಸಿಫೈಡ್ಸ್



AMUSEMENT PARK | WATER PARK
Funworld- 10:30 am to 6:30 pm | Waterpark- 10:30 am to 4:30 pm
www.funworldblr.com Palace Grounds, Bangalore +91 84311 10000
funworld.bangalore @funworld.blr

PERSONAL

Change of Name

JC670301Y SUB MD ASLAM 2ATC My MOTHER Name records MEHMMUDA BEDE Instead of MEHMODA BIBI Notary K.V MANI Bangalore

SREERANGAY, MOTHER/O 14849812P, SEP DVRSPL, MANIKANDAN R, Vill- A Mettur, Veppanthattai, Perambalur Tamil Nadu, changed name from SREERANGAY to SEERANGAMMAL R 28/04/2022 Notary K.V. Mani Bangalore

I, MUKESH KUMAR NAHAR S/o. Late. Devraj Nahar R/a Flat #202, Gajwar Basera Apartments #70, Surveyor Street, Basavanagudi, Bangalore-560004 Have Changed My Minor Son's Name From PUNEET NAHAR to PUNEET KUMAR NAHAR vide Affidavit Dated: 22.04.2022 Before Notary H.S. Sakalesh Aradhya, Bangalore

I, AMMU Spouse of #1377904P Rank Naik Balu. R R/a. #38, Nala Road Sivan Chetty Garden Post, Bangalore-42, have changed my name from AMMU to B. AMMU vide affidavit dated 28.04.2022, before notary Gangaraju. B.N. Bangalore.

I, MANASA B residing at No. 12, 3rd Main Road, 10th cross, Brindavannagar, Mathikere Bengaluru-560054 have changed my name to MANASA VIJAY vide affidavit dated 28.04.2022 before notary A.C. Subbu Swamy Bangalore. Henceforth I shall be known as MANASA VIJAY only.

WE, MUJAHID Pasha and Tahseen Khanum havechanged my daughter's name from RIFA AFREEN to RIFA SADIYA sworn in front ofNotary AS Narayana Reddy, Bangalore vide affidavit dated 26/04/22

14879197X L/NK SUNIL DESWAL 2ATC My MOTHER Name records KAMALA Instead of KAMLA Notary K.V MANI Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಫ್ಯಾಮಿಲಿ ಮಲ್ಟಿಪರ್ಪಸ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್ ಜೀವನಕ್ಕಾಗಿ ಹೂಡಿಕೆ....
FAMILY MULTIPURPOSE CO-OPERATIVE SOCIETY LIMITED INVESTING FOR LIFE ....
(OTS - 1:190:HOT:44075/2013-14)
email: familymcsl@gmail.com
11% Interest on Fixed Deposit
for all the members of our Society
Senior Citizens 11.5%
91-9008473910
1 Year 10%
2 Year 12%
RECURRING DEPOSIT
NEW BEL ROAD 91-7353699933
MALLESHWARAM 91-7899322665
YELAHANKHA 91-7618789143
TUMKUR ROAD 91-7899335394
RAJAJINAGAR 91-9606600973
www.familymcsl.com
* Terms and Conditions Applied

PROPERTY CORNER

BL SMART ENCLAVE
ಮೈಸೂರು ರಸ್ತೆ ಬಿಡದಿ ಟೌನ್‌ನಲ್ಲಿ
BMRDA ಮಾನ್ಯತೆ ಪಡೆದ ನಿವೇಶನಗಳು
Site FOR Sale
BANK LOAN AVAILABLE | READY FOR REGISTRATION | Rs. 1599 per sft
CALL SITE VISIT : 844 844 9607

EFFECTIVE FROM May 1, 2022

DH DECCAN HERALD | ಪ್ರಜಾವಾಣಿ

BOOK YOUR CLASSIFIEDS ADVERTISEMENT

DECCAN HERALD & PRAJAVANI CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	80	125	95	150

CD Per Sqcm	Single Col	Double Col	Multi Col
	535	500	515

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

condition apply*

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com

ಪಾದಚಾರಿಗಳು ಮತ್ತು ದ್ವಿಚಕ್ರ ವಾಹನಗಳ ಓಡಾಟಕ್ಕೂ ಸಮಸ್ಯೆ

ಕಸದ ತೊಟ್ಟಿಯಾದ ಹೆಸರಘಟ್ಟ ರಸ್ತೆ

• ವಿಜಯಕುಮಾರ್ ಎಸ್.ಕೆ.

ಹೊರ ವಲಯ ಒಳ ಬೇಗುದಿ

ಬೆಂಗಳೂರು: ಎಲ್ಲೆಂದರಲ್ಲಿ ಬಿದ್ದಿರುವ ಕಸದ ರಾಶಿ, ರಸ್ತೆ ಬದಿಗೆ ಕಸ ಬಿಸಾಡಿ ಹೋಗುವ ನಿವಾಸಿಗಳು, ಮೂಗುಮುಚ್ಚಿ ತಿರುಗುವ ಜನ...

ಇದು ಹೆಸರಘಟ್ಟ ಮುಖ್ಯರಸ್ತೆಯ ಸ್ಥಿತಿ. ಬೆಂಗಳೂರಿನಿಂದ ಹೆಸರಘಟ್ಟ ಕಡೆಗೆ ಹೊರಟರೆ ಚಿಕ್ಕಬಾಣಾವರ ದಾಟಿದ ಕೂಡಲೇ ಕಸದ ರಾಶಿ ಎದುರಾಗುತ್ತದೆ. ಮುಂದೆ ಸಾಗಿದರೆ ರಸ್ತೆಯ ಉದ್ದಕ್ಕೂ ಅಲ್ಲಲ್ಲಿ ಕಸದ ಬಿದ್ದಿರುವುದು ಕಣ್ಣಿಗೆ ರಾಚುತ್ತದೆ. ತರಬನಹಳ್ಳಿ ಬಳಿಯಂತೂ ಎರಡೂ ಬದಿ ಯಲ್ಲಿ ರಸ್ತೆಯ ಅಂಚಿನ ತನಕ ಕಸದ ಎಸೆಯಲಾಗಿದೆ. ಪ್ಲಾಸ್ಟಿಕ್ ಚೀಲಗಳು ರಸ್ತೆ ಬದಿಯ ಇಡೀ ಜಾಗವನ್ನೇ ಆವರಿಸಿಕೊಂಡಿವೆ.

ಎರಡೂ ಬದಿಯಿಂದ ವಾಹನಗಳು ಬಂದರೆ ಪಾದಚಾರಿಗಳು ಮತ್ತು ದ್ವಿಚಕ್ರ ವಾಹನಗಳ ಸವಾರರು ರಸ್ತೆ ಬದಿಗೆ ಇಳಿಯಲು ಜಾಗವಿಲ್ಲದಷ್ಟು ಕಸ ರಾಶಿ ಹಾಕಲಾಗಿದೆ. ಕಸದ ರಾಶಿಯೊಳಗೇ ನಡೆದು ಸಾಗಬೇಕಾದ ಅನಿವಾರ್ಯತೆ ಇದೆ.



ಚಿಕ್ಕಬಾಣಾವರ ಬಳಿ ಬಿದ್ದಿರುವ ಕಸದ ರಾಶಿ

ಹಾಗೇ ಮುಂದೆ ಸಾಗಿದರೆ ಹುರುಳಿಚಿಕ್ಕನಹಳ್ಳಿ ಎದುರಾಗುತ್ತದೆ. ಊರು ದಾಟಿದ ಕೂಡಲೇ ಸಿಗುವ ತಿರುವು ರಸ್ತೆ ಬದಿಯಲ್ಲಿ ಉದ್ದಕ್ಕೂ ಕಸ ಚೆಲ್ಲಲಾಗಿದೆ. ತಿರುಮಲಾಪುರದ ಸಮೀಪವೂ ಇದೇ ದೃಶ್ಯಗಳು ಕಾಣಿಸುತ್ತವೆ.

ರಸ್ತೆ ಬದಿ ಎರಡೂ ಬದಿಯಲ್ಲಿ ಹೊಸ ಬಡಾವಣೆಗಳು ತಲೆ ಎತ್ತಿವೆ. ಈ ಬಡಾವಣೆಗಳಲ್ಲಿ ತ್ಯಾಜ್ಯ ವಿಲೇವಾರಿಗೆ ಸೂಕ್ತ ಸ್ಥಳಾವಕಾಶಗಳಿಲ್ಲ. ಆದ್ದರಿಂದಲೇ ನಿವಾಸಿಗಳು ಮನೆಯಲ್ಲಿ ಉತ್ಪತ್ತಿಯಾಗುವ ಒಣ ಮತ್ತು ಹಸಿ ಕಸವನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿಕೊಂಡು ಬಂದು ಎಲ್ಲೆಂದರಲ್ಲಿ ಬಿಸಾಡುತ್ತಾರೆ. ಮಾಂಸದ ಅಂಗಡಿಗಳ ತ್ಯಾಜ್ಯ ಅದರಲ್ಲೂ ಕೋಳಿ ಮಾಂಸದ ಅಂಗಡಿಗಳ ತ್ಯಾಜ್ಯವೂ ಇದೇ ರಸ್ತೆ ಬದಿಯಲ್ಲಿ ಹರಡಿಕೊಂಡಿದೆ.

ಕಸ ವಿಲೇವಾರಿಗೆ ಸೂಕ್ತವಾದ ಸ್ಥಳ ಇದ್ದರೆ ಅಥವಾ ಮನೆ-ಮನೆಯಿಂದ ಸಂಗ್ರಹಿಸುವ ವ್ಯವಸ್ಥೆ ಇದ್ದಿದ್ದರೆ ಬಳಸಿಕೊಳ್ಳುತ್ತಿದ್ದೆವು. ಅದ್ಯಾವುದೂ ಇಲ್ಲದಿರುವುದರಿಂದ ಕಸ ವಿಲೇವಾರಿಯೇ ಸಮಸ್ಯೆಯಾಗಿದೆ ಎನ್ನುತ್ತಾರೆ ನಿವಾಸಿಗಳು.



ಹೆಸರಘಟ್ಟ ರಸ್ತೆಯ ತರಬನಹಳ್ಳಿ ಬಳಿ ರಸ್ತೆ ಬದಿಯಲ್ಲಿ ಬಿದ್ದಿರುವ ಕಸ –ಪ್ರಜಾವಾಣಿ ಚಿತ್ರಗಳು/ ಪ್ರಶಾಂತ್ ಎಚ್.ಜಿ.

‘ರಸ್ತೆ ಬದಿಯಲ್ಲಿ ಕಸ ಬಿಸಾಡಿ ಪರಿಸರ ಹಾಳು ಮಾಡುವುದು ನಮಗೂ ಇಷ್ಟವಿಲ್ಲ. ಆದರೆ, ಬೇರೆ ಮಾರ್ಗವಿಲ್ಲದೆ ಬಿಸಾಡುವ ಅನಿವಾರ್ಯತೆ ಇದೆ’ ಎಂದು ಅವರು ಹೇಳುತ್ತಾರೆ.

ಹೆಸರಘಟ್ಟದಲ್ಲಿ ತೋಟಗಾರಿಕೆ ಸಂಶೋಧನಾ ಕೇಂದ್ರವಿದೆ. ಅಲ್ಲಿಗೆ ಭೇಟಿ ನೀಡಲು ಹೊರ ರಾಜ್ಯ ಮತ್ತು ಹೊರ ದೇಶಗಳಿಂದ ಜನ ಬರುತ್ತಾರೆ. ಅವರಿಗೆ ರಸ್ತೆಯ ಎರಡೂ ಬದಿ ಇರುವ ಕಸದ ರಾಶಿಗಳು ಸ್ವಾಗತ ಕೋರುತ್ತವೆ ಎಂದು ಹುರುಳಿಚಿಕ್ಕನಹಳ್ಳಿ ಸಂತೋಷ್ ಬೇಸರ ವ್ಯಕ್ತಪಡಿಸುತ್ತಾರೆ.

‘ಶೀಘ್ರವೇ ಕಸ ವಿಲೇವಾರಿ ಘಟಕ’

‘ನಮ್ಮ ಪಂಚಾಯಿತಿ ವ್ಯಾಪ್ತಿ ಬಿಟ್ಟು ಬೇರೆ ಬಡಾವಣೆ ನಿವಾಸಿಗಳು ಕಚೇರಿಗೆ ಕೆಲಸಕ್ಕೆ ಹೋಗುವಾಗ ಕಸವನ್ನು ರಸ್ತೆ ಬದಿಗೆ ಬಿಸಾಡಿ ಹೋಗುತ್ತಾರೆ. ಮನೆ-ಮನೆಗೆ ಹೋಗಿ ತಿಳಿವಳಿಕೆ ನೀಡಿ, ಕರಪತ್ರ ಹಂಚಲಾಗಿದೆ’ ಎಂದು ಹುರುಳಿಚಿಕ್ಕನಹಳ್ಳಿ ಗ್ರಾಮ ಪಂಚಾಯಿತಿ ಅಧಿಕಾರಿಗಳು ಹೇಳುತ್ತಾರೆ.

‘ಮನೆ-ಮನೆಯಿಂದ ಕಸ ಸಂಗ್ರಹಕ್ಕೆ ವ್ಯವಸ್ಥೆ ಇಲ್ಲ. ಕಸ ವಿಲೇವಾರಿ ಘಟಕ ಪ್ರಾರಂಭಿಸಲು ಸಿದ್ಧತೆ ನಡೆದಿದೆ. ಆರೇಳು ತಿಂಗಳಲ್ಲಿ ಘಟಕ ಆರಂಭವಾಗಲಿದೆ. ಆಬಳಿಕ ಕಸ ವಿಲೇವಾರಿಗೆ ಅಲ್ಲಲ್ಲಿ ತೊಟ್ಟಿಗಳನ್ನು ಇರಿಸಿ ವಿಲೇವಾರಿಗೆ ವ್ಯವಸ್ಥೆ ಮಾಡುತ್ತೇವೆ. ಅಲ್ಲಿಯ ತನಕ ನಿವಾಸಿಗಳು ಸಹಕಾರ ನೀಡಬೇಕು. ಎಲ್ಲೆಂದರಲ್ಲಿ ಕಸ ಎಸೆಯಬಾರದು’ ಎಂದು ಗ್ರಾಮ ಪಂಚಾಯಿತಿ ಅಧಿಕಾರಿಯೊಬ್ಬರು ಮನವಿ ಮಾಡಿದರು.

ಪ್ರೀತಿ ನಿರಾಕರಿಸಿದ್ದಕ್ಕೆ ಯುವಕನ ಕೃತ್ಯ

ಯುವತಿ ಮೇಲೆ ಆ್ಯಸಿಡ್ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯಲ್ಲಿ 24 ವರ್ಷದ ಯುವತಿ ಮೇಲೆ ಆ್ಯಸಿಡ್ ದಾಳಿ ನಡೆದಿದ್ದು, ತೀವ್ರ ಗಾಯಗೊಂಡಿರುವ ಯುವತಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

‘ಫೈನಾನ್ಸ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಯುವತಿ ಮೇಲೆ ಗುರುವಾರ ಬೆಳಿಗ್ಗೆ ಆ್ಯಸಿಡ್ ದಾಳಿ ನಡೆದಿದೆ. ಆರೋಪಿ ನಾಗರಾಜ್ (27) ಎಂಬಾತ ಪರಾರಿಯಾಗಿದ್ದು, ಆತನ ಬಂಧನಕ್ಕೆ ವಿಶೇಷ ತಂಡ ರಚಿಸಲಾಗಿದೆ’ ಎಂದು ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ ಹೇಳಿದರು.

ಏಳು ವರ್ಷದಿಂದ ಪರಿಚಯ: ‘ಯುವತಿಯ ದೊಡ್ಡಮ್ಮ ಹೆಗ್ಗನಹಳ್ಳಿ ಬಳಿ ವಾಸವಿದ್ದಾರೆ. ಅವರ ಮನೆಯ ಕೊಠಡಿಯೊಂದರಲ್ಲಿ ಏಳು ವರ್ಷದ ಹಿಂದೆ ಆರೋಪಿ ನಾಗರಾಜ್ ಬಾಡಿಗೆಗಿದ್ದ. ಚಿಕ್ಕದೊಂದು ಗಾರ್ಮೆಂಟ್ಸ್ ಕಾರ್ಖಾನೆ ನಡೆಸುತ್ತಿದ್ದ ನಾಗರಾಜ್, ಯುವತಿಯನ್ನು ಪರಿಚಯಿಸಿಕೊಂಡು ಸ್ನೇಹ ಬೆಳೆಸಿದ್ದ’ ಎಂದು ಪೊಲೀಸರು ತಿಳಿಸಿದರು.

ಯುವತಿ ಮೇಲಿನ ಆ್ಯಸಿಡ್ ದಾಳಿ ಅಮಾನುಷ ಕೃತ್ಯ. ಆರೋಪಿ ವಿರುದ್ಧ ಪೊಲೀಸರು ಕ್ರಮ ಕೈಗೊಳ್ಳಲಿದ್ದಾರೆ. ಯುವತಿಗೆ ಉತ್ತಮ ಚಿಕಿತ್ಸೆ ಕೊಡಿಸಲಾಗುತ್ತಿದೆ

ಆರಗ ಜ್ಞಾನೇಂದ್ರ, ಗೃಹ ಸಚಿವ

‘ಯುವತಿಯನ್ನು ಹಿಂಬಾಲಿಸಲಾರಂಭಿಸಿದ್ದ ಆರೋಪಿ, ಪ್ರೀತಿಸುವಂತೆ ಪೀಡಿಸಲಾರಂಭಿಸಿದ್ದ. ಅದಕ್ಕೆ ಒಪ್ಪದ ಯುವತಿ, ದೊಡ್ಡಮ್ಮ ಹಾಗೂ ಕುಟುಂಬಸ್ಥರಿಗೆ ವಿಷಯ ತಿಳಿಸಿದ್ದರು. ನಾಗರಾಜ್‌ನನ್ನು ತರಾಟೆಗೆ ತೆಗೆದುಕೊಂಡಿದ್ದ ಯುವತಿ ಪೋಷಕರು, ತಂಟೆಗೆ ಹೋಗದಂತೆ ತಾಕೀತು ಮಾಡಿದ್ದರು. ಇದೇ ವಿಚಾರವಾಗಿ ಪರಸ್ಪರ ಗಲಾಟೆ ಆಗಿತ್ತು. ಆತನನ್ನು ಕೊಠಡಿಯಿಂದ ಖಾಲಿ ಮಾಡಿಸಲಾಗಿತ್ತು’ ಎಂದೂ ಪೊಲೀಸರು ಹೇಳಿದರು.

ಕಚೇರಿ, ಮನೆ ಬಳಿ ಕೂಗಾಟ: ‘ಎಂ.ಕಾಂ ಪದವಿ ಮುಗಿಸಿದ್ದ ಯುವತಿ, ಫೈನಾನ್ಸ್ ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರಿದ್ದರು. ಅವರು ಕೆಲಸಕ್ಕೆ ಹೋಗುವಾಗ ಬರುವಾಗಲೂ ಅಡ್ಡಗಟ್ಟಿ ಆರೋಪಿ ಕಿರುಕುಳ ನೀಡಲಾರಂಭಿಸಿದ್ದ’ ಎಂದು ಪೊಲೀಸರು ತಿಳಿಸಿದರು.

‘ಕಚೇರಿ ಹಾಗೂ ಮನೆ ಬಳಿ ಬುಧವಾರ ಹೋಗಿದ್ದ ಆರೋಪಿ, ಪ್ರೀತಿಸುವಂತೆ ಯುವತಿಯನ್ನು ಒತ್ತಾಯಿಸಿದ್ದ. ಅದಕ್ಕೆ ಒಪ್ಪದಿದ್ದಾಗ, ಕೂಗಾಡಿ ಯುವತಿಯನ್ನು ಎಳೆದಾಡಿದ್ದ. ಕಚೇರಿ ಸಿಬ್ಬಂದಿ, ಬುದ್ಧಿವಾದ ಹೇಳಿ ಕಳುಹಿಸಿದ್ದರು’ ಎಂದೂ ಹೇಳಿದರು.

‘ಯುವತಿ ಮುಖವನ್ನು ವಿಕಾರ ಮಾಡಿದರೆ, ಯಾರೂ ಮದುವೆಯಾಗುವುದಿಲ್ಲ’ ಎಂದು ತಿಳಿದ ಆರೋಪಿ, ಆ್ಯಸಿಡ್ ಎರಚಲು ಸಂಚು ರೂಪಿಸಿದ್ದ. ಯುವತಿ ಗುರುವಾರ ಬೆಳಿಗ್ಗೆ ಕೆಲಸಕ್ಕೆಂದು ಕಚೇರಿಗೆ ಬಂದಿದ್ದರು. ಮೆಟ್ಟಿಲು ಬಳಿಯೇ ಯುವತಿಯನ್ನು ತಡೆದಿದ್ದ ಆರೋಪಿ, ಆ್ಯಸಿಡ್ ಎರಚಿ ಪರಾರಿಯಾಗಿದ್ದಾನೆ. ಕಚೇರಿ ಸಿಬ್ಬಂದಿ ಹಾಗೂ ಸ್ಥಳೀಯರೇ ಯುವತಿಯನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ’ ಎಂದೂ ತಿಳಿಸಿದರು.

‘ಆ್ಯಸಿಡ್ ದಾಳಿಯಿಂದ ಯುವತಿಯ ಎದೆ, ಕತ್ತು ಹಾಗೂ ಕಾಲಿಗೆ ಗಾಯವಾಗಿದೆ. ಅವರ ಆರೋಗ್ಯದಲ್ಲಿ ಚೇತರಿಕೆ ಕಂಡುಬರುತ್ತಿರುವುದಾಗಿ ವೈದ್ಯರು ತಿಳಿಸಿದ್ದಾರೆ’ ಎಂದೂ ಪೊಲೀಸರು ಹೇಳಿದರು.

ದಿವ್ಯಾ ಬಂಧನ ಶೀಘ್ರ: ಸಚಿವ ಆರಗ

ಬೆಂಗಳೂರು: ಪಿಎಸ್‌ಐ ನೇಮಕಾತಿ ಪ್ರಕರಣದ ಆರೋಪಿ ದಿವ್ಯಾ ಹಾಗರಗಿ ಅವರನ್ನು ಪೊಲೀಸರು ಶೀಘ್ರವೇ ಬಂಧಿಸಲಿದ್ದಾರೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದಾರೆ.

ಗುರುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ದಿವ್ಯಾ ಪ್ರಬಲರೇನಲ್ಲ. ಪೊಲೀಸರು ಶೀಘ್ರವೇ ಅವರನ್ನು ಬಂಧಿಸಲಿದ್ದಾರೆ, ಮಾತ್ರವಲ್ಲದೇ ಅವರ ಆಸ್ತಿಯನ್ನೂ ಮುಟ್ಟುಗೋಲು ಹಾಕಿಕೊಳ್ಳಲಿದ್ದಾರೆ ಎಂದು ಎಚ್ಚರಿಕೆ ನೀಡಿದರು.

ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಅನೇಕ ಆರೋಪಗಳನ್ನು ಮಾಡಿದ್ದಾರೆ. ಸಿಐಡಿ ತನಿಖೆಗೆ ಸಹಕಾರ ನೀಡದೇ ಪಲಾಯನ ಮಾಡಿದ್ದಾರೆ. ತಮ್ಮ ಬಳಿ ದಾಖಲೆ ಇದೆ ಎಂದು ಹೇಳುವ ಅವರು ಮೊದಲು ಅವುಗಳನ್ನು ಸಿಐಡಿಗೆ ಕೊಡಲಿ ಎಂದರು.

ಪೊಲೀಸ್ ನೇಮಕಾತಿ ವಿಭಾಗದ ಎಡಿಜಿಪಿ ಅಮೃತ್ ಪಾಲ್ ಅವರ ವರ್ಗಾವಣೆ ಸಹಜ ಪ್ರಕ್ರಿಯೆ. ಅವರಿಗೆ ಅಪರಾಧಿ ಎಂದು ಹೇಳಲು ಆಗುವುದಿಲ್ಲ ಎಂದು ಆರಗ ಹೇಳಿದರು.

‘ಜಾಗ ವ್ಯಾಜ್ಯ: ಆರೋಗ್ಯ ವಿವಿ ಸ್ಥಳಾಂತರ ಇಲ್ಲ’

ಬೆಂಗಳೂರು: ‘ರಾಜ್ಯ ಸರ್ಕಾರ ಅಗತ್ಯ ಇರುವಷ್ಟು ಜಾಗವನ್ನು ಉಚಿತವಾಗಿ ನೀಡುವವರೆಗೆ ರಾಮನಗರಕ್ಕೆ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಕ್ಯಾಂಪಸ್ ಸ್ಥಳಾಂತರಿಸುವುದಿಲ್ಲ’ ಎಂದು ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಕೆ. ರಮೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ‘ವಿಶ್ವವಿದ್ಯಾಲಯಕ್ಕೆ ನೀಡಿದ ಜಾಗ ವ್ಯಾಜ್ಯ ಮುಕ್ತವಾಗುವವರೆಗೆ ಹೊಸ ಕಟ್ಟಡ ನಿರ್ಮಾಣ ಅಥವಾ ಕ್ಯಾಂಪ್ ಸ್ಥಳಾಂತರಿಸುವುದಿಲ್ಲವೆಂದು ಸಿಂಡಿಕೇಟ್ ಮತ್ತು ಸೆನೆಟ್ ಸ್ಪಷ್ಟವಾಗಿ ತಿಳಿಸಿದೆ’ ಎಂದರು.

‘274 ಎಕರೆ ಜಾಗದಲ್ಲಿ 70 ಎಕರೆ ಜಾಗವನ್ನು ಸರ್ಕಾರ ನಮಗೆ ನೀಡಿದೆ. ಉಳಿದ ಜಾಗ ವೈದ್ಯಕೀಯ ಶಿಕ್ಷಣ ಇಲಾಖೆಯ ಅಧೀನದಲ್ಲಿದೆ. ವ್ಯಾಜ್ಯ ಮುಕ್ತ ಜಾಗವನ್ನು ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸಿದ ಬಳಿಕವಷ್ಟೆ ಅಲ್ಲಿ ಕಟ್ಟಡ ಕಾಮಗಾರಿ ಕೆಲಸ ಆರಂಭಿಸಲಾಗುವುದು. ಅಲ್ಲದೆ, ವಿಶ್ವವಿದ್ಯಾಲಯದ ಆಡಳಿತ ವಿಭಾಗವನ್ನು ಮಾತ್ರ ಈ ಜಾಗದಲ್ಲಿ ನಿರ್ಮಿಸಲಾಗುವುದು’ ಎಂದರು.

ಕಾಮಗಾರಿಗಳ ಸ್ಥಳಕ್ಕೆ ಖುದ್ದು ಭೇಟಿ ನೀಡಲು ನಿರ್ದೇಶನ

‘ಜವಾಬ್ದಾರಿಯಿಂದ ಕಾರ್ಯನಿರ್ವಹಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿ ವ್ಯಾಪ್ತಿಯಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿಗಳ ಗುಣಮಟ್ಟ ಕಾಪಾಡಿಕೊಂಡು ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕು. ಈ ಸಂಬಂಧ ಆಯಾ ವಲಯ ಅಧಿಕಾರಿಗಳು ಕಾಮಗಾರಿ ನಡೆಯುವ ಸ್ಥಳಕ್ಕೆ ಖುದ್ದಾಗಿ ಭೇಟಿ ನೀಡಿ ಪರಿಶೀಲಿಸಬೇಕು’ ಎಂದು ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಸೂಚಿಸಿದರು.

ಬಿಬಿಎಂಪಿ ಕೈಗೊಂಡಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ನಡೆದ ವರ್ಚುವಲ್ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ‘ನಗರದ ಎಲ್ಲ ರಸ್ತೆಗಳ ನಿರ್ವಹಣೆ ಸಮರ್ಪಕವಾಗಿ ನಡೆಯಬೇಕು. ಯಾವುದಾದರೂ ಸಮಸ್ಯೆ ಇದ್ದರೆ ಜಲಮಂಡಳಿ, ಬೆಸ್ಕಾಂ, ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಸೇರಿದಂತೆ ಇತರೆ ಇಲಾಖೆಗಳ ವಿರುದ್ಧ ದೂರು ಸಲ್ಲಿಸುವ ಬದಲು ಪಾಲಿಕೆಯ ಅಧಿಕಾರಿಗಳು ಜವಾಬ್ದಾರಿಯಿಂದ ಕೆಲಸ ಮಾಡಿ ಸಮಸ್ಯೆ ಬಗೆಹರಿಸಬೇಕು’ ಎಂದು ತಿಳಿಸಿದರು.

‘ಪಾದಚಾರಿ ಮಾರ್ಗಗಳಲ್ಲಿ ಮುರಿದಿರುವ ಚಪ್ಪಡಿ ಕಲ್ಲುಗಳು, ಕಿತ್ತು ಹೋಗಿರುವ ಕರ್ಬ್ ಸ್ಟೋನ್‌ಗಳನ್ನು ಕೂಡಲೇ ತೆರವುಗೊಳಿಸಿ, ದುರಸ್ತಿಪಡಿಸಿ ಪಾದಚಾರಿಗಳ ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸಬೇಕು. ಬಾಕಿ ಇರುವ ಸ್ಮಾರ್ಟ್ ಸಿಟಿ ರಸ್ತೆ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು’ ಎಂದು ನಿರ್ದೇಶನ ನೀಡಿದರು.



ಸಭೆಯಲ್ಲಿ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಮತ್ತು ಆಡಳಿತಾಧಿಕಾರಿ ರಾಕೇಶ್ ಸಿಂಗ್ ಭಾಗವಹಿಸಿದ್ದರು

ಮುಖ್ಯ ಆಯುಕ್ತ ಗೌರವ್ ಗುಪ್ತ ಮಾತನಾಡಿ, ‘ಬಿಬಿಎಂಪಿ ವ್ಯಾಪ್ತಿಯಲ್ಲಿ ರಸ್ತೆಗಳು, ಪಾದಚಾರಿ ಮಾರ್ಗಗಳು ಉತ್ತಮ ಗುಣಮಟ್ಟದಲ್ಲಿರಬೇಕು. ಜತೆಗೆ ಕಾಮಗಾರಿಗಳ ನಿರ್ವಹಣೆ ಸಹ ಸರಿಯಾಗಿ ಮಾಡಬೇಕು. ಆಯಾ ವಲಯದ ಹಿರಿಯ ಅಧಿಕಾರಿಗಳು ತಮ್ಮ ತಮ್ಮ ವ್ಯಾಪ್ತಿಯಲ್ಲಿ ರಸ್ತೆಗಳು ಹಾಗೂ ಪಾದಚಾರಿ ಮಾರ್ಗಗಳು ಉತ್ತಮ ಸ್ಥಿತಿಯಲ್ಲಿರುವಂತೆ ನೋಡಿಕೊಳ್ಳಬೇಕು’ ಎಂದು ಸೂಚನೆ ನೀಡಿದರು.

‘ಸಾರ್ವಜನಿಕರು ಪಾಲಿಕೆಗೆ ದೂರು ಸಲ್ಲಿಸುವುದಕ್ಕೆ ಮುಂಚಿತವಾಗಿಯೇ ಇರುವ ಸಮಸ್ಯೆಗಳನ್ನು ಬಗೆಹರಿಸಿದಾಗ ಪಾಲಿಕೆಯ ಮೇಲೆ ಉತ್ತಮ ಅಭಿಪ್ರಾಯ ಮೂಡಲು ಸಾಧ್ಯ. ಈ ಸಂಬಂಧ ಅಧಿಕಾರಿಗಳು ಕಾರ್ಯೋನ್ಮುಖರಾಗಿ ಕಾರ್ಯನಿರ್ವಹಿಸುವ ಮೂಲಕ ಕೆಳಮಟ್ಟದಲ್ಲಿಯೇ ತ್ವರಿತಗತಿಯಲ್ಲಿ ಇರುವ ಸಮಸ್ಯೆಗಳನ್ನು ಬಗೆಹರಿಸುವ ಕೆಲಸ ಮಾಡಿ’ ಎಂದು ತಿಳಿಸಿದರು.

‘ನಗರದಲ್ಲಿನ ರಸ್ತೆ ಗುಂಡಿಗಳನ್ನು ತಕ್ಷಣವೇ ಮುಚ್ಚಲು ಕ್ರಮಕೈಗೊಳ್ಳಬೇಕು. ಇರುವ ವ್ಯವಸ್ಥೆಯನ್ನು ಸರಿಪಡಿಸಿಕೊಂಡು ಕಾರ್ಯನಿರ್ವಹಿಸಬೇಕು. ಬೇರೆ ಇಲಾಖೆಗಳ ಮೇಲೆ ದೂಷಿಸದೆ ಜವಾಬ್ದಾರಿ ಅರಿತು ಕೆಲಸ ಮಾಡಿ’ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

‘ಮಳೆಗಾಲದ ವೇಳೆ ಅಧಿಕಾರಿಗಳು ಎಚ್ಚರವಹಿಸಬೇಕು. ಯಾವುದೇ ಸ್ಥಳದಲ್ಲಿ ಸಮಸ್ಯೆ ಇರುವುದು ಕಂಡುಬಂದಲ್ಲಿ ಕೂಡಲೇ ಕಾರ್ಯಪ್ರವೃತ್ತರಾಗಬೇಕು. ರಸ್ತೆ ಬದಿಯ ನೀರು ಸರಾಗವಾಗಿ ಹರಿದುಹೋಗುವಂತೆ ಸ್ವಚ್ಛವಾಗಿಟ್ಟುಕೊಳ್ಳಬೇಕು. ಬೀದಿ ದೀಪಗಳ ನಿರ್ವಹಣೆಯನ್ನು ಸರಿಯಾಗಿ ಕೈಗೊಳ್ಳಬೇಕು’ ಎಂದು ತಿಳಿಸಿದರು.

ಹೋರ್ಡಿಂಗ್ಸ್, ಎಫ್‌ಸಿ ಕೇಬಲ್ ತೆರವು

‘ನಗರದಲ್ಲಿ ಬಹುತೇಕ ಕಡೆ ಅಳವಡಿಸಿರುವ ಬ್ಯಾನರ್, ಫ್ಲೆಕ್ಸ್, ಹೋರ್ಡಿಂಗ್ಸ್‌ಗಳನ್ನು ಕೂಡಲೇ ತೆರವುಗೊಳಿಸಬೇಕು’ ಎಂದು ಮುಖ್ಯ ಆಯುಕ್ತ ಗೌರವ ಗುಪ್ತ ತಿಳಿಸಿದರು.

‘ಆಯಾ ವಲಯ ವ್ಯಾಪ್ತಿಯಲ್ಲಿ ಬ್ಯಾನರ್‌ಗಳನ್ನು ಅಳವಡಿಸದಂತೆ ನೋಡಿಕೊಳ್ಳಬೇಕು. ಈ ಬಗ್ಗೆ ಅಧಿಕಾರಿಗಳು ಮೇಲ್ವಿಚಾರಣೆ ಮಾಡಬೇಕು. ಇನ್ನು, ಅನಧಿಕೃತವಾಗಿ ಅಳವಡಿಸಿರುವ ಓಎಫ್‌ಸಿ ಕೇಬಲ್‌ಗಳ ತೆರವು ಕಾರ್ಯಾಚರಣೆ ಆಗಬೇಕು. ಈ ಸಂಬಂಧ ಎಲ್ಲಾ ಅಧಿಕಾರಿಗಳು ಅನಧಿಕೃತವಾಗಿ ಅಳವಡಿಸಿರುವ ಕೇಬಲ್ ಗಳನ್ನು ತೆರವುಗೊಳಿಸಬೇಕು’ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗುಂಡು ಹಾರಿಸಿಕೊಂಡು ವೃದ್ಧ ಆತ್ಮಹತ್ಯೆ

ಬೆಂಗಳೂರು: ಅಮೃತಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಬಿದ್ದಪ್ಪ ಎಂಬುವರು ಗುರುವಾರ ಮಧ್ಯಾಹ್ನ ಬಂದೂಕಿನಿಂದ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

‘ಮಡಿಕೇರಿಯ ಬಿದ್ದಪ್ಪ, ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಿ ಎರಡು ವರ್ಷಗಳ ಹಿಂದೆಯಷ್ಟೇ ನಿವೃತ್ತರಾಗಿದ್ದರು. ಪತ್ನಿ ಹಾಗೂ ಮಗನ ಜೊತೆ ಕಾಫಿ ಬೋರ್ಡ್ ಬಡಾವಣೆಯಲ್ಲಿ ವಾಸವಿದ್ದರು’ ಎಂದು ಪೊಲೀಸರು ಹೇಳಿದರು.

‘ಮದ್ಯವ್ಯಸನಿ ಆಗಿದ್ದ ಬಿದ್ದಪ್ಪ, ನಿತ್ಯವೂ ಬೆಳಿಗ್ಗೆಯಿಂದಲೇ ಕುಡಿಯಲಾರಂಭಿಸುತ್ತಿದ್ದರು. ಪತ್ನಿ ಹಾಗೂ ಮಗ ಗುರುವಾರ ಹೊರಗಡೆ ಹೋಗಿದ್ದರು. ಅದೇ ಸಂದರ್ಭದಲ್ಲೇ ಬಿದ್ದಪ್ಪ, ಮನೆಯಲ್ಲಿದ್ದ ಬಂದೂಕಿನಿಂದ ತಲೆಗೆ ಗುಂಡು ಹಾರಿಸಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ. ಇದಕ್ಕೆ ಕಾರಣವೇನು ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ’ ಎಂದೂ ತಿಳಿಸಿದರು.

‘ಗುಂಡಿನ ಶಬ್ದ ಕೇಳಿದ ಸ್ಥಳೀಯರು, ಸ್ಥಳಕ್ಕೆ ಹೋಗಿ ನೋಡಿದಾಗ ವಿಷಯ ಗೊತ್ತಾಗಿತ್ತು. ಠಾಣೆಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋಗಿ ಮೃತದೇಹವನ್ನು ಮರಣೋತ್ತರ ಪರೀಕ್ಷೆ ಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ’ ಎಂದೂ ಹೇಳಿದರು.

‘ಅವರ ಸಾವಿನ ಬಗ್ಗೆ ಯುಡಿಆರ್ (ಅಸಹಜ ಸಾವು) ದಾಖಲಿಸಿಕೊಳ್ಳಲಾಗಿದ್ದು, ತನಿಖೆ ಮುಂದುವರಿಸಲಾಗಿದೆ’ ಎಂದೂ ತಿಳಿಸಿದರು.

ಮೂವರಿಗೆ ಚಿದಾನಂದ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಚಿದಾನಂದ ಪ್ರಶಸ್ತಿ ಪ್ರದಾನ ಸಮಿತಿ ವತಿಯಿಂದ ನೀಡಲಾಗುವ ‘ಚಿದಾನಂದ ಪ್ರಶಸ್ತಿ’ಗೆ ಮೈಸೂರಿನ ಎಂ.ಎಸ್. ಕೃಷ್ಣಮೂರ್ತಿ (2020), ಟಿ.ಎನ್. ನಾಗರತ್ನ (2021) ಹಾಗೂ ಬಿ.ಎಸ್. ಪ್ರಣತಾರ್ತಿಹರನ್ (2022) ಅವರನ್ನು ಆಯ್ಕೆ ಮಾಡಲಾಗಿದೆ.


ಪ್ರಶಸ್ತಿ ತಲಾ ₹10 ಸಾವಿರ ನಗದು, ಸ್ಮರಣಿಕೆ ಒಳಗೊಂಡಿವೆ. ಕೋವಿಡ್ ಕಾರಣದಿಂದ ಎರಡು ವರ್ಷ ಪ್ರಶಸ್ತಿ ಪ್ರದಾನ ನಡೆದಿರಲಿಲ್ಲ. ಮೂರು ವರ್ಷದ ಪ್ರಶಸ್ತಿಗಳನ್ನು ಒಂದೇ ಕಾರ್ಯಕ್ರಮದಲ್ಲಿ ಪ್ರದಾನ ಮಾಡಲಾಗುವುದು.



ಟಿ.ಎನ್. ನಾಗರತ್ನ



ಬಿ.ಎಸ್. ಪ್ರಣತಾರ್ತಿಹರನ್



ಎಂ.ಎಸ್. ಕೃಷ್ಣಮೂರ್ತಿ

ಮೇ 15ರಂದು ಮೈಸೂರಿನ ಜೆಎಸ್ಎಸ್ ವೈದ್ಯಕೀಯ ಮಹಾವಿದ್ಯಾಲಯದ ಸಭಾಂಗಣದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ವಿದ್ವಾಂಸ ಟಿ.ವಿ. ವೆಂಕಟಾಚಲ ಶಾಸ್ತ್ರೀ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಕಾರಿಗೆ ಲಾರಿ ಡಿಕ್ಕಿ: ಮೂವರು ಸಾವು

ತುರುವೇಕೆರೆ (ತುಮಕೂರು): ತಾಲ್ಲೂಕಿನ ಮಾಯಸಂದ್ರ ಹೋಬಳಿಯ ಚಿಕ್ಕಶೆಟ್ಟಿಕೆರೆ ಬಳಿ ಗುರುವಾರ ಮುಂಜಾನೆ ಕಾರಿಗೆ ಲಾರಿ ಡಿಕ್ಕಿ ಹೊಡೆದ ಪರಿಣಾಮ ಕಾರಿನಲ್ಲಿದ್ದ ಮೂವರು ಮೃತಪಟ್ಟಿದ್ದಾರೆ.

ಅರಸೀಕೆರೆ ತಾಲ್ಲೂಕಿನ ಕಮಲಾಪುರದ ನಂಜುಂಡಯ್ಯ ಅವರ ಮಗ ಪ್ರಸನ್ನ (28), ಕಾರು ಚಾಲಕ, ಬೆಂಗಳೂರಿನ ಕೈಕೊಂಡ್ರಹಳ್ಳಿಯ ಚೆನ್ನಯ್ಯ (32) ಸ್ಥಳದಲ್ಲೇ ಸಾವನ್ನಪ್ಪಿದರು. ಕೈಕೊಂಡ್ರಹಳ್ಳಿಯ ಸಂತೋಷ್ (32) ಆಸ್ಪತ್ರೆಯಲ್ಲಿ ಮೃತಪಟ್ಟರು.

ಮಕರಂದ ಮನೋಜ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಿಕಾಸ ರಂಗದ ವತಿಯಿಂದ ನೀಡಲಾಗುವ ‘ಜರಗನಹಳ್ಳಿ ಶಿವಶಂಕರ್ ಹನಿಗವನ ಪ್ರಶಸ್ತಿ’ಗೆ ತುಮಕೂರಿನ ಮಕರಂದ ಮನೋಜ್ ಎಂ. ರಚಿಸಿರುವ ‘ಮನೋಜ್ಞ ಹೈಕುಗಳು-3’ ಪುಸ್ತಕ ಆಯ್ಕೆಯಾಗಿದೆ.

‘ಪ್ರಶಸ್ತಿ ₹5 ಸಾವಿರ ನಗದು, ಫಲಕ ಒಳಗೊಂಡಿವೆ. ಕಸಾಪ ಮಾಜಿ ಅಧ್ಯಕ್ಷ ಬಳಿಗಾರ್ ನೇತೃತ್ವದ ಸಮಿತಿ ಇವರನ್ನು ಪ್ರಶಸ್ತಿಗೆ ಆಯ್ಕೆ ಮಾಡಿದೆ. ಮೇ 5ರಂದು ಬಿಎಂಶ್ರೀ ಕಲಾಭವನದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ’ ಎಂದು ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ. ಚನ್ನೇಗೌಡ ಅವರು ಮಾಹಿತಿ ನೀಡಿದ್ದಾರೆ.



ಮಕರಂದ ಮನೋಜ್

ಜನಾರ್ದನ ರೆಡ್ಡಿ ಪಾಸ್‌ಪೋರ್ಟ್ ನವೀಕರಣಕ್ಕೆ ಒಪ್ಪಿಗೆ

ಬೆಂಗಳೂರು: ಕಬ್ಬಿಣದ ಅದಿರನ್ನು ಅಕ್ರಮವಾಗಿ ಮಾರಾಟ ಮಾಡಿದ ಮತ್ತು ರಾಜ್ಯದ ಬೊಕ್ಕಸಕ್ಕೆ ನಷ್ಟ ಎಸಗಿದ ಆರೋಪ ಎದುರಿಸುತ್ತಿರುವ ಮಾಜಿ ಸಚಿವ ಗಾಲಿ ಜನಾರ್ದನ ರೆಡ್ಡಿ ಪಾಸ್‌ಪೋರ್ಟ್ ನವೀಕರಣಕ್ಕೆ ಜನಪ್ರತಿನಿಧಿಗಳ ನ್ಯಾಯಾಲಯ ಅನುಮತಿ ನೀಡಿದೆ.

ಈ ಕುರಿತಂತೆ ಜನಾರ್ದನ ರೆಡ್ಡಿ ಸಲ್ಲಿಸಿದ್ದ ಮನವಿಯನ್ನು ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶೆ ಪ್ರೀತ್ ಜೆ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದ್ದಾರೆ.

‘ಆರೋಪಿಯು ಈ ಹಿಂದೆ ಈ ನ್ಯಾಯಾಲಯದ ಆದೇಶಗಳನ್ನು ಉಲ್ಲಂಘಿಸಿಲ್ಲ. ಹೈದರಾಬಾದ್‌ನಲ್ಲಿನ ಸಿಬಿಐ ಪ್ರಕರಣಗಳ ವಿಚಾರಣೆಗಾಗಿ ಸ್ಥಾಪಿಸಲಾಗಿರುವ ವಿಶೇಷ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರು ನವೀಕರಣಕ್ಕಾಗಿ ರೆಡ್ಡಿ ಅವರ ಪಾಸ್‌ಪೋರ್ಟ್ ಹಿಂದಿರುಗಿಸಿದ್ದಾರೆ. ಹೀಗಾಗಿ, ಆರೋಪಿಯ ಮನವಿಯನ್ನು ಸಮ್ಮತಿಸಲಾಗಿದೆ’ ಎಂದು ನ್ಯಾಯಾಧೀಶರು ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ.

ಕೆಲಸಗಾರರಿಂದ ಫ್ಲ್ಯಾಟ್‌ನಲ್ಲಿ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಳಿಮಾವು ಠಾಣೆ ವ್ಯಾಪ್ತಿಯಲ್ಲಿರುವ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಫ್ಲ್ಯಾಟ್‌ನಲ್ಲಿ ಕಳ್ಳತನ ಮಾಡಿದ್ದ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

‘ಬಿಹಾರದ ಬಬ್ಲೂಲ್ ಪಾಸ್ವಾನ್, ಬೋಲಾ ಹಾಗೂ ಶ್ರೀಧರ್ ಬಂಧಿತರು. ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲೇ ಕೆಲಸ ಮಾಡುತ್ತಿದ್ದ ಇವರು, ಕಳ್ಳತನ ಮಾಡಿ ಪರಾರಿಯಾಗಲು ಯತ್ನಿಸಿದ್ದರು. ಸದ್ಯ ಮೂವರನ್ನು ಬಂಧಿಸಲಾಗಿದ್ದು, ಅವರಿಂದ ₹ 1.50 ಕೋಟಿ ಮೌಲ್ಯದ ಚಿನ್ನಾಭರಣ, ವಜ್ರದ ಆಭರಣ, ವಿದೇಶಿ ಕರೆನ್ಸಿ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಹೈದರಾಬಾದ್‌ನ ದೂರುದಾರ, ಕೆಲ ದಿನಗಳ ಹಿಂದೆಯಷ್ಟೇ ಫ್ಲ್ಯಾಟ್ ಖರೀದಿಸಿದ್ದರು. ಅವರು ಕುಟುಂಬದೊಂದಿಗೆ ಫ್ಲ್ಯಾಟ್‌ನಲ್ಲಿ ವಾಸವಿದ್ದರು. ಸಹಾಯ ಮಾಡುವ ನೆಪದಲ್ಲಿ ಆರೋಪಿಗಳು ದೂರುದಾರರನ್ನು ಪರಿಚಯ ಮಾಡಿಕೊಂಡಿದ್ದರು.’

‘ದೂರುದಾರ ಕುಟುಂಬ ಸಮೇತರಾಗಿ ಇತ್ತೀಚೆಗೆ ಹೈದರಾಬಾದ್‌ಗೆ ಹೋಗಿದ್ದರು. ಏಪ್ರಿಲ್ 27ರಂದು ಫ್ಲ್ಯಾಟ್‌ಗೆ ನುಗ್ಗಿ ಆರೋಪಿಗಳು, ಕಳ್ಳತನ ಮಾಡಿದ್ದರು. ಈ ಸಂಬಂಧ ನಿವಾಸಿಠಾಣೆಗೆ ದೂರು ನೀಡಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಕಳ್ಳತನ ನಂತರ ಆರೋಪಿಗಳು, ಕೆ.ಆರ್. ಪುರ ರೈಲು ನಿಲ್ದಾಣಕ್ಕೆ ಹೋಗಿ ಅಲ್ಲಿಂದ ಬಂಗಾರಪೇಟೆಗೆ ಹೋಗಿದ್ದರು. ಬಿಹಾರದ ರೈಲು ಹತ್ತಿದರೆ ಪೊಲೀಸರು ಪತ್ತೆ ಮಾಡಬಹುದೆಂದು ಆರೋಪಿಗಳು ಅಂದುಕೊಂಡಿದ್ದರು. ಹೀಗಾಗಿ, ಕೋಲ್ಕತ್ತಾ ಮಾರ್ಗವಾಗಿ ತಮ್ಮೂರಿಗೆ ಹೋಗಲು ಮುಂದಾಗಿದ್ದರು. ರೈಲಿಗೆ ಕಾಯುತ್ತ ಕುಳಿತಿದ್ದಾಗ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದೂ ಹೇಳಿದರು.

32 ಬಾರಿ ಚಾಕುವಿನಿಂದ ಇರಿದು ಸುಲಿಗೆ

ಅಪರಾಧ ಸುದ್ದಿ

ಬೆಂಗಳೂರು: ಮಡಿವಾಳ ಠಾಣೆಯ ವ್ಯಾಪ್ತಿಯಲ್ಲಿ ಕ್ಯಾಬ್ ಚಾಲಕನಿಗೆ ಚಾಕುವಿನಿಂದ ಇರಿದು ಸುಲಿಗೆ ಮಾಡಿ ಪರಾರಿಯಾಗಿದ್ದ ಇಬ್ಬರು ಬಾಲಕರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಬೊಮ್ಮನಹಳ್ಳಿಯಿಂದ ಮಡಿವಾಳಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಯಲ್ಲಿ ಏಪ್ರಿಲ್ 17ರಂದು ಹೊರಟಿದ್ದ ಕ್ಯಾಬ್ ತಡೆದಿದ್ದ ಆರೋಪಿಗಳು, ಚಾಲಕನಿಗೆ 32 ಬಾರಿ ಚಾಕುವಿನಿಂದ ಇರಿದಿದ್ದರು. ನಂತರ, ₹ 12 ಸಾವಿರ ಸುಲಿಗೆ ಮಾಡಿ ಪರಾರಿಯಾಗಿದ್ದರು’ ಎಂದು ಪೊಲೀಸರು ಹೇಳಿದರು.

‘ಗಾಯಾಳು ಚಾಲಕನನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು. ಸದ್ಯ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಅವರ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು’ ಎಂದೂ ತಿಳಿಸಿದರು.

ಗುಜರಾತ್‌ನಲ್ಲಿ ಆರೋಪಿಗಳು: ‘ಪ್ರಯಾಣಿಕರ ಸೋಗಿನಲ್ಲಿ ಕೃತ್ಯ ಎಸಗಿದ್ದ ಆರೋಪಿಗಳು, ಹಿಂದಿ ಮಾತನಾಡುತ್ತಿದ್ದ ಬಗ್ಗೆ ಚಾಲಕ ಮಾಹಿತಿ ನೀಡಿದ್ದರು. ಹೊರರಾಜ್ಯದ ವ್ಯಕ್ತಿಗಳು ಕೃತ್ಯ ಎಸಗಿದ್ದ ಅನುಮಾನ ಬಂದಿತ್ತು. ಅದೇ ಆಯಾಮದಲ್ಲಿ ತನಿಖೆ ಮುಂದುವರಿಸಲಾಗಿತ್ತು’ ಎಂದು ಪೊಲೀಸರು ಹೇಳಿದರು. ‘ಕೃತ್ಯ ಎಸಗಿದ ನಂತರ ಆರೋಪಿಗಳು ಗುಜರಾತ್‌ಗೆ ಹೋಗಿರುವ ಮಾಹಿತಿ ಸಿಕ್ಕಿತ್ತು. ಸ್ಥಳಕ್ಕೆ ಹೋಗಿ ಆರೋಪಿಗಳನ್ನು ಬಂಧಿಸಿ ನಗರಕ್ಕೆ ಕರೆತಂದಿದೆ. ಇಬ್ಬರೂ ಆರೋಪಿಗಳು ಬಾಲಕರು. ಹೀಗಾಗಿ, ಅವರನ್ನು ಬಾಲ ನ್ಯಾಯ ಮಂಡಳಿ ಎದುರು ಹಾಜರುಪಡಿಸಲಾಗಿದೆ’ ಎಂದೂ ತಿಳಿಸಿದರು.

ಭೋವಿ ಅಭಿವೃದ್ಧಿ ನಿಗಮದ ಕಚೇರಿ ಮೇಲೆ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೂರಾರು ಕೋಟಿ ರೂಪಾಯಿ ಅವ್ಯವಹಾರ ನಡೆದಿರುವ ಆರೋಪದ ಹಿನ್ನೆಲೆಯಲ್ಲಿ ಭೋವಿ ಅಭಿವೃದ್ಧಿ ನಿಗಮದ ಕಚೇರಿ, ವ್ಯವಸ್ಥಾಪಕ ನಿರ್ದೇಶಕಿ ಲೀಲಾವತಿ, ಪ್ರಧಾನ ವ್ಯವಸ್ಥಾಪಕ ನಾಗರಾಜಪ್ಪ ಅವರ ಮನೆಗೆ ಎಸಿಬಿ ಅಧಿಕಾರಿಗಳು ಗುರುವಾರ ದಾಳಿ ನಡೆಸಿದ್ದಾರೆ.

ದಾಳಿ ವೇಳೆ ₹10 ಲಕ್ಷ ನಗದು ಹಾಗೂ ದಾಖಲೆಗಳು ಪತ್ತೆಯಾಗಿದ್ದು, ನಿಗಮದಲ್ಲಿ ಹಲವಾರು ಕೋಟಿ ದುರುಪಯೋಗ ಆಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ನಗರದ ಮಹಾಲಕ್ಷ್ಮೀ ಲೇಔಟ್‌ನಲ್ಲಿರುವ ಭೋವಿ ಅಭಿವೃದ್ಧಿ ನಿಗಮದ ಕಚೇರಿ, ಲೀಲಾವತಿ ಅವರ ಜಾಲಹಳ್ಳಿಯಲ್ಲಿರುವ ಮನೆ, ನಾಗರಾಜಪ್ಪ ಅವರ ವಿಜಯನಗರದ ಮನೆ, ಮಾಗಡಿ ರಸ್ತೆಯಲ್ಲಿರುವ ಇನ್ನೊಂದು ಮನೆಗೆ ಎಸಿಬಿ ಎಸ್‌ಪಿ ಯತೀಶ್ಚಂದ್ರ ಅವರ ನೇತೃತ್ವದಲ್ಲಿ ದಾಳಿ ನಡೆಸಲಾಗಿದೆ. ನಾಗರಾಜಪ್ಪ ಹಾಗೂ ಲೀಲಾವತಿ ಅವರ ವಿರುದ್ಧ ಆರೋಪ ಕೇಳಿಬಂದಿತ್ತು. ಹೀಗಾಗಿ, ಐದು ಸ್ಥಳಗಳಲ್ಲಿ ಅಧಿಕಾರಿಗಳು ಶೋಧ ಕಾರ್ಯಾಚರಣೆ ನಡೆಸಿದ್ದಾರೆ.

ಭೋವಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಎನ್ನಲಾದ ಅವ್ಯವಹಾರದ ಕುರಿತು ನಿಗಮದ ನಿರ್ದೇಶಕರು ಎಸಿಬಿಗೆ ದೂರು ನೀಡಿದ್ದು, ತನಿಖೆ ನಡೆಸುವಂತೆ ಮನವಿ ಮಾಡಿದ್ದರು. ಈ ಬಗ್ಗೆ ಬೆಂಗಳೂರು ನಗರ ಎಸಿಬಿ ಠಾಣೆಯಲ್ಲಿ ಎಫ್‌ಐಆರ್ ಸಹ ದಾಖಲಾಗಿತ್ತು.

ಬಿಸಿ ಗಾಳಿ: ತತ್ತರಿಸಲಿದೆ ಭಾರತ

5 ರಾಜ್ಯಗಳಲ್ಲಿ 'ಆರೆಂಜ್ ಅಲರ್ಟ್' • ರಾಜ್ಯದ 5 ಜಿಲ್ಲೆಗೂ ಬಿಸಿಗಾಳಿ ಪ್ರಭಾವ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಸಿಲ ಧಗೆಯಿಂದ ಬೇಯುತ್ತಿರುವ ದೇಶದಲ್ಲಿ ತೀವ್ರ ಸ್ವರೂಪದ ಬಿಸಿ ಗಾಳಿಗೆ (ಹೀಟ್ ವೇವ್) ಮುಂದಿನ ಐದು ದಿನಗಳ ಕಾಲ ದೇಶದ ಹಲವು ರಾಜ್ಯಗಳು ತತ್ತರಿಸಲಿವೆ. ಐದು ರಾಜ್ಯಗಳಲ್ಲಿ 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ. ಕರ್ನಾಟಕದ ಐದರಿಂದ ಆರು ಜಿಲ್ಲೆಗಳ ಮೇಲೂ ಇದರ ಪರಿಣಾಮ ಬೀರಲಿದೆ.

ನೆರೆಯ ಪಾಕಿಸ್ತಾನದ ಮೂಲಕ ಬಿಸಿ ಗಾಳಿ ಭಾರತವನ್ನು ಪ್ರವೇಶಿಸಿದ್ದು, ದಕ್ಷಿಣ ಭಾರತದ ತೆಲಂಗಾಣದವರೆಗೂ ಇದರ ಪ್ರಭಾವ ಇರಲಿದೆ. ಈ ಸಂಬಂಧ ಭಾರತೀಯ ಹವಾಮಾನ ಇಲಾಖೆ ಗುರುವಾರ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದೆ. ಅದರ ಪ್ರಕಾರ, ಈಗಾಗಲೇ ಬಿಸಿ ಗಾಳಿ ಆರಂಭವಾಗಿದ್ದು, ಮುಂದಿನ 5 ದಿನಗಳ ಕಾಲ ದೇಶದ ಹಲವು ರಾಜ್ಯಗಳಲ್ಲಿ ಇದರ ಪ್ರಭಾವ ಜೋರಾಗಲಿದೆ. ಬುಧವಾರ ಹಲವು ರಾಜ್ಯಗಳಲ್ಲಿ ತಾಪಮಾನ 43 ರಿಂದ 45 ಡಿಗ್ರಿ ಸೆಲ್ಸಿಯಸ್, ಇನ್ನೂ ಹಲವು ರಾಜ್ಯಗಳಲ್ಲಿ 40 ರಿಂದ 43 ಡಿಗ್ರಿ ಸೆಲ್ಸಿಯಸ್ ಇತ್ತು. ಮೇ 1ರ ವೇಳೆಗೆ ಕೆಲವು ಕಡೆಗಳಲ್ಲಿ 46 ರಿಂದ 47 ಡಿಗ್ರಿ ಸೆಲ್ಸಿಯಸ್‌ವರೆಗೂ ತಲುಪಬಹುದು.

ಇದೇ ಅವಧಿಯಲ್ಲಿ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ತಾಪಮಾನ 42 ಡಿಗ್ರಿ ಸೆಲ್ಸಿಯಸ್ ದಾಟಬಹುದು ಎಂದು ರಾಜ್ಯದ ಹವಾಮಾನ ತಜ್ಞರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಬಿಸಿ ಗಾಳಿಯು ವಾಯವ್ಯ ಮತ್ತು ಮಧ್ಯ ಭಾರತದಲ್ಲಿ 5 ದಿನಗಳು ಮತ್ತು ಪೂರ್ವ ಭಾರತದಲ್ಲಿ ಮುಂದಿನ 3 ದಿನ ಇರಲಿದೆ. ಆ ಬಳಿಕ ಕ್ರಮೇಣ ತಗ್ಗಲಿದೆ. ವಾಯವ್ಯ ಪಾಕಿಸ್ತಾನದ ಕೆಲವು ಭಾಗಗಳಲ್ಲಿ ಮೇ 2ರವರೆಗೆ ತೀವ್ರ ಸ್ವರೂಪದ ಬಿಸಿ ಗಾಳಿ ಬೀಸಲಿದೆ. ವಿದರ್ಭ, ಪೂರ್ವ ಉತ್ತರಪ್ರದೇಶ, ಮಧ್ಯಪ್ರದೇಶ, ಪಂಜಾಬ್, ಹರಿಯಾಣ, ಚಂಡೀಗಡ, ದೆಹಲಿ, ಪೂರ್ವ ರಾಜಸ್ತಾನ, ಪಶ್ಚಿಮ ಉತ್ತರಪ್ರದೇಶ, ಬಿಹಾರ, ಜಾರ್ಖಂಡ್, ಒಡಿಶಾ, ಒಳನಾಡು, ಛತ್ತೀಸಗಡ, ಪಶ್ಚಿಮ ಬಂಗಾಳದ ಗಂಗಾ ಬಯಲು ಪ್ರದೇಶ, ತೆಲಂಗಾಣ, ಗುಜರಾತ್ ರಾಜ್ಯಗಳು ಬಿಸಿ ಹವೆಯ ಅಲೆಗೆ ಬಳಲಲಿವೆ.



ಕರ್ನಾಟಕದಲ್ಲಿ ಬಿರುಗಾಳಿ ಜತೆ ಮಳೆ

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ, ದಕ್ಷಿಣ ಭಾರತದ ಉಷ್ಣವಲಯ ಪ್ರದೇಶದಲ್ಲಿ ಬಲವಾದ ಗಾಳಿ ಬೀಸುವುದರಿಂದ ಕರ್ನಾಟಕ, ಕೇರಳ, ತಮಿಳುನಾಡು ಮತ್ತು ಆಂಧ್ರಪ್ರದೇಶದಲ್ಲಿ ಮುಂದಿನ ಐದು ದಿನಗಳ ಕಾಲ ಅಲ್ಲಲ್ಲಿ ಮಿಂಚು, ಗುಡುಗಿನಿಂದ ಕೂಡಿದ ಮಳೆ ಆಗಲಿದೆ. ಆದ್ದರಿಂದ ಬಿರುಗಾಳಿ ಮತ್ತು ಮಳೆಯಿಂದ ಆಗಬಹುದಾದ ಅನಾಹುತವನ್ನು ಎದುರಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಜಿಲ್ಲಾಡಳಿತಕ್ಕೆ ಸೂಚಿಸಿದೆ.

ಜಾರ್ಖಂಡ್‌ನಲ್ಲಿ 45.8 ಡಿಗ್ರಿ ಸೆಲ್ಸಿಯಸ್!

ಗುರುವಾರ(ಏ.28) ಭಾರತ, ಪಾಕಿಸ್ತಾನ, ಮಧ್ಯ ಏಷ್ಯಾದಲ್ಲಿ ಬಿಸಿಗಾಳಿ ಮೂರನೇ ದಿನಕ್ಕೆ ಕಾಲಿಟ್ಟಿದೆ. ಪಾಕಿಸ್ತಾನದ ದಾದೂವಿನಲ್ಲಿ 47.5 ಡಿಗ್ರಿ ಸೆಲ್ಸಿಯಸ್, ಭಾರತದ ಜಾರ್ಖಂಡ್‌ನ ಡಲ್ತಾನ್‌ಗಂಜ್‌ನಲ್ಲಿ 45.8 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿದೆ. ಮುಂದಿನ ಮೂರು ದಿನ ಅತ್ಯಧಿಕ ತಾಪಮಾನ ಇರಲಿದೆ ಎಂದು 'ಎಕ್ಸ್‌ಟ್ರೀಮ್ ಟೆಂಪರೇಚರ್ ಅರೌಂಡ್ ವರ್ಲ್ಡ್' ಟ್ವೀಟ್ ಮಾಡಿದೆ.

ಪಿಎಸ್‌ಐ ಅಕ್ರಮ: ಕಾರ್ಬನ್ ಪ್ರತಿ ತಿದ್ದುಪಡಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 545 ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿಯ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಹೆಸರಿರುವ ಕೆಲ ಅಭ್ಯರ್ಥಿಗಳು, ಓಎಂಆರ್ (ಆಪ್ಟಿಕಲ್ ಮಾರ್ಕ್ ರೆಕಗ್ನಿಷನ್) ಕಾರ್ಬನ್ ಪ್ರತಿಯನ್ನೂ ತಿದ್ದಿ ಸಿಐಡಿ ಅಧಿಕಾರಿಗಳ ದಿಕ್ಕು ತಪ್ಪಿಸಲು ಯತ್ನಿಸಿರುವುದಾಗಿ ಗೊತ್ತಾಗಿದೆ.

ದಾಖಲೆಗಳ ಪರಿಶೀಲನೆಗೆ ಹಾಜರಾಗಿದ್ದ ಕೆಲ ಅಭ್ಯರ್ಥಿಗಳ ಕಾರ್ಬನ್ ಪ್ರತಿ ಬಗ್ಗೆ ಸಂಶಯ ವ್ಯಕ್ತಪಡಿಸಿರುವ ಸಿಐಡಿ ಅಧಿಕಾರಿಗಳು, ನೈಜತೆ ಪರೀಕ್ಷೆಗಾಗಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದಾರೆ.

ಓಎಂಆರ್ ಅಸಲಿ ಪ್ರತಿ ತಿದ್ದಿ ಹಾಗೂ 'ಬ್ಲೂ ಟೂತ್' ಎಲೆಕ್ಟ್ರಾನಿಕ್ ಉಪಕರಣ ಬಳಸಿ ಅಕ್ರಮ ಎಸಗಿದ್ದ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಪೊಲೀಸರು, ಗುರುವಾರ 350 ಅಭ್ಯರ್ಥಿಗಳ ವಿಚಾರಣೆ ಪೂರ್ಣಗೊಳಿಸಿದ್ದಾರೆ. ಉಳಿದ ಕೆಲವು ಅಭ್ಯರ್ಥಿಗಳಿಗೆ ನೋಟಿಸ್ ನೀಡಿದ್ದು, ಶುಕ್ರವಾರವೂ ವಿಚಾರಣೆ ಮುಂದುವರಿಯಲಿದೆ.

'ಅಭ್ಯರ್ಥಿಗಳ ಪರೀಕ್ಷಾ ಪ್ರವೇಶ ಪತ್ರ ಹಾಗೂ ಓಎಂಆರ್ ಕಾರ್ಬನ್ ಪ್ರತಿಗಳನ್ನು ಸಿಐಡಿ ವಿಶೇಷ ತಂಡಗಳು ಸಂಗ್ರಹಿಸಿವೆ. ಕೆಲ ಪ್ರಶ್ನೆಗಳಿಗೆ ಅಭ್ಯರ್ಥಿಗಳ ಹೇಳಿಕೆ ಸಹ ಪಡೆದಿವೆ. ಕಾರ್ಬನ್ ಪ್ರತಿಗಳ ಬಗ್ಗೆ ಮತ್ತಷ್ಟು ತಾಂತ್ರಿಕ ಮಾಹಿತಿ ಅಗತ್ಯವಿದೆ. ಹೀಗಾಗಿ, ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಪರೀಕ್ಷೆ ವರದಿ ಬಂದ ನಂತರ ಮುಂದಿನ ಕ್ರಮ' ಎಂದು ಸಿಐಡಿ ಮೂಲಗಳು ಹೇಳಿವೆ.

ಭಯದಿಂದ ತಿದ್ದುಪಡಿ: 'ಬಂಧನ ಭೀತಿಯಿಂದ ಕೆಲವರು, ತಮ್ಮ ಬಳಿ ಇರುವ ಕಾರ್ಬನ್ ಪ್ರತಿಯನ್ನು ಅಸಲಿ ಪ್ರತಿ ರೀತಿಯಲ್ಲೇ ತಿದ್ದುಪಡಿ ಮಾಡಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಅಂಥ ಕಾರ್ಬನ್ ಪ್ರತಿಗಳನ್ನೇ ಕೆಲವರು ವಿಚಾರಣೆ ವೇಳೆ ಹಾಜರುಪಡಿಸಿದ್ದಾರೆ. ಪರಿಶೀಲನೆ ವೇಳೆ ಉತ್ತರ ಗುರುತುಗಳಲ್ಲಿ ವ್ಯತ್ಯಾಸ ಕಾಣಿಸುತ್ತಿದೆ. ಇದು ಸಾಕ್ಷ್ಯ ನಾಶದ ಕೃತ್ಯವಾಗಿದ್ದು' ಎಂದು ಮೂಲಗಳು ಹೇಳಿವೆ.

ಸಿಐಡಿ ಡಿಜಿಪಿ ಸಭೆ

ಗುರುವಾರ ಸಭೆ ನಡೆಸಿದ ಸಿಐಡಿ ಡಿಜಿಪಿ ಪಿ.ಎಸ್. ಸಂಧು ತನಿಖೆ ಪ್ರಗತಿ ಬಗ್ಗೆ ಮಾಹಿತಿ ಪಡೆದುಕೊಂಡರು.

'ಲಿಖಿತ ಪರೀಕ್ಷೆ ಜೊತೆಯಲ್ಲೇ ದೈಹಿಕ ಪರೀಕ್ಷೆಯಲ್ಲೂ ಅಕ್ರಮ ಆಗಿರುವ ಮಾಹಿತಿ ಇದೆ. ಅದನ್ನು ಖಚಿತಪಡಿಸಿಕೊಳ್ಳಲು ತನಿಖೆ ಮುಂದುವರಿಸಿ. ಬಂಧಿತರ ವಿರುದ್ಧ ನ್ಯಾಯಾಲಯಕ್ಕೆ ಪ್ರಾಥಮಿಕ ದೋಷಾರೋಪ ಪಟ್ಟಿ ಸಲ್ಲಿಸಲು ತಯಾರಿ ಸಹ ಮಾಡಿಕೊಳ್ಳಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

'ಎಚ್‌ಆರ್‌ಎಂಎಸ್' ವೇತನ ಪದ್ಧತಿ ರದ್ದತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಚ್‌ಆರ್‌ಎಂಎಸ್' ವೇತನ ನೀಡುವ ಪದ್ಧತಿ ರದ್ದುಪಡಿಸುವಂತೆ ಆಗ್ರಹಿಸಿ ಬೆಂಗಳೂರು ವಿಶ್ವವಿದ್ಯಾಲಯ ಶಿಕ್ಷಕೇತರ ನೌಕರರ ಸಂಘದ ಪದಾಧಿಕಾರಿಗಳು ಮತ್ತು ಸಿಬ್ಬಂದಿ ಗುರುವಾರ ಪ್ರತಿಭಟನೆ ನಡೆಸಿದರು.

ಸರ್ಕಾರಿ ಇಲಾಖೆಗಳಲ್ಲಿ ಎಚ್‌ಆರ್‌ಎಂಎಸ್ ಸಾಫ್ಟ್‌ವೇರ್ ಮೂಲಕ ಸಿಬ್ಬಂದಿಗೆ ವೇತನ ಬಿಡುಗಡೆಗೊಳಿಸಲಾಗುತ್ತಿದೆ. ಇದರಿಂದ, ಬೆಂಗಳೂರು ವಿಶ್ವವಿದ್ಯಾಲಯ ಹಾಗೂ ಇತರ ರಾಜ್ಯದ ವಿಶ್ವವಿದ್ಯಾಲಯಗಳ ಸಿಬ್ಬಂದಿಗೆ ವೇತನ ದೊರೆಯುವುದು ವಿಳಂಬವಾಗುತ್ತಿದೆ. ಆಯಾ ತಿಂಗಳ ಎರಡನೇ ಅಥವಾ ಮೂರನೇ ವಾರದಲ್ಲಿ ವೇತನ ದೊರೆಯುತ್ತಿದೆ ಎಂದು ದೂರಿದರು.

ಬೆಂಗಳೂರು ವಿಶ್ವವಿದ್ಯಾಲಯ ಸಿಬ್ಬಂದಿಗಳಿಗೆ ಮಾರ್ಚ್ ತಿಂಗಳ ವೇತನವನ್ನು ಏಪ್ರಿಲ್ 27ರವರೆಗೂ ನೀಡಿಲ್ಲ. ವಿಶ್ವವಿದ್ಯಾಲಯದ ಇತಿಹಾಸದಲ್ಲೇ ಇದೇ ಮೊದಲ ಬಾರಿ ಇಂತಹ ಪ್ರಕರಣ ನಡೆದಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಮೊದಲು ತಿಂಗಳ ಅಂತ್ಯಕ್ಕೆ ವೇತನ ದೊರೆಯುತ್ತಿತ್ತು. ಆದರೆ, ಎಚ್‌ಆರ್‌ಎಂಎಸ್ ವ್ಯವಸ್ಥೆ ಜಾರಿಯಾದ ದಿನದಿಂದಲೂ ವೇತನ ವಿಳಂಬವಾಗುತ್ತಿದೆ. ಸಿಬ್ಬಂದಿಗಳು ಸಕಾಲದಲ್ಲಿ ಸಾಲ ತೀರಿಸಲು ಸಾಧ್ಯವಾಗುತ್ತಿಲ್ಲ. ಇದರಿಂದ, ಬಡ್ಡಿ ಮತ್ತು ಚಕ್ರಬಡ್ಡಿ ಪಾವತಿಸುವಂತಾಗಿದೆ. ಜತೆಗೆ, ಇದೇ ಮೊದಲ ಬಾರಿಗೆ 'ಇಸಿಎಸ್' ಮೂಲಕ ಸಾಲ ಪಾವತಿಯಾಗಿಲ್ಲ ಮತ್ತು ಚೆಕ್‌ಬೌನ್ಸ್ ಆದ ಪ್ರಕರಣಗಳಿವೆ. ಸರ್ಕಾರದ ಈ ನೀತಿಯಿಂದಾಗಿ ನೌಕರರ ದೈನಂದಿನ ಜೀವನ ಕಷ್ಟಕರವಾಗುತ್ತಿದೆ ಎಂದು ತಿಳಿಸಿದ್ದಾರೆ.

ಆದ್ದರಿಂದ, ಎಚ್‌ಆರ್‌ಎಂಎಸ್ ಸಾಫ್ಟ್‌ವೇರ್‌ನಿಂದ ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಿಗೆ ಮುಕ್ತಿ ನೀಡಬೇಕು ಮತ್ತು ಹಳೆಯ ಪದ್ಧತಿಯಂತೆಯೇ ವೇತನಗಳನ್ನು ಬಿಡುಗಡೆಗೊಳಿಸಬೇಕು ಹಾಗೂ ಸರ್ಕಾರ ವಿಶ್ವವಿದ್ಯಾಲಯಗಳಿಗೆ ಶೈಕ್ಷಣಿಕ ಮತ್ತು ಹಣಕಾಸು ಸ್ವಾಯತ್ತತೆ ನೀಡಬೇಕು ಎಂದು ಆಗ್ರಹಿಸಿದರು.

ಸಂಘದ ಅಧ್ಯಕ್ಷ ಪಿ. ಶಿವಪ್ಪ ಮತ್ತು ಪ್ರಧಾನ ಕಾರ್ಯದರ್ಶಿ ಎಚ್. ಕೃಷ್ಣಪ್ಪ, ಉಪಾಧ್ಯಕ್ಷ ಎಂ.ಎನ್. ಶಿವಣ್ಣ, ಸಹ ಕಾರ್ಯದರ್ಶಿ ವೈ.ಎಂ. ಕೋಟಿಲಿಂಗ, ಖಜಾಂಚಿ ಎಂ. ಆನಂದ, ಆಂತರಿಕ ಲೆಕ್ಕ ಪರಿಶೋಧಕ ಟಿ. ಮುನಿಯಪ್ಪ ಇದ್ದರು.

ಏಕರೂಪ ನಾಗರಿಕ ಸಂಹಿತೆ ಬಿಜೆಪಿಯ ಮುಂದಿನ ಅಸ್ತ್ರ?

ಒಂದನೇ ಪುಟದಿಂದ

ಬಿಜೆಪಿಯ ಮೂರನೇ ಮುಖ್ಯ ಭರವಸೆಯಾದ ಯುಸಿಸಿ, 2024ರ ಲೋಕಸಭೆ ಚುನಾವಣೆಯ ಸಂದರ್ಭದಲ್ಲಿ ಇದುವೇ ಬಿಜೆಪಿಯ ಮುಖ್ಯ ಅಸ್ತ್ರ ಆಗಬಹುದು ಎನ್ನಲಾಗುತ್ತಿದೆ.

ಹಿಮಾಚಲ ಪ್ರದೇಶ ಮುಖ್ಯಮಂತ್ರಿ ಜೈರಾಮ್ ಠಾಕೂರ್ ಅವರು ಕೆಲ ಸಮಯದಲ್ಲಿ ಚುನಾವಣೆ ಎದುರಿಸಬೇಕಿದೆ. ಯುಸಿಸಿ ಉತ್ತಮವಾದ ಪರಿಕಲ್ಪನೆ ಎಂದು ಅವರು ಹೇಳಿದ್ದಾರೆ. ಉತ್ತರ ಪ್ರದೇಶದಲ್ಲಿ ಯುಸಿಸಿ ಜಾರಿ ಮಾಡುವುದನ್ನು ಗಂಭೀರವಾಗಿ ಪರಿಗಣಿಸಲಾಗುತ್ತಿದೆ ಎಂದು ಅಲ್ಲಿನ ಉಪ ಮುಖ್ಯಮಂತ್ರಿ ಕೇಶವ ಪ್ರಸಾದ್ ಮೌರ್ಯ ಹೇಳಿದ್ದಾರೆ. ಉತ್ತರಾಖಂಡದಲ್ಲಿ ಯುಸಿಸಿ ಜಾರಿಯಾದರೆ, ಇತರ ರಾಜ್ಯಗಳು ಕೂಡ ಅದನ್ನು ಅನುಸರಿಸಲಿವೆ ಎಂದು ಅಲ್ಲಿನ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಹೇಳಿದ್ದಾರೆ.

ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯು ಯುಸಿಸಿಯನ್ನು ವಿರೋಧಿಸುತ್ತಿದೆ. ಆದರೆ, ಅಲ್ಪಸಂಖ್ಯಾತರ ಹಕ್ಕುಗಳಲ್ಲಿ ಖಾತ್ರಿಯನ್ನು ಹೊಂದಿರುವ ಉತ್ತರ ಪ್ರದೇಶ ಏಕೈಕ ಮುಸ್ಲಿಂ ಸಚಿವ ದ್ಯಾನಿಶ್ ಆಜಾದ್ ಅನ್ಸಾರಿ ಅವರು ಯುಸಿಸಿಯ ಅನುಕೂಲಗಳ ಬಗ್ಗೆ ಮುಸ್ಲಿಮರಿಗೆ ಮನವರಿಕೆ ಮಾಡಿ ಕೊಡಲು ಸಭೆಗಳನ್ನು ನಡೆಸುವೆವು ಎಂದಿದ್ದಾರೆ.

ರಾಮ ಮಂದಿರವು ಭಾವನಾತ್ಮಕ ವಿಷಯವಾಗಿಯೇ ಸದಾ ಇರುತ್ತದೆ. ಆದರೆ, ಮಂದಿರದ ಹೆಸರಿನಲ್ಲಿ ಮತ ಪಡೆಯಲು ಈಗ ಸಾಧ್ಯವಿಲ್ಲ. ಜಮ್ಮು–ಕಾಶ್ಮೀರದ ವಿಶೇಷಾಧಿಕಾರ ರದ್ದತಿಯು ಜನರ ಮನಸ್ಸಿನಿಂದ ಮರೆಯಾಗಿದೆ. ಹಾಗಾಗಿ, ಯುಸಿಸಿಯನ್ನು ಪ್ರತಿಪಾದನೆ ಎಂದು ಬಿಂಬಿಸಿಕೊಂಡು, ಅದನ್ನೇ ಧ್ರುವೀಕರಣದ ಅಸ್ತ್ರವನ್ನಾಗಿ ಮಾಡಿಕೊಳ್ಳುವ ಅವಕಾಶ ಬಿಜೆಪಿಗೆ ಇದೆ ಎಂದು ವಿಶ್ಲೇಷಿಸಲಾಗುತ್ತಿದೆ.

'ಸಿಎಎ, ರಾಮ ಮಂದಿರ, ವಿಶೇಷಾಧಿಕಾರ ರದ್ದತಿ, ತ್ರಿವಳಿ ತಲಾಖ್ ಸಮಸ್ಯೆಗಳನ್ನು ಪರಿಹರಿಸಲಾಗಿದೆ. ಈಗ ನಮ್ಮ ಮುಂದೆ ಇರುವುದು ಯುಸಿಸಿ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಇತ್ತೀಚೆಗೆ ಹೇಳಿದ್ದರು.

ಸಾರಿಗೆ ನೌಕರರಿಂದ ಮತ್ತೆ ಪ್ರತಿಭಟನೆ: ಎಚ್ಚರಿಕೆ

ಬೆಂಗಳೂರು: 'ಸಾರಿಗೆ ನೌಕರರ ಎಲ್ಲ ಬೇಡಿಕೆಗಳನ್ನು ಸರ್ಕಾರ ನಾಲ್ಕು ವಾರಗಳಲ್ಲಿ ಈಡೇರಿಸದಿದ್ದರೆ, ಮತ್ತೆ ಸಾರಿಗೆ ನೌಕರರಿಂದ ಪ್ರತಿಭಟನೆ ನಡೆಯಲಿದೆ' ಎಂದು ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಎಚ್ಚರಿಸಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಾರಿಗೆ ನೌಕರರ ಮುಖಂಡರು ತೆರೆಮರೆಯಲ್ಲಿ ಸರ್ಕಾರದ ಪ್ರತಿನಿಧಿಗಳೊಂದಿಗೆ ರಾಜಿ ನಡೆಸಲು ಪ್ರಾರಂಭಿಸಿದರು. ಆದರೂ ಮುಷ್ಕರ ವೇಳೆ ಸರ್ಕಾರ ನೀಡಿದ್ದ ಭರವಸೆಗಳು ಒಂದು ವರ್ಷ ಕಳೆದರೂ ಈಡೇರಿಲ್ಲ' ಎಂದರು.

'ಹಲವು ಸಾರಿಗೆ ನೌಕರರ ಸೇರಿ ನಡೆದ 12ನ್ನ ಮೇಲೂ ಪ್ರಕರಣಗಳನ್ನು ದಾಖಲಿಸಲಾಗಿದೆ. ಎಲ್ಲ ಪ್ರಕರಣಗಳನ್ನು ಕೈ ಬಿಡಬೇಕು. ವಜಾ ಮಾಡಿರುವ ಸಿಬ್ಬಂದಿಯನ್ನು ಮತ್ತೆ ನೇಮಕ ಮಾಡಬೇಕು. ಇಲ್ಲದಿದ್ದರೆ ಹೋರಾಟಕ್ಕೆ ಸಜ್ಜಾಗುತ್ತೇವೆ' ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

ಅಫ್ಗಾನಿಸ್ತಾನ: ಸ್ಫೋಟ

9 ಮಂದಿ ಸಾವು

ಕಾಬೂಲ್ (ಎಪಿ): ಉತ್ತರ ಅಫ್ಗಾನಿಸ್ತಾನದ ಬಲ್ಖ್ ಪ್ರಾಂತ್ಯದ ರಾಜಧಾನಿ ಮಜರ್–ಎ–ಶರೀಫ್ ನಗರದಲ್ಲಿ ಎರಡು ಮಿನಿ ಬಸ್‌ಗಳನ್ನು ಗುರಿಯಾಗಿಸಿ ಗುರುವಾರ ಸಂಭವಿಸಿದ ಬಾಂಬ್ ಸ್ಫೋಟಗಳಲ್ಲಿ ಕನಿಷ್ಠ 9 ಮಂದಿ ಮೃತಪಟ್ಟು, 13 ಜನರು ಗಾಯಗೊಂಡಿದ್ದಾರೆ.

ಸ್ಫೋಟದ ಹೊಣೆಯನ್ನು ಯಾವ ಸಂಘಟನೆಯೂ ಹೊತ್ತುಕೊಂಡಿಲ್ಲ.

ಹಿಮಚಿರತೆಗಳ ಸಂರಕ್ಷಣೆ: ಡಾ.ಮಿಶ್ರಾಗೆ 'ವಿಟ್ಲೆ ಗೋಲ್ಡ್ ಅವಾರ್ಡ್'

ಲಂಡನ್ (ಪಿಟಿಐ): ಅಳಿವಿನಂಚಿನಲ್ಲಿರುವ ಹಿಮಚಿರತೆಗಳ ಸಂರಕ್ಷಣೆ ಕ್ಷೇತ್ರದಲ್ಲಿನ ಗಣನೀಯ ಸೇವೆಗಾಗಿ, ಭಾರತದ ಡಾ.ಚಾರುದತ್ತ ಮಿಶ್ರಾ ಅವರು ಬ್ರಿಟನ್‌ನ ಪ್ರತಿಷ್ಠಿತ 'ವಿಟ್ಲೆ ಫಂಡ್ ಫಾರ್ ನೇಚರ್' (ಡಬ್ಲ್ಯು–



ಎಫ್‌ಎನ್) ಸಂಸ್ಥೆ ಕೊಡಮಾಡುವ 'ವಿಟ್ಲೆ ಗೋಲ್ಡ್ ಅವಾರ್ಡ್'ಗೆ ಆಯ್ಕೆಯಾಗಿದ್ದಾರೆ.


ಬುಧವಾರ ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಾ.ಮಿಶ್ರಾ ಅವರಿಗೆ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಪ್ರಶಸ್ತಿಯ ಮೊತ್ತ ₹ 95 ಲಕ್ಷ.

ಡಾ.ಮಿಶ್ರಾ ಅವರು 'ಸ್ನೋ ಲೆಪರ್ಡ್ ಟ್ರಸ್ಟ್'ನ (ಎಸ್‌ಎಲ್‌ಟಿ) ಪ್ರಥಮ ಅಂತರರಾಷ್ಟ್ರೀಯ ಕಾರ್ಯನಿರ್ವಾಹಕ ನಿರ್ದೇಶಕರಾಗಿದ್ದಾರೆ. ಹಿಮಚಿರತೆಗಳ ಸಂರಕ್ಷಣೆಗಾಗಿ ಸಮುದಾಯದ ಸಹಯೋಗ ಹಾಗೂ ವೈಜ್ಞಾನಿಕ ತತ್ವದಡಿ ಟ್ರಸ್ಟ್ ಕಾರ್ಯ ನಿರ್ವಹಿಸುತ್ತಿದೆ.

ಎಸ್‌ಸಿಬಿಎ ಕಾರ್ಯಕಾರಿ ಸಮಿತಿಗೆ ಆಯ್ಕೆ

ನವದೆಹಲಿ (ಪಿಟಿಐ): ಸುಪ್ರೀಂಕೋರ್ಟ್ ವಕೀಲರ ಸಂಘದ (ಎಸ್‌ಸಿಬಿಎ) ಕಾರ್ಯಕಾರಿ ಸಮಿತಿಯ ನೂತನ ಅಧ್ಯಕ್ಷರಾಗಿ ಹಿರಿಯ ವಕೀಲ ವಿಕಾಸ್ ಸಿಂಗ್ ಆಯ್ಕೆಯಾಗಿದ್ದಾರೆ.

ಚಿತ್ರಾವಳಿ



ಭಾರತೀಯ ವಿದ್ಯಾಭವನ ನಗರದಲ್ಲಿ ಗುರುವಾರ ಆಯೋಜಿಸಿದ್ದ 'ವಿಶ್ವ ನೃತ್ಯ ದಿನಾಚರಣೆ' ಕಾರ್ಯಕ್ರಮದಲ್ಲಿ ವೀಣಾ ನಾಯರ್ ಮತ್ತು ಧನ್ಯ ನಾಯರ್ ಸಹೋದರಿಯರು ಮೋಹಿನಿಯಾಟ್ಟಂ ನೃತ್ಯ, ಮಾಳವಿಕಾ ಹೆಬ್ಬಾರ್ ಅವರು ಭರತನಾಟ್ಯ, ಮಧುಲಿತಾ ಮೋಹಾಪಾತ್ರ ಒಡಿಸ್ಸಿ, ತುಷಾರ್ ಭಟ್ ಮತ್ತು ಪೂಜಾ ಭಟ್ ಅವರು ಕಥಕ್ ನೃತ್ಯ ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ



ರಂಜಾನ್ ಪ್ರಯುಕ್ತ ಪುಲಿಕೇಶಿ ನಗರದ ಮುಸ್ಲಿಂ ಸಮುದಾಯದವರಿಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ದಿನಸಿ ಕಿಟ್‌ಗಳನ್ನು ವಿತರಿಸಿದರು. ಶಾಸಕ ಅಖಂಡ ಶ್ರೀನಿವಾಸಮೂರ್ತಿ ಹಾಗೂ ಮುಖಂಡರು ಇದ್ದರು.

ತನಿಖೆ ಸಂದರ್ಭದಲ್ಲಿ ಸಿಐಡಿ ಅಧಿಕಾರಿಗಳಿಗೆ ಮಾಹಿತಿ ನೀಡಿದ ಅಭ್ಯರ್ಥಿಗಳು

ಮೂವರಿಂದ ₹ 90 ಲಕ್ಷ ಪಡೆದ ಆರೋಪಿಗಳು!

• ಮನೋಜಕುಮಾರ್ ಗುದ್ದಿ

ಕಲಬುರಗಿ: ಪಿಎಸ್ಐ ನೇಮಕಾತಿ ಪರೀಕ್ಷೆಯಲ್ಲಿ ಪಾಸ್ ಮಾಡಿಸಲು ಪ್ರಮುಖ ಆರೋಪಿಗಳಾದ ಆರ್.ಡಿ. ಪಾಟೀಲ, ಮಹಾಂತೇಶ ಪಾಟೀಲ, ದಿವ್ಯಾ ಹಾಗರಗಿ ಹಾಗೂ ಮಂಜುನಾಥ ಮೇಳಕುಂದಿಗೆ ತಾವು ಒಟ್ಟಾರೆ ₹ 90 ಲಕ್ಷ ಕೊಟ್ಟಿದ್ದಾಗಿ ಬಂಧಿತ ಮೂವರು ಅಭ್ಯರ್ಥಿಗಳು ಸಿಐಡಿ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ.

ಈಗಾಗಲೇ ಸಿಐಡಿ ಕಸ್ಟಡಿಯಲ್ಲಿರುವ ಅಭ್ಯರ್ಥಿಗಳಾದ ವಿಶಾಲ್ ಶಿರೂರ ₹ 40 ಲಕ್ಷ ಹಾಗೂ ಎನ್.ವಿ. ಸುನೀಲಕುಮಾರ ₹ 40 ಲಕ್ಷ ಹಾಗೂ ಹಯ್ಯಾಳಿ ದೇಸಾಯಿ ₹ 10 ಲಕ್ಷ ಹಣವನ್ನು ಇವರಿಗೆ ನೀಡಿದ್ದಾಗಿ ತಿಳಿಸಿದ್ದಾರೆ. ಇದಕ್ಕೆ ಪ್ರತಿಯಾಗಿ ಆರ್.ಡಿ. ಪಾಟೀಲ, ಮಹಾಂತೇಶ ಪಾಟೀಲ ಹಾಗೂ ಮಂಜುನಾಥ ಮೇಳಕುಂದಿ ತಮಗೆ ಶಾಲೆಯ ಮೇಲ್ವಿಚಾರಕಿಯರ ನೆರವು ಪಡೆದು ಬ್ಲೂಟೂತ್ ಮೂಲಕ ಉತ್ತರ ಬರೆಸಿದ್ದಲ್ಲದೇ, ಓಎಂಆರ್ ಶೀಟ್‌ನಲ್ಲಿ ಸರಿಯಾದ ಉತ್ತರಗಳನ್ನು ಬರೆಯಲು ಸಹಾಯ ಮಾಡಿದ್ದರು ಎಂಬ ಸಂಗತಿಯನ್ನು ಈ ಅಭ್ಯರ್ಥಿಗಳು ವಿಚಾರಣೆ ವೇಳೆ ತಿಳಿಸಿದ್ದಾಗಿ ಸಿಐಡಿ ಮೂಲಗಳು ಹೇಳಿವೆ.

ಹೀಗಾಗಿ, ಆರೋಪಿಗಳು ಇನ್ನಷ್ಟು ಅಭ್ಯರ್ಥಿಗಳಿಂದ ಹಣ ಪಡೆದಿರುವ ಶಂಕೆ ಇರುವುದರಿಂದ ಅಧಿಕಾರಿಗಳು ಶಂಕಿತ ಅಭ್ಯರ್ಥಿಗಳ ಪತ್ತೆಗೆ ಮುಂದಾಗಿದ್ದಾರೆ.

ನಾಲ್ವರಿಗೆ ಹಣ: 'ಅಭ್ಯರ್ಥಿಗಳು ನೀಡಿದ ಹಣವನ್ನು ಅಣ್ಣ ಮಹಾಂತೇಶ ಪಾಟೀಲ, ದಿವ್ಯಾ ಹಾಗರಗಿ, ಮಂಜುನಾಥ ಮೇಳಕುಂದಿ ಹಾಗೂ ತಾನು ಪಡೆದಿರುವುದಾಗಿ ಪ್ರಕರಣದ ಪ್ರಮುಖ ಆರೋಪಿ ಆರ್.ಡಿ. ಪಾಟೀಲ ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾರೆ. ಹೀಗಾಗಿ, ಕಳೆದ ವರ್ಷದ ಅಕ್ಟೋಬರ್ 3ರಂದು ನಡೆದ ಪಿಎಸ್ಐ ಪರೀಕ್ಷೆ ಸಂದರ್ಭದಲ್ಲಿ ಆರೋಪಿ ಸುನೀಲಕುಮಾರ ಬಳಸಿದ ಬ್ಲೂಟೂತ್ ಸಾಧನ, ಮೊಬೈಲ್ ಫೋನ್ ಹಾಗೂ ಸಿಮ್ ಕಾರ್ಡ್‌ಗಳನ್ನು ಪತ್ತೆ ಹಚ್ಚುವ ಯತ್ನದಲ್ಲಿದ್ದೇವೆ' ಎನ್ನುವುದು ಈ ಮೂಲಗಳ ಮಾಹಿತಿ.

ಆಸ್ಪತ್ರೆಗೆ ದಾಖಲಾದ ಆರೋಪಿ: ಪ್ರಕರಣದ ಪ್ರಮುಖ ಆರೋಪಿ ಆರ್.ಡಿ. ಪಾಟೀಲ ಗುರುವಾರ ವಾಂತಿ ಮಾಡಿಕೊಂಡು ನಿತ್ರಾಣ ಸ್ಥಿತಿಗೆ ತಲುಪಿದ್ದರಿಂದ ಅವರನ್ನು ಸಿಐಡಿ ಪೊಲೀಸರು ಜಿಲ್ಲಾ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದರು. ಭೇಟಿ ಮಾಡಲು ಆಸ್ಪತ್ರೆಗೆ ತೆರಳಿದ ಅವರ ತಾಯಿ ಹಾಗೂ ಪತ್ನಿಗೆ ಒಳಹೋಗಲು ಪೊಲೀಸರು ಅವಕಾಶ ನೀಡಲಿಲ್ಲ.

'₹210 ಕೋಟಿ ವಹಿವಾಟಿನ ಶಂಕೆ'

ಚಿಂಚೋಳಿ: 'ಪಿಎಸ್ಐ ನೇಮಕಾತಿಯಲ್ಲಿ ನಡೆದಿರುವ ಭ್ರಷ್ಟಾಚಾರದಲ್ಲಿ ₹210 ಕೋಟಿಗೂ ಅಧಿಕ ಹಣ ವರ್ಗಾವಣೆಯಾದ ಶಂಕೆಯಿದೆ' ಎಂದು ಕೆಪಿಸಿಸಿ ವಕ್ತಾರ ಪ್ರಿಯಾಂಕ್ ಖರ್ಗೆ ಆರೋಪಿಸಿದರು.

'ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿರುವ ಒಬ್ಬೊಬ್ಬ ಅಭ್ಯರ್ಥಿ ₹70 ಲಕ್ಷ ನೀಡಿದ ಅನುಮಾನವಿದೆ. ಸಿಐಡಿ ಅಧಿಕಾರಿಗಳು ಕೇವಲ ಕಲಬುರಗಿಗೆ ಸೀಮಿತರಾಗಿದ್ದಾರೆ. ಪ್ರಕರಣದ ಕುರಿತು ಸರ್ಕಾರಕ್ಕೆ ಗಂಭೀರತೆ ಇಲ್ಲದಿರುವುದು ಹಾಸ್ಯಾಸ್ಪದ' ಎಂದು ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

ಪ್ರಿಯಾಂಕ್‌ಗೆ ಮತ್ತೊಂದು ನೋಟಿಸ್

ಪಿಎಸ್ಐ ಅಕ್ರಮ ನೇಮಕಾತಿ ಹಗರಣ ಸಂಬಂಧ ಇತ್ತೀಚೆಗೆ ಆಡಿಯೊ ಬಿಡುಗಡೆ ಮಾಡಿದ್ದಕ್ಕೆ ನೀಡಿದ ನೋಟಿಸ್‌ಗೆ ಶಾಸಕ ಪ್ರಿಯಾಂಕ್ ಖರ್ಗೆ ಉತ್ತರ ನೀಡಿದ್ದು, ಸಿಐಡಿ ಅಧಿಕಾರಿಗಳು ಅವರಿಗೆ ಮತ್ತೊಂದು ನೋಟಿಸ್ ನೀಡಿದ್ದಾರೆ.

ಗುರುವಾರ ಬೆಳಿಗ್ಗೆ ಬೆಂಗಳೂರು ವಿಮಾನ ನಿಲ್ದಾಣದಲ್ಲಿರುವಾಗಲೇ ಅಲ್ಲಿಗೆ ತೆರಳಿದ ಸಿಐಡಿ ಅಧಿಕಾರಿಗಳು ಪ್ರಿಯಾಂಕ್ ಅವರ ಸಿಬ್ಬಂದಿಗೆ ಎರಡನೇ ನೋಟಿಸ್ ತಲುಪಿಸಿದರು.

'ಸಿಐಡಿ ಅಧಿಕಾರಿಗಳು ಕಲಂ 91 ಹಾಗೂ 160ರ ಅಡಿಯಲ್ಲಿ ನೀಡಿರುವ ನೋಟಿಸ್, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಪ್ರಯತ್ನವಾಗಿದೆ ಎಂದು ಉತ್ತರ ನೀಡಿದ್ದೇನೆ' ಎಂದು ಪ್ರಿಯಾಂಕ್ ಹೇಳಿದ್ದಾರೆ.

ನಗರಸಭೆ ಮಹಿಳಾ ಸಿಬ್ಬಂದಿ ವಶಕ್ಕೆ

ಪಿಎಸ್ಐ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮಕ್ಕೆ ಸಂಬಂಧಿಸಿದಂತೆ ಶಹಾಬಾದ್ ನಗರಸಭೆಯ ದ್ವಿತೀಯ ದರ್ಜೆ ಸಹಾಯಕಿ ಜ್ಯೋತಿ ಪಾಟೀಲ ಎಂಬುವವರನ್ನು ಸಿಐಡಿ ಅಧಿಕಾರಿಗಳು ಗುರುವಾರ ವಶಕ್ಕೆ ಪಡೆದಿದ್ದಾರೆ.

ಕಲಬುರಗಿಯ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿನ ಕೇಂದ್ರದಲ್ಲಿ ಪರೀಕ್ಷೆ ಬರೆದ ಸೇಡಂನ ಶಾಂತಿಬಾಯಿ ಬಸ್ಯನಾಯ್ಕ ಎಂಬುವವರಿಗೆ ಬ್ಲೂಟೂತ್ ಮೂಲಕ ಉತ್ತರ ಹೇಳುವಲ್ಲಿ ಸಹಕರಿಸಿದ ಆರೋಪ ಇವರ ಮೇಲಿದೆ.

ಬೆಂಗಳೂರಿನ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಲ್ಲಿ ಕೆಲ ಕಾಲ ಕೆಲಸ ಮಾಡಿ ಇತ್ತೀಚೆಗೆ ಶಹಾಬಾದ್ ನಗರಸಭೆಗೆ ವರ್ಗಾವಣೆ ಮಾಡಿಸಿಕೊಂಡು ಬಂದಿದ್ದರು ಎಂದು ಮೂಲಗಳು ತಿಳಿಸಿವೆ.

ಬೇರೆ ಜಿಲ್ಲೆಗೂ ವ್ಯಾಪಿಸಿದ ಅಕ್ರಮ?

ಇಲ್ಲಿಯವರೆಗಿನ ತನಿಖೆಯು ಕಲಬುರಗಿಯ ಬಿಜೆಪಿ ನಾಯಕಿ ದಿವ್ಯಾ ಹಾಗರಗಿ ಅವರಿಗೆ ಸೇರಿದ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯನ್ನು ಕೇಂದ್ರವಾಗಿಸಿಕೊಂಡು ನಡೆಯುತ್ತಿದೆ. ಇದರ ಜೊತೆಗೆ, ಬೆಂಗಳೂರು ಹಾಗೂ ವಿಜಯಪುರದ ಪರೀಕ್ಷಾ ಕೇಂದ್ರಗಳಲ್ಲಿಯೂ ತಮ್ಮ ಪರಿಚಯದ ಅಭ್ಯರ್ಥಿಗಳು ಇಂಥದೇ ಅಕ್ರಮ ನಡೆಸಿರುವ ಬಗ್ಗೆ ಬಂಧಿತ ಅಭ್ಯರ್ಥಿಗಳು ಬಾಯಿಬಿಟ್ಟಿದ್ದಾರೆ ಎಂದು ಮೂಲಗಳು ತಿಳಿಸಿವೆ.



ಚಕ್ಕಡಿ ಓಟದ ಸ್ಪರ್ಧೆ

ಕಲಬುರಗಿ ಜಿಲ್ಲೆಯ ಅಫಜಲಪುರದಲ್ಲಿ ಗುರುವಾರ ಸರ್ವಧರ್ಮ ಗೆಳೆಯರ ಬಳಗದಿಂದ ಆಯೋಜಿಸಿದ್ದ ಚಕ್ಕಡಿ ಓಡಿಸುವ ಸ್ಪರ್ಧೆಯ ದೃಶ್ಯ –ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆ: ಮೈಸೂರಿನ ಮನೆಯಲ್ಲಿ ಪ್ರಶ್ನೆಪತ್ರಿಕೆ ಪತ್ತೆ

ಕ.ವಿ.ವಿ ಕುಲಸಚಿವ ಬಂಧನ: ಹತ್ತು ದಿನ ಕಸ್ಟಡಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆಯ ಪ್ರಶ್ನೆಗಳ ಸೋರಿಕೆ ಪ್ರಕರಣ ಸಂಬಂಧ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಪ್ರೊ. ಎಚ್. ನಾಗರಾಜ್ ಅವರನ್ನು ಮಲ್ಲೇಶ್ವರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಮಾರ್ಚ್ 14ರಂದು ನಡೆದಿದ್ದ ಭೂಗೋಳಶಾಸ್ತ್ರ ವಿಷಯದ ಪ್ರಶ್ನೆಪತ್ರಿಕೆಯ 18 ಪ್ರಶ್ನೆಗಳು, ಪರೀಕ್ಷೆಗೂ ಮುನ್ನ ಸೋರಿಕೆಯಾಗಿವೆ' ಎಂಬುದಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಾರ್ಯನಿರ್ವಾಹಕ ನಿರ್ದೇಶಕರು ದೂರು ನೀಡಿದ್ದರು. ಎಫ್‌ಐಆರ್ ದಾಖಲಿಸಿಕೊಂಡಿದ್ದ ಪೊಲೀಸರು, ಪ್ರಶ್ನೆಗಳನ್ನು ಸೋರಿಕೆ ಮಾಡಿದ್ದ ಆರೋಪದಡಿ ಅತಿಥಿ ಉಪನ್ಯಾಸಕಿ ಆರ್. ಸೌಮ್ಯಾ ಅವರನ್ನು ಇತ್ತೀಚೆಗಷ್ಟೇ ಬಂಧಿಸಿದ್ದರು.

ಮೈಸೂರಿನ ಕಾಲೇಜೊಂದರಲ್ಲಿ ಅತಿಥಿ ಉಪನ್ಯಾಸಕಿಯಾದ ಸೌಮ್ಯಾ, ಮಾನಸಗಂಗೋತ್ರಿಯಲ್ಲಿ ವಿಶ್ವವಿದ್ಯಾಲಯದ ಭೂಗೋಳಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಪ್ರೊ. ಎಚ್. ನಾಗರಾಜ್ ಮಾರ್ಗದರ್ಶನದಲ್ಲಿ ಪಿಎಚ್.ಡಿ ಮಾಡುತ್ತಿದ್ದರು. ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆ ನಡೆಸಲು ಅಗತ್ಯವಾದ ಭೂಗೋಳಶಾಸ್ತ್ರ ವಿಷಯದ ಪ್ರಶ್ನೆಗಳನ್ನು ಸಿದ್ಧಪಡಿಸಲು ನಾಗರಾಜ್ ಅವರಿಗೆ ಕೆಇಎ ಕೋರಿತ್ತು. ಅದರಂತೆ ನಾಗರಾಜ್ ಅವರು ಪ್ರಶ್ನೆಗಳನ್ನು ಸಿದ್ಧಪಡಿಸಿ ನೀಡಿದ್ದರು. ಅದೇ ಪ್ರಶ್ನೆಗಳೇ ಸೋರಿಕೆಯಾದ ಮಾಹಿತಿ ತನಿಖೆಯಿಂದ ಪತ್ತೆಯಾಗಿತ್ತು.

ರಜೆ ಹಾಕಿ ವಿಚಾರಣೆಗೆ ಹಾಜರಿ: 'ನಾಗರಾಜ್ ಅವರನ್ನು ಕೆಲ ತಿಂಗಳ ಹಿಂದೆಯಷ್ಟೇ ಕರ್ನಾಟಕ ವಿಶ್ವವಿದ್ಯಾಲಯದ ಕುಲಸಚಿವರಾಗಿ (ಮೌಲ್ಯಮಾಪನ) ನೇಮಕ ಮಾಡಲಾಗಿತ್ತು. ಸೌಮ್ಯಾ ಅವರ ಬಂಧನವಾಗುತ್ತಿದ್ದಂತೆ ನಾಗರಾಜ್ ಅವರಿಗೆ ನೋಟಿಸ್ ನೀಡಲಾಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.



ಎಚ್. ನಾಗರಾಜ್

'ಕೆಲಸಕ್ಕೆ ರಜೆ ಹಾಕಿದ್ದ ನಾಗರಾಜ್, ಬೆಂಗಳೂರಿಗೆ ಬಂದು ತನಿಖಾಧಿಕಾರಿ ಎದುರು ವಿಚಾರಣೆಗೆ ಹಾಜರಾಗಿದ್ದರು. ಸೌಮ್ಯಾ ಅವರ ಮೊಬೈಲ್‌ನಲ್ಲಿ ಸಿಕ್ಕ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ವಿಚಾರಣೆ ನಡೆಸಿದಾಗ, ನಾಗರಾಜ್ ತಪ್ಪೊಪ್ಪಿಕೊಂಡರು. ಹೀಗಾಗಿ, ಅವರನ್ನು ಬಂಧಿಸಲಾಗಿದೆ. ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ 10 ದಿನ ಕಸ್ಟಡಿಗೆ ಪಡೆಯಲಾಗಿದೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಮನೆಯಲ್ಲಿ ಪ್ರಶ್ನೆಪತ್ರಿಕೆ ಪತ್ತೆ: ನಾಗರಾಜ್ ಅವರ ಧಾರವಾಡ ಹಾಗೂ ಮೈಸೂರಿನ ಮನೆ ಮೇಲೆ ಮಲ್ಲೇಶ್ವರ ಪೊಲೀಸರು ದಾಳಿ ಮಾಡಿದ್ದು, ಹಲವು ದಾಖಲೆಗಳನ್ನು ಜಪ್ತಿ ಮಾಡಿದ್ದಾರೆ.

'ನಾಗರಾಜ್ ಅವರು ಪರೀಕ್ಷೆಗೆಂದು ಸಿದ್ಧಪಡಿಸಿದ್ದ ಪ್ರಶ್ನೆಗಳು ಹಾಗೂ ಕೆಲ ಮಾದರಿ ಪ್ರಶ್ನೆಪತ್ರಿಕೆಗಳು ಸಿಕ್ಕಿವೆ. ಸೌಮ್ಯಾ ಬಳಿ ಸಿಕ್ಕಿರುವ ಪ್ರಶ್ನೆಗಳಿಗೂ ನಾಗರಾಜ್ ಮನೆಯಲ್ಲಿ ಲಭ್ಯವಾದ ಪ್ರಶ್ನೆಗಳಿಗೂ ಹೋಲಿಕೆಯಾಗಿವೆ. ಇದನ್ನೇ ಪುರಾವೆಯನ್ನಾಗಿ ಮಾಡಿಕೊಂಡು ನಾಗರಾಜ್ ಅವರನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪ್ರಕರಣದಲ್ಲಿ ಮತ್ತಷ್ಟು ಮಂದಿ ಭಾಗಿಯಾಗಿರುವ ಅನುಮಾನವಿದೆ. ಕೆಲವರಿಗೆ ವಿಚಾರಣೆಗೆ ಬರುವಂತೆ ಸೂಚಿಸಲಾಗಿದೆ. ಕೆಲವರ ಮೊಬೈಲ್‌ಗಳು ಸ್ವಿಚ್ ಆಫ್ ಆಗಿದ್ದು, ಎಲ್ಲ ಆಯಾಮದಲ್ಲಿ ತನಿಖೆ ಮುಂದುವರಿಸಲಾಗಿದೆ' ಎಂದೂ ತಿಳಿಸಿವೆ.

ಪ್ರಶ್ನೆ ಸಿದ್ಧಪಡಿಸಲು ಸೌಮ್ಯಾ ಸಹಾಯ: 'ಕುಲಸಚಿವರಾದ ಮೇಲೆ ನಾಗರಾಜ್ ಅವರಿಗೆ ಕೆಲಸದ ಒತ್ತಡ ಹೆಚ್ಚಾಗಿತ್ತು. ಕೆಇಎ ಅಧಿಕಾರಿಗಳು ಪ್ರಶ್ನೆಗಳನ್ನು ಸಿದ್ಧಪಡಿಸಲು ಕೋರಿದಾಗ ನಾಗರಾಜ್, ಸೌಮ್ಯಾ ಅವರ ಸಹಾಯ ಪಡೆದಿದ್ದರು. ಅದನ್ನೇ ದುರುಪಯೋಗಪಡಿಸಿಕೊಂಡ ಸೌಮ್ಯಾ, ಪ್ರಶ್ನೆಗಳನ್ನು ಸೋರಿಕೆ ಮಾಡಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಹೋದರಿ ಪುತ್ರಿ, ಸ್ನೇಹಿತೆ ವಿಚಾರಣೆ: ಪ್ರಕರಣದಲ್ಲಿ ನಾಗರಾಜ್ ಅವರ ಸಹೋದರಿ ಪುತ್ರಿ ಹಾಗೂ ಆಕೆಯ ಸ್ನೇಹಿತೆ ಭಾಗಿಯಾಗಿರುವ ಅನುಮಾನ ಪೊಲೀಸರಿಗೆ ಇದೆ. ಹೀಗಾಗಿ, ಅವರಿಬ್ಬರನ್ನು ಪೊಲೀಸರು ವಿಚಾರಣೆ ನಡೆಸಿದ್ದಾರೆ.

'ನಾಗರಾಜ್ ಬಳಿ ಇದ್ದ ಪ್ರಶ್ನೆಗಳನ್ನು ಅವರ ಸಹೋದರಿ ಪುತ್ರಿ ಹಾಗೂ ಇತರೆ ಸ್ನೇಹಿತರಿಗೆ ಕಳುಹಿಸಿರುವ ಮಾಹಿತಿ ಗೊತ್ತಾಗಿದೆ. ಹೀಗಾಗಿ, ಎಲ್ಲರನ್ನೂ ವಿಚಾರಣೆ ನಡೆಸಲಾಗುತ್ತಿದೆ. ಪುರಾವೆ ಸಿಕ್ಕ ಬಳಿಕವೇ ನಿಖರ ಮಾಹಿತಿ ತಿಳಿಯಲಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹಣದ ವಹಿವಾಟಿನ ಬಗ್ಗೆ ತನಿಖೆ'

'ಪ್ರಕರಣದಲ್ಲಿ ಎರಡನೇ ಆರೋಪಿ ನಾಗರಾಜ್ ಬಂಧನವಾಗಿದ್ದು, ಅವರನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಹಣಕ್ಕಾಗಿ ಪ್ರಶ್ನೆಗಳನ್ನು ಸೋರಿಕೆ ಮಾಡಿರುವ ಬಗ್ಗೆ ಸದ್ಯಕ್ಕೆ ಯಾವುದೇ ಮಾಹಿತಿ ಲಭ್ಯವಾಗಿಲ್ಲ' ಎಂದು ಉತ್ತರ ವಿಭಾಗದ ಡಿಸಿಪಿ ವಿನಾಯಕ ಪಾಟೀಲ 'ಪ್ರಜಾವಾಣಿ'ಗೆ ತಿಳಿಸಿದರು.

'ಸೋರಿಕೆ ಬಗ್ಗೆ ಗೊತ್ತಿರಲಿಲ್ಲ'

'ಸೌಮ್ಯಾ ಸಹಾಯ ಪಡೆದು ಪ್ರಶ್ನೆಗಳನ್ನು ಸಿದ್ಧಪಡಿಸಿ ಕಳುಹಿಸಿದ್ದೆ. ಆದರೆ, ಆಕೆ ಪ್ರಶ್ನೆಗಳನ್ನು ಸೋರಿಕೆ ಮಾಡಿದ್ದ ಸಂಗತಿ ನನಗೆ ಗೊತ್ತಿರಲಿಲ್ಲ' ಎಂಬುದಾಗಿ ನಾಗರಾಜ್ ಪೊಲೀಸರಿಗೆ ಹೇಳಿರುವುದಾಗಿ ತಿಳಿದುಬಂದಿದೆ.

'ಪರೀಕ್ಷೆ ಅಕ್ರಮ ನಡೆದಿದ್ದರೆ ನಿಷ್ಪಕ್ಷಪಾತ ತನಿಖೆ'

ರಾಮನಗರ: ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ನಡೆದಿದ್ದರೆ ನಿಷ್ಪಕ್ಷಪಾತವಾಗಿ ತನಿಖೆ ನಡೆಸುತ್ತೇವೆ ಎಂದು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಭರವಸೆ ನೀಡಿದರು.

ನಗರದಲ್ಲಿ ಗುರುವಾರ ಪತ್ರಕರ್ತರಿಗೆ ಪ್ರತಿಕ್ರಿಯೆ ನೀಡಿದ ಅವರು, 'ಭೂಗೋಳ ವಿಜ್ಞಾನ ವಿಷಯದಲ್ಲಿ ಕೆಲವು ಪ್ರಶ್ನೆಗಳು ಸೋರಿಕೆಯಾಗಿವೆ. ಪ್ರಶ್ನೆಪತ್ರಿಕೆ ಸಿದ್ಧಪಡಿಸಿದವರೇ ಭಾಗಿದ್ದಾರೆ ಎಂಬ ಮಾಹಿತಿ ಇದೆ. ಎಲ್ಲವನ್ನೂ ಪಾರದರ್ಶಕವಾಗಿ ತನಿಖೆ ಮಾಡಲಾಗುವುದು' ಎಂದರು.

ನೇಮಕಾತಿ ಅಕ್ರಮಗಳನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಬೇಕು ಎಂದು ಸಂಸದ ಡಿ.ಕೆ. ಸುರೇಶ್ ಒತ್ತಾಯದ ಕುರಿತು ಪ್ರತಿಕ್ರಿಯಿಸಿ 'ಪಾರದರ್ಶಕತೆ, ಆಡಳಿತ ಎಂಬ ಒಳ್ಳೆಯ ಮಾತುಗಳು ಅವರ ಬಾಯಲ್ಲಿ ಬಂದದ್ದು ಕೇಳಿ ಖುಷಿಯಾಗುತ್ತಿದೆ' ಎಂದು ವ್ಯಂಗ್ಯವಾಡಿದರು. 'ಅವರ ಕಣ ಕಣದಲ್ಲೂ ಭ್ರಷ್ಟಾಚಾರ ತುಂಬಿದೆ. ಸ್ವಜನ ಪಕ್ಷಪಾತ, ಅಧಿಕಾರ ದುರ್ಬಳಕೆ ಇಂತಹವುಗಳನ್ನೇ ಜೀವನದುದ್ದಕ್ಕೂ ಮಾಡುತ್ತ ಬಂದಿದ್ದಾರೆ' ಎಂದು ಟೀಕಿಸಿದರು.

ಸೌಮ್ಯಾ ಪೋಸ್ಟ್ ಡಾಕ್ಟೊರಲ್ ಫೆಲೊಶಿಪ್ ಅಮಾನತು

ಮೈಸೂರು: ಸಹಾಯಕ ಪ್ರಾಧ್ಯಾಪಕರ ಹುದ್ದೆ ನೇಮಕಾತಿ ಪರೀಕ್ಷೆ ಅಕ್ರಮ ಆರೋಪದಲ್ಲಿ ಬಂಧಿತರಾಗಿರುವ ಆರ್. ಸೌಮ್ಯಾ ಅವರ ಪೋಸ್ಟ್ ಡಾಕ್ಟೊರಲ್ ಫೆಲೊಶಿಪ್ ಅನ್ನು ಮೈಸೂರು ವಿಶ್ವವಿದ್ಯಾಲಯ ಅಮಾನತುಗೊಳಿಸಿದೆ.

'ಸರ್ಕಾರ ಅಥವಾ ಪೊಲೀಸರಿಂದ ನಮಗೆ ಯಾವುದೇ ಮಾಹಿತಿ, ಸೂಚನೆ ಬಂದಿಲ್ಲ. ಆದರೆ, ಭೂಗೋಳ ವಿಜ್ಞಾನ ವಿಭಾಗದಲ್ಲಿ ಸಂಶೋಧನೆಯಲ್ಲಿ ತೊಡಗಿದ್ದ ಸೌಮ್ಯಾ ವಿರುದ್ಧ ಶಿಸ್ತಿನ ಕ್ರಮವಾಗಿ ಅಮಾನತು ಮಾಡಲಾಗಿದೆ' ಎಂದು ವಿಶ್ವವಿದ್ಯಾಲಯ ಕುಲಪತಿ ಪ್ರೊ. ಜಿ.ಹೇಮಂತಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಪ್ರಕರಣ ದಾಖಲಾಗಿರುವುದರಿಂದ ಅಮಾನತು ಮಾಡಲಾಗಿದೆ ಎಂಬ ವಿಚಾರವನ್ನು ಪತ್ರದ ಮೂಲಕ ನವದೆಹಲಿಯ ಭಾರತೀಯ ಸಮಾಜ ವಿಜ್ಞಾನ ಸಂಶೋಧನಾ ಮಂಡಳಿಗೂ (ಐಸಿಎಸ್‌ಎಸ್‌ಆರ್) ತಿಳಿಸಲಿದ್ದೇವೆ' ಎಂದರು. 'ಸೌಮ್ಯಾ ಅವರ ನಿವಾಸ ಹಾಗೂ ಫೆಲೋಶಿಪ್ ಮಾಡುತ್ತಿದ್ದ ಭೂಗೋಳ ವಿಜ್ಞಾನ ವಿಭಾಗಕ್ಕೆ ಅಮಾನತು ಪತ್ರ ಕಳುಹಿಸಿದ್ದೇವೆ' ಎಂದು ಕುಲಸಚಿವ ಪ್ರೊ.ಆರ್.ಶಿವಪ್ಪ ಹೇಳಿದರು.

ಕೆ–ಸೆಟ್ ಕೇಂದ್ರದಲ್ಲಿ ಪ್ರಶ್ನೆ ಪತ್ರಿಕೆ ತಯಾರು

ಮೈಸೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ಮಾರ್ಚ್‌ನಲ್ಲಿ ನಡೆಸಿದ ಸಹಾಯಕ ಪ್ರಾಧ್ಯಾಪಕರ ಪರೀಕ್ಷೆಯ ಕೆಲ ಪ್ರಶ್ನೆ ಪತ್ರಿಕೆಗಳನ್ನು ಮೈಸೂರು ವಿಶ್ವವಿದ್ಯಾಲಯದ ಮೌಲ್ಯ ಭವನದಲ್ಲಿರುವ ಕೆ–ಸೆಟ್ ಕೇಂದ್ರದಲ್ಲೂ ರೂಪಿಸಿರುವುದು ಗೊತ್ತಾಗಿದೆ.

ಅಕ್ಟೋಬರ್–ನವೆಂಬರ್ ತಿಂಗಳಿನಲ್ಲಿ 26 ಐಚ್ಛಿಕ ವಿಷಯಗಳ ತಲಾ ಮೂರು ಸೆಟ್ ಪ್ರಶ್ನೆ ಪತ್ರಿಕೆಗಳನ್ನು ವಿಷಯ ಪರಿಣತರು ಹತ್ತು ದಿನಗಳ ಅವಧಿಯಲ್ಲಿ ರೂಪಿಸಿದ್ದರು. ಆದರೆ, ಈ ಕೇಂದ್ರದ ಹಲವು ಕೊಠಡಿಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಇಲ್ಲ. ಪರಿಣಿತರ ಚಟುವಟಿಕೆಗಳ ಮೇಲೆ ಸರಿಯಾಗಿ ನಿಗಾ ಕೂಡ ಇಟ್ಟಿರಲಿಲ್ಲ ಎನ್ನಲಾಗಿದೆ.

'ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಅಧಿಕಾರಿಗಳು ಒಮ್ಮೆ ಬಂದು ಕೇಂದ್ರ ಪರಿಶೀಲಿಸಿ ಹೋಗಿದ್ದರು. ಬಳಿಕ ಪ್ರಾಧಿಕಾರದ ಉಸ್ತುವಾರಿಯಲ್ಲಿ ಪ್ರಶ್ನೆ ಪತ್ರಿಕೆ ರೂಪಿಸಿದ್ದರು. ಆದರೆ, ಯಾವ ಪರೀಕ್ಷೆಗೆ ಪ್ರಶ್ನೆ ಪತ್ರಿಕೆ ತಯಾರಿಸಲಾಗುತ್ತಿದೆ ಎಂಬುದರ ಬಗ್ಗೆ ನಮಗೆ ಯಾವುದೇ ಮಾಹಿತಿ ನೀಡಿರಲಿಲ್ಲ' ಎಂದು ಕೆ–ಸೆಟ್ ಸಂಯೋಜಕ ಪ್ರೊ. ಎಚ್.ರಾಜಶೇಖರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಪ್ರಶ್ನೆ ಪತ್ರಿಕೆ ತಯಾರಿಸಲೆಂದು ಕೆ–ಸೆಟ್ ಕೇಂದ್ರದಲ್ಲಿ ಇರುವ ನಾಲ್ಕು ಕೊಠಡಿಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಇಲ್ಲ. ದಾಖಲೆಗಳನ್ನು ಸಂಗ್ರಹಿಸಿಡುವ ನಾಲ್ಕು ಸ್ಟ್ರಾಂಗ್ ರೂಮ್‌ಗಳ ಪೈಕಿ ಎರಡರಲ್ಲಿ ಕ್ಯಾಮೆರಾ ಅಳವಡಿಸಲಾಗಿದೆ. ಕಾನ್ಫರೆನ್ಸ್ ಹಾಲ್ ಕೂಡ ಇದೆ. ಆದರೆ, ಪ್ರಶ್ನೆ ಪತ್ರಿಕೆ ರಚಿಸಿ ಆರು ತಿಂಗಳಾಗಿರುವುದರಿಂದ ಆ ದೃಶ್ಯಗಳು ಸಿಗುತ್ತವೆಯೋ ಇಲ್ಲವೋ ಗೊತ್ತಿಲ್ಲ' ಎಂದರು. 'ಪ್ರಶ್ನೆ ಪತ್ರಿಕೆ ರಚಿಸುವ ಸಂದರ್ಭದಲ್ಲಿ ಭದ್ರತೆ ಇತ್ತು. ನಮ್ಮ ಕೇಂದ್ರದಿಂದ ಸಹಾಯಕ ಪ್ರಾಧ್ಯಾಪಕರ ಪ್ರಶ್ನೆ ಪತ್ರಿಕೆ ಸೋರಿಕೆ ಆಗಲು ಸಾಧ್ಯವೇ ಇಲ್ಲ' ಎಂದು ಹೇಳಿದರು.

ಮೇ 4 ರಿಂದ ತಹಶೀಲ್ದಾರ್ ಕಚೇರಿಗೆ ಬೀಗ

ಕೂಡಲಸಂಗಮ (ಬಾಗಲಕೋಟೆ ಜಿಲ್ಲೆ): 2ಎ ಮೀಸಲಾತಿಗಾಗಿ ಆಗ್ರಹಿಸಿ ಮೇ 4 ರಿಂದ ರಾಜ್ಯದ ಎಲ್ಲಾ ತಹಶೀಲ್ದಾರ್ ಕಚೇರಿಗೆ ಬೀಗ ಹಾಕಿ ಪ್ರತಿಭಟನೆ ನಡೆಸಲಾಗುವುದು ಎಂದು ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ತಿಳಿಸಿದ್ದಾರೆ.

ಇಲ್ಲಿನ ಸಂಗಮೇಶ್ವರ ದೇವಾಲಯ ಆವರಣದಲ್ಲಿ ಗುರುವಾರ ನಡೆದ ಧರಣಿ ಸತ್ಯಾಗ್ರಹದ ನೇತೃತ್ವ ವಹಿಸಿ ಮಾತನಾಡಿದ ಅವರು, ರಾಜ್ಯದ ಎಲ್ಲ ಕಡೆ ಈ ಹೋರಾಟ ಯಶಸ್ವಿಗೊಳಿಸಲು ಸಮಾಜದವರಿಗೆ ಕರೆಕೊಟ್ಟರು.

ಮೈಸೂರು ಪ್ರಾಂತ್ಯದಲ್ಲಿ ಲಿಂಗಾಯತ ಗೌಡರು ಪಂಚಮಸಾಲಿ ಸಮಾಜದವರಾಗಿದ್ದು, ಧರಣಿಗೆ ಬೆಂಬಲ ಕೊಟ್ಟಿರುವುದು ಸಂತಸ ತಂದಿದೆ ಎಂದರು.

ಬೀದಿನಾಯಿ ದಾಳಿಗೆ ಬಾಲಕ ಬಲಿ

ಧಾರವಾಡ: ಇಲ್ಲಿನ ನವಲೂರು ರೈಲ್ವೆ ನಿಲ್ದಾಣ ಬಳಿ ಬೀದಿ ನಾಯಿಗಳ ದಾಳಿಗೆ ಬಾಲಕ ಬಲಿಯಾಗಿದ್ದಾನೆ. ಕಲಘಟಗಿ ತಾಲ್ಲೂಕಿನ ದುಮ್ಮವಾಡ ಗ್ರಾಮದ ಪ್ರಥಮ ನೀರಲಕಟ್ಟಿ (9) ಮೃತಪಟ್ಟವನು.

ಬೇಸಿಗೆ ರಜೆ ಕಳೆಯಲು ಸತ್ತೂರಿನಲ್ಲಿರುವ ಅಜ್ಜನ ಮನೆಗೆ ಬಂದಿದ್ದ. ಕೂಲಿ ಕೆಲಸ ಮಾಡುವ ಅಜ್ಜನಿಗೆ ನಿತ್ಯ ಮಧ್ಯಾಹ್ನ ಊಟ ಕೊಡಲು ಹೋಗುತ್ತಿದ್ದ. ಗುರುವಾರ ಮಧ್ಯಾಹ್ನ ಊಟ ಕೊಡಲು ಹೋಗುತ್ತಿದ್ದ ಸಂದರ್ಭದಲ್ಲಿ 8ರಿಂದ 10 ಬೀದಿ ನಾಯಿಗಳು ಬಾಲಕನ ಮೇಲೆ ದಾಳಿ ಮಾಡಿವೆ.



ಪ್ರಥಮ ನೀರಲಕಟ್ಟಿ

ದಾಳಿಯಿಂದ ತಪ್ಪಿಸಿಕೊಳ್ಳಲು ಬಾಲಕ ಓಡಿದ್ದಾನೆ. ಆತನನ್ನು ಬೆನ್ನಟ್ಟಿದ ನಾಯಿಗಳು ತೀವ್ರವಾಗಿ ಕಚ್ಚಿ ಗಾಯಗೊಳಿಸಿವೆ. ಮೊಮ್ಮಗನ ಚೀರಾಟ ಆಲಿಸಿದ ಶಾಂತಪ್ಪ ಹೊನ್ನಣ್ಣವರ, ಕಾಪಾಡಲು ಮುಂದಾದಾಗ ಅವರನ್ನೂ ನಾಯಿಗಳು ಕಚ್ಚಿವೆ. ನವಲೂರು ರೈಲು ನಿಲ್ದಾಣ ಬಳಿ ನಡೆದ ಬೀದಿ ನಾಯಿಗಳ ದಾಳಿಗೆ ಮಕ್ಕಳು ಬಲಿಯಾಗುತ್ತಿರುವ ಮೂರನೇ ಪ್ರಕರಣ ಇದಾಗಿದೆ.

ಯಾವುದೇ ಪಕ್ಷ ಸೇರಲ್ಲ: ಸುಮಲತಾ

ಮಂಡ್ಯ: 'ಯಾವುದೇ ಪಕ್ಷ ಸೇರುವ ಪ್ರಸ್ತಾವವಿಲ್ಲ. ಅವಶ್ಯಕತೆಯೂ ಇಲ್ಲ. ಅಂತಹದ್ದೇನಾದರೂ ಬಂದರೆ ಜನಾಭಿಪ್ರಾಯ ಸಂಗ್ರಹಿಸಿ ತೀರ್ಮಾನಿಸುವೆ' ಎಂದು ಸಂಸದೆ ಸುಮಲತಾ ಗುರುವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು 'ಬಿಜೆಪಿ ಸೇರುತ್ತಿದ್ದೇನೆ ಎಂದು ಎಲ್ಲೂ ಹೇಳಿಲ್ಲ. ಊಹಾಪೋಹಗಳಿಗೆ ತಲೆಕೆಡಿಸಿಕೊಳ್ಳುವುದಿಲ್ಲ. ಅಭಿವೃದ್ಧಿಯ ವಿಷಯಕ್ಕಾಗಿ ಬಿಜೆಪಿ ಮುಖಂಡರನ್ನು ಭೇಟಿಯಾಗಿದ್ದೇನೆಯೇ ಹೊರತು ಪಕ್ಷ ಸೇರ್ಪಡೆ ಬಗ್ಗೆ ಮಾತನಾಡಲು ಅಲ್ಲ' ಎಂದರು.

'ಬೆಂಬಲಿಗರು ಬಿಜೆಪಿ ಸೇರಿದ್ದಕ್ಕೆ ನಾನೂ ಬಿಜೆಪಿ ಸೇರುತ್ತಿದ್ದೇನೆ ಎಂದು ಬಿಂಬಿಸಲಾಗುತ್ತಿದೆ. ಲೋಕಸಭಾ ಚುನಾವಣೆಯಲ್ಲಿ ಎಲ್ಲಾ ಪಕ್ಷಗಳ ಮುಖಂಡರು ಬೆಂಬಲಿಸಿದ್ದರು. ಅವರು ಸರ್ವ ಸ್ವತಂತ್ರರಾಗಿದ್ದು ಯಾವುದೇ ಪಕ್ಷ ಸೇರಬಹುದು. ಪುತ್ರ ಅಭಿಷೇಕ್ ಚುನಾವಣೆಯಲ್ಲಿ ಸ್ಪರ್ಧಿಸುವುದು ವೈಯಕ್ತಿಕ ವಿಚಾರವಾಗಿದ್ದರಿಂದ ಪ್ರತಿಕ್ರಿಯಿಸುವುದಿಲ್ಲ' ಎಂದರು.

ಕನಿಷ್ಠ ಬೆಂಬಲ ಬೆಲೆ ಯೋಜನೆ ಅಡಿ ರಾಗಿ ಖರೀದಿ: ರಾಜ್ಯದ ಕೋಟಾ ಮುಕ್ತಾಯ • ಸರ್ವರ್ ಲಾಕ್

ನೋಂದಣಿ ಸ್ಥಗಿತ: ರೈತರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ (ಬೆಂಗಳೂರು ಗ್ರಾಮಾಂತರ): ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯೋಜನೆ ಅಡಿ ರಾಗಿ ಖರೀದಿಗೆ ಹೆಸರು ನೋಂದಣಿ ಪ್ರಕ್ರಿಯೆಯನ್ನು ಏಕಾಏಕಿ ಸ್ಥಗಿತಗೊಳಿಸಿದ್ದರಿಂದ ರೊಚ್ಚಿಗೆದ್ದ ನೂರಾರು ರೈತರು ಗುರುವಾರ ರಾಷ್ಟ್ರೀಯ ಹೆದ್ದಾರಿಯಲ್ಲಿ ಪ್ರತಿಭಟನೆ ನಡೆಸಿದರು.

ಸ್ಥಳಕ್ಕೆ ದೌಡಾಯಿಸಿದ ತಹಶೀಲ್ದಾರ್ ಮೋಹನಕುಮಾರಿ, ಜಿಲ್ಲಾ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಜಂಟಿ ನಿರ್ದೇಶಕಿ ಗಿರಿಜಾದೇವಿ ಮತ್ತು ಡಿವೈಎಸ್‌ಪಿ ನಾಗರಾಜ್ ಸಮಾಧಾನಪಡಿಸಲು ಯತ್ನಿಸಿ, ಸೋತರು.

ಹೆಸರು ನೋಂದಾಯಿಸಿಕೊಳ್ಳದಿದ್ದರೆ ಸ್ಥಳದಿಂದ ಕದಲುವುದಿಲ್ಲ ಎಂದು ಪ್ರತಿಭಟನಕಾರರು ಪಟ್ಟು ಹಿಡಿದು ಹೆದ್ದಾರಿಯಲ್ಲಿ ಕುಳಿತರು. ಶಾಸಕ ಟಿ.ವೆಂಕಟ ರಮಣಯ್ಯ ಹಾಗೂ ರೈತ ಸಂಘದ ಪದಾಧಿಕಾರಿಗಳು ಸಾಥ್ ನೀಡಿದರು. ಇದರಿಂದ ತುಮಕೂರು-ದೊಡ್ಡಬಳ್ಳಾಪುರ ರಸ್ತೆಯಲ್ಲಿ ನೂರಾರು ವಾಹನಗಳು ಸಾಲುಗಟ್ಟಿ ನಿಂತಿದ್ದವು.



ದೊಡ್ಡಬಳ್ಳಾಪುರ– ತುಮಕೂರು ಹೆದ್ದಾರಿಯಲ್ಲಿ ರಸ್ತೆ ತಡೆ ನಡೆಸುತ್ತಿದ್ದ ರೈತರನ್ನು ಭೇಟಿ ಮಾಡಿ ರಾಗಿ ಖರೀದಿ ನೋಂದಣಿಗೆ ಇರುವ ಅಡ್ಡಿಯ ಕುರಿತು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಜಂಟಿ ನಿರ್ದೇಶಕಿ ಗಿರಿಜಾದೇವಿ ಮನವರಿಕೆ ಮಾಡಿಕೊಟ್ಟರು

ಕೊನೆಗೆ ಶಾಸಕ ಮತ್ತು ಪ್ರತಿಭಟನಾನಿರತರನ್ನು ಪೊಲೀಸರು ವಶಕ್ಕೆ ಪಡೆದು, ಬಿಡುಗಡೆ ಮಾಡಿದರು.

ಗುರುವಾರ ಬೆಳಿಗ್ಗೆ 4 ಗಂಟೆಯಿಂದಲೇ ನೂರಾರು ರೈತರು ಹೆಸರು ನೋಂದಾಯಿಸಲು ಎಪಿಎಂಸಿ ಆವರಣದ ರಾಗಿ ಖರೀದಿ ಕೇಂದ್ರದ ಬಳಿ ಸಾಲುಗಟ್ಟಿ ನಿಂತಿದ್ದರು. ರಾಜ್ಯಕ್ಕೆ ನಿಗದಿಪಡಿಸಿದ್ದ ಕೋಟಾ ಮುಗಿದ ಕಾರಣ ಸರ್ವರ್ ಲಾಕ್ ಆಗಿದೆ ಎಂದು ಸಿಬ್ಬಂದಿ ಬಾಗಿಲು ಮುಚ್ಚಿದರು. ಇದರಿಂದ ರೊಚ್ಚಿಗೆದ್ದ ರೈತರು ವಾಗ್ವಾದಕ್ಕಿಳಿದರು. ಪ್ರಶ್ನೆಗಳಿಗೆ ಉತ್ತರಿಸಲಾಗದೆ ಅಧಿಕಾರಿಗಳು ಅಸಹಾಯಕರಾಗಿ ನಿಂತಿದ್ದರು.

ಸರ್ಕಾರದ ಆದೇಶ ಬರುವವರೆಗೆ ನೋಂದಣಿ ಇಲ್ಲ. ಹೆಸರು ನೋಂದಣಿಯಾಗಿರುವ ರೈತರಿಂದ ಮಾತ್ರ ರಾಗಿ ಖರೀದಿಸಲಾಗುವುದು.
ಗಿರಿಜಾದೇವಿ, ಜಿಲ್ಲಾ ಜಂಟಿ ನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ

5 ಸಿಬ್ಬಂದಿಯನ್ನು ಕೂಡಿ ಹಾಕಿದ ರೈತರು

ಚನ್ನರಾಯಪಟ್ಟಣ: ರಾಗಿ ಖರೀದಿ ನೋಂದಣಿ ಪ್ರಕ್ರಿಯೆ ಆರಂಭಿಸುವಂತೆ ಒತ್ತಾಯಿಸಿ ರೈತರು ಪಟ್ಟಣದ ಖರೀದಿ ಕೇಂದ್ರದ ಐವರು ಸಿಬ್ಬಂದಿಯನ್ನು ಗುರುವಾರ ಒಂದು ಗಂಟೆ ಕಾಲ ಕೂಡಿ ಹಾಕಿದ್ದರು.

ನೋಂದಣಿ ಪ್ರಕ್ರಿಯೆ ಬುಧವಾರ ಸಂಜೆ 4.30ಕ್ಕೆ ಮುಕ್ತಾಯಗೊಂಡಿತ್ತು. ಗುರುವಾರ ಕೆಲ ರೈತರು ಖರೀದಿ ಕೇಂದ್ರದ ಮುಂದೆ ಜಮಾಯಿಸಿ, ನೋಂದಣಿ ಮಾಡುವಂತೆ ಕೇಳಿಕೊಂಡರು. ‘ಲಾಗಿನ್ ಮುಕ್ತಾಯವಾಗಿದೆ’ ಎಂದು ಅಧಿಕಾರಿಗಳು ತಿಳಿಸಿದರೂ ಒಪ್ಪಲಿಲ್ಲ.

ಅದರಿಂದ ಕೆರಳಿದ ರೈತರು ‘ಕಚೇರಿಯ ಬಾಗಿಲನ್ನು ಏಕೆ ತೆಗೆದಿದ್ದೀರಿ? ನೋಂದಣಿ ಮಾಡಿಕೊಳ್ಳಲೇಬೇಕು’ ಎಂದು ಪಟ್ಟುಹಿಡಿದರು. ಅದಕ್ಕೆ ಒಪ್ಪದ ಸಿಬ್ಬಂದಿಯನ್ನು ಕೂಡಿ ಹಾಕಿ ಕೇಂದ್ರದ ಬಾಗಿಲನ್ನು ಮುಚ್ಚಿ ಬೀಗ ಹಾಕಿದರು.

ಮೈಸೂರಿನಲ್ಲೂ ಪ್ರತಿಭಟನೆ

ಮೈಸೂರು: ರಾಗಿ ಖರೀದಿಗೆ ಹೆಸರು ನೋಂದಣಿ ಪ್ರಕ್ರಿಯೆ ಆರಂಭವಾಗಿ ಕೇವಲ 27 ಗಂಟೆಗಳಲ್ಲಿ ಸ್ಥಗಿತಗೊಂಡಿದ್ದರಿಂದ ರೈತರು ಆಕ್ರೋಶ ವ್ಯಕ್ತಪಡಿಸಿದರು.

ಎಪಿಎಂಸಿ ಆವರಣದ ರಾಗಿ ಖರೀದಿ ಕೇಂದ್ರದ ಮುಂದೆ ಗುರುವಾರ ಬಿಸಿಲ ಧಗೆಯನ್ನೂ ಲೆಕ್ಕಿಸದೆ ರೈತರು ಹೆಸರು ನೋಂದಾಯಿಸಿಕೊಳ್ಳಲು ಸಾಲಿನಲ್ಲಿ ನಿಂತಿದ್ದರು. ನೋಂದಣಿ ಮುಕ್ತಾಯವಾಗಿದೆ ಎಂದು ಸಿಬ್ಬಂದಿ ಹೇಳಿದಾಗ ರೈತರು ಅವರೊಂದಿಗೆ ವಾಗ್ವಾದಕ್ಕಿಳಿದರು. ಕೆಲಕಾಲ ಪ್ರತಿಭಟನೆ ನಡೆಸಿದರು.

ಸುದ್ದಿ 2 ನಿಮಿಷ

ಲಂಚ ಪಡೆಯುತ್ತಿರುವ ಪಿಡಬ್ಲ್ಯುಡಿ ಎಇ: ವಿಡಿಯೊ ಬಿಡುಗಡೆ

ಕಲಬುರಗಿ: ಚಿಂಚೋಳಿ ತಾಲ್ಲೂಕಿನ ಪೋತಂಗಲ್ ಗ್ರಾಮದ ಪರಿಶಿಷ್ಟರ ಕಾಲೊನಿಯಲ್ಲಿ ರಸ್ತೆ ನಿರ್ಮಾಣ ಮಾಡಿದ ಗುತ್ತಿಗೆದಾರರಿಗೆ ಬಿಲ್ ಮಂಜೂರು ಮಾಡಲು ಲೋಕೋಪಯೋಗಿ ಇಲಾಖೆಯ ಚಿಂಚೋಳಿಯ ಸಹಾಯಕ ಎಂಜಿನಿಯರ್ ಲಂಚ ಪಡೆಯುತ್ತಿರುವ ವಿಡಿಯೊವನ್ನು ಆಮ್ ಆದ್ಮಿ ಪಕ್ಷವು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಬಿಡುಗಡೆ ಮಾಡಿದೆ.

‘ಕಲಬುರಗಿ ಜಿಲ್ಲಾಧಿಕಾರಿ ಕಚೇರಿ ಎದುರು ಸ್ಕೂಟರ್‌ನಲ್ಲಿ ಬರುವ ಎಇ ವೆಂಕಟೇಶ ಬಿರಾದಾರ ಅವರು ಗುತ್ತಿಗೆದಾರರೊಬ್ಬರಿಂದ ₹ 500ರ ನೋಟಗಳುಳ್ಳ ₹ 30 ಸಾವಿರದ ಕಂತೆಗಳನ್ನು ಜೇಬಿಗೆ ಹಾಕಿಕೊಂಡು ನಂತರ ಅವರೊಂದಿಗೆ ಮಾತನಾಡಿರುವುದು ವಿಡಿಯೊದಲ್ಲಿ ದಾಖಲಾಗಿದೆ. ಸಾಲ ಮಾಡಿ ಈ ಹಣವನ್ನು ನಿಮಗೆ ನೀಡುತ್ತಿದ್ದೇನೆ’ ಎಂದು ಆ ವ್ಯಕ್ತಿ ಹೇಳಿದ್ದಾರೆ ಎಂದು ಆಮ್ ಆದ್ಮಿ ಪಕ್ಷದ ಮುಖಂಡ ಡಾ. ರಾಘವೇಂದ್ರ ಚಿಂಚನಸೂರ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.



‘ವೆಂಕಟೇಶ ಬಿರಾದಾರ ಜಿಲ್ಲಾಧಿಕಾರಿ ಕಚೇರಿ ಎದುರೇ ಲಂಚದ ಹಣ ಪಡೆದಿದ್ದಾರೆ. ಇದರಲ್ಲಿ ಎಇಇ ಅವರಿಗೂ ಕೊಡಬೇಕು. ಕಾಮಗಾರಿಯ ಪರಿಶೀಲನೆ ನಡೆಸುವ ಏಜೆನ್ಸಿಯವರಿಗೂ ಕೊಡಬೇಕು ಎಂದಿದ್ದಾರೆ. ಈ ಅಧಿಕಾರಿಯನ್ನು ತಕ್ಷಣ ವಜಾ ಮಾಡಬೇಕು. ಈ ಸಂಬಂಧ ಮುಖ್ಯ ಎಂಜಿನಿಯರ್ ಅವರಿಗೆ ದೂರು ಸಲ್ಲಿಸಲಿದ್ದೇವೆ’ ಎಂದರು.

‘ಬಹುತೇಕ ಅಧಿಕಾರಿಗಳು ಭ್ರಷ್ಟಾಚಾರದಲ್ಲಿ ಶಾಮೀಲಾಗಿದ್ದು, ಈ ಬಗ್ಗೆ ಪ್ರಶ್ನಿಸಿದರೆ ಶಾಸಕರು ಪ್ರತಿ ತಿಂಗಳು ತಮಗೆ ಲಂಚ ಕೊಡುವಂತೆ ಪೀಡಿಸುತ್ತಾರೆ. ಆದ್ದರಿಂದ ಭ್ರಷ್ಟಾಚಾರದಲ್ಲಿ ತೊಡಗಬೇಕಾಗಿದೆ ಎನ್ನುತ್ತಾರೆ. ಇಂತಹ ಆರೋಪಗಳ ಬಗ್ಗೆಯೂ ತನಿಖೆ ಆಗಬೇಕು’ ಎಂದು ಹೇಳಿದರು.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ವೆಂಕಟೇಶ ಬಿರಾದಾರ ಅವರಿಗೆ ಕರೆ ಮಾಡಿದಾಗ ಅವರ ಫೋನ್ ಸ್ವಿಚ್ ಆಫ್ ಆಗಿತ್ತು.

ಸೂಕ್ತ ಪರಿಹಾರಕ್ಕೆ ಕ್ರಮ: ಸಿ.ಎಂ

ಮುನವಳ್ಳಿ (ಹಾವೇರಿ): ‘1,522 ಮಹಿಳೆಯರ ಗರ್ಭಕೋಶವನ್ನು ತೆಗೆದು ಹಾಕಿದ ಪ್ರಕರಣದ ತನಿಖೆ ಮಾಡಿ ಸಮಗ್ರ ವರದಿ ಸಲ್ಲಿಸುವಂತೆ ಜಿಲ್ಲಾಧಿಕಾರಿಗೆ ಸೂಚನೆ ನೀಡಿದ್ದೇನೆ. ವರದಿಯ ನಂತರ ತಪ್ಪಿತಸ್ಥರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಲಾಗುತ್ತದೆ’ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದರು. ಈ ಪ್ರಕರಣದ ಸಂತ್ರಸ್ತರಿಗೆ ಸೂಕ್ತ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಇದೇ ವೇಳೆ ತಿಳಿಸಿದರು.

‘ಭವಿಷ್ಯದಲ್ಲಿ ಶಿಗ್ಗಾವಿಯು ‘ಭಾರತದ ಟೆಕ್ಸ್‌ಟೈಲ್ ಮತ್ತು ಗಾರ್ಮೆಂಟ್ಸ್ ಹಬ್’ ಆಗಬೇಕು ಎನ್ನುವುದು ನನ್ನ ಕನಸು. ಈ ಹಿನ್ನೆಲೆಯಲ್ಲಿ ಬೃಹತ್ ಜವಳಿ ಉದ್ಯಮ ಹಾಗೂ ಗಾರ್ಮೆಂಟ್ಸ್ ಘಟಕಗಳನ್ನು ಜಿಲ್ಲೆಗೆ ಆಹ್ವಾನಿಸಲಾಗಿದೆ’ ಎಂದು ಅವರು ಹೇಳಿದರು.

ಸಾಲ ಬಾಧೆಯಿಂದ ಬೆಳಗಾವಿ ಉಪಗುತ್ತಿಗೆದಾರ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ



ಬಸವರಾಜ ನಿಂಗಪ್ಪ

ಚಿಕ್ಕಮಗಳೂರು/ ಬಾಳೆಹೊನ್ನೂರು: ಪಟ್ಟಣದ ಲಾಡ್ಜ್‌ನಲ್ಲಿ ಉಪ ಗುತ್ತಿಗೆದಾರ ಬಸವರಾಜ ನಿಂಗಪ್ಪ ಮರದಬುಡುಕಿನ (46) ಎಂಬುವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪ್ರಕರಣದ ತನಿಖೆಗೆ ಪೊಲೀಸರು ತಂಡ ರಚಿಸಿದ್ದಾರೆ.

ಬಸವರಾಜ ಅವರು ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಮುನವಳ್ಳಿಯವರು. ಕಾಮಗಾರಿಗಳ ಉಪ ಗುತ್ತಿಗೆ ಪಡೆದು, ಸಾಲ ಮಾಡಿ ನಿರ್ವಹಿಸಿದ್ದರು. ಅವರಿಗೆ ಬೆಂಗಳೂರಿನ ಐಶ್ವರ್ಯಗಿರಿ ಕನ್‌ಸ್ಟ್ರಕ್ಷನ್ ಪ್ರೈವೆಟ್ ಲಿಮಿಟೆಡ್‌ನ ಮಾಲಿಕ, ಗುತ್ತಿಗೆದಾರ ಜಯರಾಮ ಅವರು ₹1.20 ಕೋಟಿ ಬಾಕಿ ಕೊಡಬೇಕಿತ್ತು. ಬಾಕಿ ಕೊಡದೆ ಸತಾಯಿಸಿದ್ದರಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಬಸವರಾಜ ಅವರ ಮಾವ ಈರಣ್ಣ ಕರಡಿಕೊಪ್ಪ ಬಾಳೆಹೊನ್ನೂರು ಠಾಣೆಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ಬಾಳೆಹೊನ್ನೂರಿನ ಲಾಡ್ಜ್‌ನಲ್ಲಿ ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಬುಧವಾರ ಶವ ಪತ್ತೆಯಾಗಿದ್ದು, ಗುರುವಾರ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬದವರಿಗೆ ಹಸ್ತಾಂತರಿಸಲಾಯಿತು. ಬಸವರಾಜ ಆರು ತಿಂಗಳಿನಿಂದ ಬಾಳೆಹೊನ್ನೂರು ಭಾಗದಲ್ಲಿ ಜಲ ಜೀವನ್ ಮಿಷನ್ ಕಾಮಗಾರಿ ನಿರ್ವಹಿಸುತ್ತಿದ್ದರು.

ಉಪಗುತ್ತಿಗೆದಾರ ಬಸವರಾಜ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರು ದಾಖಲಾಗಿದೆ. ಆರೋಪಿಯ ಪತ್ತೆಗೆ ತಂಡ ರಚಿಸಲಾಗಿದೆ.
ಅಕ್ಷಯ್ ಎಂ.ಹಾಕೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ದೂರಿನ ಸಾರಾಂಶ: ‘ಅಳಿಯ ಬಸವರಾಜ ಅವರು ಜಯರಾಮ ಅವರಿಂದ ಕಾಮಗಾರಿ ಉಪಗುತ್ತಿಗೆ ಪಡೆದು ಕೆಲಸ ಮಾಡಿಸುತ್ತಿದ್ದರು. ವಿವಿಧೆಡೆ ₹7.5 ಕೋಟಿ ಸಾಲ ಮಾಡಿ ಕಾಮಗಾರಿ ನಿರ್ವಹಿಸಿದ್ದರು. ಜಯರಾಮ ಅವರು ಎರಡು ಚೆಕ್ ನೀಡಿದ್ದರು. ಆದರೆ, ಜಯರಾಮ ಅವರಿಗೆ ಕಾಮಗಾರಿ ಬಿಲ್ ಸರ್ಕಾರದಿಂದ ಪಾವತಿಯಾಗಿದ್ದರೂ, ಕಾಮಗಾರಿ ಬಾಬ್ತು ಬಾಕಿ ಕೊಟ್ಟಿರಲಿಲ್ಲ’ ಎಂದು ಈರಣ್ಣ ಕರಡಿಕೊಪ್ಪ ದೂರಿನಲ್ಲಿ ತಿಳಿಸಿದ್ದಾರೆ.

‘ಜಯರಾಮ ಅವರು ಹಣ ಕೊಟ್ಟಿಲ್ಲ, ಫೋನ್ ಮಾಡಿದರೂ ಕರೆ ಸ್ವೀಕರಿಸಲ್ಲ. ಸಾಯುವುದು ಬಿಟ್ಟು ವಿಧಿ ಇಲ್ಲ’ ಎಂದು ಬಸವರಾಜ ಅವರು ಏ.26ರಂದು ರಾತ್ರಿ 10 ಗಂಟೆ ಸಮಯದಲ್ಲಿ ಫೋನ್‌ನಲ್ಲಿ ಬೇಸರದಿಂದ ಮಾತಾಡಿದ್ದರೆಂದು ನನ್ನ ಪುತ್ರಿ ರತ್ನಾ ತಿಳಿಸಿದ್ದಳು’ ಎಂದು ಉಲ್ಲೇಖಿಸಿದ್ದಾರೆ.

‘ಹಿಂದಿ ರಾಷ್ಟ್ರದ ಭಾಷೆ, ರಾಷ್ಟ್ರಭಾಷೆಯಲ್ಲ’

ಪ್ರಜಾವಾಣಿ ವಾರ್ತೆ

ಧಾರವಾಡ: ‘ಭಾರತದ ಇತರ ಭಾಷೆಗಳಂತೆಯೇ ಹಿಂದಿಯೂ ರಾಷ್ಟ್ರದ ಒಂದು ಭಾಷೆಯೇ ಹೊರತು, ರಾಷ್ಟ್ರಭಾಷೆ ಅಲ್ಲ. ಹಾಗೆಯೇ ಹಿಂದಿ ಅನುಷ್ಠಾನಕ್ಕೆ ಇರುವ ಆಯೋಗದಂತೆಯೇ ಒಕ್ಕೂಟ ವ್ಯವಸ್ಥೆಯ ಎಲ್ಲಾ ಭಾಷೆಗಳಿಗೂ ಇದನ್ನು ವಿಸ್ತರಿಸುವ ಕೆಲಸ ಆಗಬೇಕು’ ಎಂದು ಹಿರಿಯ ಸಾಹಿತಿ ಡಾ. ಬರಗೂರು ರಾಮಚಂದ್ರಪ್ಪ ಹೇಳಿದರು.

ರೈತ, ಕೃಷಿ ಕಾರ್ಮಿಕ ಸಂಘಟನೆಯ ಸಮಾವೇಶದಲ್ಲಿ ಗುರುವಾರ ಪಾಲ್ಗೊಂಡು ಅವರು ಸುದ್ದಿಗಾರರೊಂದಿಗೆ ಮಾತನಾಡಿ, ‘ಒಕ್ಕೂಟ ರಾಷ್ಟ್ರದಲ್ಲಿ ಆಯಾ ಪ್ರದೇಶದ ರಾಜ್ಯ ಭಾಷೆ ಹಾಗೂ ಮಾತೃಭಾಷೆಗಳಿಗೆ ಮಹತ್ವ ಸಿಗಬೇಕು. ಸರ್ವಭಾಷಾ ಸಮಾನತೆಯೇ ಒಕ್ಕೂಟ ಸರ್ಕಾರದ ನೀತಿಯಾಗಬೇಕು. ಯಾವುದೇ ಭಾಷೆ ಅವರ ಇಚ್ಛೆಯಂತೆ ಕಲಿಸಲು ಪ್ರೋತ್ಸಾಹಿಸಲಿ. ಆದರೆ ಅದನ್ನೇ ರಾಷ್ಟ್ರಭಾಷೆ ಎಂದು ಕಲಿಸುವುದು ಖಂಡಿತಾ ತಪ್ಪು. ಅದಕ್ಕೆ ನಮ್ಮ ವಿರೋಧವಿದೆ’ ಎಂದರು.

‘ರಾಜ್ಯದ ಮುಖ್ಯಮಂತ್ರಿಗಳು ಒಂದು ಸಭೆ ನಡೆಸಿ ರಾಷ್ಟ್ರೀಯ ಭಾಷಾ ನೀತಿ ರಚಿಸಲು ಒಕ್ಕೂಟ ಸರ್ಕಾರದ ಮೇಲೆ ಒತ್ತಡ ಹೇರಲು ಇದು ಸಕಾಲ’ ಎಂದು ಡಾ. ಬರಗೂರು ಹೇಳಿದರು.

ಪ್ರಾದೇಶಿಕ ಭಾಷೆಗಳಿಗೆ ತನ್ನದೇ ಆದ ಗೌರವವಿದೆ, ಹಿಂದಿ ಹೇರಿಕೆ ಸರಿಯಲ್ಲ. ಸಿನಿಮಾ ನಟರಿಗೆ ಯಾವುದೇ ಭಾಷೆಗಳಿಲ್ಲ. ಸಿನಿಮಾ ಭಾವನಾತ್ಮಕ ಸಂಬಂಧ ಇರುವ ಕ್ಷೇತ್ರ
ಎಚ್.ಡಿ. ಕುಮಾರಸ್ವಾಮಿ, ಶಾಸಕಾಂಗ ಪಕ್ಷದ ನಾಯಕ

‘ಭಾಷೆ ಚರ್ಚೆಯ ಅಗತ್ಯವೇನಿದೆ?’

ಬೆಂಗಳೂರು: ‘ನಾವೆಲ್ಲ ಕನ್ನಡಿಗರು. ನಮಗೆ ನಮ್ಮದೇ ಆದ ಭಾಷೆ, ಧ್ವಜ, ಸ್ವಾಭಿಮಾನವಿದೆ. ಕನ್ನಡ ಸೇರಿದಂತೆ ಹಲವು ಪ್ರಾದೇಶಿಕ ಭಾಷೆಗಳಿಗೆ ಮಾನ್ಯತೆ ನೀಡಿ ಮುದ್ರಿಸಲಾಗಿರುವ ನಮ್ಮ ನೋಟು, ಇಡೀ ದೇಶದಲ್ಲಿ ಚಲಾವಣೆಯಾಗುತ್ತದೆ. ಹೀಗಾಗಿ ಭಾಷೆ ವಿಚಾರದಲ್ಲಿ ಚರ್ಚೆಯ ಅಗತ್ಯ ಏನಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, ‘ನಾನು ಯಾರ ಟ್ವೀಟ್ ಬಗ್ಗೆಯೂ ಪ್ರತಿಕ್ರಿಯೆ ನೀಡಲು ತಯಾರಿಲ್ಲ. ದೇಶದಲ್ಲಿ ಯಾವ, ಯಾವ ಭಾಷೆಗೆ ಯಾವ ಮಾನ್ಯತೆ ನೀಡಬೇಕು ಎಂದು ಸರ್ಕಾರ ಈಗಾಗಲೇ ತೀರ್ಮಾನಿಸಿದೆ’ ಎಂದರು.

‘ನಮ್ಮ ದೇಶ ಅನೇಕ ಭಾಷೆಗಳಿಂದ ಕೂಡಿದ್ದು, ಪ್ರತಿಯೊಬ್ಬರಿಗೂ ಅವರವರ ಭಾಷೆ ಸ್ವಾಭಿಮಾನದ ವಿಷಯವಾಗಿದೆ. ರಾಜ್ಯದ ಕೊಡಗು, ಮಂಗಳೂರು ಭಾಗಗಳಲ್ಲಿ ಬೇರೆ ಭಾಷೆಗಳನ್ನು ಮಾತನಾಡಿದರೂ, ನಾವು ಅವರನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ದೇಶದ ಉತ್ತರ ಭಾಗದಲ್ಲಿ ಹಿಂದಿ ಭಾಷೆ ಮಾತನಾಡುತ್ತಿದ್ದು, ಆ ಭಾಷೆಗೆ ಯಾವ ರೀತಿ ಗೌರವ ನೀಡಬೇಕೋ ಅದನ್ನು ನೀಡಲಾಗುತ್ತಿದೆ. ಚಿತ್ರನಟರ ಮಾತು ಮುಂದಿಟ್ಟುಕೊಂಡು ನಾವು ಚರ್ಚೆ ಮಾಡುವ ಅಗತ್ಯವಿಲ್ಲ’ ಎಂದರು.

ಹಿಂದಿ: ಬಿಜೆಪಿಯ ಭಿನ್ನ ಸ್ವರ

ಒಂದನೇ ಪುಟದಿಂದ

ಸಂವಿಧಾನ ತೀರ್ಮಾನಿಸಲಿ– ಬಿ.ಸಿ.ಪಾಟೀಲ: ‘ಹಿಂದಿ ರಾಷ್ಟ್ರ ಭಾಷೆ ಹೌದೋ ಅಲ್ಲವೋ ಎನ್ನುವುದನ್ನು ಸಂವಿಧಾನ ತೀರ್ಮಾನ ಮಾಡಬೇಕು’ ಎಂದು ಚಿತ್ರನಟರೂ ಆಗಿರುವ ಕೃಷಿ ಸಚಿವ ಬಿ.ಸಿ.ಪಾಟೀಲ ಹೇಳಿದ್ದಾರೆ. ದಕ್ಷಿಣದ ಸಿನಿಮಾಗಳು ಉತ್ತರ ಭಾರತದಲ್ಲಿ ಜಯಭೇರಿ ಬಾರಿಸುತ್ತಿವೆ. ಕಲೆ ಮತ್ತು ಕಲಾವಿದನಿಗೆ ಭಾಷೆಯ ನಿರ್ಬಂಧವಿಲ್ಲ ಎನ್ನುವುದಕ್ಕೆ ಇದು ಸಾಕ್ಷಿ. ದಕ್ಷಿಣ ಭಾರತದ ಸಿನಿಮಾಗಳು ಹಿಂದಿಗೆ ಡಬ್ ಆಗಿ ಪ್ರದರ್ಶನಗೊಳ್ಳುತ್ತಿವೆ. ಅದರಲ್ಲಿ ಸ್ವಾರ್ಥ ಬೆರೆಸುವುದು ಸರಿಯಲ್ಲ. ಹಿಂದಿ ಭಾಷೆಯನ್ನು ದೇಶದೆಲ್ಲೆಡೆ ಹೆಚ್ಚಾಗಿ ಬಳಸಲಾಗುತ್ತಿದೆ ಎಂದಿದ್ದಾರೆ.

‘ಶೇ 48 ಮಂದಿಗೆ ಹಿಂದಿ ಮಾತೃಭಾಷೆ’


ಚಿಕ್ಕಮಗಳೂರು: ‘ಭಾರತದ ಶೇ 48ರಷ್ಟು ಜನರಿಗೆ ಹಿಂದಿ ಮಾತೃಭಾಷೆಯಾಗಿದೆ. ಹೀಗಾಗಿ, ಹಿಂದಿ ಸಂಪರ್ಕ ಭಾಷೆಯಾಗಿರಬೇಕು ಎಂದು ಅವರು ಹೇಳಿದ್ದಾರೆ. ಬಾಕಿ ಶೇ 52ರಷ್ಟು ಜನರು ಸಂಪರ್ಕ ಭಾಷೆಯಾಗಿ ಇಂಗ್ಲಿಷ್ ಬದಲಿಗೆ ಹಿಂದಿ ಬಳಸಬೇಕು ಎಂಬ ಆಶಯ ಇದೆ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಪ್ರತಿಕ್ರಿಯಿಸಿದರು.

‘ಹಿಂದಿ ಸಂಪರ್ಕ ಭಾಷೆಯಾಗಬೇಕು ಎಂಬ ಗೃಹ ಸಚಿವ ಅಮಿತ್ ಶಾ ಹೇಳಿರುವುದರಲ್ಲಿ ತಪ್ಪೇನಿಲ್ಲ. ಇಂಗ್ಲಿಷ್ ಬ್ರಿಟಿಷರ ಹೇರಿಕೆ. ಮಾತೃಭಾಷೆ ಶ್ರೇಷ್ಠವಾದುದು. ಮಾತೃಭಾಷೆಯಲ್ಲಿ ಉನ್ನತ ಶಿಕ್ಷಣ ನೀಡುವ ಬಗ್ಗೆ ಚರ್ಚೆ ನಡೆಯುತ್ತಿದೆ. ಎಲ್ಲ ಭಾಷೆಗಳನ್ನು ಗೌರವಿಸುವುದು ನಮ್ಮ ಸಂಸ್ಕೃತಿ. ಹೀಗಾಗಿಯೇ, ದೇಶದಲ್ಲಿ ನೂರಾರು ಭಾಷೆಗಳು ಇವೆ’ ಎಂದರು.

ಎಲ್ಗರ್ ಪರಿಷತ್ ಪ್ರಕರಣ: ಬಿಡುಗಡೆ ಕೋರಿ ಆನಂದ್ ತೇಲ್ತುಂಬ್ಡೆ ಅರ್ಜಿ

ಮುಂಬೈ (ಪಿಟಿಐ): ‘ನಾನು ಸಿಪಿಐ (ಮಾವೋವಾದಿ) ಸಂಘಟನೆ ಸದಸ್ಯ ಎಂಬುದನ್ನು ಸಾಬೀತುಪಡಿಸುವಂತಹ ಸಾಕ್ಷ್ಯಗಳನ್ನು ತನಿಖಾ ಸಂಸ್ಥೆ ಹಾಜರುಪಡಿಸಿಲ್ಲ. ಹೀಗಾಗಿ ನನ್ನನ್ನು ಬಿಡುಗಡೆ ಮಾಡಬೇಕು’ ಎಂದು ಕೋರಿ ಎಲ್ಗರ್ ಪರಿಷತ್– ಮಾವೋವಾದಿ ಸಂಪರ್ಕ ಪ್ರಕರಣದ ಆರೋಪಿ ಆನಂದ್ ತೇಲ್ತುಂಬ್ಡೆ ಅವರು ಎನ್‌ಐಎ ವಿಶೇಷ ಕೋರ್ಟ್‌ಗೆ ಗುರುವಾರ ಅರ್ಜಿ ಸಲ್ಲಿಸಿದ್ದಾರೆ.

ತೇಲ್ತುಂಬ್ಡೆ ಪರವಾಗಿ ವಕೀಲರಾದ ಸತ್ಯನಾರಾಯಣನ್ ಹಾಗೂ ನೀರಜ್ ಯಾದವ್ ಅವರು ವಿಶೇಷ ಎನ್‌ಐಎ ನ್ಯಾಯಾಧೀಶ ಡಿ.ಇ. ಕೊಥಾಲಿಕರ್ ಅವರಿಗೆ ಅರ್ಜಿ ಸಲ್ಲಿಸಿದರು.



‘ತೇಲ್ತುಂಬ್ಡೆ ಹಾಗೂ ಇತರ ಏಳು ಜನರು ನಿಷೇಧಿತ ಸಿಪಿಐ (ಮಾವೋವಾದಿ) ಸದಸ್ಯರಾಗಿದ್ದು, ವಿವಿಧ ಮಾರ್ಗಗಳ ಮೂಲಕ ಸಂಘಟನೆಯ ಕಾರ್ಯಸೂಚಿಯ ಪ್ರಚಾರದಲ್ಲಿ ತೊಡಗಿದ್ದಾರೆ ಎಂಬುದಾಗಿ ಎನ್‌ಐಎ ಆರೋಪಿಸಿದೆ. ಆದರೆ, ಅರ್ಜಿದಾರ ಸಿಪಿಐ (ಮಾವೋವಾದಿ) ಸದಸ್ಯ ಎಂಬುದನ್ನು ಸಾಬೀತುಪಡಿಸುವ ದಾಖಲೆಗಳನ್ನು ಎನ್‌ಐಎ ಹಾಜರುಪಡಿಸಿಲ್ಲ’ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

‘ಆಪಾದಿತರ ವಿರುದ್ಧದ ಆರೋಪಗಳನ್ನು ಪುಷ್ಟೀಕರಿಸುವ ಪ್ರಬಲ ಸಾಕ್ಷ್ಯಾಧಾರಗಳಿದ್ದು, ಆರೋಪಿಯ ಅರ್ಜಿ ಪರಿಗಣಿಸಲು ಅರ್ಹವಾಗಿಲ್ಲ. ಹೀಗಾಗಿ ಅರ್ಜಿಯನ್ನು ವಜಾಗೊಳಿಸಬೇಕು’ ಎಂದು ಎನ್‌ಐಎ ಅಧಿಕಾರಿಗಳು ನ್ಯಾಯಾಲಯಕ್ಕೆ ತಿಳಿಸಿದರು. ವಿಚಾರಣೆಯನ್ನು ಮೇ 4ಕ್ಕೆ ಮುಂದೂಡಲಾಯಿತು.

ವಿವಿಧೆಡೆ ಆಲಿಕಲ್ಲು ಮಳೆ

ಹುಬ್ಬಳ್ಳಿ/ಶಿವಮೊಗ್ಗ: ವಿಜಯನಗರ, ಬೆಳಗಾವಿ, ಶಿವಮೊಗ್ಗ, ಚಿತ್ರದುರ್ಗ ಜಿಲ್ಲೆಯ ವಿವಿಧೆಡೆ ಗುರುವಾಗ ಬಿರುಗಾಳಿ ಸಹಿತ ಆಲಿಕಲ್ಲು ಮಳೆಯಾಗಿದೆ.

ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿಯ ಬಲ್ಲಾಹುಣ್ಸಿಯಲ್ಲಿ ಗೋಡೆ ಕುಸಿದು ಬೆಣ್ಣೆಕಲ್ಲು ಗ್ರಾಮದ ಚಂದ್ರು (21) ಎಂಬುವರು ಮೃತಪಟ್ಟಿದ್ದಾರೆ. ನಿರ್ಮಾಣ ಹಂತದ ಕಟ್ಟಡದ ಗೋಡೆಯ ಕಲ್ಲುಗಳು ಗಾರೆ ಕೆಲಸ ಮಾಡುತ್ತಿದ್ದ ಚಂದ್ರು ಮೇಲೆ ಬಿದ್ದಿವೆ.

ಸಿಡಿಲು ಬಡಿದು 35 ಕುರಿ, ಮೇಕೆಗಳ ಸಾವು: ಚನ್ನಗಿರಿ ತಾಲ್ಲೂಕಿನ ಮಾಚನಾಯಕನಹಳ್ಳಿ ಗ್ರಾಮದ ಜಮೀನಿನಲ್ಲಿ ಮೇಯುತ್ತಿದ್ದ ಕುರಿ ಮತ್ತು ಮೇಕೆ ಹಿಂಡುಗಳಿಗೆ ಸಿಡಿಲು ಬಡಿದ ಪರಿಣಾಮ 35 ಕುರಿ ಮತ್ತು ಮೇಕೆಗಳು ಸಾವನ್ನಪ್ಪಿವೆ.

‘ಅಮೆರಿಕ ಜರೂರತೆ ತೋರದ್ದಕ್ಕೆ ಭಾರತ– ರಷ್ಯಾ ಬಾಂಧವ್ಯ ವೃದ್ಧಿ’

ವಾಷಿಂಗ್ಟನ್ (ಪಿಟಿಐ): ‘ಭಾರತ ಮತ್ತು ಅಮೆರಿಕದ ನಡುವೆ ರಕ್ಷಣಾ ಕಾರ್ಯತಂತ್ರದ ಬಾಂಧವ್ಯ ಈಗ ಬೆಳೆಯುತ್ತಿದೆ. ಆದರೆ, ಅದು ಒಮ್ಮುಖವಾಗಿದೆ. ಅಮೆರಿಕ ಜರೂರಾಗಿ ಬಾಂಧವ್ಯ ಸಾಧಿಸದೇ ಉಳಿದಿದ್ದರಿಂದ ದೆಹಲಿಯು ಮಾಸ್ಕೊ ಜತೆಗೆ ಪಾಲುದಾರಿಕೆ ಬೆಳೆಸಿತು’ ಎಂದು ಅಮೆರಿಕದ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕೆನ್ ಅಭಿಪ್ರಾಯಪಟ್ಟಿದ್ದಾರೆ.

‘ಭಾರತ– ರಷ್ಯಾದ ಸಂಬಂಧಕ್ಕೆ ದಶಕಗಳ ಇತಿಹಾಸವಿದೆ. ಭಾರತಕ್ಕೆ ನಾವು ರಕ್ಷಣಾ ಕಾರ್ಯತಂತ್ರದ ಪಾಲುದಾರರಾಗುವ ಸ್ಥಿತಿಯಲ್ಲಿ ಇಲ್ಲದಿದ್ದಾಗ, ಭಾರತವು ರಷ್ಯಾವನ್ನು ಆಯ್ಕೆ ಮಾಡಿತು. ಹೌದು, ಇದರಲ್ಲಿ ಚೀನಾದ ಪಾಲೂ ದೊಡ್ಡದಿದೆ. ನಾವು ಭಾರತದೊಂದಿಗೆ ಕಾರ್ಯತಂತ್ರದ ಪಾಲುದಾರಿಕೆ ಸಾಧಿಸಲು ಈಗ ಶ್ರಮಿಸುತ್ತಿದ್ದೇವೆ’ ಎಂದು ಗುರುವಾರ ಸೆನೆಟ್‌ಗೆ ತಿಳಿಸಿದರು.

‘ಆಸಕ್ತಿದಾಯಕ ಸಂಗತಿಯೆಂದರೆ ಇದು ಕಾರ್ಯತಂತ್ರದ ಬದಲಾವಣೆಯ ಕ್ಷಣ. ವಿಶೇಷವಾಗಿ ರಷ್ಯಾದೊಂದಿಗಿನ ಸಂಬಂಧದ ವಿಷಯಕ್ಕೆ ಬಂದಾಗ, ಹಲವು ದೇಶಗಳು ಈಗ ತಮ್ಮ ಕೆಲವು ಸಂಬಂಧಗಳು ಮತ್ತು ಕೆಲವು ಹಿತಾಸಕ್ತಿಗಳನ್ನು ಮರು ಪರಿಶೀಲಿಸುತ್ತಿವೆ’ ಎಂದು ಬ್ಲಿಂಕೆನ್ ಹೇಳಿದರು.

ವಿದೇಶಿ ವ್ಯವಹಾರಗಳ ಸೆನೆಟ್ ಉಪಸಮಿತಿಯ ಕಾಂಗ್ರೆಸ್ ವಿಚಾರಣೆಯಲ್ಲಿ ಸೆನೆಟರ್ ವಿಲಿಯಂ ಹ್ಯಾಗರ್ಟಿ ಅವರು ಕೇಳಿದ ಪ್ರಶ್ನೆಗೆ ಬ್ಲಿಂಕೆನ್ ಈ ರೀತಿ ಹೇಳಿದ್ದಾರೆ.

64ನೇ ದಿನದ ಬೆಳವಣಿಗೆಗಳು

- ರಷ್ಯಾದ ಆಕ್ರಮಣದಿಂದ ಕ್ರಿಮಿಯಾ ಸೇರಿ ಇಡೀ ಉಕ್ರೇನ್ ವಿಮೋಚನೆಗೊಳಿಸಬೇಕು ಎಂದಿರುವ ಬ್ರಿಟನ್ ವಿದೇಶಾಂಗ ಕಾರ್ಯದರ್ಶಿ ಲಿಜ್ ಟ್ರಸ್ ಹೇಳಿಕೆಯನ್ನು ಬೆಂಬಲಿಸಿರುವ ರಕ್ಷಣಾ ಕಾರ್ಯದರ್ಶಿ ಬೆನ್ ವ್ಯಾಲೇಸ್ ‘ಇದು ಬ್ರಿಟನ್ ಪ್ರತಿಜ್ಞೆ’ ಎಂದಿದ್ದಾರೆ
- ಕಪ್ಪು ಸಮುದ್ರದಲ್ಲಿನ ತನ್ನ ಮಹತ್ವದ ನೌಕಾ ನೆಲೆಯ ರಕ್ಷಣೆಗೆ ರಷ್ಯಾ ತರಬೇತಿ ಪಡೆದ ಡಾಲ್ಫಿನ್ ಮತ್ತು ಸೀಲ್ ಪಡೆಗಳನ್ನು ನಿಯೋಜಿಸಿದೆ. ಎರಡು ತೇಲುವ ಡಾಲ್ಫಿನ್ ಪೆನ್ನುಗಳನ್ನು ಸೆವಾಸ್ಟೊಪೋಲ್ ಬಂದರಿನ ಪ್ರವೇಶದ್ವಾರದಲ್ಲಿ ಇರಿಸಿದೆ– ಅಮೆರಿಕದ ನೇವಲ್ ಇನ್‌ಸ್ಟಿಟ್ಯೂಟ್ (ಯುಎಸ್‌ಎನ್‌ಐ) ಮಾಹಿತಿ ಉಲ್ಲೇಖಿಸಿ ‘ದಿ ಗಾರ್ಡಿಯನ್’ ವರದಿ ಮಾಡಿದೆ
- ಕೀವ್‌ಗೆ ಭೇಟಿ ನೀಡಿದ ವಿಶ್ವಸಂಸ್ಥೆ ಮುಖ್ಯಸ್ಥ ಆಂಟೋನಿಯೊ ಗುಟೆರೆಸ್ ‘ಉಕ್ರೇನ್ ಯುದ್ಧ 21ನೇ ಶತಮಾನದ ತರ್ಕಹೀನ ಯುದ್ಧ’ ಎಂದು ಖಂಡಿಸಿ, ಅಂತರರಾಷ್ಟ್ರೀಯ ನ್ಯಾಯಾಲಯದ ವಿಚಾರಣೆಗೆ ರಷ್ಯಾ ಸಹಕರಿಸಬೇಕು ಎಂದು ಒತ್ತಾಯಿಸಿದ್ದಾರೆ
- ನಮ್ಮ ಶತ್ರುಗಳು ಹೊಸ ‘ಭೌಗೋಳಿಕ ರಾಜಕೀಯ ಶಸ್ತ್ರಾಸ್ತ್ರಗಳ’ ಅಭಿವೃದ್ಧಿ ತ್ವರಿತಗೊಳಿಸುತ್ತಿದ್ದಾರೆ. ನಮ್ಮ ನೆರೆಯ ಉಕ್ರೇನ್ ಅನ್ನು ಅವರು ‘ರಷ್ಯಾ ವಿರೋಧಿ’ ಆಗಿ ಪರಿವರ್ತಿಸಿದರು– ವ್ಲಾಡಿಮಿರ್ ಪುಟಿನ್ ಆಕ್ರೋಶ
- ಫಿನ್ಲೆಂಡ್ ಮತ್ತು ಸ್ವೀಡನ್ ಅತೀ ಶೀಘ್ರದಲ್ಲೇ ನ್ಯಾಟೊ ಸದಸ್ಯತ್ವ ಪಡೆಯಲಿವೆ– ನ್ಯಾಟೊ ಮುಖ್ಯಸ್ಥ
- ಕೆರ್ಸಾನ್ ಸೇರಿ ಆಕ್ರಮಿತ ಉಕ್ರೇನ್ ಭಾಗದಲ್ಲಿ ರೂಬಲ್ ಚಲಾವಣೆಗೆ ತರಲಾಗಿದೆ: ರಷ್ಯಾ

ಶಸ್ತ್ರಾಸ್ತ್ರ ಪೂರೈಕೆ ಯುರೋಪ್ ಖಂಡದ ಭದ್ರತೆಗೂ ಅಪಾಯ: ರಷ್ಯಾ ಎಚ್ಚರಿಕೆ

ಯುದ್ಧ: ಉಕ್ರೇನ್‌ಗೆ ನ್ಯಾಟೊ ಬೆಂಬಲ

ಬ್ರಸೆಲ್ಸ್ (ರಾಯಿಟರ್ಸ್): ‘ರಷ್ಯಾ ವಿರುದ್ಧ ಹೋರಾಡಲು ಉಕ್ರೇನ್‌ಗೆ ದೀರ್ಘಾವಧಿಯ ಬೆಂಬಲ ನೀಡಲು ಸಿದ್ಧ’ ಎಂದು ನ್ಯಾಟೊ ಪ್ರಧಾನ ಕಾರ್ಯದರ್ಶಿ ಜೆನ್ಸ್ ಸ್ಟೋಲ್ಟೆನ್‌ಬರ್ಗ್ ಗುರುವಾರ ಹೇಳಿದ್ದಾರೆ.

ಭಾರಿ ಶಸ್ತ್ರಾಸ್ತ್ರ ಒಳಗೊಂಡಂತೆ ಉಕ್ರೇನ್‌ಗೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಪಾಶ್ಚಾತ್ಯ ರಾಷ್ಟ್ರಗಳು ಪೂರೈಸುವುದು ಯುರೋಪ್ ಖಂಡದ ಭದ್ರತೆಗೂ ಅಪಾಯ ಮತ್ತು ಅಸ್ಥಿರತೆಯನ್ನೂ ಪ್ರಚೋದಿಸಲಿದೆ ಎಂದು ಪುಟಿನ್ ಆಡಳಿತ ಕಚೇರಿ ಕ್ರೆಮ್ಲಿನ್ ವಕ್ತಾರ ಡೆಮಿಟ್ರಿ ಪೆಸ್ಕೊವ್ ಎಚ್ಚರಿಕೆ ನೀಡಿದ ಬೆನ್ನಲ್ಲೇ ಸ್ಟೋಲ್ಟೆನ್‌ಬರ್ಗ್ ಈ ಹೇಳಿಕೆ ನೀಡಿದ್ದಾರೆ.

ಬ್ರಸೆಲ್ಸ್‌ನಲ್ಲಿ ನಡೆದ ಯುವ ಶೃಂಗಸಭೆಯಲ್ಲಿ ಮಾತನಾಡಿದ ಅವರು, ‘ಈ ಯುದ್ಧವು ಹಲವು ತಿಂಗಳು ಅಥವಾ ವರ್ಷಗಳವರೆಗೆ ಮುಂದುವರಿಯುವ ಸಾಧ್ಯತೆಯಿದೆ. ನಾವು ದೀರ್ಘಾವಧಿಗೆ ಸಿದ್ಧರಾಗಿರಬೇಕು’ ಎಂದು ಹೇಳಿದರು.

‘ರಷ್ಯಾ ವಿರುದ್ಧದ ಹೋರಾಟಕ್ಕೆ ಉಕ್ರೇನ್‌ಗೆ ನ್ಯಾಟೊ ಮಿತ್ರರಾಷ್ಟ್ರಗಳು ದೀರ್ಘಾವಧಿಯ ಬೆಂಬಲ ನೀಡಲು ತಯಾರಿ ನಡೆಸುತ್ತಿವೆ. ಉಕ್ರೇನ್ ಸೇನೆಗೆ ಹಳೆಯ ಸೋವಿಯತ್ ಯುಗದ ಯುದ್ಧೋಪಕರಣಗಳ ಅವಲಂಬನೆ ತಪ್ಪಿಸಿ, ಹೆಚ್ಚು ಆಧುನಿಕ ಶಸ್ತ್ರಾಸ್ತ್ರಗಳನ್ನು ಒದಗಿಸುವುದು, ಸೇನಾಪಡೆಗಳಿಗೆ ಅಗತ್ಯ ತರಬೇತಿ ನೀಡುವುದು, ಉಕ್ರೇನ್ ಮೇಲಿನ ರಷ್ಯಾ ಆಕ್ರಮಣ ಕೊನೆಗೊಳಿಸಲು, ಮತ್ತಷ್ಟು ಆರ್ಥಿಕ ನಿರ್ಬಂಧಗಳನ್ನು ಹೇರುವ ಮೂಲಕ ಪುಟಿನ್ ಮೇಲೆ ಗರಿಷ್ಠ ಒತ್ತಡ ಹೇರುವುದನ್ನು ಪಶ್ಚಿಮ ರಾಷ್ಟ್ರಗಳು ಮುಂದುವರಿಸುತ್ತವೆ’ ಎಂದು ಸ್ಟೋಲ್ಟೆನ್ ಬರ್ಗ್ ಹೇಳಿದರು.

ಅಮೆರಿಕ ತನ್ನದೇ ಆದ ಅಥವಾ ನ್ಯಾಟೊ ಪಡೆಗಳನ್ನು ಉಕ್ರೇನ್‌ಗೆ ಕಳುಹಿಸುವುದಿಲ್ಲ ಎಂದು ಆರಂಭದಿಂದಲೂ ಹೇಳಿಕೊಂಡು ಬಂದಿದೆ. ನ್ಯಾಟೊ ದೇಶಗಳು ಉಕ್ರೇನ್‌ಗೆ ಈವರೆಗೆ ಕಳುಹಿಸಿದ ಹೆಚ್ಚಿನ ಭಾರಿ ಶಸ್ತ್ರಾಸ್ತ್ರಗಳು ಸೋವಿಯತ್ ನಿರ್ಮಿತ ಶಸ್ತ್ರಾಸ್ತ್ರಗಳಾಗಿವೆ. ಅಮೆರಿಕ ಮತ್ತು ಇತರ ಕೆಲವು ಮಿತ್ರರಾಷ್ಟ್ರಗಳು ಉಕ್ರೇನ್‌ಗೆ ಅತ್ಯಾಧುನಿಕಡ್ರೋನ್‌ಗಳು, ಹೊವಿಟ್ಜರ್ ಫಿರಂಗಿ, ವಿಮಾನ ನಿಗ್ರಹ ಸ್ಟಿಂಗರ್ ಮತ್ತು ಟ್ಯಾಂಕ್ ನಿಗ್ರಹ ಜಾವೆಲಿನ್ ಕ್ಷಿಪಣಿಗಳಂತಹ ಶಸ್ತ್ರಾಸ್ತ್ರಗಳನ್ನು ಪೂರೈಸಿವೆ. ಜರ್ಮನಿ ಕೂಡ ವಿಮಾನ ನಿಗ್ರಹದ ಗೆಪರ್ಡ್ ಟ್ಯಾಂಕ್‌ಗಳನ್ನು ಉಕ್ರೇನ್‌ಗೆ ಕಳುಹಿಸುವುದಾಗಿ ಘೋಷಿಸಿದೆ.



ಲುವಿವ್ ನಗರದಲ್ಲಿ ಗುರುವಾರ ರಷ್ಯಾ ಪಡೆಗಳ ದಾಳಿಯಲ್ಲಿ ಹತರಾದ ಉಕ್ರೇನ್‌ನ ಮೂವರು ಯೋಧರ ಶವಪೆಟ್ಟಿಗೆಗಳನ್ನು ಅಂತ್ಯಕ್ರಿಯೆಗಾಗಿ ಉಕ್ರೇನ್ ಸೈನಿಕರು ಹೆಗಲಮೇಲೆ ಹೊತ್ತು ಸಾಗಿದರು – ಎಎಫ್‌ಪಿ ಚಿತ್ರ

ತಾಳ್ಮೆ ಪರೀಕ್ಷಿಸದಿರಿ: ಪಶ್ಚಿಮಕ್ಕೆ ಎಚ್ಚರಿಕೆ

ಲಂಡನ್/ ಮಾಸ್ಕೊ (ರಾಯಿಟರ್ಸ್/ಎಎಫ್‌ಪಿ): ‘ನಮ್ಮ ಭೂಪ್ರದೇಶದ ಮೇಲಿನ ಯಾವುದೇ ದಾಳಿಗೆ ಸೇನೆಯಿಂದ ಕಠಿಣ ಪ್ರತ್ಯುತ್ತರ ನೀಡಲಾಗುವುದು’ ಎಂದು ರಷ್ಯಾ ಗುರುವಾರ ಪಶ್ಚಿಮದ ರಾಷ್ಟ್ರಗಳಿಗೆ ಎಚ್ಚರಿಕೆ ನೀಡಿದೆ.

‘ಅಮೆರಿಕ ಮತ್ತು ಅದರ ಪ್ರಮುಖ ಮಿತ್ರರಾಷ್ಟ್ರಗಳು ರಷ್ಯಾದ ಮೇಲೆ ಆಕ್ರಮಣ ನಡೆಸಲು ಉಕ್ರೇನ್ ಅನ್ನು ಬಹಿರಂಗವಾಗಿ ಪ್ರಚೋದಿಸುವ ಮೂಲಕ ಯುರೋಪ್ ಖಂಡದ ಭದ್ರತೆಯನ್ನು ದುರ್ಬಲಗೊಳಿಸುತ್ತಿವೆ’ ಎಂದು ಅದು ಆರೋಪಿಸಿದೆ.

ಮಾಸ್ಕೊದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ರಷ್ಯಾದ ವಿದೇಶಾಂಗ ಸಚಿವಾಲಯದ ವಕ್ತಾರೆ ಮಾರಿಯಾ ಜಖರೋವಾ ‘ನ್ಯಾಟೊ ದೇಶಗಳ ಶಸ್ತ್ರಾಸ್ತ್ರಗಳನ್ನು ಬಳಸಿಕೊಂಡು ರಷ್ಯಾದ ಮೇಲೆ ದಾಳಿ ಮಾಡಲು ಉಕ್ರೇನ್‌ಗೆ ಬಹಿರಂಗವಾಗಿ ಪಾಶ್ಚಾತ್ಯ ರಾಷ್ಟ್ರಗಳು ಕರೆ ನೀಡುತ್ತಿವೆ. ನಮ್ಮ ತಾಳ್ಮೆಯನ್ನು ಮತ್ತಷ್ಟು ಪರೀಕ್ಷಿಸಬೇಡಿ’ ಎಂದು ಎಚ್ಚರಿಸಿದರು.

‘ನಮ್ಮ ಮೇಲೆ ದಾಳಿಗಳು ಮುಂದುವರಿದರೆ ಪಾಶ್ಚಿಮಾತ್ಯ ಸಲಹೆಗಾರರು ಉಕ್ರೇನ್‌ಗೆ ನೆರವು ನೀಡುತ್ತಿರುವ ಕೇಂದ್ರಗಳು ರಷ್ಯಾ ಪಡೆಯ ದಾಳಿಗೆ ಗುರಿಯಾಗಲಿವೆ’ ಎಂದು ರಷ್ಯಾದ ರಕ್ಷಣಾ ಸಚಿವಾಲಯ ಕೂಡ ಎಚ್ಚರಿಕೆ ನೀಡಿದೆ.



ರಷ್ಯಾ–ಉಕ್ರೇನ್ ಸಮರಾಂಗಣ

‘ವಂದೆ ಭಾರತ್’ ರೈಲು ನಿರ್ಮಾಣಕ್ಕೆ ಹಿನ್ನಡೆ

ನವದೆಹಲಿ: ಉಕ್ರೇನ್–ರಷ್ಯಾ ಯುದ್ಧದಿಂದಾಗಿ ಹೊಸ ‘ವಂದೇ ಭಾರತ್’ ರೈಲುಗಳ ನಿರ್ಮಾಣಕ್ಕೆ ಹಿನ್ನಡೆ ಉಂಟಾಗಿದೆ.

‘ವಂದೆ ಭಾರತ್ ರೈಲುಗಳ ನಿರ್ಮಾಣಕ್ಕೆ ಅಗತ್ಯವಿರುವ ಕೆಲ ಭಾಗಗಳನ್ನು ಉಕ್ರೇನ್‌ನಲ್ಲಿ ಉತ್ಪಾದಿಸಲಾಗುತ್ತಿದ್ದು, ಯುದ್ಧದಿಂದಾಗಿ ಇವುಗಳ ಆಮದು ಸ್ಥಗಿತಗೊಂಡಿದೆ.’ ಎಂದು ವಿದೇಶಾಂಗ ಸಚಿವಾಲಯ ವಕ್ತಾರ ಅರಿಂದಮ್ ಬಾಗ್ಚಿ ಗುರುವಾರ ಹೇಳಿದ್ದಾರೆ.

36,000 ಗಾಲಿಗಳನ್ನು (₹ 122 ಕೋಟಿ ವೆಚ್ಚ) ಪೂರೈಸುವಂತೆ ಭಾರತೀಯ ರೈಲ್ವೆಯು ಉಕ್ರೇನ್‌ನ ಕಂಪನಿಯೊಂದಕ್ಕೆ ಬೇಡಿಕೆ ಸಲ್ಲಿಸಿದೆ. ಈ ಗಾಲಿಗಳನ್ನು ಹೊತ್ತ ಹಡುಗು ಉಕ್ರೇನ್‌ನಿಂದ ಮುಂಬೈನ ಜವಾಹರಲಾಲ್ ನೆಹರೂ ಬಂದರಿಗೆ ಬರಬೇಕಿತ್ತು. ಯುದ್ಧದಿಂದಾಗಿ ಇದು ಸಾಧ್ಯವಾಗಿಲ್ಲ ಎಂದು ರೈಲ್ವೆ ಅಧಿಕಾರಿಗಳು ಹೇಳಿದ್ದಾರೆ.

ಒಡಿಸ್ಸಿ ನೃತ್ಯಗುರು ರಾವುತ್ ಮನೆ ಖಾಲಿ ಮಾಡಿಸಿದ ಅಧಿಕಾರಿಗಳು

ನವದೆಹಲಿ (ಪಿಟಿಐ): ಪದ್ಮಶ್ರೀ ಪುರಸ್ಕೃತ ಒಡಿಸ್ಸಿ ನೃತ್ಯಗುರು, 90 ವರ್ಷದ ಮಾಯಾಧರ ರಾವುತ್ ಅವರು ತಮಗೆ ಹಂಚಿಕೆಯಾಗಿದ್ದ ಸರ್ಕಾರಿ ಬಂಗಲೆಯಲ್ಲಿ ಊಟ ಮಾಡುತ್ತಿದ್ದಾಗ ಭೇಟಿ ನೀಡಿದ ಅಧಿಕಾರಿಗಳ ತಂಡ, ತಡಮಾಡದೇ ಮನೆ ತೆರವು ಮಾಡಿಸಿದೆ.

‘ಊಟ ಮುಗಿಸಲು 10 ನಿಮಿಷದಷ್ಟೂ ಕಾಲಾವಕಾಶ ನೀಡದ ಅಧಿಕಾರಿಗಳು, ಏಷ್ಯನ್ ಗೇಮ್ಸ್ ವಿಲೇಜ್‌ನ ಮನೆಯಿಂದ ಹೊರದಬ್ಬಿದರು’ ಎಂದು ಮಾಯಾಧರ ಅವರ ಪುತ್ರಿ ಮಧುರಿಮಾ ಅವರು ಗುರುವಾರ ಆರೋಪಿಸಿದ್ದಾರೆ. ಎರಡು ದಿನಗಳ ಹಿಂದೆ ತಮ್ಮ ತಂದೆ ಮನೆಗೆ ಭೇಟಿ ನೀಡಿದ್ದಾಗ ಈ ಘಟನೆ ನಡೆದಿದೆ ಎಂದು ಅವರು ಹೇಳಿದ್ದಾರೆ.

‘ಈ ಘಟನೆಯನ್ನು ಜಡವಾಗಿ ನಾನು ನೋಡುತ್ತಿದ್ದೆ. 90 ವರ್ಷದ ತಂದೆಗೆ ಎದುರಾದ ಈ ಸ್ಥಿತಿ ಕಂಡು ಕಣ್ಣೀರು ಬಂತು. ಅವರು ಅಸ್ತಮಾ, ದೃಷ್ಟಿದೋಷ ಹಾಗೂ ರಕ್ತದೊತ್ತಡದಿಂದ ಬಳಲುತ್ತಿದ್ದಾರೆ. ಎರಡು ನಿಮಿಷವಾದರೂ ಸಮಯ ನೀಡಿ ಎಂದು ಕೇಳಿಕೊಂಡರೂ ಅವಕಾಶ ಸಿಗಲಿಲ್ಲ’ ಎಂದು ಮಧುರಿಮಾ ಆರೋಪಿಸಿದ್ದಾರೆ.

ರಾವುತ್ ಅವರು ಕೋಲು ಹಿಡಿದು ನಡೆದುಹೋಗುತ್ತಿರುವ ಹಾಗೂ ಅವರಿಗೆ ಸಂದ ಪದ್ಮ ಪ್ರಶಸ್ತಿ ಹಾಗೂ ಇನ್ನಿತರ ವಸ್ತುಗಳು ಮನೆಯ ಹೊರಗಡೆ ಬಿದ್ದಿದ್ದ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ.

ಸರ್ಕಾರಿ ಬಂಗಲೆಗಳನ್ನು ತೆರವುಗೊಳಿಸುವಂತೆ ಸರ್ಕಾರವು 8 ಖ್ಯಾತ ಕಲಾವಿದರಿಗೆ 2014ರಲ್ಲಿಯೇ ಸೂಚಿಸಿತ್ತು.

ಸಂಕ್ಷಿಪ್ತ ಸುದ್ದಿ

ಅತ್ಯಾಚಾರ: ನಟ ವಿಜಯ್ ಬಾಬು ತನಿಖೆ

ಕೊಚ್ಚಿ (ಪಿಟಿಐ): ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಮಲಯಾಳ ಚಿತ್ರನಟ ಹಾಗೂ ನಿರ್ಮಾಪಕ ವಿಜಯ್ ಬಾಬು ವಿರುದ್ಧ ಕೇರಳ ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.

‘ಪ್ರಾಥಮಿಕವಾಗಿ ಆರೋಪ ಸಾಬೀತಾಗಿದ್ದು, ಆರೋಪಿ ದೇಶ ತೊರೆಯುವ ಸಾಧ್ಯತೆ ಇರುವುದರಿಂದ ಆತನ ವಿರುದ್ಧ ಲುಕ್‌ಔಟ್ ನೋಟಿಸ್ ಜಾರಿಗೊಳಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಮೀಸಲು ಅಭ್ಯರ್ಥಿ ಅಧಿಕ ಅಂಕ ಗಳಿಸಿದರೆ ಸಾಮಾನ್ಯ ವರ್ಗಕ್ಕೆ’


ನವದೆಹಲಿ: ಸಾಮಾನ್ಯ ವರ್ಗದಲ್ಲಿ ಆಯ್ಕೆಯಾದ ಕೊನೆಯ ಅಭ್ಯರ್ಥಿ ಪಡೆದದ್ದಕ್ಕಿಂತ ಅಧಿಕ ಅಂಕಗಳನ್ನು ಗಳಿಸಿದ ಮೀಸಲಾತಿ ಇರುವ ಅಭ್ಯರ್ಥಿಯನ್ನು ‘ಸಾಮಾನ್ಯ ವರ್ಗ’ದಡಿ ಪರಿಗಣಿಸಬೇಕು ಎಂದು ಸುಪ್ರೀಂಕೋರ್ಟ್ ಗುರುವಾರ ಹೇಳಿದೆ.

‘ಮೀಸಲಾತಿ ಇರುವ ವರ್ಗಗಳ ಅಭ್ಯರ್ಥಿಗಳು ಅರ್ಹತೆ ಹಾಗೂ ತಾವು ಪಡೆದ ಸ್ಥಾನದ ಕಾರಣಗಳಿಂದಾಗಿ ಮೀಸಲಾತಿ ಇಲ್ಲದ ಹುದ್ದೆಗಳಿಗೆ ಆಯ್ಕೆಯಾಗುವಂತಿದ್ದರೆ, ಆ ಅಭ್ಯರ್ಥಿಗಳು ಸಾಮಾನ್ಯ ವರ್ಗದಲ್ಲಿನ ಹುದ್ದೆಗಳನ್ನೇ ಆಯ್ಕೆ ಮಾಡಿಕೊಳ್ಳಬಹುದು’ ಎಂದು ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಹಾಗೂ ಬಿ.ವಿ.ನಾಗರತ್ನಾ ಅವರಿದ್ದ ನ್ಯಾಯಪೀಠ ತಿಳಿಸಿದೆ.

ಇಬ್ಬರು ಉಗ್ರರ ಹತ್ಯೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಪುಲ್ವಾಮ ಜಿಲ್ಲೆಯ ಮಿಟ್ರಿಗಾಮ್ ಪ್ರದೇಶದಲ್ಲಿ ಗುರುವಾರ ಭದ್ರತಾ ಪಡೆಗಳು ಹಾಗೂ ಉಗ್ರರ ನಡುವಿನ ಗುಂಡಿನ ಚಕಮಕಿಯಲ್ಲಿ ಅಲ್–ಬದ್ರ್ ಸಂಘಟನೆಗೆ ಸೇರಿದ ಇಬ್ಬರು ಉಗ್ರರು ಹತರಾಗಿದ್ದಾರೆ.

ಹತರಾದ ಉಗ್ರರನ್ನು ಐಜಾಜ್ ಹಫೀಜ್ ಮತ್ತು ಶಾಹಿದ್ ಅಯೂಬ್ ಎಂದು ಗುರುತಿಸಲಾಗಿದೆ.



ಇಂದು ತೆರೆಗೆ ಮೂರು ಚಿತ್ರಗಳು



ಅಜಯ್ ರಾವ್, ಸಂಜನಾ ಆನಂದ್

‘ಶೋಕಿವಾಲ’

ಚಂದನವನದಲ್ಲಿ ಇಂದು (ಏ. 29) ಮೂರು ಚಿತ್ರಗಳು ತೆರೆ ಕಾಣುತ್ತಿವೆ. ಕೆಜಿಎಫ್ – 2 ಆರ್ಭಟ ತಿಳಿಯಾಗುತ್ತಿದ್ದಂತೆಯೇ ಹೊಸ ಚಿತ್ರಗಳು ನಿಧಾನಕ್ಕೆ ಚಿತ್ರಮಂದಿರ ಪ್ರವೇಶಿಸಿವೆ.

ಅಜಯ್ ರಾವ್ ಅವರನ್ನು ಹಾಸ್ಯ ಪಾತ್ರದಲ್ಲಿ ತೋರಿಸಿದ ‘ಶೋಕಿವಾಲ’ ಇಂದು ತೆರೆಗೆ ಬಂದಿದ್ದಾನೆ. ಕ್ರಿಸ್ಟಲ್ ಪಾರ್ಕ್ ಸಿನಿಮಾ ಲಾಂಛನದಲ್ಲಿ ಟಿ.ಆರ್.ಚಂದ್ರಶೇಖರ್ ಹಾಗೂ ಕಿಶೋರ್ ಅವರು ‘ಶೋಕಿವಾಲ’ ನಿರ್ಮಿಸಿದ್ದಾರೆ.

ಜಾಕಿ ನಿರ್ದೇಶನದ ಈ ಚಿತ್ರದಲ್ಲಿ ಅಜಯ್ ರಾವ್ ನಾಯಕ. ಸಂಜನಾ ಆನಂದ್ ನಾಯಕಿ. ಪಕ್ಕಾ ಹಳ್ಳಿ ಸೊಗಡಿನ ಈ ಚಿತ್ರದಲ್ಲಿ ಶರತ್ ಲೋಹಿತಾಶ್ವ, ಗಿರೀಶ್ ಶಿವಣ್ಣ, ತಬಲಾನಾಣಿ, ಮುನಿರಾಜ್, ಪ್ರಮೋದ್ ಶೆಟ್ಟಿ, ಅರುಣ ಬಾಲರಾಜ್, ವಾಣಿ, ಚಂದನ, ಲಾಸ್ಯ, ನಾಗರಾಜಮೂರ್ತಿ ನಟಿಸಿದ್ದಾರೆ.

‘ಮೇಲೊಬ್ಬ ಮಾಯಾವಿ’

ನಟ ದಿವಂಗತ ಸಂಚಾರಿ ವಿಜಯ್ ನಟನೆಯ ಕೊನೆಯ ಚಿತ್ರ, ‘ಮೇಲೊಬ್ಬ ಮಾಯಾವಿ’ ಸಿನಿಮಾ ಇಂದು ಬಿಡುಗಡೆಯಾಗಿದೆ. ಹರಳು ಮಾಫಿಯಾ ಕಥಾಹಂದರದ ಈ ಚಿತ್ರದಲ್ಲಿ ಬಿಗ್‌ಬಾಸ್ ಖ್ಯಾತಿಯ ಚಕ್ರವರ್ತಿ ಚಂದ್ರಚೂಡ್ ಖಳನಾಯಕನಾಗಿ ಬಣ್ಣಹಚ್ಚಿದ್ದಾರೆ.

ಬಿ.ನವೀನ್ ಕೃಷ್ಣ ನಿರ್ದೇಶನದ ಈ ಚಿತ್ರದಲ್ಲಿ, ‘ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಯ ಗಡಿಭಾಗದ ಪುಷ್ಪಗಿರಿ ಅಭಯಾರಣ್ಯ ಭಾಗದಲ್ಲಿ ನಡೆಯುತ್ತಿರುವ ಹರಳು ಕಲ್ಲು ದಂಧೆಯ ಕರಾಳಮುಖವನ್ನು ‘ಇರುವೆ’ ಎಂಬ ತಮ್ಮ ಪಾತ್ರದ ಮುಖೇನ ಸಂಚಾರಿ ವಿಜಯ್ ಬಿಚ್ಚಿಡಲಿದ್ದಾರೆ. ರಂಗಭೂಮಿ ಪ್ರತಿಭೆ ಅನನ್ಯ ಶೆಟ್ಟಿ ಈ ಚಿತ್ರದ ನಾಯಕಿ.

‘ಕ್ಷಮಿಸಿ ನಿಮ್ಮ ಖಾತೆಯಲ್ಲಿ ಹಣವಿಲ್ಲ’

ತಾರಾ ಜೋಡಿ ದಿಗಂತ್ - ಐಂದ್ರಿತಾ ರೇ ನಟಿಸಿರುವ ‘ಕ್ಷಮಿಸಿ ನಿಮ್ಮ ಖಾತೆಯಲ್ಲಿ ಹಣವಿಲ್ಲ’ ಚಿತ್ರ ಇಂದು ತೆರೆಗೆ ಬಂದಿದೆ. ನಟಿ ರಂಜನಿ ರಾಘವನ್ ಮತ್ತಿತರರು ತಾರಾಗಣದಲ್ಲಿದ್ದಾರೆ. ವಿನಾಯಕ ಕೋಡ್ಸರ ಈ ಚಿತ್ರದ ನಿರ್ದೇಶಕರು.

‘ಮನುಷ್ಯ ಟ್ರಿಗರ್ ಆಗಬೇಕು ಕಣ್ರೀ...



ಮನುಷ್ಯನನ್ನು ಟ್ರಿಗರ್ ಮಾಡಬೇಕು. ಆಗ ಅವನು ಜಾಗೃತನಾಗಿ ಪರಿಶ್ರಮದ ಹಾದಿ ಹಿಡಿಯುತ್ತಾನೆ. ಬದುಕಿನಲ್ಲಿ ಹೀಗೆ ನಡೆದುಕೊಂಡವರೇ ನನಗೆ ಸ್ಫೂರ್ತಿ ಎನ್ನುತ್ತಾ ನಾಯಕನಾಗಿ ಪ್ರವೇಶಿಸಿ ನಿರ್ದೇಶಕನ ಟೋಪಿ ಧರಿಸಿದ್ದಾರೆ ವಿಕ್ಕಿ ವರುಣ್. ಹಲವು ಯಶಸ್ವಿ ಸಿನಿಮಾಗಳ ಬಳಿಕ ಈಗ ‘ಕಾಲಾಪತ್ಥರ್’ನ ಚುಕ್ಕಾಣಿ ಹಿಡಿದಿದ್ದಾರೆ.

ಶರತ್ ಹೆಗ್ಡೆ

- **ಸಿನಿಮಾ ಹಿನ್ನೆಲೆ ಏನು?**

ನಮ್ಮದು ರೈತಾಪಿ ಕುಟುಂಬ. ಮನೆಯಲ್ಲಿ ಎಲ್ಲರೂ ಸಿನಿಮಾ ‘ಭಕ್ತರು’. ಯಾವುದೇ ಹೊಸ ಸಿನಿಮಾ ಬಂದರೂ ಅಪ್ಪ, ಅಮ್ಮನ ಜೊತೆ ನಾವೆಲ್ಲರೂ ಸಿನಿಮಾಕ್ಕೆ ಹೋಗುತ್ತಿದ್ದೆವು. ನನಗೆ ಗೊತ್ತಿಲ್ಲದ ಹಾಗೆ ಸಿನಿಮಾ ಕ್ರೇಜ್ ಬೆಳೆದುಬಿಟ್ಟಿತು. ಯಾವುದೇ ಹೊಸ ಕ್ಯಾಸೆಟ್ ಬಂದರೂ ಅದನ್ನು ಕೊಳ್ಳುವವರೆಗೆ ಬಿಡುತ್ತಿರಲಿಲ್ಲ. ಪದವಿ ಶಿಕ್ಷಣ ಮುಗಿದ ಬಳಿಕ ಸಿನಿಮಾಕ್ಕೆ ಹೋಗಲು ಪ್ರಯತ್ನಿಸಿದೆ. ಯೋಗರಾಜ್ ಭಟ್, ಸೂರಿ ಅವರ ಬಳಿ ಸಹಾಯಕನಾಗಿ ಕೆಲಸ ಮಾಡಿ ಈಗ ನಿರ್ದೇಶನದ ಹಂತಕ್ಕೆ ಬಂದಿದ್ದೇನೆ ನೋಡಿ.

- **ನಿರ್ದೇಶನವೇ ಆಸಕ್ತಿ ಯಾಕೆ?**

ಅದಕ್ಕೂ ಮೊದಲು ಒಂದು ಸಂಗತಿ ಹೇಳಬೇಕು. ಇವನೇನಾಗುತ್ತಾನೋ ಎಂದೆಲ್ಲಾ ಛೇಡಿಸುವವರು, ಆಡಿಕೊಳ್ಳುವವರೂ ಇದ್ದರು. ಇದನ್ನೆಲ್ಲವನ್ನೂ ಮೀರಿ ಬೆಳೆಯಬೇಕು ಎಂಬ ಹಟ ಬಂತು. ಅದುವರೆಗೆ ಸಿನಿಮಾ ನೋಡಿ ಕಥೆ ಹೇಳುತ್ತಿದ್ದೆ. ಆದರೆ, ಈಗ ಸಿನಿಮಾ ಜಗತ್ತಿನೊಳಗೆ ಪ್ರವೇಶಿಸಬೇಕು. ಒಂದಿಷ್ಟು ಓದಿಕೊಂಡೆ. ಇಲ್ಲಿ ಮೇಕಿಂಗ್ ಅನ್ನುವುದು ನಮ್ಮ ಕಲ್ಪನೆಯನ್ನು ಸಾಕಾರಗೊಳಿಸುವ ಕ್ರಿಯೆ. ಅಂದರೆ ನಾನೇ ಆ ಚಿತ್ತಾರ ಬಿಡಿಸಬೇಕು. ಅದು ನಿರ್ದೇಶಕನಿಂದ ಸಾಧ್ಯ. ಯೋಗರಾಜ್ ಭಟ್ಟರ ಪ್ರಭಾವ, ಸೂರಿ ಅವರು ಕಲಿಸಿದ ಬದುಕಿನ ಪಾಠಗಳೂ ಜೊತೆಗಿದ್ದವು. ನಟನೆಯ ಅವಕಾಶವೇನೋ ಬಂದಿತು. ಆದರೆ, ನಿರ್ದೇಶನವೇ ನನ್ನ ಗುರಿ ಆಗಿತ್ತು.

- **‘ಕಾಲಾಪತ್ಥರ್’ನಲ್ಲಿ ಏನಿದೆ?**

ಇದು ಪೂರ್ಣ ಹೊಸದು. ಪ್ರಯೋಗಾತ್ಮಕ ಕಮರ್ಷಿಯಲ್ ಚಿತ್ರ. ಹಾಗೆಂದು ಭೂಗತ ಜಗತ್ತಿನ ಕಥೆ ಅಲ್ಲ. ಒಬ್ಬ ನಿರೂಪಕನಿಂದ ಆರಂಭವಾಗಿ ಅವರಿಂದಲೇ ಕೊನೆಗೊಳ್ಳುತ್ತದೆ. ನಮ್ಮ ನಾಡಿನದೇ ಕಥೆ ಇದು. ಕಥೆಯೊಳಗೆ ಇಳಿದಂತೆ ಈ ಸಿನಿಮಾ ಪ್ರೇಕ್ಷಕನಿಗೆ ತುಂಬಾ ಮಜಾ ಕೊಡುತ್ತದೆ.

- **ನಿಮ್ಮ ಮತ್ತು ಧನ್ಯಾ ರಾಜ್‌ಕುಮಾರ್ ಕಾಂಬಿನೇಷನ್ ಹೇಗಿದೆ?**

ಧನ್ಯಾ ಅವರದ್ದು ತುಂಬಾ ಪ್ರಬುದ್ಧ ಪಾತ್ರ. ಲಂಗ ದಾವಣಿ ಹಾಕಿಕೊಂಡ ಹಳ್ಳಿ ಹೆಣ್ಣು ಮಗಳು ಗಂಗಾ. ನಾಯಕ (ವಿಕ್ಕಿ) ಶಂಕರ. ಶಂಕರ ಗಂಗಾಳನ್ನು ತಲೆಯ ಮೇಲೆ ಹೊತ್ತಿರುತ್ತಾನಲ್ಲಾ, ಅಂಥದ್ದೇ ಕಲ್ಪನೆಯನ್ನು ಇಲ್ಲಿ ಹೇಳಲು ಹೊರಟಿದ್ದೇವೆ.

ಈಗ ಚಿತ್ರದ ಟಾಕಿ ಭಾಗ ಮತ್ತು ಒಂದೆರಡು ಸಾಹಸ ದೃಶ್ಯಗಳು ಬಾಕಿ ಇವೆ. ಬಹುಶಃ ಜೂನ್ ವೇಳೆ ಚಿತ್ರ ತೆರೆಗೆ ಬರಲಿದೆ.

- **ಸಿನಿಮಾ ಅಂದರೆ ನಿಮ್ಮ ಪ್ರಕಾರ?**

ನೋಡಿ ಚಿತ್ರೋದ್ಯಮದಲ್ಲಿ ನನ್ನನ್ನು ಇನ್ನೂ ಹೊಸಬ ಎಂದೇ ಗುರುತಿಸುತ್ತಾರೆ. ಅದೇನೇ ಇರಲಿ, ಕಥೆಯನ್ನು ಕನಿಷ್ಠಮಟ್ಟದಲ್ಲಿ ಪ್ರಸ್ತುತಪಡಿಸಿ. ಅದು ಪ್ರೇಕ್ಷಕನಿಗೆ ಅರ್ಥವಾದರೆ ಸಾಕು. ಚಿತ್ರ ಗೆಲ್ಲುತ್ತದೆ. ಕಥೆಯೇ ಪ್ರಧಾನ ವಿಷಯ. ಹಾಗಾಗಿ ಎಷ್ಟು ಅದ್ದೂರಿಯಾಗಿ ಮಾಡುತ್ತೀರಿ ಅನ್ನುವುದಕ್ಕಿಂತಲೂ ಎಷ್ಟು ಅರ್ಥಮಾಡಿಸುತ್ತೀರಿ ಎನ್ನುವುದು ಮುಖ್ಯ.

- **ಮುಂದಿನ ಯೋಜನೆಗಳು?**

ನಾನು ಈವರೆಗೂ ಹೀಗೇ ಎಂದು ಯೋಜನೆ ಹಾಕಿದವನಲ್ಲ. ಅವಕಾಶಗಳು ಬಂದವು. ಹಾಗೇ ಬಂದಿದ್ದೇನೆ. ಕಾಲ ಹೇಗೆ ದಾರಿ ತೋರುತ್ತದೆಯೋ ಅದರ ಪ್ರಕಾರ ಹೋಗುತ್ತೇನೆ. ಒಳ್ಳೆಯ ಕತೆ ಇರುವ ಚಿತ್ರಗಳನ್ನು ಮಾಡಬೇಕು. ಮನುಷ್ಯನನ್ನು ಟ್ರಿಗರ್ ಮಾಡುತ್ತಲೇ ಇರಬೇಕು ಬೆಳೆಯುತ್ತಲೇ ಹೋಗುತ್ತೇವೆ.

- **ಶೂಟಿಂಗ್ ಸಂದರ್ಭದ ಅನುಭವಗಳು?**

ಖಂಡಿತಾ ಅವುಗಳನ್ನು ಮರೆಯಲಾಗದು. ವಿಜಯಪುರ ಜಿಲ್ಲೆಯ ಜೈನಾಪುರ ಎಂಬ ಹಳ್ಳಿಯಲ್ಲಿ ನಮ್ಮ ಶೂಟಿಂಗ್ ಇತ್ತು. ಆ ಊರಿನ ಜನ ಇಡೀ ಊರನ್ನೇ ಸೆಟ್ ರೂಪದಲ್ಲಿ ಬಿಟ್ಟುಕೊಟ್ಟರು. ಪ್ರತಿ ಮನೆಯಲ್ಲೂ ನಾನು ಊಟ ಮಾಡಿದ್ದೇನೆ. ಜನರೂ ನಮ್ಮನ್ನು ಮನೆಗೆ ಕರೆಯುತ್ತಿದ್ದರು. ಮನೆಯ ಮಕ್ಕಳ ಹಾಗೆ ನೋಡಿಕೊಂಡಿದ್ದಾರೆ. ಶೂಟಿಂಗ್ ಮುಗಿದಾಗ ಊರಿನ ಜನರೇ ಅತ್ತುಬಿಟ್ಟರು. ನಾವೂ ಭಾವುಕರಾದೆವು. ಈ ಕಾಲದಲ್ಲೂ ಇಂಥ ಜನ ಇರುತ್ತಾರಾ? ಒಳ್ಳೆಯತನ ಇನ್ನೂ ಇಷ್ಟು ಇದೆಯಾ ಎಂದು ಅಚ್ಚರಿಪಟ್ಟಿದ್ದೇನೆ. ಹಾಗಾಗಿಯೇ ಮಳೆ– ಬೆಳೆ ಸಕಾಲದಲ್ಲಿ ಆಗುತ್ತಿದೆ. ನಮ್ಮ ಶೂಟಿಂಗ್ ಸ್ಥಳಕ್ಕೆ ದಿನಾ ಬರುತ್ತಿದ್ದ ನಾಯಿಯೊಂದು ನಾವು ವಾಪಸಾದ ಬಳಿಕ ಎರಡು ದಿನ ಆಹಾರ ಸೇವಿಸಲಿಲ್ಲ ಎಂದೂ ಕೇಳಿದ್ದೇನೆ. ಅಷ್ಟೊಂದು ಗಾಢ ಪ್ರೀತಿಯನ್ನು ಸಂಪಾದಿಸಿದ್ದೇನೆ.

ವಿಕ್ಕಿ ವರುಣ್

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಸಂಸ್ಕೃತ– ಕನ್ನಡದ ‘ಏಕಚಕ್ರಂ’



ಭಾಗೀರಥಿ ಬಾಯಿ ಕದಂ

ಏಕಚಕ್ರ ನಗರದಲ್ಲಿ ಪಾಂಡವರು ಬೀಡುಬಿಟ್ಟಿದ್ದಾಗ ಅಲ್ಲಿ ಭೀಮ ಬಕಾಸುರನನ್ನು ಕೊಂದ ಕಥೆಯನ್ನು ಕೇಳಿದ್ದೇವಲ್ಲಾ. ಅದೇ ಕಥೆಯನ್ನು ಹಿನ್ನೆಲೆಯಾಗಿಟ್ಟುಕೊಂಡು ಪ್ರಸ್ತುತ ವಿದ್ಯಮಾನಗಳಿಗೆ ಹೊಂದಿಸಿ ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಮೂಡಿಬಂದ ಚಿತ್ರ ‘ಏಕಚಕ್ರಂ’. ದ್ವಾಪರಕ್ಕೊಮ್ಮೆ ಹೋಗಿ, ಇಂದಿನ ಕಾಲಘಟ್ಟಕ್ಕೆ ದೃಶ್ಯ ಸಮೀಕರಿಸಿ ಮತ್ತೆ ಪುರಾಣದೊಂದಿಗೆ ಬೆಸೆಯುವ ಅಪರೂಪದ ಪ್ರಯತ್ನ ಇಲ್ಲಿ ನಡೆದಿದೆ.

ಸಂಸ್ಕೃತದಲ್ಲಿ ಚಲನಚಿತ್ರಗಳು ಬರುವುದೇ ತೀರಾ ಅಪರೂಪ. ಅಂಥದ್ದೊಂದು ಪ್ರಯತ್ನವನ್ನು ಸುಚೇಂದ್ರ ಪ್ರಸಾದ್ ಮಾಡಿದ್ದಾರೆ. ಸುಚಿತ್ರಾ ಫಿಲ್ಮ್ ಸೊಸೈಟಿಯಲ್ಲಿ ಈ ಚಿತ್ರದ ಪ್ರದರ್ಶನ ಇತ್ತೀಚೆಗೆ ನಡೆಯಿತು. ಸಂಸ್ಕೃತ ಚಿತ್ರ ಅರ್ಥವಾದೀತೇ ಎಂಬ ಗುಮಾನಿಯೊಂದಿಗೆ ಪ್ರೇಕ್ಷಕರು ಬಂದಿದ್ದರು. ಆದರೆ, ಕೊನೆಗೆ ಮಕ್ಕಳಿಂದ ಹಿರಿಯರವರೆಗೆ ಕಥೆ ಅರ್ಥವಾಯಿತು. ಎಲ್ಲ ಪ್ರೇಕ್ಷಕರೂ ಸಕಾರಾತ್ಮಕ ಪ್ರತಿಕ್ರಿಯೆಯನ್ನೇ ನೀಡಿದರು.



ಸುಚೇಂದ್ರ ಪ್ರಸಾದ್

‘ಹೀಗೊಂದು ಪ್ರಯೋಗ ಮಾಡಬೇಕು ಎಂಬ ಇಚ್ಛೆ ಇತ್ತು. ಸಂಸ್ಕೃತದ ವಿದ್ಯಾರ್ಥಿ ಹಾಗೂ ಅಧ್ಯಯನಾಸಕ್ತನಾಗಿ ಇದು ನನ್ನ ಕರ್ತವ್ಯವೂ ಆಗಿತ್ತು. ಹೀಗೆ ಅಧ್ಯಯನದ ಸಂದರ್ಭದಲ್ಲಿ ಡಾ.ಎನ್.ರಂಗನಾಥ ಶರ್ಮಾ ಅವರ ‘ಏಕಚಕ್ರಂ’ ಚತುರಂಕಗಳ ರೂಪಕ ಕೃತಿ ಸಿಕ್ಕಿತು. ಅದನ್ನು ಓದುತ್ತಾ ಹೋದಾಗ ಅನಿಸಿದ್ದು, ಅಂದಿನ ಪರಿಸ್ಥಿತಿ ಈಗಲೂ ಮುಂದುವರಿದಿದೆ. ಇದನ್ನು ಬೆಳ್ಳಿತೆರೆಗೆ ತರಬೇಕು ಅನಿಸಿತು’ ಎಂದರು ಸುಚೇಂದ್ರ ಪ್ರಸಾದ್.

‘ಚಿತ್ರದ ಪ್ರದರ್ಶನಕ್ಕೆ ಉತ್ತಮ ಬೇಡಿಕೆ ಇದೆ. ವಾರಾಂತ್ಯದ ಪ್ರದರ್ಶನಗಳ ಮೂಲಕ ಪ್ರೇಕ್ಷಕರಿಗೆ ಚಿತ್ರವನ್ನು ತಲುಪಿಸಿದ್ದೇವೆ. 73 ನಿಮಿಷಗಳ ಈ ಪ್ರಸ್ತುತಿಗೆ ಪ್ರೇಕ್ಷಕರು ಮೂರು ನಾಲ್ಕು ಗಂಟೆಗಳ ಕಾಲ ಚರ್ಚೆ ಮಾಡಿದ್ದಾರೆ. ಆರ್ಥಿಕತೆ ಪ್ರಧಾನವಲ್ಲದ, ಅದನ್ನೂ ಮೀರಿದ, ಕೃತಿಗೆ ನ್ಯಾಯ ದೊರಕಿಸುವ ಸಿನಿಮಾ ಇದು’ ಎಂದರು ಅವರು.

ಭಾಗೀರಥಿ ಬಾಯಿ ಕದಂ, ಶರತ್ ಲೋಹಿತಾಶ್ವ, ಹರೀಶ್ ಭಟ್ಟ, ರವೀಶ್ ಹೆಗಡೆ, ಗೋಪಿಕಾ ಚಿತ್ರದ ತಾರಾಗಣದಲ್ಲಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ನೀವು ನಡೆಯಲು ಆರಂಭಿಸಿದರೆ ದಾರಿ ತಾನಾಗಿಯೇ ಗೋಚರಿಸತೊಡಗುತ್ತದೆ.

–ರೂಮಿ

ವಿದ್ಯುತ್ ಚಾಲಿತ ವಾಹನಗಳಲ್ಲಿ ಬೆಂಕಿ ಕಾರಣಗಳ ಪತ್ತೆ ಶೀಘ್ರ ಆಗಲಿ

ವಿದ್ಯುತ್ ಚಾಲಿತ ದ್ವಿಚಕ್ರ ವಾಹನಗಳಿಗೆ ಬೆಂಕಿ ಹೊತ್ತಿಕೊಂಡ ಕೆಲವು ಪ್ರಕರಣಗಳು ಈಚಿನ ದಿನಗಳಲ್ಲಿ ದೇಶದ ಹಲವೆಡೆಗಳಿಂದ ವರದಿಯಾಗಿವೆ. ಕೆಲವು ಘಟನೆಗಳಲ್ಲಿ ಜೀವಹಾನಿ ಆಗಿದೆ. ವಾಹನಗಳು ಚಾರ್ಜ್ ಆಗುತ್ತಿದ್ದ ಸಂದರ್ಭದಲ್ಲಿ ಬ್ಯಾಟರಿ ಸ್ಫೋಟಗೊಂಡಿದ್ದರಿಂದ ಹೀಗಾಗಿದೆ ಎಂದು ಹೇಳಲಾಗಿದೆ. ಆದರೆ, ಕೆಲವು ಸಂದರ್ಭಗಳಲ್ಲಿ ವಾಹನ ಚಾರ್ಜ್ ಆಗುತ್ತಿಲ್ಲದಿದ್ದಾಗಲೂ ಬೆಂಕಿ ಹೊತ್ತಿಕೊಂಡಿದೆ. ಈ ಪ್ರಕರಣಗಳು ಈಗ ಪ್ರವರ್ಧಮಾನಕ್ಕೆ ಬರುತ್ತಿರುವ, ಭವಿಷ್ಯದ ವಾಹನಗಳು ಎಂದೇ ಕರೆಸಿಕೊಂಡಿರುವ ವಿದ್ಯುತ್ ಚಾಲಿತ ವಾಹನಗಳ ಬಗ್ಗೆ ಜನ ಅನುಮಾನ ಬೆಳೆಸಿಕೊಳ್ಳುವಂತೆ ಮಾಡಿವೆ. ಬೆಂಕಿ ಹೊತ್ತಿಕೊಂಡ ವಾಹನಗಳ ಬ್ಯಾಚ್‌ನ ಇತರ ವಾಹನಗಳನ್ನು ಪರೀಕ್ಷೆಗೆ ಒಳಪಡಿಸುವ ಉದ್ದೇಶದಿಂದ ವಾಪಸ್ ಪಡೆಯುತ್ತಿರುವುದಾಗಿ ಕೆಲವು ಕಂಪನಿಗಳು ಪ್ರಕಟಿಸಿವೆ. ಬೆಂಕಿ ಹೊತ್ತಿಕೊಳ್ಳಲು ಕಾರಣವೇನು ಎಂಬುದನ್ನು ಪರಿಶೀಲಿಸುವುದಾಗಿ ಅವು ಹೇಳಿವೆ. ವಿದ್ಯುತ್ ಚಾಲಿತ ವಾಹನ ತಯಾರಕರಿಗೆ ಎಚ್ಚರಿಕೆ ನೀಡಿರುವ ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು, ಲೋಪ ಇರುವ ಬ್ಯಾಚ್‌ನ ವಾಹನಗಳನ್ನು ಹಿಂದಕ್ಕೆ ಪಡೆಯುವ ಮುಂಜಾಗ್ರತಾ ಹೆಜ್ಜೆ ಇರಿಸಬೇಕು ಎಂದು ಸೂಚಿಸಿದ್ದಾರೆ. ವಿದ್ಯುತ್ ಚಾಲಿತ ವಾಹನಗಳ ಗುಣಮಟ್ಟದ ವಿಚಾರವಾಗಿ ಸರ್ಕಾರವು ಮಾರ್ಗಸೂಚಿಯೊಂದನ್ನು ಹೊರಡಿಸಲಿದೆ ಎಂದು ಕೂಡ ಗಡ್ಕರಿ ತಿಳಿಸಿದ್ದಾರೆ.



ವಿದ್ಯುತ್ ಚಾಲಿತ ವಾಹನ ಉದ್ಯಮ ಮತ್ತು ಸರ್ಕಾರ ಜೊತೆಯಾಗಿ ಕುಳಿತು ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು

ಬೆಂಕಿ ಹೊತ್ತಿಕೊಂಡಿರುವ ಘಟನೆಗಳ ಬಗ್ಗೆ ಅಧ್ಯಯನ ನಡೆಸಲು ತಜ್ಞರ ಸಮಿತಿಯೊಂದನ್ನು ರಚಿಸಲಾಗಿದೆ. ಸುರಕ್ಷತೆಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ರೂಪಿಸಲು ಇದು ನೆರವಾಗಲಿದೆ.

ಬೆಂಕಿ ಹೊತ್ತಿಕೊಂಡಿದ್ದು ಏಕೆ ಎಂಬ ಬಗ್ಗೆ ಪರಿಶೀಲನೆ ನಡೆಸಿದಾಗ ಕಂಡುಕೊಂಡ ಅಂಶಗಳು ಯಾವುವು ಎಂಬುದನ್ನು ಕಂಪನಿಗಳು ಬಹಿರಂಗ ಪಡಿಸಿಲ್ಲ. ಆದರೆ ಬೆಂಕಿಗೆ ಕಾರಣವು ಬ್ಯಾಟರಿ ನಿರ್ವಹಣಾ ವ್ಯವಸ್ಥೆಯಲ್ಲಿ ಇದ್ದಿರಬಹುದು ಎಂದು ತಜ್ಞರು ಅನುಮಾನ ವ್ಯಕ್ತಪಡಿಸಿದ್ದಾರೆ. ಬ್ಯಾಟರಿಗಳ ಗುಣಮಟ್ಟ, ಅವು ಹೊರಗಿನ ಶಾಖವನ್ನು ನಿಭಾಯಿಸಬಹುದಾದ ಮಟ್ಟ, ಕ್ಷಿಪ್ರವಾಗಿ ಚಾರ್ಜ್ ಆಗುವ ಬ್ಯಾಟರಿಗಳಲ್ಲಿ ಬಳಕೆಯಾಗಿರುವ ತಂತ್ರಜ್ಞಾನದ ಬಗ್ಗೆ ಹೆಚ್ಚಿನ ಪರಿಶೀಲನೆ ಅಗತ್ಯ ಇದ್ದಿರಬಹುದು. ಆಮದು ಮಾಡಿಕೊಂಡ ಬ್ಯಾಟರಿಗಳಲ್ಲಿ ಕೆಲವು ತಾಪಮಾನ ಕಡಿಮೆ ಇರುವ ಪ್ರದೇಶಗಳಿಗೆ ಸೂಕ್ತವಾಗುತ್ತವೆಯೇ ವಿನಾ ಭಾರತದಂತಹ ಪ್ರದೇಶಗಳಿಗೆ ಅಲ್ಲ ಎಂಬ ವಾದವೊಂದು ಇದೆ. ಭಾರತದ ರಸ್ತೆಗಳಲ್ಲಿ ವಿದ್ಯುತ್ ಚಾಲಿತ ವಾಹನಗಳನ್ನು ಓಡಿಸುವಾಗ ಬ್ಯಾಟರಿಗಳ ಮೇಲೆ ಹೆಚ್ಚಿನ ಒತ್ತಡ ಸೃಷ್ಟಿಯಾಗುತ್ತದೆ. ಇದರಿಂದಾಗಿಯೂ ಬ್ಯಾಟರಿ ಅತಿಯಾಗಿ ಬಿಸಿಯಾಗಿ ಬೆಂಕಿ ಹೊತ್ತಿಕೊಂಡಿರಬಹುದು ಎಂಬ ವಾದವೂ ಇದೆ. ವಿದ್ಯುತ್ ಚಾಲಿತ ಸ್ಕೂಟರ್‌ಗಳು ಹಾಗೂ ಬೈಕ್‌ಗಳಲ್ಲಿ ಬೆಂಕಿ ಹೊತ್ತಿಕೊಂಡಿರುವ ಘಟನೆಗಳು ಹೆಚ್ಚು ವರದಿಯಾಗಿವೆ. ಇಂತಹ ವಾಹನಗಳನ್ನು ತಯಾರಿಸುವ ಕೆಲವು ನವೋದ್ಯಮಗಳು ಇವೆ. ಇವುಗಳಿಗೆ ಅಗತ್ಯ ಪ್ರಮಾಣದ ತಾಂತ್ರಿಕ ಪರಿಣತಿಯ ಕೊರತೆ ಇರಬಹುದು. ಗುಣಮಟ್ಟ ಮತ್ತು ಸುರಕ್ಷತೆ ವಿಚಾರವಾಗಿ ಹೆಚ್ಚಿನ ಬದ್ಧತೆ ತೋರುವ ವೃತ್ತಿಪರತೆಯ ಕೊರತೆಯೂ ಇದ್ದಿರಬಹುದು. ಕಳಪೆ ಗುಣಮಟ್ಟದ ಬ್ಯಾಟರಿಗಳು ಹೆಚ್ಚಿನ ಅಪಾಯ ತಂದೊಡ್ಡುತ್ತವೆ.

ಇನ್ನಷ್ಟೇ ರೆಕ್ಕೆ ಬಿಚ್ಚಿ ಹಾರಬೇಕಿರುವ ವಿದ್ಯುತ್ ಚಾಲಿತ ದ್ವಿಚಕ್ರ ವಾಹನ ಉದ್ಯಮದ ಪಾಲಿಗೆ ಈ ವಿದ್ಯಮಾನವು ದೊಡ್ಡ ಹಿನ್ನಡೆ. ಈ ಪ್ರಕರಣಗಳು ವಿದ್ಯುತ್ ಚಾಲಿತ ವಾಹನ ಕಂಪನಿಗಳಿಗೆ ಹಿನ್ನಡೆಯಷ್ಟೇ ಅಲ್ಲ, ದೇಶದಲ್ಲಿ ದೊಡ್ಡ ಮಟ್ಟದಲ್ಲಿ ಬೆಳೆಯಬೇಕಿರುವ ವಿದ್ಯುತ್ ಚಾಲಿತ ಸಾರಿಗೆ ವ್ಯವಸ್ಥೆಗೂ ಇವು ದೊಡ್ಡ ಪೆಟ್ಟು ನೀಡಬಲ್ಲವು. ಈ ಸಾರಿಗೆ ವ್ಯವಸ್ಥೆಯು ಜಾಗತಿಕ ತಾಪಮಾನ ಏರಿಕೆಯನ್ನು ನಿಯಂತ್ರಣದಲ್ಲಿ ಇರಿಸುವ ವಿಚಾರವಾಗಿ ಭಾರತವು ಹಾಕಿಕೊಂಡಿರುವ ಗುರಿಗಳನ್ನು ತಲುಪಲು ಅಗತ್ಯ. ಆದರೆ, ಇಂತಹ ಪ್ರಕರಣಗಳು ಗ್ರಾಹಕರಲ್ಲಿನ ವಿಶ್ವಾಸವನ್ನು ಹಾಳು ಮಾಡುತ್ತವೆ. ಕೆಲವು ಕಂಪನಿಗಳ ವಾಹನಗಳಿಗೆ ಮಾತ್ರ ಇದುವರೆಗೆ ಬೆಂಕಿ ಹೊತ್ತಿಕೊಂಡಿದೆಯಾದರೂ, ಜನರ ಮನಸ್ಸಿನಲ್ಲಿ ಮೂಡಬಹುದಾದ ನಕಾರಾತ್ಮಕ ಧೋರಣೆಯ ಕಾರಣದಿಂದಾಗಿ ಇಡೀ ಉದ್ಯಮಕ್ಕೆ ಏಟು ಬೀಳಬಹುದು. ವಿದ್ಯುತ್ ಚಾಲಿತ ವಾಹನ ಉದ್ಯಮ, ಸರ್ಕಾರ ಜೊತೆಯಾಗಿ ಕುಳಿತು ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು. ಇಲ್ಲಿ ವಿಳಂಬ ಆಗಬಾರದು. ದುರ್ಘಟನೆಗೆ ಕಾರಣ ಏನು ಎಂಬುದನ್ನು ಬಹಿರಂಗಪಡಿಸಲು ಕೆಲವು ಕಂಪನಿಗಳಿಗೆ ಇಷ್ಟವಿಲ್ಲದಿರಬಹುದು. ಆದರೆ, ಸರ್ಕಾರವು ಮುತುವರ್ಜಿ ವಹಿಸಿ, ಕಾರಣಗಳನ್ನು ಬಹಿರಂಗಪಡಿಸಬೇಕು. ಅಗ ಮಾತ್ರ ಸಾರ್ವಜನಿಕರಿಗೆ ಇಂತಹ ವಾಹನಗಳ ಬಗ್ಗೆ ವಿಶ್ವಾಸ ಮೂಡುತ್ತದೆ. ಉದ್ಯಮ ಬೆಳೆಯುತ್ತದೆ.

ದಿನದ ಟ್ವೀಟ್


ಸೊಬಗು ಉಳಿಯಲಿ



ನಮ್ಮಲ್ಲಿ ಬಹಳಷ್ಟು ಭಾಷೆಗಳಿದ್ದು, ಅವುಗಳಲ್ಲಿ ಹೆಚ್ಚಿನವು ತಮ್ಮದೇ ಲಿಪಿಯನ್ನು ಹೊಂದಿವೆ ಎಂದು ಭಾರತದ ಹೊರಗಿನವರಿಗೆ ನಾನು ಹೇಳಿದಾಗ ಅವರು ಅಚ್ಚರಿಪಡುತ್ತಾರೆ. ಅದನ್ನು ಶ್ಲಾಘಿಸುತ್ತಾರೆ. ಆದರೆ ಈ ವಿಷಯಕ್ಕಾಗಿ ನಮ್ಮಲ್ಲಿ ಸಂಘರ್ಷಗಳು ಏರ್ಪಡುತ್ತಿರುತ್ತವೆ ಎಂಬುದು ಮಾತ್ರ ಅವರಿಗೆ ತಿಳಿದಿಲ್ಲ. ಭಾರತದ ಸೊಬಗು ಹಾಗೇ ಉಳಿಯಲಿ ಎಂಬ ಕಾರಣಕ್ಕೆ ನಾನು ಆ ವಿಷಯವನ್ನು ಅವರಿಗೆ ಹೇಳುವುದಿಲ್ಲ.

ಅಕ್ಷಯ್, ಎಂಜಿನಿಯರ್

ಕಿಡಿನುಡಿ



ಕಾಂಗ್ರೆಸ್ ಕಾಲದಲ್ಲಿ ಏನಾಯ್ತು ಅಂತ ಎಷ್ಟು ವರ್ಷ ಹೇಳ್ತಾ ಹೋಗುತ್ತೀರಿ? ನಾವು ತಪ್ಪು ಮಾಡಿದ್ದರೆ ಹಿಡಿದು ಜೈಲಿಗೆ ಹಾಕಿ. ನೀವು ಹರಿಶ್ಚಂದ್ರನ ಮಕ್ಕಳು ಎಂಬುದನ್ನು ತೋರಿಸಿ.

ಮಲ್ಲಿಕಾರ್ಜುನ ಖರ್ಗೆ, ರಾಜ್ಯಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಮಂಗಳವಾರ, 29-4-1997

• ಸರ್ಕಾರಿ ಉದ್ಯೋಗ: ಗ್ರಾಮೀಣರಿಗೆ ಕೃಪಾಂಕ ಶೇ 10ಕ್ಕೆ ಏರಿಕೆ

ಬೆಂಗಳೂರು, ಏ. 28– ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ‘ಸಿ’ ಮತ್ತು ‘ಡಿ’ ದರ್ಜೆ ಸರ್ಕಾರಿ ನೌಕರಿಗೆ ಸೇರುವ ಸಂದರ್ಭದಲ್ಲಿ ನೀಡುತ್ತಿದ್ದ ಶೇ 5ರ ಕೃಪಾಂಕ ನೀತಿಯನ್ನು ಬದಲಾಯಿಸಿರುವ ಸರ್ಕಾರ ಇದನ್ನು ಶೇ 10ಕ್ಕೆ ಏರಿಸುವುದರ ಜತೆಗೆ ಈ ಕೃಪಾಂಕ ನೀತಿಯನ್ನು ‘ಎ’ ಮತ್ತು ‘ಬಿ’ ದರ್ಜೆ ನೌಕರರಿಗೂ ವಿಸ್ತರಿಸಿದೆ.

ಇಂದು ಸಚಿವ ಸಂಪುಟ ಸಭೆಯಲ್ಲಿ ಈ ತೀರ್ಮಾನ ಕೈಗೊಂಡಿದ್ದು, ಇದರಿಂದ ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ಇನ್ನೂ ಹೆಚ್ಚಿನ ಅನುಕೂಲ ಆಗಲಿದೆ ಎನ್ನುವುದು ಸರ್ಕಾರದ ನಿರೀಕ್ಷೆ ಎಂದು ಸಭೆ ಬಳಿಕ ವಾರ್ತಾ ಸಚಿವ ಎಂ.ಸಿ ನಾಣಯ್ಯ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

ಒಂದನೆಯ ತರಗತಿಯಿಂದ 10ನೇ ತರಗತಿಯವರೆಗೆ 50 ಸಾವಿರ ಜನಸಂಖ್ಯೆ ಮೀರದ ಊರುಗಳಲ್ಲಿ ಕಲಿತಿರುವ ಅಭ್ಯರ್ಥಿಗಳನ್ನು ಗ್ರಾಮೀಣರು ಎಂದು ಪರಿಗಣಿಸಲಾಗುವುದು. ಶೇ 5ರ ಕೃಪಾಂಕ ಪದ್ಧತಿಯಿಂದ ಬಹಳ ಜನರಿಗೆ ನ್ಯಾಯ ಸಿಗುವುದಿಲ್ಲ ಎಂಬ ಕಾರಣಕ್ಕಾಗಿ ಅದನ್ನು ದುಪ್ಪಟ್ಟಾಗಿಸಲು ತೀರ್ಮಾನಿಸಲಾಯಿತು ಎಂದು ತಿಳಿಸಿದರು.

ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ 235 ಮಂದಿ ಪಶುಸಂಗೋಪನಾ ವೈದ್ಯರು ಹಾಗೂ ಸುಮಾರು 600ಕ್ಕೂ ಅಧಿಕ ಸಂಖ್ಯೆಯಲ್ಲಿರುವ ಅರೆಕಾಲಿಕ ಪ್ರೌಢಶಾಲಾ ಶಿಕ್ಷಕರ ಸೇವೆಯನ್ನು ಕಾಯಂಗೊಳಿಸಲೂ ಸರ್ಕಾರ ತೀರ್ಮಾನಿಸಿದೆ.

50 ವರ್ಷಗಳ ಹಿಂದೆ

ಶನಿವಾರ, 29-4-1972

• ‘ಭಾರತದ ಆಂತರಿಕ ವಿಷಯದಲ್ಲಿ ಅಮೆರಿಕ ಹಸ್ತಕ್ಷೇಪ’

ನವದೆಹಲಿ, ಏ. 28– ವಿಯೆಟ್ನಾಂ ಬಗ್ಗೆ ಅಮೆರಿಕದ ಅಧ್ಯಕ್ಷ ರಿಚರ್ಡ್ ನಿಕ್ಸನ್ ಅವರು ನೀಡಿರುವ ಇತ್ತೀಚಿನ ಹೇಳಿಕೆಯಲ್ಲಿ ಭಾರತದ ಬಗ್ಗೆ ಪರೋಕ್ಷ ಪ್ರಸ್ತಾಪವಿರುವುದು ‘ನಮ್ಮ ಆಂತರಿಕ ವ್ಯವಹಾರಗಳಲ್ಲಿ ಅಮೆರಿಕದ ಮತ್ತೊಂದು ಹಸ್ತಕ್ಷೇಪ’ ಎಂದು ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ಅವರು ತಿಳಿಸಿದ್ದಾರೆ.

ವಿದೇಶಿ ವರದಿಗಾರರ ಸಂಘವು ತಮ್ಮ ಗೌರವಾರ್ಥ ಏರ್ಪಡಿಸಿದ್ದ ಉಪಾಹಾರ ಕೂಟದಲ್ಲಿ ಮಾತನಾಡುತ್ತ ಶ್ರೀಮತಿ ಗಾಂಧಿ ಈ ರೀತಿ ತಿಳಿಸಿದರೆಂದು ವರದಿಯಾಗಿದೆ.

‘ಶ್ವೇತವರ್ಣೀಯನ ಮೇಲಿರುವ ಹೊಣೆ’ ಕುರಿತ ಹಳೆ ಹಾಡಿನ ಹೊಸ ರಾಗವೇ ನಿಕ್ಸನ್– ಚೌ ಹೇಳಿಕೆಯಲ್ಲಡಗಿದೆಯೆಂದೂ ಪ್ರಧಾನಮಂತ್ರಿಗಳು ಹೇಳಿದರು.

ದಕ್ಷಿಣ ವಿಯೆಟ್ನಾಂನಿಂದ ಅಮೆರಿಕದ ಪಡೆಗಳು ವಾಪಸಾಗಿ ಉತ್ತರ ವಿಯೆಟ್ನಾಂ ಮೇಲೆ ಬಾಂಬ್ ದಾಳಿ ನಿಂತರೆ ವಿಯೆಟ್ನಾಂನಲ್ಲಿ ಶಾಂತಿ ಸಾಧ್ಯವೆಂದೂ ಶ್ರೀಮತಿ ಗಾಂಧಿ ಹೇಳಿದರು.

• ‘ಮತ್ತೆ ದಾಳಿ ನಡೆಯದ ಭರವಸೆ ಇದ್ದರೆ ಮಾತ್ರ ಪಾಕ್ ಜೊತೆ ಮಧುರ ಬಾಂಧವ್ಯ ಸಾಧ್ಯ’

ನವದೆಹಲಿ, ಏ. 28– ಪಾಕಿಸ್ತಾನವು ಮತ್ತೊಮ್ಮೆ ನಮ್ಮ ದೇಶದ ಮೇಲೆ ದಾಳಿ ನಡೆಸುವುದಿಲ್ಲವೆಂಬುದು ನಮಗೆ ಖಚಿತವಾದರೆ ಮಾತ್ರ ಆ ದೇಶದ ಜತೆ ಭಾರತದ ಬಾಂಧವ್ಯ ಸುಗಮಗೊಳ್ಳಲು ಸಾಧ್ಯವೆಂದು ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ಅವರು ಇಂದು ಇಲ್ಲಿ ತಿಳಿಸಿದರು.

ಶಾಲಾ ಪಠ್ಯ ರಚನೆಯ ಹಿಂದೆ ವಿದ್ಯಾರ್ಥಿಗಳ ವಿಕಾಸದ ಹಂತಗಳ ಪ್ರಜ್ಞೆ ಕೆಲಸ ಮಾಡಬೇಕು

ಪಠ್ಯಪುಸ್ತಕ ರಚನೆ: ಸಲ್ಲಲಿ ನ್ಯಾಯ



ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ಪಠ್ಯಪುಸ್ತಕ ರಚನೆ– ಪರಿಷ್ಕರಣೆ ಸಮಿತಿಯ ಅಧ್ಯಕ್ಷರಾಗಿ ಕೆಲಸ ಮಾಡಿದ್ದವರು ಯಾರು ಎಂದು ಅವಲೋಕಿಸುತ್ತಿದ್ದಾಗ, ಅವರಲ್ಲಿ ಡಿ.ಇಡಿ., ಬಿ.ಇಡಿ., ಎಂ.ಇಡಿ. ಮಾಡಿದ ಮೂರ್‍ನಾಲ್ಕು ಮಂದಿಯ ಹೆಸರುಗಳು ಕಾಣಸಿಕ್ಕವು. ಇನ್ನೂ ಕೆಲವರು ಇರಲೂಬಹುದು. ಆದರೆ ಪಠ್ಯಪುಸ್ತಕ ರಚನಾ ಸಮಿತಿಯ ಅಧ್ಯಕ್ಷರಾಗಲು ಶಿಕ್ಷಣಶಾಸ್ತ್ರವನ್ನು ಅಭ್ಯಾಸ ಮಾಡಿರಬೇಕು ಎಂಬ ಕಲ್ಪನೆಯಿಂದ ನೇಮಕಗಳು ನಡೆದ ರೀತಿಯಲ್ಲಿ ಇರಲಿಲ್ಲ. ಸಾಮಾನ್ಯವಾಗಿ ಯಾವುದಾದರೂ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿರಬೇಕು, ಹೆಸರಿರುವ ಸಾಹಿತಿಯಾಗಿರಬೇಕು ಎನ್ನುವ ಕಲ್ಪನೆಯಲ್ಲಿ ಅಧ್ಯಕ್ಷರನ್ನು ನೇಮಿಸಿದ ಹಾಗೆ ಭಾಸವಾಗುತ್ತದೆ.


ಬಹುಶಃ ನಮ್ಮ ಪಠ್ಯಪುಸ್ತಕಗಳ ಕುರಿತ ಚರ್ಚೆಯಲ್ಲಿ ಬೋಧನಾ ಪದ್ಧತಿಯ ಬಗ್ಗೆ ಸಾರ್ವಜನಿಕ ಪರಿಗಣನೆ ಇಲ್ಲದೆ, ಪಠ್ಯವಸ್ತುವಿನ ಬಗ್ಗೆಯೇ ಪರಿಗಣನೆ ಜಾಸ್ತಿ ಇರುವುದಕ್ಕೆ ಇದೂ ಒಂದು ಕಾರಣವಿರಬಹುದು.

ಕರ್ನಾಟಕ ಪಠ್ಯಪುಸ್ತಕ ಸಂಘ ಎಂದು ಇದೆ. ಅದರ ಉದ್ದೇಶ ಪಠ್ಯಪುಸ್ತಕಗಳನ್ನು ಮುದ್ರಿಸುವುದು; ರಚನೆಯಲ್ಲ. ತುಂಬ ಹಳೆಯ ಪದ್ಧತಿಯಲ್ಲಿ ಯಾರು ಬೇಕಾದರೂ ಪಠ್ಯಪುಸ್ತಕವನ್ನು ಬರೆದು ಶಿಕ್ಷಣ ಇಲಾಖೆಗೆ ಕಳುಹಿಸಬಹುದಿತ್ತು. ಇಲಾಖೆ ಅದರಲ್ಲಿ ಸೂಕ್ತವಾದದ್ದನ್ನು ಆಯ್ಕೆ ಮಾಡುತ್ತಿತ್ತು. ನಂತರದ ಕಾಲಘಟ್ಟದ ಪಠ್ಯಪುಸ್ತಕ ರಚನಾ ಸಮಿತಿಯು ಹೆಚ್ಚಿನ ಮಟ್ಟಿಗೆ ಪಠ್ಯವಸ್ತುವಿನ ಕುರಿತಾಗಿ ಸರ್ಕಾರ ಹೊಂದಿರುವ ಧೋರಣೆಯನ್ನು ಪ್ರತಿಪಾದಿಸಲಿಕ್ಕಾಗಿ ಇರುವ ಸಂಸ್ಥೆಯಂತಾಗಿದೆ. ಕನ್ನಡ ಭಾಷಾ ಪಠ್ಯಗಳಲ್ಲಿರುವ ಹೆಚ್ಚಿನ ಕವಿತೆಗಳು ವಿದ್ಯಾರ್ಥಿಗಳಲ್ಲಿ ಆಸಕ್ತಿ ಕುದುರಿಸುವಂತೆ ಇಲ್ಲ ಎಂದು ಬಹಳಷ್ಟು ಅಧ್ಯಾಪಕರು ತಮಗೆ ತಿಳಿಸಿರುವುದಾಗಿ, ಕಳೆದ ನೂರು ವರ್ಷಗಳ ಕನ್ನಡ ಪಠ್ಯಪುಸ್ತಕಗಳ ಬಗ್ಗೆ ಸಂಶೋಧನೆ ನಡೆಸಿ ಪಿಎಚ್.ಡಿ ಪದವಿ ಪಡೆದಿರುವ ಮಂಗಳೂರಿನ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದ ಪ್ರಾಧ್ಯಾಪಕ ಎನ್.ಶಿವಪ್ರಕಾಶ್ ಈ ಲೇಖನ ಬರೆಯುವ ವೇಳೆಗೆ ತಿಳಿಸಿದರು.

ಯಾಕೆ ಹೀಗೆ ಆಗುತ್ತದೆ? ಕನ್ನಡ ಭಾಷಾ ಪಠ್ಯಗಳನ್ನು ನೋಡಿದರೆ ಬಹುತೇಕ ಅವು ಸಾಹಿತಿ ಮತ್ತು ಕವಿಗಳಿಗೆ ಸಾಮಾಜಿಕ ನ್ಯಾಯ ಸಲ್ಲಿಸುವಂತೆ ಇರುತ್ತವೆ. ಉತ್ತರ ಕರ್ನಾಟಕದವರ ಇಷ್ಟು ರಚನೆಗಳು, ದಕ್ಷಿಣ ಕರ್ನಾಟಕದ್ದು ಇಷ್ಟು, ಅಭಿಜಾತ ಕಾವ್ಯ ಇಷ್ಟು, ನವೋದಯ ಇಷ್ಟು, ನವ್ಯ ಇಷ್ಟು, ದಲಿತ– ಬಂಡಾಯ ಇಷ್ಟು... ಹೀಗೆ ಈ ಶೈಲಿಯಲ್ಲಿ ಪಠ್ಯಪುಸ್ತಕ ಇರುತ್ತದೆ. ಆದರೆ ಮಕ್ಕಳಿಗೆ ನ್ಯಾಯ ಸಲ್ಲಿಸುವ ಹಾಗೆ ಇರುವುದಿಲ್ಲ. ಮಕ್ಕಳಿಗೆ ನ್ಯಾಯ ಎಂದರೆ ಪ್ರಾಥಮಿಕ ಶಾಲೆಯ ಮಕ್ಕಳಿಗೆ, ‘ರೊಟ್ಟಿ ಅಂಗಡಿ ಕಿಟ್ಟಪ್ಪ, ನಂಗೊಂದು ರೊಟ್ಟಿ ತಟ್ಟಪ್ಪ’ ಎನ್ನುವ ಲಯಬದ್ಧ ಶೈಲಿಯ ಪದ್ಯಗಳು, ‘ಚಂದಿರನೇತಕೆ ಓಡುವನಮ್ಮ ಮೋಡಕೆ ಬೆದರಿಹನೆ’ ಎನ್ನುವ ರೀತಿ ದೃಶ್ಯೀಕರಣಕ್ಕೆ ಒಳಗಾಗುವ ಪದ್ಯಗಳು, ತಾಳ ಹಾಕುತ್ತಾ ಹಾಕುತ್ತಾ ಹಾಡಿಕೊಳ್ಳುವ ರೀತಿಯ ಪದ್ಯಗಳು ಬೇಕಾಗುತ್ತವೆ.

ಪ್ರೌಢಶಾಲಾ ಹಂತಕ್ಕೆ ಬಂದಾಗ ‘ಜೋಶ್’ನಲ್ಲಿ ಹಾಡಿಕೊಳ್ಳುವಂತಹ ಪದ್ಯಗಳು ಬೇಕಾಗುತ್ತವೆ. ಆ ವಯೋಮಾನದ ವ್ಯಕ್ತಿತ್ವ ವಿಕಾಸದ ಹಂತಗಳಿಗೆ ಹೊಂದುವ ಹಾಗೆ ಬೋಧನೆ ಇರಬೇಕು. ಬೋಧನೆ ಆ ರೂಪದಲ್ಲಿ ಬರಬೇಕಾದರೆ ಪಠ್ಯ ರಚನೆಯ ಹಿಂದೆ ವಿದ್ಯಾರ್ಥಿಗಳ ವಿಕಾಸದ ಹಂತಗಳ ಪ್ರಜ್ಞೆ ಕೆಲಸ ಮಾಡಿರಬೇಕು. ಶಿಕ್ಷಣಶಾಸ್ತ್ರವನ್ನು ಅಧ್ಯಯನ ಮಾಡಿದವರು ಅಥವಾ ಆಯಾ ವಯಸ್ಸಿನ ಮಕ್ಕಳ ಒಡನಾಟ ಇದ್ದವರು ಪಠ್ಯಪುಸ್ತಕ ರಚನಾ ಸಮಿತಿಯ ನಿರ್ಧಾರಗಳಲ್ಲಿ ಪ್ರಮುಖ ಪಾತ್ರ ವಹಿಸಿದಾಗ ಪಠ್ಯಪುಸ್ತಕ ಈ ಮಾದರಿಯಲ್ಲಿ ಬರುತ್ತದೆ. ಶಿಕ್ಷಣಶಾಸ್ತ್ರವನ್ನು ಅಭ್ಯಾಸ ಮಾಡದವರಿಗೆ ಈ ಪರಿಕಲ್ಪನೆ ಸುಲಭವಾಗಿ ಅರ್ಥವಾಗಲು ಕೊಡಬಹುದಾದ ಉದಾಹರಣೆ ಎಂದರೆ, ಅಂಡಾಣು- ವೀರ್ಯಾಣು ಸಂಯೋಗವಾಗಿ ಭ್ರೂಣದ ರಚನೆಯಾಗಿ ಮಗುವಿನ ಜನನ ಹೇಗಾಗುತ್ತದೆ ಎಂಬುದನ್ನು ಎರಡನೆಯ ತರಗತಿಯ ವಿದ್ಯಾರ್ಥಿಗಳಿಗೆ ಪಠ್ಯದಲ್ಲಿ ಕೊಟ್ಟರೆ ಉಪಯೋಗವಿಲ್ಲ. ಅದನ್ನು ಅರ್ಥ ಮಾಡಿಕೊಳ್ಳುವಷ್ಟು ಆ ವಿದ್ಯಾರ್ಥಿಗಳು ಬೆಳೆದಿರುವುದಿಲ್ಲ ಎಂದು ಎಲ್ಲರಿಗೂ ಗೊತ್ತಾಗುತ್ತದೆ. ಅದೇ ರೀತಿ ವೈಯಕ್ತಿಕ ನೆಲೆಯಲ್ಲಿ ಬಹುಸೂಕ್ಷ್ಮವಾದ ವಿಮರ್ಶೆಯನ್ನು ಬಯಸುವ ಪಠ್ಯವಸ್ತುವನ್ನೂ ಪ್ರಾಥಮಿಕ ಮತ್ತು ಪ್ರೌಢ ಹಂತದಲ್ಲಿ ಕೊಡಬಾರದು.

ಲಾರೆನ್ಸ್ ಕೊಹಲ್‌ಬರ್ಗ್ ಸಿದ್ಧಾಂತದ ಪ್ರಕಾರ, ಹದಿಹರೆಯವು ನೈತಿಕತೆಯ ಸಾರ್ವತ್ರಿಕ ಅನ್ವಯದ ಹಂತವಾಗಿದೆ. ಅಂದರೆ ಈ ವಯಸ್ಸಿನ ಮಕ್ಕಳು ಯಾವುದನ್ನು ನೈತಿಕತೆ ಎಂದು ಭಾವಿಸುತ್ತಾರೆಯೋ ಅದು ಸಾರ್ವತ್ರಿಕವಾಗಿ ಇರತಕ್ಕದ್ದು ಎಂದು ಭಾವಿಸುತ್ತಾರೆ. ನೈತಿಕತೆಯ ಸಾಪೇಕ್ಷ ತತ್ವವನ್ನು ಅರ್ಥ ಮಾಡಿಕೊಂಡು ನಿರ್ದಿಷ್ಟ ಸನ್ನಿವೇಶದಲ್ಲಿ ಯಾವುದು ಸರಿ ಎಂದು ತೀರ್ಮಾನಿಸಬಲ್ಲ ಸಾಮರ್ಥ್ಯವಿನ್ನೂ ಬಂದಿರುವುದಿಲ್ಲ. ಪದವಿಯ ವಯಸ್ಸಿಗೆ ಬಂದಾಗ ಈ ಸಾಮರ್ಥ್ಯ ಬರುತ್ತದೆ. ಆದ್ದರಿಂದ ತೀರಾ ನಿರ್ದಿಷ್ಟ ಸನ್ನಿವೇಶ ಆಧಾರಿತವಾದ ವಿಮರ್ಶೆಯನ್ನು ಬಯಸುವ ಪಠ್ಯವಸ್ತುವನ್ನು ಪ್ರಾಥಮಿಕ ಮತ್ತು ಪ್ರೌಢ ಹಂತದಲ್ಲಿ ಕೊಡಲು ಹೋಗಬಾರದು.




ಪಠ್ಯದ ಉದ್ದೇಶ ಎಂದು ಇದೆ. ಇದು ಪಠ್ಯವಸ್ತು, ಕಲಿಕಾ ವಿಧಾನ, ಮೌಲ್ಯಮಾಪನ ಈ ಮೂರೂ ಹಂತಗಳಲ್ಲಿ ಸಮರ್ಪಕವಿದ್ದಾಗ ಮಾತ್ರ ಸಾಧಿಸಲ್ಪಡುತ್ತದೆ. ಉದಾಹರಣೆಗೆ, ಭಾಷಾ ಪಠ್ಯಗಳಲ್ಲಿ ಆಲಿಸುವ ಸಾಮರ್ಥ್ಯ, ಮಾತನಾಡುವ ಸಾಮರ್ಥ್ಯ, ಓದುವ ಸಾಮರ್ಥ್ಯ, ಬರೆಯುವ ಸಾಮರ್ಥ್ಯ, ಚಿಂತನಾ ಸಾಮರ್ಥ್ಯ, ಪರಾಮರ್ಶನ ಸಾಮರ್ಥ್ಯ ಬೆಳೆಯಬೇಕು. ಪಠ್ಯಪುಸ್ತಕದಲ್ಲಿ ಯಾವ ವಿಷಯ ಇರಬೇಕು ಎಂಬುದನ್ನೇ ಆಧರಿಸಿ ಮಾಡಿದ ಪಠ್ಯಪುಸ್ತಕ, ವಿಷಯವನ್ನೇ ಪ್ರಶ್ನೆಯಾಗಿ ಹೊಂದಿರುವ ಮೌಲ್ಯಮಾಪನ ಪದ್ಧತಿಗಳು ವಿಷಯವನ್ನೇ ಆಧರಿಸಿ ಬೋಧನೆ ನಡೆಯುವಂತೆ ಮಾಡಿವೆ. ಉದಾಹರಣೆಗೆ, ಭಾಷಾ ಪಠ್ಯದ ಬೋಧನೋದ್ದೇಶದಲ್ಲಿ ಆಲಿಸುವ ಸಾಮರ್ಥ್ಯ ಇದೆ. ಮಕ್ಕಳು ಸುಮ್ಮನೆ ಕೂತು ಕೇಳಿಸಿಕೊಳ್ಳುವುದನ್ನಷ್ಟೇ ಮಾಡಲು ಬೇಕಾದ ಪಾಠ ಪುಸ್ತಕದಲ್ಲಿಲ್ಲ. ಮಕ್ಕಳ ಕೇಳಿಸಿಕೊಳ್ಳುವ ಸಾಮರ್ಥ್ಯವನ್ನು ಪರೀಕ್ಷಿಸಲೂ ಸಮರ್ಪಕ ವ್ಯವಸ್ಥೆ ಇಲ್ಲ. ಆಗ ಎಲ್ಲ ಭಾಷಾ ಪಾಠಗಳೂ ಸಮಾಜ ವಿಜ್ಞಾನ ಪಾಠದ ಮತ್ತೊಂದು ರೂಪವಾಗಿ ವಿಷಯ ಆಧಾರಿತವಾಗಿರುತ್ತವೆ. ಉದಾಹರಣೆಗೆ, ಹಿಂದೆ ‘ಟಿಪ್ಪು ಸುಲ್ತಾನ್‌ನ ಪತ್ರ’ ಎಂದು ಒಂದು ಪಾಠ ಇತ್ತು. ಮಕ್ಕಳಿಗೆ ಪತ್ರ ಲೇಖನದ ಸಾಮರ್ಥ್ಯ ಬರಬೇಕು ಎನ್ನುವುದು ಪಾಠದ ಉದ್ದೇಶ. ಆದರೆ ಕಲಿಸಿದ್ದು ಮತ್ತು ಪರೀಕ್ಷೆ ಮಾಡಿದ್ದು ಪತ್ರದಲ್ಲಿ ಏನು ಬರೆದಿದ್ದಾನೆ ಎಂಬುದನ್ನೇ!

ಗಣಿತ, ವಿಜ್ಞಾನ, ಸಮಾಜ ವಿಜ್ಞಾನಗಳಿಗೂ ವಿಷಯವನ್ನು ಕಲಿಯುವುದರ ಆಚೆಗೆ ಬೋಧನೋದ್ದೇಶಗಳಿವೆ. ಗಣಿತದಲ್ಲಿ ಬರುವ ‘ಎಕ್ಸ್’, ‘ವೈ’ ಅಥವಾ ಮತ್ತಿತರೆ ಸಂಕೇತಗಳು ಅಮೂರ್ತವಾದದ್ದನ್ನು ತಾರ್ಕಿಕವಾಗಿ ಗ್ರಹಿಸುವ ಸಾಮರ್ಥ್ಯವನ್ನು ಮಕ್ಕಳಲ್ಲಿ ಬೆಳೆಸಬೇಕು. ವಿಜ್ಞಾನವು ಸೃಷ್ಟಿಯ ನಿಗೂಢತೆಯನ್ನು ಗ್ರಹಿಸುವ ಕುತೂಹಲ, ವೈಜ್ಞಾನಿಕ ಮನೋಭಾವವನ್ನು ಬೆಳೆಸಬೇಕು. ಸಮಾಜ ವಿಜ್ಞಾನವು ಐದಾರು ಸಾವಿರ ವರ್ಷಗಳ ಇತಿಹಾಸವನ್ನು ಓದಿದಾಗ ಅಲ್ಲಿ ಕಾಣಿಸುವ ಆಕ್ರಮಣ, ಹತಾಶೆ, ಭರವಸೆ, ಹೋರಾಟ ಇದೆಲ್ಲವನ್ನೂ ಸ್ವೀಕರಿಸಿ ಎಲ್ಲವನ್ನೂ ಒಳಗೊಳ್ಳುವ ವಿಶಾಲ ಮನೋಭಾವವನ್ನು ರೂಪಿಸಬೇಕು.

ಒಬ್ಬ ಕೆಟ್ಟ ರಾಜ. ಎಷ್ಟೋ ಕೊಲೆಗಳನ್ನು ಮಾಡಿರುತ್ತಾನೆ. ಆದರೆ ಅವನೂ ಮನುಷ್ಯ. ಸಾವಿನ ಸನಿಹದಲ್ಲಾದರೂ ಅವನಿಗೆ ತಾನು ಮಾಡಿದ ಕೊಲೆಗಳು ನೆನಪಿಗೆ ಬಂದಿರಲಾರವೇ? ಆಗ ಅವನು ಏನು ಯೋಚಿಸಿರಬಹುದು?- ಹೀಗೆ ಮಾನವ ಪ್ರವೃತ್ತಿಯನ್ನು ಅರ್ಥ ಮಾಡಿಕೊಳ್ಳುವ ಮತ್ತು ಅರ್ಥೈಸುವ ಶಕ್ತಿಯನ್ನು ಸಮಾಜ ವಿಜ್ಞಾನ ಬೆಳೆಸಬೇಕು.

ಈ ರೀತಿಯ ಕಲಿಕಾ ಪರಿಣಾಮಗಳು ಕೇವಲ ಪಠ್ಯಪುಸ್ತಕಗಳನ್ನು ಆಧರಿಸಿಲ್ಲ. ಬೋಧನೆ ಮತ್ತು ಮೌಲ್ಯಮಾಪನವೂ ಗುರಿಯನ್ನು ಸಾಧಿಸಲು ಬೇಕಾದ ಇನ್ನಿತರ ಎರಡು ಸಾಧನಗಳೇ ಆಗಿವೆ. ಆದರೆ ಅವೆರಡಕ್ಕೂ ಮೂಲ ಪಠ್ಯಪುಸ್ತಕವೇ. ಆದ್ದರಿಂದ ಭವಿಷ್ಯದ ಶೈಕ್ಷಣಿಕ ಅವಶ್ಯಕತೆಗಳನ್ನು ಈಡೇರಿಸಲು ಈಗಿರುವ ಪಠ್ಯಪುಸ್ತಕ ರಚನಾ ಸಮಿತಿಗಳು ಸಾಲುವುದಿಲ್ಲ. ಸ್ವತಂತ್ರ ಅಧಿಕಾರವಿರುವ ಪ್ರಾಧಿಕಾರದಂತಹ ಸಂಸ್ಥೆ ಬೇಕಾಗುತ್ತದೆ ಮತ್ತು ಅದರಲ್ಲಿ ವಿಷಯ ತಜ್ಞರು ಸಾಕಾಗುವುದಿಲ್ಲ. ಶಿಕ್ಷಣಶಾಸ್ತ್ರವನ್ನು ಅಭ್ಯಾಸ ಮಾಡಿದ, ಆಯಾ ಹಂತದ ಮಕ್ಕಳಿಗೆ ಬೋಧಿಸಿದ ಅನುಭವ ಇರುವ ತಜ್ಞರೂ ಬೇಕಾಗುತ್ತಾರೆ.

ಚುರುಮುರಿ



ಲೀಕಿಂಗ್ ನ್ಯೂಸ್!

• ಬಿ.ಎನ್.ಮಲ್ಲೇಶ್

‘ಗುರೂ... ಈ ಬ್ಲೂ ಟೂತ್ ಅಂದ್ರೇನು? ಅದನ್ನ ಕಿವೀಲಿ ಇಟ್ಕಂಡು ಸಬ್ ಇನ್‌ಸ್ಪೆಕ್ಟರ್ ಪರೀಕ್ಷೇಲಿ ಕಾಪಿ ಹೊಡೆದ್ರಂತೆ...’ ಹರಟೆಕಟ್ಟೇಲಿ ದುಬ್ಬೀರನನ್ನ ಗುಡ್ಡೆ ಕೇಳಿದ.

‘ಟೂತ್ ಅಂದ್ರೆ ಹಲ್ಲು, ಅದನ್ನ ಕಿವೀಲಿ ಟ್ಕಂಡು ಕಾಪಿ ಹೊಡೆದ್ರಂತಾ? ವಿಚಿತ್ರ ಆತಪ’ ದುಬ್ಬೀರ ತಲೆ ಕೆರೆದುಕೊಂಡ.

‘ನಿನ್ನೆಲಿ, ನೀನು ಪೇಪರ್ ನೋಡಿಲ್ವಾ? ಕೆಲವ್ರು ಬನೀನ್‌ನಲ್ಲೂ ಏನೇನೋ ಇಟ್ಕಂಡು ಕಾಪಿ ಹೊಡೆದ್ರಂತೆ, ಇದಕ್ಕೇನಂತಿ?’

‘ಅದನ್ನ ಬನೀನ್ ಟೂತ್ ಅನ್ನಬೋದಾ?’ ಕೊಟ್ರೇಶಿ ನಕ್ಕ.

‘ಲೇಯ್, ಬನೀನ್ ಟೂತು, ಚೆಡ್ಡಿ ಟೂತು ಅಂತೆಲ್ಲ ಇರ್ತಾವೇನ್ಲೆ... ಬ್ಲೂ ಟೂತ್ ಅಂದ್ರೆ ಅದೊಂಥರ ಕನೆಕ್ಷನ್ ಟೆಕ್ನಾಲಜಿ. ಅದನ್ನ ಕಿವಿಗೆ ಸಿಗಿಸಿಕೊಂಡ್ರೆ ಮೊಬೈಲ್ ಇಲ್ದೆ ಮಾತಾಡಬೋದು. ಅದನ್ನೇ ಈ ಪರೀಕ್ಷೆ ಬರೆದೋರು ಕಿವಿ ಒಳೀಕೆ ಇಟ್ಕಂಡಿದ್ದದ್ದು...’ ತೆಪರೇಸಿ ವಿವರಿಸಿದ.

‘ಅಲ್ಲ ಎಂತೆಂಥವೆಲ್ಲ ಬಂದಾವಲ್ಲಲೆ, ಈ ದುಬ್ಬೀರನ ಜೇಬಿಂದ ನನ್ ಜೇಬಿಗೆ ಅಟಮೆಟಿಕ್ಕಾಗಿ ರೊಕ್ಕ ಬರೋತರ ಏನರೆ ಟೆಕ್ನಾಲಜಿ ಐತಾ?’ ಗುಡ್ಡೆ ನಕ್ಕ.

‘ಬರೀ ಇಂಥವೇ ನಿಮ್ಮವೆಲ್ಲ... ಟೆಕ್ನಾಲಜಿ ಏನರೆ ಇರ್‍ಲಿ, ಆ ಕ್ವಶ್ಚನ್ ಪೇಪರ್ ಹೆಂಗೆ ಲೀಕಾದ್ವು ಅದನ್ನ ಹೇಳ್ರಿ, ಸಬ್ ಇನ್‌ಸ್ಪೆಕ್ಟರ್ ಎಕ್ಸಾಂ ಒಂದೇ ಅಲ್ಲ, ಲೆಕ್ಚರರ್ ಎಕ್ಸಾಮು, ಇಂಜಿನಿಯರ್ ಎಕ್ಸಾಮು, ಬ್ಯಾಂಕ್ ಎಕ್ಸಾಮು ಎಲ್ಲ ಪೇಪರ್ರೂ ಇದೇ ತರ ಲೀಕಾಗಿದಾವಂತೆ’ ತೆಪರೇಸಿ ಹೇಳಿದ.

‘ಹಿಂಗೆ ಪರೀಕ್ಷೆ ಬರೆದು ಕೆಲ್ಸ ತಗೊಂಡೋರ್‍ನೆಲ್ಲ ‘ಲೀಕಾಫೀಸರುಗಳು’ ಅನ್ನಬೋದಾ?’ ಕೊಟ್ರೇಶಿ ಕೊಕ್ಕೆ.

‘ಈ ಲೀಕ್ ಅನ್ನೋದು ಎಲ್ಲ ಕಡಿ ಐತಿ. ಮಿಲಿಟ್ರಿ ಸೀಕ್ರೆಟ್ ಲೀಕ್, ಟೆಂಡರ್ ರೇಟ್ ಲೀಕ್, ಕಮಿಷನ್ ಪರ್ಸೆಂಟೇಜ್ ಲೀಕ್, ರಾಜಕಾರಣಿಗಳ ವಿಡಿಯೊ ಲೀಕ್ ಎಲ್ಲ ಇಲ್ಲೇನು?’ ತೆಪರೇಸಿ ಮಾತಿಗೆ ಬ್ರೇಕ್ ಹಾಕಿದ ಗುಡ್ಡೆ,

‘ಲೇ ತೆಪರ, ನಿಮ್ಮನಿ ನಲ್ಲಿ ಲೀಕ್ ಆಗಾಕತ್ತಿ ಒಂದು ವಾರಾತಂತೆ. ಮೊದ್ಲು ಅದನ್ನ ಸರಿ ಮಾಡ್ಸು ಹೋಗು, ಇಲ್ಲದಿದ್ರೆ ನಿನ್ನೆಂಡ್ತಿ ಪಮ್ಮಕ್ಕ ಬೆಂಡೆತ್ತಿ ನಿನ್ ಬಾಡಿ ಲೀಕ್ ಮಾಡಿದ್ರೆ ಕಷ್ಟ’ ಎಂದ. ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಮನಃಪರಿವರ್ತನೆಯೇ ಮದ್ದು

ಮದ್ಯ, ಮಾದಕದ್ರವ್ಯ ವ್ಯಸನದಿಂದ ಎಳೆಯರು ದಾರಿ ತಪ್ಪದಂತೆ ಅರಿವು ಮೂಡಿಸುವ ಕಾರ್ಯಕ್ರಮಗಳು ನಿರಂತರವಾಗಿ ನಡೆಯಬೇಕು

• ಡಾ. ಮುರಳೀಧರ ಕಿರಣಕೆರೆ

ಒಬ್ಬೊಬ್ಬ ಶಿಬಿರಾರ್ಥಿಯತ್ತ ದೃಷ್ಟಿ ಹಾಯ್ದಾಗಲೂ ಮನದಲ್ಲಿ ಆತಂಕದ ಅಲೆಗಳು! ಕೆಲವರನ್ನು ಹೊರತುಪಡಿಸಿದರೆ ಮತ್ತೆಲ್ಲರೂ ಯುವಕರು. ಹಲವರಿಗೆ ಸರಿಯಾಗಿ ಮೀಸೆಯೂ ಮೂಡಿಲ್ಲ. ‘ಎಷ್ಟು ವರ್ಷದಿಂದ ಈ ಕುಡಿತದ ಚಟ’ ಎಂಬ ಪ್ರಶ್ನೆಗೆ ‘ಹತ್ತು’ ಎಂದು ಥಟ್ಟನೆ ಉತ್ತರಿಸಿದ್ದ ಆ ತರುಣ. ‘ಈಗ ನಿನ್ನ ವಯಸ್ಸೆಷ್ಟು?’ ನನ್ನ ಕುತೂಹಲದ ವಿಚಾರಣೆಗೆ ಆತ ‘ಇಪ್ಪತ್ಮೂರು’ ಎಂದಾಗ ಬೆಚ್ಚಿಬಿದ್ದಿದ್ದೆ! ಅಂದರೆ ಹೈಸ್ಕೂಲು ಓದುವಾಗಲೇ ಮದ್ಯಪಾನ ಶುರುವಾಗಿದೆ! ಇಷ್ಟು ಸಣ್ಣ ವಯಸ್ಸಿನಲ್ಲೇ ದಾರಿ ತಪ್ಪಿದರೆ ಆ ಕುಟುಂಬದ ಪರಿಸ್ಥಿತಿ, ಮನಃಸ್ಥಿತಿ ಏನಾಗಿರಬಹುದು?


ಮತ್ತೊಬ್ಬ ಯುವಕನನ್ನು ಪ್ರಶ್ನಿಸಿದೆ, ‘ಮೊದಲ ಸಲ ಹೆಂಡ ಕುಡಿಯಲು ಕಾರಣವೇನು?’, ‘ಹೋಟೆಲ್‌ನಲ್ಲಿ ಕೆಲಸ ಮಾಡುವಾಗ ನನಗೆ ದುಡ್ಡು ಕೊಟ್ಟು ಕುಡಿಸಿ ಒಬ್ಬನಿಗೆ ಹೊಡೆಯಲು ಕಳುಹಿಸಿದ್ದರು. ಅಂದಿನಿಂದ ಈ ಅಭ್ಯಾಸ’. ಎಲ್ಲವೂ ಗಾಬರಿಗೊಳಿಸುವ ವಿಷಯಗಳು! ಆ ಮದ್ಯವರ್ಜನ ಶಿಬಿರದಲ್ಲಿದ್ದ ಎಂಬತ್ತು ವ್ಯಸನಿಗಳ ಹಿಂದೆಯೂ ಇಂತಹದ್ದೇ ಭಯಾನಕ ಕತೆಗಳು.

ಹೌದು, ನಮ್ಮ ಯುವಶಕ್ತಿಗೆ ನಶೆಯೇರಿಸಿ ಹೀಗೆ ಹಾದಿ ತಪ್ಪಿಸಿದರೆ ಸಮಾಜದಲ್ಲಿ ಶಾಂತಿ, ಸಾಮರಸ್ಯವಾದರೂ ಹೇಗೆ ಸಾಧ್ಯ? ವ್ಯಸನದ ಜಾಲಕ್ಕೆ ಬಿದ್ದವರು ಯಾರನ್ನು ತಾನೆ ನೆಮ್ಮದಿಯಿಂದ ಬದುಕಲು ಬಿಟ್ಟಾರು? ನಮ್ಮಲ್ಲಿನ ರಸ್ತೆ ಅಪಘಾತಗಳಿಗೆ ಅತಿವೇಗ, ಅಜಾಗರೂಕ ಚಾಲನೆ ಜೊತೆಗೆ ಮತ್ತೊಂದು ಪ್ರಮುಖ ಕಾರಣ ಮದ್ಯ, ಮಾದಕದ್ರವ್ಯಗಳ ಅಮಲು.

ಒಂದೆಡೆ, ಏರುಗತಿಯಲ್ಲಿರುವ ವ್ಯಸನಿಗಳ ಸಂಖ್ಯೆ, ಮತ್ತೊಂದೆಡೆ, ಶಾಲಾ ಕಾಲೇಜು ಹಂತದಲ್ಲೇ ದುಶ್ಚಟಗಳಿಗೆ ದಾಸರಾಗುತ್ತಿರುವ ಎಳೆಯರು. ಪರಿಸ್ಥಿತಿ ಈ ಪರಿಯಲ್ಲಿ ಹದಗೆಡುತ್ತಿರುವಾಗ ದಿನನಿತ್ಯ ರಸ್ತೆ ಉಪಯೋಗಿಸುವ ನಾವ್ಯಾರೂ ಸುರಕ್ಷಿತರಲ್ಲ! ಅಮಲಿನಲ್ಲಿ ವಾಹನ ಚಲಾಯಿಸುವವರು, ನಶೆಯಲ್ಲಿನ ಕಲಹ, ಹೊಡೆದಾಟ, ಬಡಿದಾಟ, ಕೊಲೆ, ವ್ಯಸನಕ್ಕೆ ಹಣ ಹೊಂಚಲು ಸುಲಿಗೆ, ಕಳ್ಳತನ, ದರೋಡೆಗಿಳಿಯುವವರು, ಸಂಪಾದನೆಯನ್ನೆಲ್ಲಾ ಚಟಕ್ಕೆ ವ್ಯಯಿಸಿ ಕುಟುಂಬವನ್ನೇ ಬೀದಿಪಾಲು ಮಾಡುವವರು, ಮತ್ತಿನ ಭರದಲ್ಲಿ ಜಾಲತಾಣಗಳಲ್ಲಿ ಅಶ್ಲೀಲ, ಆಕ್ಷೇಪಾರ್ಹ ಸಂದೇಶಗಳನ್ನು ಹರಿಯಬಿಟ್ಟು ಶಾಂತಿ ಭಂಗ ಉಂಟುಮಾಡುವವರು... ನಿಜ, ಮದ್ಯಾಸುರನಿಗೆ ಒಂದೆರಡಲ್ಲ ಹತ್ತಾರು ಪಾತ್ರಗಳು!

ಸ್ನೇಹಿತರ ಒತ್ತಾಯ, ಹಿರಿಯರ ಅನುಕರಣೆ, ರುಚಿ ನೋಡುವ ಕುತೂಹಲ, ಸಂತೋಷ ಹಂಚಿಕೊಳ್ಳಲು, ದುಃಖ, ಸಂಕಟ, ಸಮಸ್ಯೆಗಳನ್ನು ಮರೆಯಲು, ಒತ್ತಡದಿಂದ ಹೊರಬರಲು, ಮೋಜು, ಮಸ್ತಿ, ಸಾಮಾಜಿಕ ಸ್ಥಾನಮಾನ, ಸಂಭ್ರಮಾಚರಣೆ, ಶ್ರಮದ ಕೆಲಸಕ್ಕಾಗಿ ದೇಹ-ಮನಸ್ಸು ಸಿದ್ಧಗೊಳಿಸಲು, ಮೈಕೈ ನೋವು ನಿವಾರಕ, ಔಷಧ, ಆರೋಗ್ಯಕ್ಕಾಗಿ ಎಂದೆಲ್ಲಾ ಕುಡಿತ ಆರಂಭಿಸುವವರಲ್ಲಿ ಕೆಲವರು ನಿಧಾನಕ್ಕೆ ಅದರ ದಾಸರಾಗುತ್ತಿದ್ದಾರೆ. ಮದ್ಯಪಾನದ ಚಾಳಿ ಈಗ ಶಾಲಾ ಕಾಲೇಜು ವಿದ್ಯಾರ್ಥಿಗಳನ್ನೂ ಆವರಿಸುತ್ತಿದೆ. ಚಟದ ಕಾರಣ ವಿದ್ಯಾಭ್ಯಾಸಕ್ಕೆ ವಿಮುಖರಾಗಿ ನಶೆಯಲ್ಲಿ ತೇಲಾಡುವ ಎಳೆಯರು ಜಗಳ, ದೊಂಬಿ, ಕಳ್ಳತನ, ಅತ್ಯಾಚಾರದಂತಹ ಕಾನೂನುಬಾಹಿರ ಕೃತ್ಯಗಳಲ್ಲಿ ಭಾಗಿಯಾಗುತ್ತಿರುವುದು ಆತಂಕಕಾರಿ. ಅವರನ್ನು ವ್ಯವಸ್ಥಿತವಾಗಿ ದಾರಿ ತಪ್ಪಿಸಿ ಮದ್ಯ, ಮಾದಕದ್ರವ್ಯದ ದಂಧೆಗಿಳಿಸುವ ಜಾಲವೂ ಪ್ರಬಲವಾಗಿದೆ.

ಆಕರ್ಷಕ ಆದಾಯ, ನಕಲಿ ಮದ್ಯದ ಅಪಾಯ, ಉದ್ಯೋಗ, ಪ್ರವಾಸೋದ್ಯಮ, ಲಾಬಿ, ಒತ್ತಡದಂತಹ ಕಾರಣಗಳಿಂದ ಸರ್ಕಾರ ಸಂಪೂರ್ಣ ಮದ್ಯ ನಿಷೇಧದಂತಹ ಸಂಕಲ್ಪ ತೊಡುವುದು, ಅದನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಕಷ್ಟಸಾಧ್ಯ. ನಮ್ಮ ರಾಜ್ಯದ ಉದಾಹರಣೆ ತೆಗೆದುಕೊಳ್ಳುವುದಾದರೆ, ಕೋವಿಡ್ ನಿರ್ಬಂಧಗಳ ನಡುವೆಯೂ ಕಳೆದ ಆರ್ಥಿಕ ವರ್ಷದಲ್ಲಿ ₹ 23,332 ಕೋಟಿ ಅಬ್ಕಾರಿ ಆದಾಯ ಖಜಾನೆಗೆ ಜಮಾವಣೆಯಾಗಿದೆ. ಗುರಿಗೆ ಹೋಲಿಸಿದಲ್ಲಿ ಇದು ಶೇ 95ರಷ್ಟು ಸಾಧನೆ! ಈ ವರ್ಷದ ನಿರೀಕ್ಷೆ ₹ 29,000 ಕೋಟಿ, ಕಳೆದ ವರ್ಷಕ್ಕಿಂತ ಶೇ 18 ಹೆಚ್ಚಳ! ಈ ಅಂಕಿಅಂಶ ಹೊಸದಾಗಿ ಮದ್ಯಪಾನಿಗಳಾಗುತ್ತಿರುವವರ ಜೊತೆಯಲ್ಲಿ ವ್ಯಸನಿಗಳ ಸಂಖ್ಯೆಯ ಗ್ರಾಫ್ ಆಕಾಶದತ್ತ ಮುಖ ಮಾಡಿರುವುದನ್ನು ಸಾಬೀತುಪಡಿಸುತ್ತದೆ.



ಹೌದು, ಮದ್ಯದ ಘಾತು ತೊಡೆಯಲು ಜಾಗೃತಿಯೇ ಮದ್ದು. ಮದ್ಯ, ಮಾದಕದ್ರವ್ಯಗಳ ವ್ಯಸನದಿಂದಾಗುವ ಅನಾಹುತಗಳ ಬಗ್ಗೆ ಪ್ರೌಢಶಾಲೆ, ಕಾಲೇಜುಗಳಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳು ನಿರಂತರವಾಗಿ ನಡೆಯಬೇಕು. ಎಳೆಯರು ದಾರಿ ತಪ್ಪದಂತೆ ಪೋಷಕರು, ಬೋಧಕರು ಎಚ್ಚರ ವಹಿಸುವುದು ತುರ್ತು ಅಗತ್ಯ. ಅನಧಿಕೃತ ಮದ್ಯ ಮಾರಾಟವನ್ನು ಕಟ್ಟುನಿಟ್ಟಾಗಿ ನಿಲ್ಲಿಸುವುದು ಆಡಳಿತದ ಹೊಣೆಗಾರಿಕೆ.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ನಾಡಿನಾದ್ಯಂತ ಯಶಸ್ವಿಯಾಗಿ ನಡೆಸುತ್ತಿರುವ ಸಾಮುದಾಯಿಕ ಮದ್ಯವರ್ಜನ ಶಿಬಿರಗಳ ರೀತಿಯಲ್ಲಿ ಸರ್ಕಾರವೂ ವ್ಯಸನಿಗಳ ಮನಃಪರಿವರ್ತನೆ ಮಾಡಿ ಚಟದಿಂದ ವಿಮುಖರನ್ನಾಗಿಸಲು ನಿರಂತರ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಪಾನಮುಕ್ತರ ಸಮಿತಿಗಳನ್ನು ರಚಿಸಿ ಅವರು ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸುವುದು ಕುಡಿತದ ಹಾದಿಗೆ ಮರಳದಂತೆ ತಡೆಯಲು ಸಹಕಾರಿ.

ಜೀವನೋಪಾಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಕೌಶಲ ತರಬೇತಿ ಜೊತೆಗೆ ಅಗತ್ಯ ಇದ್ದರೆ ಸಾಲ ಸೌಲಭ್ಯದ ವ್ಯವಸ್ಥೆ ಮಾಡುವುದು ಸ್ವಸ್ಥ ಸಮಾಜ ನಿರ್ಮಾಣದತ್ತ ದಿಟ್ಟ ಹೆಜ್ಜೆಯಾಗಬಲ್ಲದು.

ವಾಚಕರ ವಾಣಿ

‘ಶಿವಿನಿ’ ಹೆಸರು ಸೂಕ್ತ

ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಇಡಬಹುದಾದ ಹೆಸರಿನ ಬಗ್ಗೆ ಹಲವರು ಸಲಹೆ ನೀಡುತ್ತಿದ್ದಾರೆ. ಕುವೆಂಪು, ಶಾಂತವೇರಿ ಗೋಪಾಲಗೌಡ, ಬಂಗಾರಪ್ಪ, ಕೆಳದಿ ಶಿವಪ್ಪನಾಯಕ, ಕಾಗೋಡು ಚಳವಳಿಯ ರೂವಾರಿಗಳಲ್ಲಿ ಒಬ್ಬರಾದ ಎಚ್.ಗಣಪತಿಯಪ್ಪ, ಅಲ್ಲಮಪ್ರಭು, ಸರ್ ಎಂ.ವಿಶ್ವೇಶ್ವರಯ್ಯ, ಪುನೀತ್ ರಾಜ್‌ಕುಮಾರ್ ಹೀಗೆ ಹಲವರ ಹೆಸರುಗಳನ್ನು ಸೂಚಿಸಿ, ಅದಕ್ಕೆ ಗಟ್ಟಿಯಾದ ಸಮರ್ಥನೆಯನ್ನೂ ನೀಡಿದ್ದಾರೆ.

ಯಡಿಯೂರಪ್ಪ ಅವರು ಶಿಫಾರಸಾಗಿದ್ದ ತಮ್ಮ ಹೆಸರನ್ನು ಹಿಂದಕ್ಕೆ ಪಡೆಯುವಂತೆ ಕೋರಿ ಒಳ್ಳೆಯ ಕೆಲಸ ಮಾಡಿದರು. ಇಲ್ಲವಾದರೆ ಅವರ ಹೆಸರಿಗೆ ಪರ-ವಿರೋಧ ವಾಗ್ವಾದವಾಗಿ ರಾಡಿಯಾಗುತ್ತಿತ್ತು. ಹೆಸರು ಎಂದ ಕೂಡಲೇ ಜಾತಿ, ಮತ, ಪಂಗಡ, ಪ್ರದೇಶ, ಪಕ್ಷ ಇವೆಲ್ಲವೂ ಮೇಲೆದ್ದು ಬರುತ್ತವೆ. ಇದರಿಂದ ಇಲ್ಲದ ವೈಮನಸ್ಯ ಮೂಡಿ ಸೌಹಾರ್ದ ಕೆಡುತ್ತದೆ. ಅಷ್ಟಕ್ಕೂ, ವಿಮಾನ ನಿಲ್ದಾಣಕ್ಕೆ ವ್ಯಕ್ತಿಯೊಬ್ಬರ ಹೆಸರನ್ನೇ ಇಡಬೇಕು ಎನ್ನುವುದು ಬಾಲಿಶವಾದ ಆಲೋಚನೆ. ಹೆಸರಿಡಬೇಕು, ಹೌದು. ‘ಶಿವಿನಿ’ ಎಂದಿಡಲಿ. ಎಂದರೆ ‘ಶಿವಮೊಗ್ಗ ವಿಮಾನ ನಿಲ್ದಾಣ’. ಇದರಿಂದ ಯಾವ ಸಮುದಾಯಕ್ಕೂ ರಾಜಕೀಯ ಪಕ್ಷಕ್ಕೂ ವ್ಯಕ್ತಿಗಳ ಅಭಿಮಾನಿಗಳಿಗೂ ಅಸಮಾಧಾನ, ಅನಗತ್ಯ ಮನಸ್ತಾಪ ಇರುವುದಿಲ್ಲ.

ಪ್ರೊ. ಎಂ.ಅಬ್ದುಲ್ ರೆಹಮಾನ್ ಪಾಷ, ಬೆಂಗಳೂರು

ಸಿಗದ ಪರಿಹಾರಾತ್ಮಕ ಮಾರ್ಗೋಪಾಯ

ದೇಶದಲ್ಲಿ ಕೋವಿಡ್ ಪರಿಸ್ಥಿತಿ ಕುರಿತು ಚರ್ಚಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳ ಜತೆ ವಿಡಿಯೊ ಸಂವಾದ ನಡೆಸಿದ್ದು ಸರಿಯಷ್ಟೆ. ದೇಶವಾಸಿಗಳ ಆರೋಗ್ಯ ಮತ್ತು ದೇಶದ ಆರ್ಥಿಕ ಸ್ಥಿತಿಗತಿಯನ್ನೇ ಬುಡಮೇಲು ಮಾಡಿರುವ ಈ ಸಮಸ್ಯೆಗೆ ಪ್ರಧಾನಿ ಸೂಕ್ತ ಸಲಹೆ ಹಾಗೂ ಪರಿಹಾರಾತ್ಮಕ ಮಾರ್ಗೋಪಾಯ ಸೂಚಿಸಬಹುದೆಂಬ ನಿರೀಕ್ಷೆ ಇತ್ತು. ಆದರೆ ಅವರು, ವಿರೋಧ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳು ವ್ಯಾಟ್ ಸುಂಕ ಇಳಿಕೆ ಮಾಡದಿರುವ ಬಗ್ಗೆ ಚುನಾವಣಾ ಭಾಷಣದ ರೀತಿ ಟೀಕಿಸಿದರು. ಇದನ್ನು ನೋಡಿದರೆ, ಟೀಕಿಸುವ ಉದ್ದೇಶದಿಂದಲೇ ಸಭೆ ಕರೆಯಲಾಗಿತ್ತೇ ಎಂಬ ಪ್ರಶ್ನೆ ಉದ್ಭವಿಸಿತು. ಅಗತ್ಯ ವಸ್ತುಗಳ ಬೆಲೆ ಏರಿಕೆ, ವಿಶೇಷವಾಗಿ ಅಡುಗೆ ಅನಿಲ ಮತ್ತು ಖಾದ್ಯ ತೈಲದ ಬೆಲೆ ಸೇರಿದಂತೆ ಕೇಂದ್ರ ಸರ್ಕಾರ ನಿಯಂತ್ರಿಸಬಹುದಾದ ಇತರ ವಸ್ತುಗಳ ಬಗ್ಗೆ ಚಕಾರವನ್ನೂ ಎತ್ತದ ಮೋದಿ ಅವರು, 6 ತಿಂಗಳ ಹಿಂದೆ ಕಡಿಮೆ ಮಾಡಿದ ಎಕ್ಸೈಸ್ ಸುಂಕದ ಬಗ್ಗೆ ಮಾತ್ರ ಮಾತನಾಡಿದ್ದು ಯಾವ ನ್ಯಾಯ?

ಆರ್.ಕುಮಾರ್, ಬೆಂಗಳೂರು

ರಥೋತ್ಸವ: ಅನುಮತಿ ಕಡ್ಡಾಯಗೊಳಿಸಿ

ತಂಜಾವೂರು ಜಿಲ್ಲೆಯಲ್ಲಿ ದೇವಸ್ಥಾನದ ರಥಕ್ಕೆ ಹೈಟೆನ್ಷನ್ ವಿದ್ಯುತ್ ತಂತಿ ತಗುಲಿ 11 ಜನ ದಾರುಣವಾಗಿ ಸಾವನ್ನಪ್ಪಿರುವುದಾಗಿ ವರದಿಯಾಗಿದೆ (ಪ್ರ.ವಾ., ಏ. 28). ಈ ಹಿಂದೆ ದೊಡ್ಡಬಳ್ಳಾಪುರದಲ್ಲಿ ಗಣೇಶನ ಹಬ್ಬದ ರಥದಲ್ಲಿ ಕಬ್ಬಿಣದ ಕೋಲು ಹಿಡಿದುಕೊಂಡು ಕುಳಿತಿದ್ದ ನಾಲ್ವರು ಯುವಕರು ವಿದ್ಯುತ್ ತಂತಿ ಸ್ಪರ್ಶಿಸಿ ಅಸುನೀಗಿದ್ದರು. ಇಂಥ ದುರ್ಘಟನೆಗಳು ಸಂಭವಿಸುವುದನ್ನು ತಪ್ಪಿಸಲು, ರಥ ಎಳೆಯುವ ಮುನ್ನ ವಿದ್ಯುತ್ ಇಲಾಖೆಯ ಅನುಮತಿ ಪಡೆಯುವುದನ್ನು ಕಡ್ಡಾಯಗೊಳಿಸಬೇಕು.

ಎಂ.ಎಸ್.ರಘುನಾಥ್, ಬೆಂಗಳೂರು

ಟೆಸ್ಟ್ ಪಂದ್ಯಕ್ಕೆ ಸೀಮಿತರಾಗಲಿ

ಎಲ್ಲ ಒಳ್ಳೆಯ ಸಂಗತಿಗಳಿಗೂ ಅಂತ್ಯ ಎಂಬುದು ಇದ್ದೇ ಇರುತ್ತದೆ. ಭಾರತ ಕ್ರಿಕೆಟ್‌ನ ತಾರೆಗಳಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮ ಅವರು ಈಗ ಆಟದ ಮೈದಾನದಲ್ಲಿ ರನ್ನುಗಳಿಗಾಗಿ ಪರದಾಡುವುದನ್ನು ನೋಡಿದರೆ, ಯಾರಿಗಾದರೂ ಈ ಮಾತು ಸತ್ಯ ಅನಿಸುತ್ತದೆ. ಇಬ್ಬರೂ ಆಟಗಾರರು ಬಹಳಷ್ಟು ರಂಜಿಸಿದ್ದು ಹುಬ್ಬೇರಿಸುವಂತಹ ಅತ್ಯುತ್ತಮ ಸಾಧನೆಗಳನ್ನು ಮಾಡಿದ್ದಾರೆ. ಜೊತೆಗೆ ವಯಸ್ಸಿನ ಕಾರಣದಿಂದ ಬಳಲಿದಂತೆ ಕಾಣುತ್ತಿದ್ದಾರೆ. ಇನ್ನು ಸಾಕು. ಟಿ-20 ಕ್ರಿಕೆಟ್ ಹೊಡಿಬಡಿ ಎನ್ನುವ ಮನಃಸ್ಥಿತಿಯ ಯುವ ಆಟಗಾರರಿಗೆ ಮೀಸಲಾದಂತೆ ನಿಚ್ಚಳವಾಗಿ ಕಾಣುತ್ತಿದೆ. ಕೊಹ್ಲಿ ಮತ್ತು ಶರ್ಮ ಚುಟುಕು ಕ್ರಿಕೆಟ್‌ಗೆ ಗುಡ್‌ಬೈ ಹೇಳಿ ಟೆಸ್ಟ್ ಪಂದ್ಯಗಳಿಗೆ ಮಾತ್ರ ಸೀಮಿತರಾಗುವ ಕುರಿತು ಯೋಚಿಸಲು ಕಾಲ ಒದಗಿಬಂದಂತೆ ಇದೆ.

ಇನ್ನೊಂದು ಪರಿಗಣಿಸಬೇಕಾದ ಅಂಶವೆಂದರೆ, ಕರ್ನಾಟಕದ ಕಣ್ಮಣಿ ಕೆ.ಎಲ್.ರಾಹುಲ್ ಅವರು ಈಗ ಅತ್ಯುತ್ತಮ ಫಾರಂನಲ್ಲಿದ್ದಾರೆ. ಒಬ್ಬ ಆಟಗಾರ ಉತ್ತಮ ಲಯದಲ್ಲಿ ಇದ್ದಾಗಲೇ ನಾಯಕತ್ವ ನೀಡುವುದು ಒಳ್ಳೆಯದು. ಅವರಿಗೂ ವಯಸ್ಸಾಗುತ್ತದೆ. ಆಮೇಲೆ ಜವಾಬ್ದಾರಿ ಹೊರಿಸಿದರೆ ಅವರಿಗೂ ಪರದಾಡುವ ಸ್ಥಿತಿ ಬರಬಹುದು. 2007ರಲ್ಲಿ ಎಂ.ಎಸ್.ಧೋನಿ ಅವರಿಗೆ ನಾಯಕತ್ವ ನೀಡಿ ಯಶಸ್ಸು ಪಡೆದಿರುವ ಉದಾಹರಣೆ ನಮ್ಮ ಕಣ್ಣೆದುರು ಇದೆ. ಭಾರತೀಯ ಕ್ರಿಕೆಟ್ ಮಂಡಳಿ ಈ ದಿಸೆಯಲ್ಲಿ ಯೋಚಿಸಲಿ.

ಡಾ. ಕೆ.ಎಸ್.ಗಂಗಾಧರ, ಶಿವಮೊಗ್ಗ

ನೇಮಕಾತಿಯಲ್ಲಿ ಪಾರದರ್ಶಕತೆ: ನನಸಾದೀತೇ?

ರಾಜ್ಯ ಸರ್ಕಾರದ ವಿವಿಧ ಹುದ್ದೆಗಳ ನೇಮಕಾತಿಗಾಗಿ ನಡೆದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಕೇಳಿ ಬರುತ್ತಿರುವ ಅಕ್ರಮಗಳು ಆಕಾಂಕ್ಷಿಗಳಲ್ಲಿ ಭ್ರಮನಿರಸನ ಉಂಟುಮಾಡುತ್ತಿವೆ. ಹಾಲು ಒಕ್ಕೂಟದ ನೇಮಕಾತಿಯಲ್ಲೂ ಭಾರಿ ಭ್ರಷ್ಟಾಚಾರ ನಡೆದಿರುವುದಾಗಿ ಜೆಡಿಎಸ್ ಮುಖಂಡ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದ್ದಾರೆ. ಇಂತಹ ವಿದ್ಯಮಾನಗಳಿಂದ, ಪದವಿ ಪಡೆದು ಸರ್ಕಾರಿ ನೌಕರಿಗಾಗಿ ಚಾತಕ ಪಕ್ಷಿಯಂತೆ ಕಾದು ಕುಳಿತು, ನೇಮಕಾತಿ ಅಧಿಸೂಚನೆ ಹೊರಬಿದ್ದ ನಂತರ ಹಗಲಿರುಳೂ ಓದಿ, ತಯಾರಿ ನಡೆಸುವ ಪ್ರತಿಭಾವಂತ ಅಭ್ಯರ್ಥಿಗಳಿಗೆ ಎಷ್ಟರ ಮಟ್ಟಿಗೆ ಅನ್ಯಾಯವಾಗುತ್ತಿದೆ ಎಂಬುದನ್ನು ಸರ್ಕಾರ ಗಮನಿಸಬೇಕಾಗಿದೆ.

ಇದೆಲ್ಲಕ್ಕಿಂತ ಇನ್ನೂ ಒಂದು ಹೆಜ್ಜೆ ಮುಂದೆ ಎಂಬಂತೆ, ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರ ಹೆಸರಿನಲ್ಲಿ ‘ಡಿ’ ದರ್ಜೆ ನೌಕರಿಗೆ ನಕಲಿ ನೇಮಕಾತಿ ಆದೇಶ ಪತ್ರವನ್ನು ಸ್ಥಳ ನಿಯುಕ್ತಿಯೊಂದಿಗೆ ನೀಡಲಾಗಿದೆ ಎಂಬ ವರದಿಯು ದಿಗ್ಭ್ರಮೆ ಹುಟ್ಟಿಸುತ್ತದೆ. ಅಕ್ರಮಗಳನ್ನು ನಡೆಸುವ ದುಷ್ಕರ್ಮಿಗಳಿಗೆ ಕಾನೂನಿನ ಭಯವಿಲ್ಲದಿರುವುದನ್ನೂ ಇದು ಸೂಚಿಸುತ್ತದೆ. ಸರ್ಕಾರ ಇಂತಹವರ ವಿರುದ್ಧ ಬಿಗಿ ಕ್ರಮಗಳನ್ನು ಕೈಗೊಳ್ಳದೇ ಹೋದರೆ, ಮುಂದಿನ ದಿನಗಳಲ್ಲಿ ಇನ್ನಷ್ಟು ನೇಮಕಾತಿ ಅವಾಂತರಗಳು ನಡೆಯುವ ಸಾಧ್ಯತೆ ಇಲ್ಲದಿಲ್ಲ. ಆಗ ನೇಮಕಾತಿಯಲ್ಲಿ ಪಾರದರ್ಶಕತೆ ಎಂಬುದು ಬರೀ ಭ್ರಮೆ ಎಂದಾಗುತ್ತದೆ.

ಸುರೇಂದ್ರ ಎಚ್., ಮೊಳಕಾಲ್ಮುರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ದೇಶದ ವಿವಿಧ ಭಾಗಗಳಲ್ಲಿ ಬಿಸಿಗಾಳಿಯ ಅಪಾಯ

ಬಿಸಿಲ ಬೇಗೆಯ ಬವಣೆ

ಪ್ರಜಾವಾಣಿ ವಾರ್ತೆ

ಭಾರತ ಉಪಖಂಡ ಮತ್ತು ಪಾಕಿಸ್ತಾನದ ಪ್ರದೇಶದಲ್ಲಿ ಪ್ರತಿ ವರ್ಷ ಮಾರ್ಚ್–ಮೇ ಅವಧಿಯಲ್ಲಿ ಉಷ್ಣಾಂಶ ಏರಿಕೆಯಾಗುತ್ತದೆ. ಈ ಅವಧಿಯಲ್ಲಿ ಉಷ್ಣಾಂಶ ಏರಿಕೆಯಾಗುವುದು ಸಾಮಾನ್ಯ ವಿದ್ಯಮಾನವೇ ಆದರೂ, ಕೆಲವೊಮ್ಮೆ ಏರಿಕೆಯು ತೀವ್ರ ಪ್ರಮಾಣದಲ್ಲಿ ಇರುತ್ತದೆ. ತೀವ್ರತರವಾದ ಈ ಉಷ್ಣಾಂಶಕ್ಕೆ ಸಿಲುಕಿದ ಪಕ್ಷಿಗಳು, ಪ್ರಾಣಿಗಳು ಮತ್ತು ಮನುಷ್ಯರು ಸತ್ತು ಬೀಳುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇಂತಹ ಸ್ಥಿತಿಯನ್ನು ಬಿಸಿಗಾಳಿ ಎಂದು ವ್ಯಾಖ್ಯಾನಿಸಲಾಗಿದೆ. ಈ ವರ್ಷವೂ ಅಂಥದ್ದೊಂದು ಬಿಸಿಗಾಳಿ ಪರಿಸ್ಥಿತಿ ನಿರ್ಮಾಣವಾಗಿದೆ.


ಭಾರತದಲ್ಲಿ, ಈ ವರ್ಷದ ಮಾರ್ಚ್‌ನಲ್ಲಿ ಸರಾಸರಿ ಗರಿಷ್ಠ ಉಷ್ಣಾಂಶವು 34 ಡಿಗ್ರಿ ಸೆಲ್ಸಿಯಸ್‌ನಷ್ಟು ದಾಖಲಾಗಿದೆ. ದೇಶದಲ್ಲಿ ಗರಿಷ್ಠ ಮತ್ತು ಕನಿಷ್ಠ ಉಷ್ಣಾಂಶವನ್ನು ದಾಖಲಿಸುವ ಪರಿಪಾಟ 1902ರಲ್ಲಿ ಆರಂಭವಾಯಿತು. ಈ 120 ವರ್ಷಗಳಲ್ಲಿ ಈ ಬಾರಿಯ ಮಾರ್ಚ್ ತಿಂಗಳೇ ಈವರೆಗಿನ ಅತ್ಯಂತ ಬಿಸಿಯಾದ ಮಾರ್ಚ್ ಎಂದು ತಜ್ಞರು ಹೇಳಿದ್ದಾರೆ. ಏಪ್ರಿಲ್‌ನ ಕೊನೆಯ ದಿನಗಳು ಮತ್ತು ಮೇ ಮೊದಲ ವಾರದ ಕೆಲವು ದಿನಗಳಲ್ಲಿ ಪಾಕಿಸ್ತಾನ ಮತ್ತು ಉತ್ತರ ಹಾಗೂ ಮಧ್ಯ ಭಾರತದ ಬಹುತೇಕ ರಾಜ್ಯಗಳಲ್ಲಿ ಬಿಸಿಗಾಳಿ ಪರಿಸ್ಥಿತಿ ಇರಲಿದೆ. ಕೆಲವು ಪ್ರದೇಶಗಳಲ್ಲಿ ತೀವ್ರ ಬಿಸಿಗಾಳಿ ಪರಿಸ್ಥಿತಿ ಉಂಟಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಮೇ ತಿಂಗಳಲ್ಲಿ ಬಿಸಿಗಾಳಿ ತೀವ್ರವಾಗಲಿದೆ. ಕೆಲವು ಪ್ರದೇಶಗಳಲ್ಲಿ ಉಷ್ಣಾಂಶವು 45 ಡಿಗ್ರಿ ಸೆಲ್ಸಿಯಸ್‌ನಷ್ಟಾಗುವ ಸಾಧ್ಯತೆ ಇದೆ. ಕೆಲವೆಡೆ ಇದು 47 ಡಿಗ್ರಿ ಸೆಲ್ಸಿಯಸ್‌ನಷ್ಟಾಗುವ ಅಪಾಯವೂ ಇವೆ ಎಂದು ಹಲವು ಖಾಸಗಿ ಹವಾಮಾನ ಸಂಸ್ಥೆಗಳು ಅಂದಾಜಿಸಿವೆ.


ಈ ಬಾರಿಯ ಬಿಸಿಗಾಳಿಯು ತೀವ್ರ ಬಿಸಿಗಾಳಿಯಾಗುವ ಸಾಧ್ಯತೆಗಳೂ ಇವೆ. ಇದರಿಂದ ಉತ್ತರದ ಬಯಲು ಪ್ರದೇಶದಲ್ಲಿ ದೂಳಿನ ಮಾರುತ ತಲೆದೋರುವ ಅಪಾಯಗಳಿವೆ. ಗಾಳಿ ತೀವ್ರ ಬಿಸಿಯಾಗಿದ್ದಾಗ ಪಾಕಿಸ್ತಾನದ ಪಂಜಾಬ್, ಸಿಂಧ್ ಪ್ರದೇಶದಿಂದ ಭಾರತದತ್ತ ಬೀಸುವ ಮಾರುತಗಳು ತಮ್ಮೊಂದಿಗೆ ದೂಳಿನ ಕಣಗಳನ್ನು ಹೊತ್ತು ತರುತ್ತವೆ. ಗುಜರಾತ್‌ನ ರಣ್ ಕಛ್ ಮತ್ತು ಥಾರ್ ಮರುಭೂಮಿ ಪ್ರದೇಶವನ್ನು ಹಾದು ಬರುವಾಗ ಈ ಮಾರುತವು ಮರಳಿನ ಕಣಗಳನ್ನೂ ಹೊತ್ತು ತರುತ್ತವೆ. ಈ ಕಣಗಳು ಮಾರುತದೊಂದಿಗೆ ದೂರದ ದೆಹಲಿ, ಲಖನೌ, ಕಾನ್ಪುರದವರೆಗೂ ಬಂದು ಬೀಳುತ್ತವೆ. ಈ ಬಾರಿಯೂ ಪಂಜಾಬ್, ಹರಿಯಾಣ, ದೆಹಲಿ, ರಾಜಸ್ಥಾನ, ಉತ್ತರ ಪ್ರದೇಶದ ಹಲವು ಪ್ರದೇಶಗಳಲ್ಲಿ ಮತ್ತು ಬಿಹಾರದ ಕೆಲವೆಡೆ ದೂಳಿನ ಮಾರುತ ತಲೆದೋರಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬಿಸಿಗಾಳಿ, ತೀವ್ರ ಬಿಸಿಗಾಳಿ

ಒಂದು ಭೌಗೋಳಿಕ ಪ್ರದೇಶದಲ್ಲಿನ ಉಷ್ಣಾಂಶವು ಅಲ್ಲಿನ ಸರಾಸರಿ ಉಷ್ಣಾಂಶಕ್ಕಿಂತ ಭಾರಿ ಪ್ರಮಾಣದಲ್ಲಿ ಹೆಚ್ಚಿದ್ದು, ಅದರಿಂದ ಮಾನವರ ಆರೋಗ್ಯ ಸ್ಥಿತಿಯಲ್ಲಿ ತೀವ್ರ ಏರುಪೇರಾಗುವ ಮತ್ತು ಸಾವು ಸಂಭವಿಸುವಷ್ಟು ತೀವ್ರವಾದ ಪರಿಸ್ಥಿತಿಯನ್ನು ಬಿಸಿಗಾಳಿ ಎಂದು ಪರಿಗಣಿಸಲಾಗುತ್ತದೆ. ಬಿಸಿಗಾಳಿಯನ್ನು ವಿಶ್ವ ಆರೋಗ್ಯ ಸಂಸ್ಥೆ, ಭಾರತೀಯ ಹವಾಮಾನ ಇಲಾಖೆ ಇದೇ ರೀತಿ ವ್ಯಾಖ್ಯಾನಿಸಿವೆ. ಆದರೆ ಇಂತಹ ಒಂದು ಸ್ಥಿತಿಯನ್ನು ಬಿಸಿಗಾಳಿ ಎಂದು ಪರಿಗಣಿಸಬೇಕಾದರೆ ಹಲವು ಮಾನದಂಡಗಳನ್ನು ಅನುಸರಿಸಲಾಗುತ್ತದೆ. ಈ ಮಾನದಂಡಗಳು, ಆಯಾ ಪ್ರದೇಶದಲ್ಲಿನ ಸರಾಸರಿ ಗರಿಷ್ಠ ತಾಪಮಾನದ ಆಧಾರದಲ್ಲಿ ಬದಲಾಗುತ್ತದೆ.

1. ಯಾವುದೇ ಬಯಲು ಪ್ರದೇಶದಲ್ಲಿ ದಿನವೊಂದರಲ್ಲಿ ಗರಿಷ್ಠ ಉಷ್ಣಾಂಶವು 40 ಡಿಗ್ರಿ ಸೆಲ್ಸಿಯಸ್ ಮತ್ತು ಅದಕ್ಕಿಂತಲೂ ಹೆಚ್ಚು ಇದ್ದರೆ ಅದನ್ನು ಬಿಸಿಗಾಳಿ ಎಂದು ಪರಿಗಣಿಸಲಾಗುತ್ತದೆ. ಯಾವುದೇ ಗುಡ್ಡಗಾಡು ಪ್ರದೇಶದಲ್ಲಿ ದಿನವೊಂದರಲ್ಲಿ ಗರಿಷ್ಠ ಉಷ್ಣಾಂಶವು 30 ಡಿಗ್ರಿ ಸೆಲ್ಸಿಯಸ್ ಮತ್ತು ಅದಕ್ಕಿಂತಲೂ ಹೆಚ್ಚು ಇದ್ದರೆ ಅದನ್ನು ಬಿಸಿಗಾಳಿ ಎಂದು ಪರಿಗಣಿಸಲಾಗುತ್ತದೆ
2. ಯಾವುದೇ ಒಂದು ಪ್ರದೇಶದಲ್ಲಿನ ಉಷ್ಣಾಂಶವು, ಸರಾಸರಿ ಗರಿಷ್ಠ ಉಷ್ಣಾಂಶಕ್ಕಿಂತ 4.5ರಿಂದ 6.4 ಡಿಗ್ರಿ ಸೆಲ್ಸಿಯಸ್‌ನಷ್ಟು ಏರಿಕೆಯಾದರೆ ಆ ಪರಿಸ್ಥಿತಿಯನ್ನು ಬಿಸಿಗಾಳಿ ಎಂದು ಪರಿಗಣಿಸಲಾಗುತ್ತದೆ. ಅದೇ ಪ್ರದೇಶದಲ್ಲಿನ ಉಷ್ಣಾಂಶವು, ಸರಾಸರಿ ಗರಿಷ್ಠ ಉಷ್ಣಾಂಶಕ್ಕಿಂತ 6.5 ಡಿಗ್ರಿ ಸೆಲ್ಸಿಯಸ್ ಮತ್ತು ಅದಕ್ಕಿಂತ ಹೆಚ್ಚು ದಾಖಲಾದರೆ ಆ ಪರಿಸ್ಥಿತಿಯನ್ನು ತೀವ್ರ ಬಿಸಿಗಾಳಿ ಎಂದು ಪರಿಗಣಿಸಲಾಗುತ್ತದೆ
3. ಯಾವುದೇ ಪ್ರದೇಶದಲ್ಲಿ ದಿನದ ವೇಳೆ ಗರಿಷ್ಠ ಉಷ್ಣಾಂಶವು 45 ಡಿಗ್ರಿ ಸೆಲ್ಸಿಯಸ್ ಮತ್ತು ಅದಕ್ಕಿಂತ ಹೆಚ್ಚಾದರೆ ಆ ಪರಿಸ್ಥಿತಿಯನ್ನು ಬಿಸಿಗಾಳಿ ಎಂದು ಪರಿಗಣಿಸಲಾಗುತ್ತದೆ. ಅದೇ ಪ್ರದೇಶದಲ್ಲಿ ದಿನದ ವೇಳೆ ಗರಿಷ್ಠ ಉಷ್ಣಾಂಶವು 47 ಡಿಗ್ರಿ ಸೆಲ್ಸಿಯಸ್ ಮತ್ತು ಅದಕ್ಕಿಂತ ಹೆಚ್ಚಾದರೆ ಆ ಪರಿಸ್ಥಿತಿಯನ್ನು ತೀವ್ರ ಬಿಸಿಗಾಳಿ ಎಂದು ಪರಿಗಣಿಸಲಾಗುತ್ತದೆ
4. ಯಾವುದೇ ಪ್ರದೇಶದಲ್ಲಿ ರಾತ್ರಿ ವೇಳೆಯ ಉಷ್ಣಾಂಶವು, ಅಲ್ಲಿನ ಸರಾಸರಿ ಕನಿಷ್ಠ ಉಷ್ಣಾಂಶಕ್ಕಿಂತ 4.5ರಿಂದ 6.4 ಡಿಗ್ರಿ ಸೆಲ್ಸಿಯಸ್‌ನಷ್ಟು ಏರಿಕೆಯಾದರೆ ಆ ಪರಿಸ್ಥಿತಿಯನ್ನು ಬಿಸಿರಾತ್ರಿ ಎಂದು ಪರಿಗಣಿಸಲಾಗುತ್ತದೆ. ಅದೇ ಪ್ರದೇಶದಲ್ಲಿನ ರಾತ್ರಿಯ ಉಷ್ಣಾಂಶವು, ಸರಾಸರಿ ಕನಿಷ್ಠ ಉಷ್ಣಾಂಶಕ್ಕಿಂತ 6.5 ಮತ್ತು ಅದಕ್ಕಿಂತ ಹೆಚ್ಚು ದಾಖಲಾದರೆ ಆ ಪರಿಸ್ಥಿತಿಯನ್ನು ತೀವ್ರ ಬಿಸಿರಾತ್ರಿ ಎಂದು ಪರಿಗಣಿಸಲಾಗುತ್ತದೆ





ತೀವ್ರ ಒತ್ತಡದಿಂದ ಏರಿಕೆ

ಯಾವುದೇ ಒಂದು ಭೂ ಪ್ರದೇಶದಲ್ಲಿ ಉಷ್ಣಾಂಶವು ಹೆಚ್ಚಾಗಿ ಇದ್ದಾಗ, ಆ ಪ್ರದೇಶದಲ್ಲಿನ ವಾತಾವರಣದಲ್ಲಿ ತೀವ್ರ ಒತ್ತಡ ಉಂಟಾಗುತ್ತದೆ. ಹೀಗೆ ಒತ್ತಡ ಉಂಟಾದಾಗ, ವಾತಾವರಣದಲ್ಲಿನ ಗಾಳಿಯು ನೆಲದತ್ತ ನುಗ್ಗುತ್ತದೆ. ಆಗ ಅಲ್ಲಿನ ಗಾಳಿಯ ಸಾಂದ್ರತೆ ಹೆಚ್ಚುತ್ತದೆ. ಸಾಂದ್ರತೆ ಹೆಚ್ಚುವುದರಿಂದ ಗಾಳಿಯ ಉಷ್ಣಾಂಶ ತೀವ್ರ ಪ್ರಮಾಣದಲ್ಲಿ ಏರಿಕೆಯಾಗುತ್ತದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ವಿವರಿಸಿದೆ.

ಆ ಪ್ರದೇಶದಲ್ಲಿ ಗಾಳಿಯ ಒತ್ತಡ ತೀವ್ರವಾಗುವುದರಿಂದ ಮತ್ತು ಸಾಂದ್ರತೆ ಅತ್ಯಧಿಕವಾಗಿರುವುದರಿಂದ ಮೋಡಗಳು ಆ ಪ್ರದೇಶವನ್ನು ಪ್ರವೇಶಿಸುವುದು ಸಾಧ್ಯವಾಗುವುದಿಲ್ಲ. ಬೇರೆ ಪ್ರದೇಶದಲ್ಲಿನ ತಂಪು ಗಾಳಿಯೂ ಅತ್ತ ಬೀಸುವುದಿಲ್ಲ. ಇದರಿಂದ ಉಷ್ಣಾಂಶವು ಮತ್ತಷ್ಟು ಏರಿಕೆಯಾಗುತ್ತದೆ. ಸಾಮಾನ್ಯವಾಗಿ ಒಂದು ಪ್ರದೇಶದಲ್ಲಿ ಇಂತಹ ಸ್ಥಿತಿಯು ಎರಡರಿಂದ ಮೂರು ದಿನಗಳವರೆಗೆ ಇರುತ್ತದೆ. ಕೆಲವು ಸಂದರ್ಭದಲ್ಲಿ ಒಂದು ವಾರದವರೆಗೂ ಈ ಪರಿಸ್ಥಿತಿ ವಿಸ್ತರಿಸುತ್ತದೆ ಎಂದು ವಿವರಿಸಲಾಗಿದೆ.

ಭಾರತದಲ್ಲಿ ಸಾಮಾನ್ಯವಾಗಿ ಮಾರ್ಚ್‌ನಿಂದ ಮೇ ಅಂತ್ಯದ ಅವಧಿಯಲ್ಲಿ ಬಿಸಿಗಾಳಿ ಪರಿಸ್ಥಿತಿ ತಲೆದೋರುತ್ತದೆ.

ಆರೋಗ್ಯದ ಮೇಲೆ ಪರಿಣಾಮ

ತಾಪಮಾನ ಹೆಚ್ಚಳ ಅಥವಾ ಬಿಸಿ ಗಾಳಿಯು ಜನರ ಆರೋಗ್ಯವನ್ನು ಕೆಡಿಸುತ್ತದೆ. ಮುಖ್ಯವಾಗಿ ನಿರ್ಜಲೀಕರಣ ಕಾಡಬಹುದು. ಬಿಸಿಲಿಗೆ ಒಡ್ಡಿಕೊಂಡವರಲ್ಲಿ ಊತ, ತಲೆನೋವು, ವಾಕರಿಕೆ, ಸುಸ್ತು, ವಾಂತಿ, ಬೆವರು ಕಾಣಿಸಿಕೊಳ್ಳಬಹುದು. ಇದರ ಜೊತೆ ಜ್ವರ (102 ಡಿಗ್ರಿ ಫ್ಯಾರನ್‌ಹೀಟ್) ಕಾಣಿಸಿಕೊಳ್ಳಬಹುದು. ತೀವ್ರವಾದ ಜ್ವರ ಅಂದರೆ, 104 ಡಿಗ್ರಿ ಫ್ಯಾರನ್‌ಹೀಟ್ ದಾಟಿದರೆ, ಪ್ರಜ್ಞೆ ಹೋಗುವ ಅಪಾಯವೂ ಇದೆ. ಕೋಮಾಕ್ಕೂ ಹೋಗಬಹುದು ಎಂದು ಭಾರತೀಯ ಹವಾಮಾನ ಇಲಾಖೆ ಪ್ರಕಟಿಸಿರುವ ಟಿಪ್ಪಣಿಯಲ್ಲಿ ಉಲ್ಲೇಖಿಸಲಾಗಿದೆ

ಮುನ್ನೆಚ್ಚರಿಕೆ ಕ್ರಮಗಳು

- ಮಧ್ಯಾಹ್ನ 12 ಗಂಟೆಯಿಂದ 3 ಗಂಟೆಯವರೆಗೆ ಸೂರ್ಯನ ಬಿಸಿಲಿಗೆ ಹೋಗಬಾರದು
- ಬಾಯಾರಿಕೆ ಇಲ್ಲದಿದ್ದರೂ, ಯಥೇಚ್ಛ ನೀರು ಕುಡಿಯಬೇಕು
- ಹೊರಗೆ ಹೋಗಬೇಕೆಂದಿದ್ದರೆ, ಹಗುರವಾದ ಹಾಗೂ ಸಡಿಲವಾದ ಹತ್ತಿ ಬಟ್ಟೆಗಳನ್ನು ಧರಿಸಬೇಕು
- ಹೊರಗಡೆ ಕೆಲಸ ಮಾಡುವವರು ತಲೆ, ಕುತ್ತಿಗೆ, ಮುಖ ಹಾಗೂ ಕೈಕಾಲು ಮುಚ್ಚುವಂತಹ ಬಟ್ಟೆಗಳನ್ನು ಧರಿಸಬೇಕು
- ಸೂರ್ಯನ ಬಿಸಿಲಿನಿಂದ ರಕ್ಷಣೆ ನೀಡುವ ಕನ್ನಡಕ, ಟೋಪಿ, ಛತ್ರಿ ಬಳಸಬೇಕು
- ನಿರ್ಜಲೀಕರಣಕ್ಕೆ ಕಾರಣವಾಗಬಹುದಾದ ಮದ್ಯ, ಕಾಫಿ, ಟೀ, ಕಾರ್ಬೋನೇಟೆಡ್ ಪಾನೀಯಗಳಿಂದ ದೂರವಿರಬೇಕು
- ಹೆಚ್ಚು ಪ್ರೊಟೀನ್‌ಭರಿತ ಆಹಾರ, ಹಳಸಿದ ಆಹಾರ ಸೇವಿಸಬಾರದು
- ಒಆರ್‌ಎಸ್, ಮನೆಯಲ್ಲಿ ತಯಾರಿಸಿದ ಲಸ್ಸಿ, ಮಜ್ಜಿಗೆ, ನಿಂಬೆ ಶರಬತ್ತು ಕುಡಿಯಬೇಕು
- ನಿಲುಗಡೆ ಮಾಡಿರುವ ವಾಹನಗಳಲ್ಲಿ ಮಕ್ಕಳು ಹಾಗೂ ಸಾಕುಪ್ರಾಣಿಗಳನ್ನು ಬಿಡಬಾರದು
- ತಣ್ಣೀರಿನಲ್ಲಿ ಸ್ನಾನ ಮಾಡಬೇಕು. ಮನೆಯನ್ನು ತಂಪಾಗಿರಿಸಬೇಕು. ಗಾಳಿಯಾಡುವಂತೆ ರಾತ್ರಿಹೊತ್ತು ಕಿಟಕಿಗಳನ್ನು ತೆರೆದಿಡಬೇಕು
- ಆರೋಗ್ಯ ಕೆಟ್ಟರೆ ವೈದ್ಯರನ್ನು ಸಂಪರ್ಕಿಸಬೇಕು

ವಿದ್ಯುತ್ ಕೊರತೆ: ಕೈಗಾರಿಕಾ ಚಟುವಟಿಕೆ ಕುಂಠಿತ

ಬಿಸಿಗಾಳಿಯು ತಯಾರಿಕಾ ವಲಯದ ಮೇಲೆ ಪರಿಣಾಮ ಬೀರಿದೆ. ತೀವ್ರ ತಾಪಮಾನದ ಕಾರಣ ವಿದ್ಯುತ್‌ಗೆ ಭಾರಿ ಬೇಡಿಕೆ ಸೃಷ್ಟಿಯಾಗಿದೆ. ರಾಜಸ್ಥಾನ, ಗುಜರಾತ್ ಹಾಗೂ ಆಂಧ್ರ ಪ್ರದೇಶದ ಕೈಗಾರಿಕೆಗಳಿಗೆ ನಾಲ್ಕು ಗಂಟೆ ವಿದ್ಯುತ್ ಕಡಿತ ಮಾಡಲಾಗುತ್ತಿದೆ. ಹೀಗಾಗಿ ಕೈಗಾರಿಕಾ ಚಟುವಟಿಕೆಗಳಿಗೆ ಹಿನ್ನಡೆಯಾಗಿದೆ.

ದೆಹಲಿಯಲ್ಲಿ ಏಪ್ರಿಲ್ ತಿಂಗಳಲ್ಲಿ ವಿದ್ಯುತ್‌ಗೆ ದಾಖಲೆ ಪ್ರಮಾಣದ ಬೇಡಿಕೆ ಸೃಷ್ಟಿಯಾಗಿದೆ. ಗುರುವಾರದ (ಏ.28) ವಿದ್ಯುತ್ ಬೇಡಿಕೆ 6,000 ಮೆಗಾವಾಟ್ ದಾಟಿದೆ ಎಂದು ಡಿಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

ತೀವ್ರವಾದ ಬಿಸಿಲಿಗೆ ಒಡ್ಡಿಕೊಂಡಿರುವ ರಾಜಸ್ಥಾನದ ಗ್ರಾಮೀಣ ಭಾಗದಲ್ಲೂ ನಾಲ್ಕು ಗಂಟೆ ವಿದ್ಯುತ್ ಕಡಿತ ಮಾಡಲಾಗುತ್ತಿದ್ದು, ಲಕ್ಷಾಂತರ ಜನರು ಬಿಸಿಲಿನ ಬೇಗೆ ಅನುಭವಿಸುತ್ತಿದ್ದಾರೆ.

ಕೊರೊನಾ ವೈರಸ್ ದಾಳಿಯಿಟ್ಟಿದ್ದ ಸಂದರ್ಭದಲ್ಲಿ ಕೈಗಾರಿಕಾ ಚಟುವಟಿಕೆಗಳ ಮೇಲೆ ವಿಧಿಸಿದ್ದ ನಿರ್ಬಂಧದ ಬಳಿಕ, ಇದೀಗ ವಿದ್ಯುತ್ ಕೊರತೆಯ ಕಾರಣಕ್ಕೆ ಕೈಗಾರಿಕಾ ಚಟುವಟಿಕೆಗಳು ಕೊಂಚ ಮಟ್ಟಿಗೆ ಕುಂಠಿತಗೊಂಡಿವೆ. ಆರ್ಥಿಕತೆ ಹಳಿಗೆ ಮರಳುತ್ತಿದೆ ಎನ್ನುವಾಗಲೇ ಬಿಸಿ ಗಾಳಿಯು ಅದಕ್ಕೆ ಅಡ್ಡಿಯೊಡ್ಡಿದೆ. ವಿದ್ಯುತ್ ಉತ್ಪಾದನೆಗೆ ಅತಿಹೆಚ್ಚಾಗಿ ಬಳಕೆಯಾಗುತ್ತಿರುವ ಕಲ್ಲಿದ್ದಲಿಗೂ ಬೇಡಿಕೆ ಹೆಚ್ಚಿದೆ.

ಗೋಧಿ ಉತ್ಪಾದನೆ ಕುಸಿತ: ತಾಪಮಾನವು ಕೃಷಿ ಉತ್ಪಾದನೆಯ ಮೇಲೂ ಕರಿನೆರಳು ಚೆಲ್ಲಿದೆ. ಗೋಧಿ ಉತ್ಪಾದನೆಯ ಮುಖ್ಯ ರಾಜ್ಯವಾಗಿರುವ ಪಂಜಾಬ್‌ನಲ್ಲಿ ಈ ಬಾರಿ ಫಸಲು ಕಡಿಮೆಯಾಗಿದೆ. 2021ರ ಇದೇ ಅವಧಿಗೆ ಹೋಲಿಸಿದರೆ, ಶೇ 20ರಷ್ಟು ಗೋಧಿ ಉತ್ಪಾದನೆ ಕುಸಿದಿದೆ ಎಂದು ತಜ್ಞರು ಹೇಳಿದ್ದಾರೆ. ಮಧ್ಯಪ್ರದೇಶ, ಚಂಡೀಗಡ, ಉತ್ತರ ಪ್ರದೇಶದ ಕೆಲವು ಭಾಗಗಳಲ್ಲೂ ಗೋಧಿ ಉತ್ಪಾದನೆ ಮೇಲೆ ಬಿಸಿ ಗಾಳಿಯ ಪ್ರಭಾವವಿದೆ.

ಜಗತ್ತಿಗೆ ಅತಿಹೆಚ್ಚು ಗೋಧಿಯನ್ನು ಪೂರೈಸುವ ರಷ್ಯಾ–ಉಕ್ರೇನ್ ಯುದ್ಧದಲ್ಲಿ ತೊಡಗಿರುವುದು, ಜಾಗತಿಕ ಪೂರೈಕೆ ಮೇಲೆ ಪರಿಣಾಮ ಬೀರಿದೆ. ಇದನ್ನು ಸರಿದೂಗಿಸಲು ಭಾರತ ಬದ್ಧವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರ ಜೊತೆಗಿನ ಇತ್ತೀಚಿನ ಸಭೆಯಲ್ಲಿ ಹೇಳಿದ್ದರು. ಆದರೆ ಗೋಧಿ ಉತ್ಪಾದನೆ ಕುಂಠಿತಗೊಂಡಿದ್ದು, ಪೂರೈಕೆ ಕೊರತೆ ನೀಗಿಸಲು ಮುಂದಾಗಿದ್ದ ಭಾರತದ ಉದ್ದೇಶಕ್ಕೆ ಹೊಡೆತ ನೀಡಿದೆ.

ಯುದ್ಧದಿಂದ ಉಂಟಾಗಿರುವ ಗೋಧಿ ಪೂರೈಕೆ ಕೊರತೆಯನ್ನು ನೀಗಿಸಲು ಭಾರತ ನಿರ್ಧರಿಸಿದ್ದರೂ, ತಾಪಮಾನ ಹೆಚ್ಚಳದ ಕಾರಣಕ್ಕೆ, ತನ್ನ ದೇಶೀಯ ಬೇಡಿಕೆಯನ್ನು ಪೂರೈಸಿಕೊಳ್ಳಲೂ ಸರ್ಕಾರಕ್ಕೆ ಕಷ್ಟವಾಗಬಹುದು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. 2021–22ರ ಆರ್ಥಿಕ ವರ್ಷದಲ್ಲಿ 87 ಲಕ್ಷ ಟನ್ ಉತ್ಪಾದನೆ ಕುಸಿದಿದೆ ಎಂದು ದತ್ತಾಂಶಗಳು ಹೇಳುತ್ತವೆ.

ಆಧಾರ: ಹವಾಮಾನ ಇಲಾಖೆ, ಸ್ಕೈಮೆಟ್, ಬಿಬಿಸಿ, ವಿಶ್ವ ಆರೋಗ್ಯ ಸಂಸ್ಥೆ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 107



ಬ್ರಹ್ಮನಿಂದ ರುದ್ರನ ಜನನ

‘ಚತುರ್ವಿಂಶತಿ’ ಎಂಬ ಅಂಡ ಸೃಷ್ಟಿಸಿ, ಅದರೊಳಗೆ ವಿಷ್ಣು ಪ್ರವೇಶ ಮಾಡುವ ಮೂಲಕ ಸಚೇತನವಾದ ಬ್ರಹ್ಮಾಂಡವನ್ನ ನಿರ್ಮಿಸುತ್ತಾನೆ ಬ್ರಹ್ಮ. ಆದರೆ ಅವಿದ್ಯಾ, ಅಸ್ಮಿತ, ರಾಗ, ದ್ವೇಷ, ಮೋಹ ಮತ್ತಿತರ ಐದು ವಸ್ತುಗಳಿಂದ ದುಃಖಮಯವಾದ ಸೃಷ್ಟಿಯಾಗಿದ್ದರಿಂದ ಚಿಂತಿತನಾಗುತ್ತಾನೆ. ಆಗ ಬ್ರಹ್ಮ ಸತ್ವಗುಣ ಪ್ರಧಾನವಾದ ಸುಖಮಯವಾದುದನ್ನು ಸೃಷ್ಟಿಸಿದ. ಆ ಸೃಷ್ಟಿಯೇ ‘ದೇವಸರ್ಗ’. ಅದು ತುಂಬಾ ಸುಖಮಯವಾದುದು ಎಂದು ಬ್ರಹ್ಮ ತಿಳಿಸುತ್ತಾನೆ.

ದೇವಸರ್ಗ ಸಾಲದೆಂದು ಬ್ರಹ್ಮ ತನ್ನ ಪ್ರಭುವಾದ ಶಂಕರನನ್ನು ಪ್ರಾರ್ಥಿಸಿದಾಗ, ರಜೋಗುಣ ಪ್ರಧಾನವಾದ ಸೃಷ್ಟಿಯಾಯಿತು. ಇದೇ ‘ಮನುಷ್ಯಸರ್ಗ’. ಇದರ ಪ್ರವೃತ್ತಿ ಕೆಳಮುಖವಾಗಿರುವುದಾದರೂ, ಕರ್ಮಾನುಷ್ಠಾನ ಮತ್ತು ಜ್ಞಾನಾಭ್ಯಾಸಗಳಿಂದ ಮನುಷ್ಯರು ಶರೀರ ದಿಂದಲೇ ಸ್ವರ್ಗ ಮತ್ತು ಮುಕ್ತಿಗಳನ್ನು ಪಡೆಯಬಹುದು. ಆಮೇಲೆ ಮಹಾದೇವನ ಆಜ್ಞೆಯಂತೆ ತಾನು ಮಹಾಭೂತಗಳ ಸೃಷ್ಟಿ ಮಾಡಿದೆ. ಹೀಗೆ ತನ್ನಿಂದ ಐದು ವಿಧದ ಸೃಷ್ಟಿಗಳಾಯಿತು ಎಂದು ವಿವರಿಸುತ್ತಾನೆ.

ತನ್ನ ಪ್ರೇರಣೆಯಿಂದ ಪ್ರಕೃತಿಯಿಂದ ಮಹತ್‌ತತ್ವ, ಸೂಕ್ಷ್ಮಭೂತಗಳು ಮತ್ತು ವೈಕಾರಿಕ (ಸೂಕ್ಷ್ಮಭೂತಗಳಿಂದಾದ ಮಹಾಭೂತ ಸೃಷ್ಟಿ) ಎಂಬ ಮೂರು ಪ್ರಾಕೃತ ಸೃಷ್ಟಿಗಳಾದುವು. ಹೀಗೆ ಪ್ರಕೃತಿಸರ್ಗ, ವಿಕೃತಿಸರ್ಗಗಳು ಸೇರಿ ಎಂಟು ವಿಧವಾದ ಸೃಷ್ಟಿಗಳು ಆದವು. ಮುಂದೆ ಕೌಮಾರವೆಂಬ ಒಂಬತ್ತನೆಯ ಸರ್ಗವೂ ಆಯಿತು. ಅದು ಪ್ರಾಕೃತಸರ್ಗವೂ ವೈಕೃತಸರ್ಗವೂ ಆಗಿರುವುದು. ಈ ಒಂಬತ್ತು ಸರ್ಗಗಳಿಂದ ಭೇದ-ಪ್ರಭೇದಗಳನ್ನೊಳಗೊಂಡ ಅನೇಕ ವಿಧವಾದ ಸೃಷ್ಟಿಗಳಾದುವು. ಅವುಗಳನ್ನೆಲ್ಲವನ್ನೂ ಹೇಳಲು ಸಾಧ್ಯವಿಲ್ಲ. ಸುಜನರ ಸರ್ಗವು ಚಿಕ್ಕದಾದುರಿಂದ ಅದನ್ನು ಮಾತ್ರ ಹೇಳುವೆನು; ಅದೇ ಕೌಮಾರಸರ್ಗ. ಅದರಿಂದಲೇ ಮುಂದೆ ಸನತ್ಕುಮಾರ ಮುಂತಾದವರ ಸರ್ಗವಾಗಿ ವೃದ್ಧಿಗೊಂಡಿತು. ಸನತ್ಕುಮಾರ ಮೊದಲಾದ ಐವರು ಕುಮಾರರು ನನ್ನ ಮಾನಸಪುತ್ರರು. ನನ್ನಂತೆ ಪೂಜ್ಯರು, ಮಹಾವಿರಕ್ತರು, ಮಹಾತಪಸ್ವಿಗಳು. ನಾನು ಸೃಷ್ಟಿಯನ್ನು ಮಾಡಿರಿ ಎಂದು ಆಜ್ಞೆಮಾಡಿದರೂ, ಅವರು ಸಂಸಾರದಲ್ಲಿ ಆಸಕ್ತಿಯಿಲ್ಲದೆ ಶಿವಧ್ಯಾನತತ್ಪರರಾಗಿ ಸೃಷ್ಟಿಯನ್ನು ಮಾಡಲೇ ಇಲ್ಲ. ಆ ಕುಮಾರರು ಸೃಷ್ಟಿಯನ್ನು ಮಾಡುವುದಿಲ್ಲವೆಂದು ಪ್ರತ್ಯುತ್ತರವನ್ನೂ ಕೊಟ್ಟರು. ಅದನ್ನು ಕೇಳಿ ನಾನು ತುಂಬಾ ಕೋಪ ಬಂದಿತು. ಆಗ ನನ್ನ ಕಣ್ಣುಗಳಿಂದ ಬಿಸಿಯಾದ ಕಣ್ಣೀರು ಉದುರಿದುವು.

ಈ ಸಂಕಷ್ಟ ಸಮಯದಲ್ಲಿ ನಾನು ವಿಷ್ಣುವನ್ನು ಸ್ಮರಿಸಿದೆ. ನನ್ನ ಮಾನಸಪುತ್ರರ ವೈರಾಗ್ಯವನ್ನು ತಿಳಿಸಿದೆ. ಶಿವನನ್ನು ಕುರಿತು ತಪವನ್ನಾಚರಿ ಸುವಂತೆ ವಿಷ್ಣು ಉಪದೇಶ ಮಾಡಿದ. ನಾನು ಘೋರ ತಪಸ್ಸನ್ನಾಚರಿಸಿದೆ. ಆಗ ನನ್ನ ಅವಿಮುಕ್ತವೆಂಬ ಲಲಾಟದೇಶದಿಂದ ತ್ರಿಮೂರ್ತಿಗಳಲ್ಲಿ ಶ್ರೇಷ್ಠನೂ, ಪರಮೇಶ್ವರನ ಪೂರ್ಣಾಂಶನೂ, ಅರ್ಧನಾರೀಶ್ವರನೂ ಆದಂತಹ ರುದ್ರನು ಜನಿಸಿದ. ಸಾಕ್ಷಾತ್ ಪರ ಮೇಶ್ವರ ಸ್ವರೂಪನೂ ತೇಜಸ್ವಿಯೂ ಪಾರ್ವತೀಪತಿಯೂ ಸರ್ವಜ್ಞನೂ ಸರ್ವ ಕರ್ತೃವೂ ನೀಲಲೋಹಿತ ಎಂಬ ಹೆಸರುಳ್ಳವನೂ ಆದಂತಹ ಆ ರುದ್ರನನ್ನು ನೋಡಿ ಹರ್ಷಗೊಂಡೆ. ಅವನನ್ನು ಕುರಿತು ನೀನು ಅನೇಕ ಪ್ರಜೆಗಳನ್ನು ಸೃಷ್ಟಿಸು – ಎಂದು ಹೇಳಿದೆ. ನನ್ನ ಮಾತಿನಂತೆ ದೇವದೇವನಾದ ಆ ಮಹೇಶ್ವರನು ತನ್ನಂತೇ ಇರುವ ಅನೇಕ ರುದ್ರಗಣಗಳನ್ನು ಸೃಷ್ಟಿಸಿದ.

‘ಓ ದೇವ, ಜನ್ಮ–ಮರಣಗಳಿಂದ ಕೂಡಿರುವ ಪ್ರಜೆಗಳನ್ನು ಸೃಷ್ಟಿಸು’ ಎಂದು ಹೇಳಿದೆ. ಮಹಾದೇವ ನಕ್ಕು ಹೇಳಿದ, ‘ಎಲೈ ಬ್ರಹ್ಮನೇ, ನಾನು ಜನ್ಮ–ಮರಣಗಳುಳ್ಳವರೂ ಪ್ರಾರಬ್ಧಕರ್ಮಕ್ಕೆ ಒಳಪಟ್ಟವರೂ ದುಃಖಸಮುದ್ರದಲ್ಲಿ ಮುಳುಗಿರುವವರೂ ಆದಂತಹ ಪ್ರಜೆಗಳನ್ನು ಸೃಷ್ಟಿಸಲಾರೆ. ಅಷ್ಟೇ ಅಲ್ಲ, ನಾನು ಗುರುರೂಪವನ್ನು ಧರಿಸಿ ದುಃಖ ಸಮುದ್ರದಲ್ಲಿ ಮುಳುಗುತ್ತಲಿರುವ ಪ್ರಜೆಗಳಿಗೆ ಒಳ್ಳೆಯ ಜ್ಞಾನವನ್ನು ಉಪದೇಶಿಸಿ ಅವರನ್ನು ಉದ್ಧರಿಸುವೆ. ಆದುದರಿಂದ ನೀನೇ ದುಃಖಮಯರಾದ ಪ್ರಜೆಗಳನ್ನು ಸೃಷ್ಟಿಸು. ನನ್ನ ಅನುಗ್ರಹದಿಂದ ನಿನಗೆ ಮಾಯೆಯ ಬಂಧವಾಗುವುದಿಲ್ಲ’ ಎಂದ ಮಹಾದೇವ ತನ್ನ ಗಣಗಳೊಡನೆ ಅಂತರ್ಧಾನನಾದ ಎಂದು ಬ್ರಹ್ಮ ನಾರದನಿಗೆ ಹೇಳುತ್ತಾನೆ. ಇಲ್ಲಿಗೆ ಶ್ರೀಶಿವಮಹಾಪುರಾಣದ ಏಳು ಸಂಹಿತೆಗಳಲ್ಲಿ ಎರಡನೆಯಾದ ರುದ್ರಸಂಹಿತೆಯ ಮೊದಲನೆಯ ಖಂಡವಾದ ಸೃಷ್ಟಿ ಉಪಾಖ್ಯಾನದಲ್ಲಿ ರುದ್ರಾವತಾರವರ್ಣನ ಎಂಬ ಹದಿನೈದನೆಯ ಅಧ್ಯಾಯ ಮುಗಿಯುತ್ತದೆ.


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘ದೆಹಲಿಯ ಜಹಾಂಗೀರ್‌ಪುರಿಯಲ್ಲಿ ಮಸೀದಿಯ ಕಾಂಪೌಂಡ್ ಅನ್ನು ಬುಲ್ಡೋಜರ್‌ನಿಂದ ಕೆಡವಿದ್ದಕ್ಕೆ, ರಾಜಸ್ಥಾನದಲ್ಲಿ ಕಾಂಗ್ರೆಸ್ ಸೇಡು ತೀರಿಸಿಕೊಂಡಿದೆ. ಮಸೀದಿ ಗೋಡೆ ಕೆಡವಿದ್ದಕ್ಕೆ ಪ್ರತಿಯಾಗಿ ಅಲ್ವರ್‌ನಲ್ಲಿ ಕಾಂಗ್ರೆಸ್ ಸರ್ಕಾರವು, 300 ವರ್ಷದ ಹಳೆಯ ಶಿವ ದೇವಾಲಯವನ್ನು ಕೆಡವಿದೆ’ ಎಂಬ ವಿವರ ಇರುವ ಸುದ್ದಿ ಹಲವು ಮಾಧ್ಯಮಗಳಲ್ಲಿ ಪ್ರಸಾರವಾಗಿದೆ. ಬಿಜೆಪಿ ಮುಖಂಡರಾದ ಸಂಬಿತ್ ಪಾತ್ರಾ ಮತ್ತು ಗೌರವ್ ಭಾಟಿಯಾ ಅವರು ಸುದ್ದಿವಾಹಿನಿಗಳ ಚರ್ಚಾ ಕಾರ್ಯಕ್ರಮಗಳಲ್ಲಿ ಇದೇ ಅಭಿಪ್ರಾಯ ಹಂಚಿಕೊಂಡಿದ್ದಾರೆ. ಆಜ್‌ತಕ್, ರಿಪಬ್ಲಿಕ್ ಟಿವಿ ಮತ್ತು ನ್ಯೂಸ್‌18 ಇಂತಹ ಕಾರ್ಯಕ್ರಮಗಳನ್ನು ಪ್ರಸಾರ ಮಾಡಿದ್ದು, ಅವುಗಳ ವಿಡಿಯೊವನ್ನು ಟ್ವೀಟ್ ಮಾಡಿವೆ.

ಆದರೆ, ಇದು ಸುಳ್ಳು ಸುದ್ದಿ ಎಂದು ಆಲ್ಟ್ ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ‘ಅಲ್ವರ್‌ನಲ್ಲಿ ಒತ್ತುವರಿ ತೆರವು ಕಾರ್ಯಾಚರಣೆ ಅಂಗವಾಗಿ ಏಪ್ರಿಲ್ 17 ಮತ್ತು 18ರಂದು ನಡೆಸಿದ ಕಾರ್ಯಾಚರಣೆಯಲ್ಲಿ ಶಿವ ದೇವಾಲಯವೂ ಸೇರಿ, ಹಲವು ಕಟ್ಟಡಗಳನ್ನು ಕೆಡವಲಾಗಿದೆ. ಆದರೆ ಜಹಾಂಗೀರ್‌ಪುರಿಯಲ್ಲಿ ತೆರವು ಕಾರ್ಯಾಚರಣೆ ನಡೆದದ್ದು ಏಪ್ರಿಲ್ 20ರಂದು. ಅಲ್ವರ್ ಜಿಲ್ಲಾಡಳಿತವು ಈ ಕಾರ್ಯಾಚರಣೆಗೆ ಸಂಬಂಧಿಸಿದ ಮಾಧ್ಯಮ ಹೇಳಿಕೆಯನ್ನು ಏಪ್ರಿಲ್ 18ರಂದು ಟ್ವೀಟ್ ಮಾಡಿತ್ತು. ಜಹಾಂಗೀರ್‌ಪುರಿ ಕಾರ್ಯಾಚರಣೆ ನಡೆಯುವುದಕ್ಕೂ ಮುನ್ನ ಅಲ್ವರ್ ಕಾರ್ಯಾಚರಣೆ ನಡೆದಿದೆ. ಹಾಗಾಗಿ ಅದು ಸೇಡಿನ ಕ್ರಮ ಎಂಬುದು ಸುಳ್ಳು. ಜತೆಗೆ ಅಲ್ವರ್ ನಗರಸಭೆಯಲ್ಲಿ ಬಿಜೆಪಿ ಆಡಳಿತವಿದೆ ಎಂದು ಕಾಂಗ್ರೆಸ್ ಮಾಹಿತಿ ನೀಡಿದೆ. ಸುಳ್ಳು ಸುದ್ದಿ ಪ್ರಸಾರ ಮಾಡಿದ ಆರೋಪದಲ್ಲಿ ನ್ಯೂಸ್‌18 ನಿರೂಪಕ ಅಮನ್ ಛೋಪ್ರಾ ವಿರುದ್ಧ ರಾಜಸ್ಥಾನ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ’ ಎಂದು ಆಲ್ಟ್ ನ್ಯೂಸ್ ವಿವರಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಧ್ವನಿಗೆ ಪ್ರತಿಧ್ವನಿ

ಧ್ವನಿತ ಪ್ರತಿಧ್ವನಿತ ಮನುಜ ಜೀವಿತವೆಲ್ಲ |
ಕುಣಿವುದವನೆದೆ ಜಗತ್ಪ್ರಕೃತಿ ಪಾಡುವವೊಲ್ ||
ಇನಿದಕೊಲವಳಲಿಗನುತಾಪ; ಸೆಣಸಿಗೆ ಬೀರ |
ಘನಗರ್ಜಿತಕೆ ದೈನ್ಯ – ಮಂಕುತಿಮ್ಮ || 617 ||

ಪದ-ಅರ್ಥ: ಕುಣಿವುದವನೆದೆ = ಕುಣಿವುದು+ಅವನ+ಎದೆ, ಜಗತ್ಪ್ರಕೃತಿ = ಜಗತ್+ಪ್ರಕೃತಿ, ಪಾಡುವವೊಲ್ = ಹಾಡಿದಂತೆ, ಇನಿದಕೊಲವಳಲಿಗನುತಾಪ = ಇನಿದಕೆ(ಪ್ರೀತಿಗೆ) + ಒಲವು + ಅಳಲಿಗೆ(ದು:ಖಕ್ಕೆ) + ಅನುತಾಪ (ಅನುಕಂಪ, ಕರುಣೆ), ಸೆಣಸಿಗೆ = ಹೋರಾಟಕ್ಕೆ, ಬೀರ = ವೀರ, ಘನಗರ್ಜಿತಕೆ = ಘನ + ಗರ್ಜಿತಕೆ- (ಗರ್ಜನೆಗೆ)

ವಾಚ್ಯಾರ್ಥ: ಮನುಷ್ಯನ ಬದುಕೆಲ್ಲ ಪ್ರಕೃತಿಯ ಧ್ವನಿಗೆ ಪ್ರತಿಧ್ವನಿ ನೀಡುವುದು. ಪ್ರಕೃತಿ ಹಾಡಿದಂತೆ ಅವನ ಎದೆ ಕುಣಿಯುತ್ತದೆ. ಪ್ರೀತಿಗೆ ಒಲವು, ನೋವಿಗೆ ಅನುಕಂಪ, ಹೋರಾಟಕ್ಕೆ ಶೌರ್ಯ, ಅಬ್ಬರದ ಗರ್ಜನೆಗೆ ದೈನ್ಯ ಹೀಗೆ ಅವನ ಪ್ರತಿಕ್ರಿಯೆಗಳು ನಡೆಯುತ್ತವೆ.

ವಿವರಣೆ: ಮನುಷ್ಯ ಮತ್ತು ಪ್ರಕೃತಿ ಪರಸ್ಪರ ಕನ್ನಡಿ ಇದ್ದಂತೆ. ಪ್ರಕೃತಿಯಂತೆಯೇ ಮನುಷ್ಯ ವ್ಯವಹರಿಸುತ್ತಾನೆ. ಅತ್ಯಂತ ಸುಂದರವಾದ ಪ್ರಕೃತಿ ದೃಶ್ಯವನ್ನು ಕಂಡಾಗ ನಮಗರಿವಿಲ್ಲದಂತೆಯೇ, ಓಹ್, ಆಹಾ, ಎಂಬ ಉದ್ಗಾರಗಳು ಹೊರಡುತ್ತವೆ. ಮನಸ್ಸು ಉಲ್ಲಾಸಭರಿತವಾಗುತ್ತದೆ. ನಿಸರ್ಗದ ಸೌಂದರ್ಯ ಮನತುಂಬುತ್ತದೆ, ಪ್ರಕೃತಿಯೆಂದರೆ ನಿಸರ್ಗಮಾತ್ರವಲ್ಲ, ನಮ್ಮ ಕಣ್ಣಿಗೆ ಕಾಣುವ ಎಲ್ಲ ಭೌತಿಕ ಪ್ರಪಂಚವೂ ಪ್ರಕೃತಿಯೇ. ಅಂತೆಯೇ ಸಂತೋಷದ ಸಂದರ್ಭಗಳಲ್ಲಿ, ಸುಂದರ ವ್ಯಕ್ತಿಗಳನ್ನು ಕಂಡಾಗ, ಸುಂದರ ಘಟನೆಗಳಿಗೆ ಸಾಕ್ಷಿಯಾದಾಗ ಮನಸ್ಸು ಅರಳುತ್ತದೆ. ಹಿಂದೆ ಮಡಿಕೇರಿಯಲ್ಲಿ ಭೂಕುಸಿತವಾಗಿ ಹಳ್ಳಿಗೆ ಹಳ್ಳಿಯೇ ಸರಿದು ಹೋಗಿ ಅನಾಹುತವಾಯಿತು, ಪ್ರಾಣ ಹಾನಿಯಾಯಿತು. ಅದನ್ನು ಕಂಡ, ಕೇಳಿದ ಎಲ್ಲರ ಮನಸ್ಸಿಗೆ ತಳವಳವಾಯಿತು, ದು:ಖವಾಯಿತು. ಸಾವಾದ ಮನೆಗೆ ಹೋದವರ ಕಣ್ಣುಗಳೆಲ್ಲ ಹನಿಗಟ್ಟುತ್ತವೆ. ಹಿಮವತ್ ಪರ್ವತಗಳನ್ನು ಕಂಡಾಗ, ಸಮುದ್ರದ ಆಳವನ್ನು ಗ್ರಹಿಸಿದಾಗ ನಮಗೆ ತಿಳಿಯದಂತೆ ಮನಸ್ಸು ಗೌರವದಿಂದ ಭಯದಿಂದ ಬಾಗುತ್ತದೆ.

ಅದಕ್ಕೇ ಕಗ್ಗ, ಪ್ರಕೃತಿ ಹಾಡಿದಂತೆ ಮನುಷ್ಯನ ಮನಸ್ಸು ಕುಣಿಯುತ್ತದೆ ಎನ್ನುತ್ತದೆ. ಪ್ರಕೃತಿಯ ಧ್ವನಿಗೆ ಮನುಷ್ಯನ ಭಾವನೆಗಳು ಪ್ರತಿಧ್ವನಿಯಾಗುತ್ತವೆ. ಹಿಂದೆ ಋಷಿಗಳು ತಪಸ್ಸಿಗಾಗಿ ಹಿಮಾಲಯಕ್ಕೆ ಹೋಗುತ್ತಿದ್ದರು. ಹಿಮಾಲಯದ ಶಾಂತಿ ಅವರ ಮನಸ್ಸಿನಲ್ಲಿ ಪ್ರತಿಧ್ವನಿಸುತ್ತಿತ್ತು. ಕುರುಕ್ಷೇತ್ರದ ಯುದ್ಧಕ್ಷೇತ್ರದಲ್ಲಿ ನಿಂತವರಿಗೆ ಕ್ರೌರ್ಯ ಮಾತ್ರ ದೊರೆತೀತು. ಕಗ್ಗ ಮನಸ್ಸು ಪ್ರಕೃತಿಗೆ ಪ್ರತಿಧ್ವನಿಸುವುದನ್ನು ಹೇಳುವ ರೀತಿ ಚೆನ್ನ. ಇನಿದಾದಕ್ಕೆ ಒಲವು, ದು:ಖಕ್ಕೆ ಅನುಕಂಪೆ, ಹೋರಾಟಕ್ಕೆ ವೀರ, ಘನವಾದ ಗರ್ಜನೆಗೆ ದೈನ್ಯ ಹೀಗೆ ಧ್ವನಿತಕ್ಕೆ ಪ್ರತಿಧ್ವನಿತವಾಗಿರುವುದು ಮನುಷ್ಯ ಜೀವನ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಏಪ್ರಿಲ್ 29, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ಚೈತ್ರ ಕೃಷ್ಣ ಚತುರ್ದಶಿ ಗಂ. 24-58 ನಕ್ಷತ್ರ: ರೇವತಿ ಗಂ. 18-43 ಯೋಗ: ವಿಷ್ಕಂಭ ಗಂ. 15-42, **ಕರಣ:** ವಿಷ್ಟಿ ಗಂ. 12-39, ಮೇಷ ಮಾಸದ 15 ನೇ ದಿನ.
ರಾಹುಕಾಲ: ಬೆಳಿಗ್ಗೆ 10:30–12:00
ಸೂರ್ಯೋದಯ: 06-14 ಸೂರ್ಯಾಸ್ತ: 06-42, ಮುಸ್ಲಿಂ ದಿನಾಂಕ: 27
ರಂಜಾನ್ ದಿನ ವಿಶೇಷ: ಜಮತ್-ಉಲ್-ವಿದಾ (ಮುಸ್ಲಿಂ) ಸಬ್-ಎ-ಖಾದರ್ (ಹಿಂದಿನ ದಿನ-ಮುಸ್ಲಿಂ), ಅದೃಷ್ಟ ಸಂಖ್ಯೆ: 2, 4

ಮೇಷ: ಪೊಲೀಸ್ ವೃತ್ತಿಯಲ್ಲಿರುವವರಿಗೆ ಮಹತ್ವದ ಕಾರ್ಯಾಚರಣೆಗಾಗಿ ದೂರ ಸಂಚಾರ ಕಂಡುಬರಲಿದೆ. ಧೈರ್ಯದಿಂದ ಮತ್ತು ಅಧಿಕ ಪ್ರಯತ್ನ ಬಲದಿಂದ ಕಾರ್ಯದಲ್ಲಿ ಮುನ್ನುಗಿ.

ವೃಷಭ: ನೀವು ನಿಮ್ಮ ವೈಯಕ್ತಿಕ ಮನೋಭಾವವನ್ನು ಬದಲಿಸಿಕೊಳ್ಳುವಂತೆ ಆಗಲಿದೆ. ಹಣಕಾಸಿನ ವಿಚಾರದಲ್ಲಿ ಭವಿಷ್ಯದ ಕುರಿತು ಯೋಚಿಸಿ ನಿರ್ಧಾರ ಕೈಗೊಳ್ಳುವುದರಿಂದ ಮುಂದಿನ ದಿನಗಳು ನೆಮ್ಮದಿದಾಯಕವಾಗಿ ಇರುವುದು.

ಮಿಥುನ: ಈ ದಿನ ನೀವು ಯಾವ ಕೆಲಸಕ್ಕೆ ಪ್ರಾಮುಖ್ಯತೆ ಕೊಡಬೇಕೆಂದು ಯೋಚಿಸಿ ನಂತರದಲ್ಲಿ ಕಾರ್ಯಶೀಲರಾಗುವುದು ಉತ್ತಮ. ನಿಮ್ಮ ಕೆಲಸಗಳ ಬಗ್ಗೆ ಪುನಃಪುನಃ ಅವಲೋಕನೆ ಮಾಡುವಂತಹ ಪದ್ಧತಿ ರೂಢಿಸಿಕೊಳ್ಳಿರಿ.

ಕರ್ಕಾಟಕ: ಸಂಸಾರ ನಿರ್ವಹಣೆ ಮಾಡುವುದು ಸುಲಭವಲ್ಲ ಎಂದು ಅನಿಸಲಿದೆ. ನಿಮ್ಮ ಕೆಲಸಗಳನ್ನು ಸಾಧಿಸಿಕೊಳ್ಳಲೇ ಬೇಕಿದ್ದರೆ ಅವಿರತ ಶ್ರಮ ಮತ್ತು ಆರ್ಥಿಕ ಬಲ ಅಗತ್ಯ ಮತ್ತು ಅನಿವಾರ್ಯವಾಗುವುದು.

ಸಿಂಹ: ನಿಮ್ಮ ಹಿತಾಸಕ್ತಿಗಳಿಗೆ ಹೆಚ್ಚು ಗಮನ ಕೊಡಿ. ಮಕ್ಕಳ ಅಗತ್ಯಗಳನ್ನು ಪೂರೈಸಿ. ಮನೆಗಾಗಿ ವಿಲಾಸೀ ಸಾಮಗ್ರಿಗಳನ್ನು ಖರೀದಿಸುವುದು ಖರ್ಚಿಗೆ ದಾರಿಯಾಗಲಿದೆ.

ಕನ್ಯಾ: ಭೂಸಂಬಂಧಿ ಅದರಲ್ಲೂ ಕೃಷಿ ಭೂಮಿ ವ್ಯವಹಾರದಲ್ಲಿರುವವರಿಗೆ ಧನಲಾಭವಾಗುವುದು. ಪ್ರಥಮ ದರ್ಜೆಯ ಸರ್ಕಾರಿ ಅಧಿಕಾರಿಗಳಿಗೆ ವರ್ಗಾವಣೆ ಸಂಭವವಿದೆ.

ತುಲಾ: ಹೊಸ ಕೆಲಸವನ್ನು ಆರಂಭ ಮಾಡುವುದು ಈ ದಿನ ಸರಿಯಲ್ಲ. ವ್ಯವಹಾರದಲ್ಲಿ ಸಂಭವಿಸುವ ಲಾಭನಷ್ಟಗಳನ್ನು ಸುಧಾರಿಸಿಕೊಂಡು ಹೋಗುವ ಮನಸ್ಸು ಬರಲಿದೆ.

ವೃಶ್ಚಿಕ: ಧಾರ್ಮಿಕ ಕಾರ್ಯದಲ್ಲಿ ಭಾಗವಹಿಸುವಿಕೆಯಿಂದ ಮಾನಸಿಕ ಶಾಂತಿ, ಜೀವನೋಲ್ಲಾಸ ಹೆಚ್ಚಾಗಲಿದೆ. ವಿದ್ಯಾರ್ಥಿ ಸಮೂಹಕ್ಕೆ ಉತ್ತಮ ಅವಕಾಶಗಳು ಲಭಿಸಲಿವೆ.

ಧನು: ಬಹಳ ದಿನಗಳ ನಂತರದ ಸಹೋದರಿಯ ಗೃಹಾಗಮನ ತಂದೆ-ತಾಯಿಯ ಸಂತೋಷಕ್ಕೆ ಕಾರಣವಾಗುತ್ತದೆ. ವಾಯು ಪ್ರಕೋಪದಿಂದ ದೈಹಿಕವಾಗಿ ಹಲವು ಸಮಸ್ಯೆಗಳು ಕಾಡಬಹುದು.

ಮಕರ: ನಿರುದ್ಯೋಗಿಗಳಿಗೆ ಸಾದಾರಣವಾದ ಉದ್ಯೋಗ ದೊರಕಿದರೂ ಯಾವುದೇ ಕಾರಣಕ್ಕೂ ತಿರಸ್ಕರಿಸಬೇಡಿ. ಬಹುಜನರಲ್ಲಿ ಮಾಡಿದ ಸಾಲಗಳು ತೀರಿದ್ದರಿಂದ ಮನೆಯಲ್ಲಿ ನೆಮ್ಮದಿಯ ವಾತಾವರಣ ಸೃಷ್ಟಿಯಾಗಲಿದೆ.


ಕುಂಭ: ಬದುಕಿನಲ್ಲಿ ಸಕಾರಾತ್ಮಕವಾಗಿ ಯೋಚಿಸುವುದನ್ನು ಅಭ್ಯಾಸ ಮಾಡಿ. ಇಂದಿನ ದಿನದ ಕೆಲಸ, ಇಂದಿನ ದಿನವೇ ಮುಗಿಸುವುದನ್ನು ಕಾರ್ಯರೂಪಕ್ಕೆ ತಂದುಕೊಳ್ಳಿರಿ. ಪ್ರೇಮಿಗಳ ಪಾಲಿಗೆ ಮಹತ್ತರ ಬೆಳವಣಿಗೆ ಕಂಡುಬರಲಿದೆ.

ಮೀನ: ತೆಂಗಿನಕಾಯಿ ವ್ಯಾಪಾರಿಗಳಿಗೆ ಹೆಚ್ಚು ಲಾಭ ಸಿಗಲಿದೆ. ಧಾರ್ಮಿಕ ಗ್ರಂಥಗಳ, ಪುರಾಣಗಳ ಅಧ್ಯಯನ ಮಾಡುವ ಮನಸ್ಸಾಗುವುದು. ಶೀತ ಬಾಧೆಯನ್ನು ಹೋಗಲಾಡಿಸಿಲು ಆಯುರ್ವೇದದ ಮೊರೆಯೋಗಿ.

ಪದಬಂಧ 4942 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನಂಬಿಕೆಯಿಲ್ಲದಿರುವುದು (4)
3.ಶ್ರೇಷ್ಠವಾದ ಕಾವ್ಯ (4)
5.ಅರಸನ ನಾಲಿಗೆ! (3)
6.ಹಾರ ಧರಿಸಿ ಮಾಡಿದ ವ್ಯಾಪಾರ (4)
7.ಮಾಡಿದ ತಪ್ಪು ಕೆಲಸಕ್ಕಾಗಿ ಮರುಗುವಿಕೆ (4)
9.ಗಂಡೂ ಅಲ್ಲ, ಹೆಣ್ಣೂ ಅಲ್ಲದ ವ್ಯಕ್ತಿ (4)
11.ಕನ್ನಡಿಗನಿಗೆ ಸಿಕ್ಕಿರುವ ಟ್ರೈನಿಂಗ್! (4)
13.ಪಿತನ ಹತ್ತಿರ ಕ್ಷೌರಿಕನಿದ್ದಾನೆ (3)
15.ಸುಡು ಬಿಸಿಲಿನಲ್ಲಿ ಕಾಣಿಸಿದ ಸ್ಮಶಾನ (4)
16.ನೂತನ ದಂಪತಿಗಳು ಕೈಗೊಳ್ಳುವ ವಿಹಾರ ಯಾತ್ರೆ (4)

ಮೇಲಿಂದ ಕೆಳಕ್ಕೆ
1.ನಾನು ಎಂಬ ಭಾವ (2)
2.ದಾರ ಹಿಡಿದಿರುವ ಮುಖಂಡ (4)
3.ಮನದಿಂದ ಮೂಡಿದ ದ್ವೇಷ (4)
4.ಮನುಷ್ಯ ಅಥವಾ ಅಸಾಮಿ (2)
6.ವ್ಯವಸಾಯಗಾರನ ದುಃಖ (3)
8.ಪತಿಯ ಬಳಿಯಿರುವ ಕಾಲಾಳು (3)
10.ಕನ್ನಡನಾಡನ್ನು ಹೀಗೂ ಕರೆವರು (4)
11.ತಮ್ಮತೋರಿದ ಭೇದ ಭಾವ (4)
12.ಹೆರಿಗೆಯ ಸತ್ತೆ (2)
14.ಸ್ವರ್ಗಾಧಿಪತಿ ಇಲ್ಲಿದ್ದಾನೆ (2)



4941ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಸ್ಥಾನಪಲ್ಲಟ 4.ಪ್ರತಾಪ 5.ಪಾಯಸ 7.3ದಿ 8.ಛಿದ್ರ 11.ಮಿಥುನ 13.ನವೀನ 14.ವಿವೇಕಶೂನ್ಯ

ಮೇಲಿಂದ ಕೆಳಕ್ಕೆ: 1.ಉಪಮೆ 2.ಸ್ಥಾಪಕ 3.ಟಪಾಲು 4.ಪ್ರಗತಿಗಾಮಿ 6.ಸಮುದ್ರಯಾನ 9.ಮನವಿ 10.ಅನನ್ಯ 12.ಕೈಕರ್ಯ

ಸುಡೊಕು 5328

					7		8	3
8			1					7
		3		8	4		5	
3		6						
	8			1				5
1		4	3		8		6	
	7			6				
2		8	4		3			1
				2		8	9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.


5327 ಸುಡೊಕು

3	6	7	8	2	9	5	4	1
5	9	4	1	6	7	8	2	3
1	2	8	5	4	3	6	9	7
8	4	1	6	3	2	7	5	9
6	3	5	9	7	8	2	1	4
9	7	2	4	5	1	3	8	6
7	5	3	2	9	4	1	6	8
4	8	6	7	1	5	9	3	2
2	1	9	3	8	6	4	7	5

ಚಿನ್ನ ₹ 442, ಬೆಳ್ಳಿ ₹ 950ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನದ ದರ 10 ಗ್ರಾಂಗೆ ₹ 442ರಷ್ಟು ಇಳಿಕೆ ಕಂಡು 51,010ಕ್ಕೆ ತಲುಪಿತು. ಬೆಳ್ಳಿ ಧಾರಣೆ ಕೆ.ಜಿಗೆ ₹ 950ರಷ್ಟು ಇಳಿಕೆ ಆಗಿ ₹ 64,167ರಂತೆ ಮಾರಾಟ ಆಯಿತು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,038
ಇಂದಿನ ಅಂತ್ಯ	17,245
▲	207
ದಿನದ ಗರಿಷ್ಠ	17,322

ವಿನಿಮಯ ದರ

$ ಡಾಲರ್	76.61
£ ಪೌಂಡ್	95.73
€ ಯುರೊ	80.49
¥ ಯೆನ್ (100ಕ್ಕೆ)	59

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹390
12 ಮೊಟ್ಟೆಗೆ	₹55
ಮೈಸೂರು	
100 ಮೊಟ್ಟೆಗೆ	₹394

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1665 (1665)
ಸೋಯಾ (ರಿಫೈನ್ಡ್)	₹1610 (1600)
ಸೂರ್ಯಕಾಂತಿ (ರಿಫೈನ್ಡ್)	₹1920 (1930)
ಪಾಮೋಲಿನ್	₹1577 (1557)

2022ರ ಜನವರಿ–ಮಾರ್ಚ್ ಅವಧಿ: ಜಾಗತಿಕ ಅಸ್ಥಿರತೆಯ ಕಾರಣ


ಚಿನ್ನದ ಮೇಲಿನ ಹೂಡಿಕೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದಲ್ಲಿ 2021ರ ಜನವರಿ–ಮಾರ್ಚ್ ಅವಧಿಗೆ ಹೋಲಿಸಿದರೆ 2022ರ ಜನವರಿ–ಮಾರ್ಚ್ ಅವಧಿಯಲ್ಲಿ ಚಿನ್ನಾಭರಣ ಬೇಡಿಕೆಯು ಶೇಕಡ 26ರಷ್ಟು ಕಡಿಮೆ ಆಗಿದೆ. ಇದೇ ಅವಧಿಯಲ್ಲಿ, ಚಿನ್ನದ ಮೇಲಿನ ಹೂಡಿಕೆಯು ಶೇ 5ರಷ್ಟು ಹೆಚ್ಚಾಗಿದೆ ಎಂದು ವಿಶ್ವ ಚಿನ್ನ ಸಮಿತಿ (ಡಬ್ಲ್ಯುಜಿಸಿ) ಹೇಳಿದೆ.

ಚಿನ್ನದ ಬೆಲೆ ಏರಿಕೆಯಿಂದಾಗಿ ಜನರು ಚಿನ್ನಾಭರಣ ಖರೀದಿಯಿಂದ ಹಿಂದೆ ಸರಿದಿದ್ದಾರೆ. ಆದರೆ, ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಅನಿಶ್ಚಿತ ಸ್ಥಿತಿಯ ಕಾರಣದಿಂದಾಗಿ ಚಿನ್ನದ ಮೇಲಿನ ಹೂಡಿಕೆ ಹೆಚ್ಚಾಗಿದೆ ಎಂದು ಡಬ್ಲ್ಯುಜಿಸಿ ಭಾರತದ ಪ್ರಾದೇಶಿಕ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಸೋಮಸುಂದರಂ ಪಿ.ಆರ್. ಅವರು ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ದೇಶದಲ್ಲಿ ಮದುವೆ ಸಮಾರಂಭಗಳ ಸಂಖ್ಯೆ ಕಡಿಮೆ ಆಗಿರುವುದು ಹಾಗೂ ಚಿನ್ನಾಭರಣ ಖರೀದಿಸುವ ಶುಭ ಸಂದರ್ಭಗಳು ಇಲ್ಲದಿದ್ದ ಕಾರಣದಿಂದಾಗಿ ಮೊದಲ ತ್ರೈಮಾಸಿಕದಲ್ಲಿ ಚಿನ್ನದ ರಿಟೇಲ್ ಬೇಡಿಕೆಯು ಕಡಿಮೆ ಆಗಿದೆ. ಚಿನ್ನದ ಬೆಲೆ ಇಳಿಕೆ ಆಗಬಹುದು ಎನ್ನುವ ನಿರೀಕ್ಷೆಯಲ್ಲಿ ಜನ ಖರೀದಿಯನ್ನು ಮುಂದೂಡುತ್ತಿದ್ದಾರೆ ಎಂದು ಅವರು ಹೇಳಿದರು.



ಚಿನ್ನದ ಬೆಲೆ ಏರಿಕೆ ಮತ್ತು ಈಕ್ವಿಟಿ ಮಾರುಕಟ್ಟೆಯಲ್ಲಿನ ಅನಿಶ್ಚಿತ ಸ್ಥಿತಿಯಿಂದಾಗಿ ಚಿನ್ನದ ಗಟ್ಟಿ ಮತ್ತು ನಾಣ್ಯಗಳ ಮೇಲೆ ಹೂಡಿಕೆ ಹೆಚ್ಚಾಗುತ್ತಿದೆ ಎಂದು ಡಬ್ಲ್ಯುಜಿಸಿ ವರದಿ ತಿಳಿಸಿದೆ.

ಜನವರಿಯಿಂದ ಚಿನ್ನದ ಬೆಲೆ ಹೆಚ್ಚಾಗಲು ಆರಂಭವಾಯಿತು. ಜಾಗತಿಕ ಬಿಕ್ಕಟ್ಟಿನಿಂದಾಗಿ ಈ ವರ್ಷದ ಮೊದಲ ತ್ರೈಮಾಸಿಕದಲ್ಲಿ 10 ಗ್ರಾಂ ಚಿನ್ನದ ದರವು ಶೇ 8ರಷ್ಟು ಹೆಚ್ಚಾಗಿ ₹ 45,434ಕ್ಕೆ (ತೆರಿಗೆ ಹೊರತುಪಡಿಸಿ) ಏರಿಕೆ ಆಯಿತು ಎಂದು ಸೋಮಸುಂದರಂ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಬಂದರಿನಲ್ಲೇ ಉಳಿದ 2.90 ಲಕ್ಷ ಟನ್ ತಾಳೆ ಎಣ್ಣೆ

ಮುಂಬೈ (ರಾಯಿಟರ್ಸ್): ಇಂಡೊನೇಷ್ಯಾ ದೇಶವು ತಾಳೆ ಎಣ್ಣೆ ರಫ್ತನ್ನು ನಿಷೇಧಿಸಿರುವ ಕಾರಣದಿಂದಾಗಿ, ಭಾರತಕ್ಕೆ ಬರಬೇಕಿರುವ 2.90 ಲಕ್ಷ ಟನ್ ತಾಳೆ ಎಣ್ಣೆಯು ಬಂದರುಗಳಲ್ಲಿಯೇ ಉಳಿಯುವಂತಾಗಿದೆ ಎಂದು ಉದ್ಯಮದ ಅಧಿಕಾರಿಗಳು ಹೇಳಿದ್ದಾರೆ.

16 ಸಾವಿರ ಟನ್‌ನಷ್ಟು ತಾಳೆ ಎಣ್ಣೆ ಇರುವ ಹಡಗು ಇಂಡೊನೇಷ್ಯಾದ ಕುಮಾಯ್ ಬಂದರಿನಲ್ಲಿ ಸಿಕ್ಕಿಕೊಂಡಿದೆ ಎಂದು ಜೆಮಿನಿ ಎಡಿಬಲ್ಸ್ ಆ್ಯಂಡ್ ಫ್ಯಾಟ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಪ್ರದೀಪ್ ಚೌಧರಿ ತಿಳಿಸಿದ್ದಾರೆ. ಕಂಪನಿಯು ಪ್ರತಿ ತಿಂಗಳು ಇಂಡೊನೇಷ್ಯಾದಿಂದ 30 ಸಾವಿರ ಟನ್ ತಾಳೆ ಎಣ್ಣೆ ಖರೀದಿಸುತ್ತಿದೆ.

ಕಂಪನಿಗಳು ಮಲೇಷ್ಯಾದ ತಾಳೆ ಎಣ್ಣೆ ಖರೀದಿಗೆ ಮುಗಿಬೀಳುತ್ತಿದ್ದಾರೆ. ಆದರೆ ಬೇಡಿಕೆ ಪೂರೈಸಲು ಆ ದೇಶಕ್ಕೆ ಸಾಧ್ಯವಾಗುತ್ತಿಲ್ಲ ಎಂದು ಸನ್‌ವಿನ್ ಸಮೂಹದ ಮುಖ್ಯ ಕಾರ್ಯನಿರ್ವಾಹಕ ಸಂದೀಪ್ ಬಜೋರಿಯಾ ಹೇಳಿದ್ದಾರೆ.

ಜಾಗತಿಕ ಬಿಕ್ಕಟ್ಟು: ಷೇರು ಮಾರಾಟ ಪ್ರಮಾಣ ಇಳಿಕೆ

ಎಲ್‌ಐಸಿ ಐಪಿಒ ವಿಚಾರವಾಗಿ ರಾಹುಲ್ ಜೈನ್ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಷೇರುಗಳ ಮಾರಾಟ ಪ್ರಮಾಣವನ್ನು ತಗ್ಗಿಸಿರುವುದಕ್ಕೆ ಒಂದು ಕಾರಣ ಜಾಗತಿಕ ಮಟ್ಟದಲ್ಲಿ ಸೃಷ್ಟಿಯಾಗಿರುವ ಬಿಕ್ಕಟ್ಟು ಎಂದು ಕೇಂದ್ರ ಸರ್ಕಾರದ ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆಯ ನಿರ್ದೇಶಕ ರಾಹುಲ್ ಜೈನ್ ಹೇಳಿದರು.

ಎಲ್‌ಐಸಿಯ ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಕುರಿತು ಮಾಹಿತಿ ನೀಡಲು ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಎಲ್‌ಐಸಿಯಲ್ಲಿನ ಶೇಕಡ 5ರಷ್ಟು ಷೇರುಗಳನ್ನು ಐಪಿಒ ಮೂಲಕ ಮಾರಾಟ ಮಾಡುವ ಆಲೋಚನೆಯನ್ನು ಕೇಂದ್ರವು ಈ ಮೊದಲು ಹೊಂದಿತ್ತು. ಆದರೆ, ಈಗ ಅದು ಶೇ 3.5ರಷ್ಟು ಷೇರುಗಳನ್ನು ಮಾತ್ರ ಮಾರಾಟ ಮಾಡುತ್ತಿದೆ.

ಎಲ್‌ಐಸಿ ಪ್ರತಿ ಷೇರಿಗೆ ನಿಗದಿ ಮಾಡಿರುವ ಬೆಲೆಯು (₹ 902–949) ಸಣ್ಣ ಹೂಡಿಕೆದಾರರ ಪಾಲಿಗೆ ಆಕರ್ಷಕವಾಗಿದೆ. ಅಲ್ಲದೆ, ಎಲ್‌ಐಸಿ ಪಾಲಿಸಿ ಹೊಂದಿರುವವರಿಗೆ ಹಾಗೂ ಇತರ ಸಣ್ಣ ಹೂಡಿಕೆದಾರರಿಗೆ ಷೇರು ಬೆಲೆಯಲ್ಲಿ ಸಿಗಲಿರುವ ರಿಯಾಯಿತಿಯೂ ಆಕರ್ಷಕವಾಗಿದೆ ಎಂದರು.

ಸಣ್ಣ ಹೂಡಿಕೆದಾರರಿಗೆ ಪ್ರತಿ ಷೇರಿಗೆ ₹ 45ರಷ್ಟು, ಪಾಲಿಸಿ ಹೊಂದಿರುವವರಿಗೆ ₹ 60ರಷ್ಟು ರಿಯಾಯಿತಿ ಇರಲಿದೆ ಎಂದು ಎಲ್‌ಐಸಿ ಹೇಳಿದೆ.

ಸಣ್ಣ ಹೂಡಿಕೆದಾರರಿಗೆ ಹಾಗೂ ಪಾಲಿಸಿ ಹೊಂದಿರುವವರಿಗೆ ಐಪಿಒ ಬಿಡ್ ಸಲ್ಲಿಸುವ ಸಂದರ್ಭದಲ್ಲಿಯೇ ರಿಯಾಯಿತಿಯ ಪ್ರಯೋಜನ ಲಭ್ಯವಾಗಲಿದೆ. ಷೇರುಗಳ ಹಂಚಿಕೆಯು ಮೇ 12ರಂದು ನಡೆಯಲಿದ್ದು, ಮೇ 17ರಂದು ಎಲ್‌ಐಸಿ ಷೇರುಗಳು ಷೇರುಪೇಟೆ ಪ್ರವೇಶಿಸಲಿವೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

‘ಪಾಲಿಸಿದಾರರಿಂದ ಆಸಕ್ತಿ’

ಎಲ್‌ಐಸಿ ಷೇರುಗಳನ್ನು ಖರೀದಿಸಲು ಪಾಲಿಸಿದಾರರು ಆಸಕ್ತಿ ತೋರಿದ್ದಾರೆ, ಫೆಬ್ರುವರಿ 28ರವರೆಗೆ ಒಟ್ಟು 6.48 ಕೋಟಿ ಪಾಲಿಸಿದಾರರು ತಮ್ಮ ಪ್ಯಾನ್ ಸಂಖ್ಯೆಯನ್ನು ಪಾಲಿಸಿ ಜೊತೆ ಜೋಡಿಸಿದ್ದಾರೆ ಎಂದು ರಾಹುಲ್ ಜೈನ್ ಹೇಳಿದರು.

ಐಪಿಒ ದಿನಾಂಕ ಘೋಷಿಸುವುದಕ್ಕೂ ಮೊದಲು ಎಲ್‌ಐಸಿ, ಪಾಲಿಸಿದಾರರು ತಮ್ಮ ಪ್ಯಾನ್ ಸಂಖ್ಯೆ ಹಾಗೂ ಪಾಲಿಸಿ ಸಂಖ್ಯೆ ಜೋಡಿಸುವಂತೆ ತಿಳಿಸಿತ್ತು.


ರಾಹುಲ್ ಜೈನ್

ಸೆನ್ಸೆಕ್ಸ್ 702 ಅಂಶ ಜಿಗಿತ

ಮುಂಬೈ (ಪಿಟಿಐ): ರಿಲಯನ್ಸ್, ಎಚ್‌ಯುಎಲ್ ಮತ್ತು ಇನ್ಫೊಸಿಸ್ ಕಂಪನಿಗಳ ಷೇರುಗಳ ಉತ್ತಮ ಗಳಿಕೆಯಿಂದಾಗಿ ದೇಶದ ಷೇರುಪೇಟೆಗಳು ಗುರುವಾರ ಶೇಕಡ 1ಕ್ಕೂ ಹೆಚ್ಚಿನ ಪ್ರಮಾಣದ ಏರಿಕೆ ಕಂಡವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 702 ಅಂಶ ಹೆಚ್ಚಾಗಿ 57,521 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 207 ಅಂಶ ಏರಿಕೆ ಕಂಡು 17,245 ಅಂಶಗಳಿಗೆ ತಲುಪಿತು.

ಎಚ್‌ಯುಎಲ್ ಮೌಲ್ಯ ವೃದ್ಧಿ: ಹಿಂದುಸ್ತಾನ್ ಯುನಿಲಿವರ್ ಲಿಮಿಟೆಡ್‌ನ ನಿವ್ವಳ ಲಾಭ ಹೆಚ್ಚಾಗಿರುವುದರಿಂದ ಅದರ ಷೇರು ಮೌಲ್ಯವು ಗುರುವಾರ ಶೇ 4.5ರಷ್ಟು ಹೆಚ್ಚಳ ಆಯಿತು. ಇದರಿಂದಾಗಿ ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯ 22,920 ಕೋಟಿಯಷ್ಟು ಹೆಚ್ಚಾಗಿ ಒಟ್ಟಾರೆ ಮೌಲ್ಯವು ₹ 5.26 ಲಕ್ಷ ಕೋಟಿಗೆ ತಲುಪಿತು.

ರಷ್ಯಾದ ತೈಲ ಕಂಪನಿಗಳಲ್ಲಿ ಹೂಡಿಕೆಗೆ ಕೇಂದ್ರ ಸೂಚನೆ

ನವದೆಹಲಿ (ರಾಯಿಟರ್ಸ್): ಯುರೋಪಿನ ಪ್ರಮುಖ ತೈಲ ಕಂಪನಿಯಾಗಿರುವ ಬಿಪಿ ರಷ್ಯಾದ ರೊಸ್ನೆಫ್ಟ್ ಕಂಪನಿಯಲ್ಲಿ ಹೊಂದಿರುವ ಷೇರುಪಾಲನ್ನು ಖರೀದಿಸುವ ಸಾಧ್ಯತೆಗಳನ್ನು ಪರಿಶೀಲಿಸುವಂತೆ ಕೇಂದ್ರ ಸರ್ಕಾರವು ತನ್ನ ಮಾಲೀಕತ್ವದ ಕಂಪನಿಗಳಿಗೆ ಸೂಚಿಸಿದೆ.

ರೊಸ್ನೆಫ್ಟ್ ಕಂಪನಿಯಲ್ಲಿ ತಾನು ಹೊಂದಿರುವ ಶೇಕಡ 19.75 ರಷ್ಟು ಷೇರುಗಳನ್ನು ಮಾರಾಟ ಮಾಡುವುದಾಗಿ ಬಿಪಿ ಹೇಳಿದೆ. ಈ ಪಾಲನ್ನು ಖರೀದಿಸುವ ಬಗ್ಗೆ ಪರಿಶೀಲಿಸುವಂತೆ ಕೇಂದ್ರವು ಒಎನ್‌ಜಿಸಿ ವಿದೇಶ್ ಲಿಮಿಟೆಡ್, ಇಂಡಿಯನ್ ಆಯಿಲ್ ಕಾರ್ಪೊರೇಷನ್, ಭಾರತ್ ಪೆಟ್ರೊ ರಿಸೋರ್ಸಸ್ ಲಿ., ಪ್ರೈಜ್ ಪೆಟ್ರೋಲಿಯಂ ಲಿ., ಆಯಿಲ್ ಇಂಡಿಯಾ ಮತ್ತು ಗೇಲ್ ಲಿ. ಕಂಪನಿಗಳಿಗೆ ಹೇಳಿದೆ ಎಂದು ಮೂಲಗಳು ತಿಳಿಸಿವೆ.

ಈ ವಿಚಾರವಾಗಿ ಈ ಕಂಪನಿಗಳು ಹಾಗೂ ಕೇಂದ್ರ ಇಂಧನ ಸಚಿವಾಲಯ ಪ್ರತಿಕ್ರಿಯೆ ನೀಡಿಲ್ಲ. ಪ್ರತಿಕ್ರಿಯೆ ನೀಡಲು ಬಿಪಿ ನಿರಾಕರಿಸಿದೆ. ರಷ್ಯಾ ದೇಶವು ಉಕ್ರೇನ್ ಮೇಲೆ ಆಕ್ರಮಣ ನಡೆಸಿದೆ ಎಂಬ ಕಾರಣ ಪಾಶ್ಚಿಮಾತ್ಯ ದೇಶಗಳು ರಷ್ಯಾ ಮೇಲೆ ಆರ್ಥಿಕ ನಿರ್ಬಂಧ ವಿಧಿಸಿವೆ.

ರಷ್ಯಾದ ಸಖಾಲಿನ್ 1 ಯೋಜನೆಯಲ್ಲಿ ಎಕ್ಸಾನ್ ಮೊಬೈಲ್ ಕಾರ್ಪ್ ಹೊಂದಿರುವ ಶೇ 30ರಷ್ಟು ಪಾಲನ್ನು ಖರೀದಿಸುವ ಬಗ್ಗೆ ಪರಿಶೀಲಿಸುವಂತೆ ಕೇಂದ್ರವು ಒಎನ್‌ಜಿಸಿ ಕಂಪನಿಯ ವಿದೇಶ ಹೂಡಿಕೆ ವಿಭಾಗಕ್ಕೆ ಹೇಳಿದೆ. ಈ ಯೋಜನೆಯಲ್ಲಿನ ಹೂಡಿಕೆ ಹಿಂಪಡೆಯುವುದಾಗಿ ಎಕ್ಸಾನ್ ಕಂಪನಿ ಮಾರ್ಚ್‌ನಲ್ಲಿ ಹೇಳಿದೆ.

ರಷ್ಯಾದ ತೈಲ ಕಂಪನಿಗಳಲ್ಲಿ ವಿನಾಯಿತಿ ಬೆಲೆಗೆ ಪಾಲುದಾರಿಕೆ ಸಿಗಬಹುದು ಎಂಬ ವಿಶ್ವಾಸ ಭಾರತದ ಕಂಪನಿಗಳಲ್ಲಿ ಇದೆ ಎಂದು ಮೂಲಗಳು ಹೇಳಿವೆ. ಹೂಡಿಕೆ ಮಾಡಿದರೆ ಆರ್ಥಿಕ ನಿರ್ಬಂಧದಿಂದ ಅವುಗಳ ಮೇಲೆ ಆಗಬಹುದಾದ ಪರಿಣಾಮಗಳ ಬಗ್ಗೆ ಭಾರತದ ಕಂಪನಿಗಳು ಪರಿಶೀಲನೆ ನಡೆಸಬೇಕಿದೆ ಎಂದು ಮೂಲಗಳು ವಿವರಿಸಿವೆ.

ಮೇ 6ರಂದು ಕೆನರಾ ಬ್ಯಾಂಕ್ ಸಭೆ

ಬೆಂಗಳೂರು: ಕೆನರಾ ಬ್ಯಾಂಕ್‌ನ ಆಡಳಿತ ಮಂಡಳಿಯು ಮೇ 6ರಂದು ಸಭೆ ನಡೆಸಲಿದ್ದು, ಹಣಕಾಸಿನ ಫಲಿತಾಂಶಕ್ಕೆ ಅನುಮೋದನೆ ನೀಡಲಿದೆ.

ಅಲ್ಲದೆ, ಷೇರುದಾರರಿಗೆ 2021–22ನೇ ಸಾಲಿಗೆ ಸಂಬಂಧಿಸಿದ ಲಾಭಾಂಶ ನೀಡುವ ಬಗ್ಗೆಯೂ ಪರಿಶೀಲನೆ ನಡೆಸಲಿದೆ ಎಂದು ಬ್ಯಾಂಕ್‌ನ ಪ್ರಕಟಣೆ ತಿಳಿಸಿದೆ.

‘ಎಲೆಕ್ಟ್ರಿಕ್ ದ್ವಿಚಕ್ರ ವಾಹನ ಬಿಡುಗಡೆ ಮುಂದೂಡಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ಎಲೆಕ್ಟ್ರಿಕ್ ದ್ವಿಚಕ್ರ ವಾಹನಗಳಿಗೆ ಕೆಲವೆಡೆ ಬೆಂಕಿ ಹೊತ್ತಿಕೊಂಡಿರುವ ಘಟನೆಗಳನ್ನು ಗಂಭೀರವಾಗಿ ಪರಿಗಣಿಸಿರುವ ಕೇಂದ್ರ ಸರ್ಕಾರ, ಹೊಸ ಎಲೆಕ್ಟ್ರಿಕ್ ದ್ವಿಚಕ್ರ ವಾಹನಗಳ ಬಿಡುಗಡೆ ಯೋಜನೆಯನ್ನು ಮುಂದೂಡುವಂತೆ ಎಲೆಕ್ಟ್ರಿಕ್ ವಾಹನ ತಯಾರಕರನ್ನು ಕೋರಿದೆ.

ವಾಹನಗಳ ಅಗ್ನಿ ದುರಂತದ ಬಗ್ಗೆ ತನಿಖೆ ಕೈಗೆತ್ತಿಕೊಳ್ಳಲಾಗಿದೆ. ಈ ಕುರಿತ ವರದಿ ಸಲ್ಲಿಕೆ ಆಗುವವರೆಗೆ ಹೊಸ ದ್ವಿಚಕ್ರ ವಾಹನಗಳ ಬಿಡುಗಡೆಯನ್ನು ಮುಂದೂಡುವಂತೆ, ಎಲೆಕ್ಟ್ರಿಕ್ ವಾಹನ ತಯಾರಕರಿಗಾಗಿ ಇತ್ತೀಚೆಗೆ ಹಮ್ಮಿಕೊಳ್ಳಲಾಗಿದ್ದ ಸಭೆಯಲ್ಲಿ ಮೌಖಿಕವಾಗಿ ಸೂಚಿಸಲಾಗಿದೆ ಎಂದು ಕೇಂದ್ರದ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಮೂಲಗಳು ತಿಳಿಸಿವೆ.

ಬೆಂಕಿ ಕಾಣಿಸಿಕೊಂಡಿದ್ದ ವಾಹನಗಳ ಕುರಿತು ನಿಗಾ ವಹಿಸಿ, ಸಂಬಂಧಿಸಿದ ಬ್ಯಾಚ್‌ಗೆ ಸೇರಿರುವ ಎಲ್ಲ ವಾಹನಗಳನ್ನು ಹಿಂದಕ್ಕೆ ಪಡೆಯುವಂತೆಯೂ ಅಧಿಕಾರಿಗಳು ವಾಹನ ತಯಾರಕರನ್ನು ಕೋರಿದ್ದಾರೆ.

‘ವಾಹನಗಳಿಗೆ ಬೆಂಕಿ ಹೊತ್ತಿಕೊಳ್ಳಲು ಕಾರಣವೇನು, ಇದರಲ್ಲಿ ವಾಹನ ತಯಾರಕರ ಅಥವಾ ಗ್ರಾಹಕರ ಪ್ರಮಾದ ಇದೆಯೇ’ ಎಂಬ ಕುರಿತು ಸರ್ಕಾರ ಸ್ಪಷ್ಟನೆ ಬಯಸಿದೆ. ತನಿಖಾ ವರದಿಯನ್ನು ಆಧರಿಸಿ ಎಲೆಕ್ಟ್ರಿಕ್ ವಾಹನಗಳ ಉತ್ಪಾದನೆ ಮತ್ತು ಮಾರಾಟ ಕುರಿತು ಹೊಸ ನಿಯಮಾವಳಿ ರೂಪಿಸಲು ಸರ್ಕಾರ ಚಿಂತನೆ ನಡೆಸಿದೆ ಎಂದು ಸಚಿವಾಲಯದ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಅಲ್ಲಿಯವರೆಗೆ ಹೊಸ ಉತ್ಪಾದನೆಗಳ ಬಿಡುಗಡೆಯನ್ನು ಮುಂದೂಡುವಂತೆ ಎಲೆಕ್ಟ್ರಿಕ್ ವಾಹನ ತಯಾರಿಕಾ ಕಂಪನಿಗಳಿಗೆ ಮನವಿ ಮಾಡಲಾಗಿದೆ. ವಾಹನಗಳ ರೀಚಾರ್ಜ್ ಸಂದರ್ಭದ ಸುರಕ್ಷತೆ ಮತ್ತು ಬೆಂಕಿ ಅವಘಡ ತಡೆಯುವ ಬಗೆಯ ಕುರಿತು ಗ್ರಾಹಕರಿಗೆ ಅರಿವು ಮೂಡಿಸುವಂತೆಯೂ ಸೂಚಿಸಲಾಗಿದೆ. ತಯಾರಕರು ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಸಂಪೂರ್ಣ ಸಹಕಾರದ ಭರವಸೆ ನೀಡಿದ್ದಾಗಿ ಅವರು ಹೇಳಿದ್ದಾರೆ.

ತನಿಖೆಗೆ ನೇಮಿಸಲಾದ ಪರಿಣಿತ ತಂಡಗಳು ಕೆಲವು ಎಲೆಕ್ಟ್ರಾನಿಕ್ ವಾಹನ ತಯಾರಿಕಾ ಘಟಕಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿವೆ. ಕಂಪನಿಗಳ ತಾಂತ್ರಿಕ ಅಧಿಕಾರಿಗಳೂ ಸಚಿವಾಲಯದ ಅಧಿಕಾರಿಗಳನ್ನು ಭೇಟಿ ಮಾಡಿ ಬೆಂಕಿ ಅವಘಡದ ಘಟನೆಯ ಕುರಿತು ವಿವರ ನೀಡಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	500
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕಾರ್ಕಳ	
ಹೊಸತು	40000-45000
ಹಳತು	46000-54000
ಪುತ್ತೂರು	
ಕೋಕ	11000-26000
ಹೊಸತು	27500-45000
ಕುಮಟ	
ಚಿಪ್ಪು	25069-33269
ಕೋಕ	7171-30279
ಹಳೆಚಾಲಿ	47099-49229
ಹೊಸಚಾಲಿ	34669-39831
ಶಿವಮೊಗ್ಗ	
ಬೆಟ್ಟೆ	49058-53369
ಗೊರಬಲು	17169-36500
ರಾಶಿ	44219-48699
ಸರಕು	55500-79010
ಸಾಗರ	
ಬಿಳಿಗೋಟು	20969-31109
ಕೋಕ	16119-33443
ಚಾಲಿ	33009-39219
ಕೆಂಪುಗೋಟು	24300-38689
ರಾಶಿ	35509-4850
ಸಿಪ್ಪೆಗೋಟು	13144-21900
ಸಿದ್ದಾಪುರ	
ಬಿಳಿಗೋಟು	23699-31682
ಕೋಕ	22899-30890
ಚಾಲಿ	36599-40399
ಕೆಂಪುಗೋಟು	29699-31699
ರಾಶಿ	45082-48509
ತಟ್ಟಿಬೆಟ್ಟೆ	33699-38112
ಶಿರಸಿ	
ಬೆಟ್ಟೆ	16899-45299
ಬಿಳಿಗೋಟು	20169-33199
ಚಾಲಿ	30890-40919
ರಾಶಿ	46209-49769
ಯಲ್ಲಾಪುರ	
ಬಿಳಿಗೋಟು	28299-32691
ಚಾಲಿ	37830-40796
ಕೋಕ	18399-30119
ಕೆಂಪುಗೋಟು	31611-34800
ರಾಶಿ	48899-54819
ತಟ್ಟಿಬೆಟ್ಟೆ	38969-47899
ರಾಮನಗರ ರೇಷ್ಮೆಗೂಡು	
ಮಿಶ್ರ ತಳಿ	235-708
ದ್ವಿತಳಿ	266-840

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15750	15850	15850	220.15ಸೆಂಟ್ಸ್
ಎಸಿ	8540	8300	8500	
ಆರ್‌ಪಿ	9500	9500	9450	ಲಂಡನ್
ಆರ್‌ಸಿ	4290	4050	4275	2054 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

28-4-2022

ಜಾವಾ 70/80(ಹೊಸ)	10500-10550
ಜಾವಾ 80/90(ಹೊಸ)	10000-10050
ದಪ್ಪ ಮಧ್ಯಪ್ರದೇಶ(ಹೊಸ)	11000-11050
ದಪ್ಪ ಗುಜರಾತ್(ಹೊಸ)	10000-10050

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1675 (1675)
ಒಂದು ವಾರದ ಡೆಲಿವರಿ	1670 (1670)
ಸೋಯಾ ಕಚ್ಚಾ	1600 (1595)
ಪಾಮ್ ವಾರದ ಡೆಲಿವರಿ	1575 (1555)
ಸೂರ್ಯಕಾಂತಿ ಎಣ್ಣೆ ಕಚ್ಚಾ	1870 (1870)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,400 (51,400)
ಬೆಳ್ಳಿ ಕೆ.ಜಿ 64,300 (65,250)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎಕ್ಸಿಸ್ ಬ್ಯಾಂಕ್ ನಿವ್ವಳ ಲಾಭ ಏರಿಕೆ

ನವದೆಹಲಿ (ಪಿಟಿಐ): ಮಾರ್ಚ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ನಿವ್ವಳ ಲಾಭದಲ್ಲಿ ಶೇಕಡ 54ರಷ್ಟು ಏರಿಕೆ ಆಗಿದ್ದು, ₹ 4,117 ಕೋಟಿಗೆ ತಲುಪಿದೆ ಎಂದು ಎಕ್ಸಿಸ್ ಬ್ಯಾಂಕ್ ತಿಳಿಸಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹ 2,677 ಕೋಟಿ ನಿವ್ವಳ ಲಾಭ ಗಳಿಸಿತ್ತು.

ಮಾರ್ಚ್ ತ್ರೈಮಾಸಿಕದಲ್ಲಿ ಬ್ಯಾಂಕ್‌ನ ಒಟ್ಟು ಆದಾಯವು ₹ 21,999 ಕೋಟಿಗೆ ತಲುಪಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಒಟ್ಟು ಆದಾಯವು ₹ 19,035 ಕೋಟಿ ಆಗಿತ್ತು ಎಂದು ಎಕ್ಸಿಸ್ ಬ್ಯಾಂಕ್ ಷೇರುಪೇಟೆಗೆ ಮಾಹಿತಿ ನೀಡಿದೆ.



ಸಂಕ್ಷಿಪ್ತ ಸುದ್ದಿ


ದೃಷ್ಟಿ ದೋಷವುಳ್ಳ ಮಹಿಳೆಯರ ರಾಷ್ಟ್ರೀಯ ಚೆಸ್ ಮೇ 6ರಿಂದ

ಕಾರವಾರ: 'ದೃಷ್ಟಿದೋಷವುಳ್ಳ ಮಹಿಳೆಯರಿಗೆ ಮೇ 6ರಿಂದ 9ರವರೆಗೆ ರಾಷ್ಟ್ರಮಟ್ಟದ ಚೆಸ್ ಟೂರ್ನಿಯನ್ನು ಹೊನ್ನಾವರದ ಪ್ರಭಾತ್ ನಗರದ ಡಾ.ರೋಟರಿ ಎಸ್.ಭಟ್ ಸ್ಮಾರಕ ರೋಟರಿ ಪಾರ್ಕ್ ಹೌಸ್‌ನಲ್ಲಿ ಹಮ್ಮಿಕೊಳ್ಳಲಾಗಿದೆ' ಎಂದು ಹೊನ್ನಾವರ ರೋಟರಿ ಕ್ಲಬ್ ಅಧ್ಯಕ್ಷ ಸ್ಟೀಫನ್ ಎ.ರೋಡ್ರಿಗಸ್ ತಿಳಿಸಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕರ್ನಾಟಕದ 16 ಜನ ಸೇರಿದಂತೆ ದೇಶದ ವಿವಿಧ ರಾಜ್ಯಗಳಿಂದ 55 ಸ್ಪರ್ಧಿಗಳು ಭಾಗವಹಿಸಲಿದ್ದಾರೆ. ವಿಜೇತ ಆರು ಮಂದಿ ಚೀನಾ ಮತ್ತು ಫ್ರಾನ್ಸ್‌ನಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಮಟ್ಟದ ಟೂರ್ನಿಗಳಲ್ಲಿ ಭಾಗವಹಿಸಲಿದ್ದಾರೆ' ಎಂದು ಮಾಹಿತಿ ನೀಡಿದರು.

'ಅಖಿಲ ಭಾರತ ಅಂಧರ ಚೆಸ್ ಒಕ್ಕೂಟ ಹಾಗೂ ಕರ್ನಾಟಕ ರಾಜ್ಯ ದೃಷ್ಟಿ ದೋಷವುಳ್ಳವರ ಚೆಸ್ ಸಂಸ್ಥೆ'ಗಳ ಸಹಯೋಗದಲ್ಲಿ ರಾಷ್ಟ್ರ ಮಟ್ಟದ ಈ ಟೂರ್ನಿಯು ಇದೇ ಮೊದಲ ಬಾರಿ ರಾಜ್ಯದಲ್ಲಿ ಆಯೋಜನೆಯಾಗುತ್ತಿದೆ' ಎಂದರು.

ಇಂಗ್ಲೆಂಡ್ ಟೆಸ್ಟ್ ತಂಡಕ್ಕೆ ಬೆನ್ ಸ್ಟೋಕ್ಸ್ ನಾಯಕ



ಲಂಡನ್ (ಎಎಫ್‌ಪಿ): ಆಲ್‌ರೌಂಡರ್ ಬೆನ್ ಸ್ಟೋಕ್ಸ್ ಅವರನ್ನು 'ಇಂಗ್ಲೆಂಡ್ ಟೆಸ್ಟ್ ಕ್ರಿಕೆಟ್ ತಂಡದ ನಾಯಕರನ್ನಾಗಿ ನೇಮಕ ಮಾಡಲಾಗಿದೆ.

5 ವರ್ಷಗಳ ಕಾಲ ತಂಡ ಮುನ್ನಡೆಸಿದ್ದ ಜೋ ರೂಟ್ ಈಚೆಗೆ ನಾಯಕತ್ವದಿಂದ ಕೆಳಗಿಳಿದಿದ್ದರು. ಇದೀಗ ಅವರ ಸ್ಥಾನವನ್ನು 30 ವರ್ಷದ ಬೆನ್ ತುಂಬಲಿದ್ದಾರೆ. 79 ಟೆಸ್ಟ್‌ಗಳನ್ನು ಆಡಿರುವ ಬೆನ್ 5061 ರನ್‌ಗಳನ್ನು ಗಳಿಸಿದ್ದಾರೆ. ಅದರಲ್ಲಿ 11 ಶತಕಗಳಿವೆ. ಮಧ್ಯಮವೇಗಿ 174 ವಿಕೆಟ್‌ಗಳನ್ನೂ ಪಡೆದಿದ್ದಾರೆ. 2019ರಲ್ಲಿ ಹೆಡಿಂಗ್ಲಿಯಲ್ಲಿ ಆಸ್ಟ್ರೇಲಿಯಾ ವಿರುದ್ಧ ಇಂಗ್ಲೆಂಡ್ ಒಂದು ವಿಕೆಟ್ ಜಯ ಸಾಧಿಸುವಲ್ಲಿ ಸ್ಟೋಕ್ಸ್ ಗಳಿಸಿದ್ದ ಅಜೇಯ 135 ರನ್ ಆಟ ಕಾರಣವಾಗಿತ್ತು

ಮುಂಬೈಗೆ ಕುಮಾರ್

ಮುಂಬೈ (ಪಿಟಿಐ): ಎಡಗೈ ಸ್ಪಿನ್ನರ್ ಕುಮಾರ್ ಕಾರ್ತಿಕೆಯ ಸಿಂಗ್ ಅವರಿಗೆ ₹ 20 ಲಕ್ಷ ಮೌಲ್ಯ ನೀಡಿರುವ ಮುಂಬೈ ಇಂಡಿಯನ್ಸ್ ತಂಡವು ಸೇರ್ಪಡೆ ಮಾಡಿಕೊಂಡಿದೆ. ಗಾಯಗೊಂಡಿರುವ ಮೊಹಮ್ಮದ್ ಅರ್ಷದ್ ಖಾನ್ ಸ್ಥಾನವನ್ನು ಅವರು ತುಂಬುವರು.

ಕ್ವಾಡ್ ಶೃಂಗಸಭೆ; ಮೋದಿ– ಬೈಡನ್ ಭೇಟಿ

ವಾಷಿಂಗ್ಟನ್ (ಪಿಟಿಐ): ಜಪಾನ್‌ನ ಟೋಕಿಯೊದಲ್ಲಿ ಮುಂದಿನ ತಿಂಗಳು ನಡೆಯಲಿರುವ ಕ್ವಾಡ್ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಅಮೆರಿಕ ಅಧ್ಯಕ್ಷ ಜೋ ಬೈಡನ್ ಭೇಟಿ ಮಾಡಲಿದ್ದಾರೆ ಎಂದು ಶ್ವೇತಭವನ ಹೇಳಿದೆ.

ಕ್ವಾಡ್ ಸಭೆಯಲ್ಲಿ ಪಾಲ್ಗೊಳ್ಳುವ ಸಲುವಾಗಿ ಬೈಡನ್, ಮೇ 20ರಿಂದ 24ರವರೆಗೆ ದಕ್ಷಿಣ ಕೊರಿಯಾ ಮತ್ತು ಜಪಾನ್ ಪ್ರವಾಸ ಕೈಗೊಳ್ಳಲಿದ್ದಾರೆ. ಈ ಪ್ರವಾಸವು ಬೈಡನ್ ಮತ್ತು ಹ್ಯಾರಿಸ್ ಆಡಳಿತವು ತೆರೆದ ಮತ್ತು ಮುಕ್ತ ಇಂಡೋ-ಪೆಸಿಫಿಕ್ ಪ್ರತಿಪಾದನೆಗೆ ತೋರುತ್ತಿರುವ ಬದ್ಧತೆಯನ್ನು ಮತ್ತಷ್ಟು ಗಟ್ಟಿಗೊಳಿಸಲಿದೆ ಎಂದು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಜೆನ್ ಸಾಕಿ ಬುಧವಾರ ಇಲ್ಲಿ ತಿಳಿಸಿದರು. 'ಕ್ವಾಡ್‌ನಲ್ಲಿ ಅಮೆರಿಕದ ಜತೆಗೆ ಸದಸ್ಯ ರಾಷ್ಟ್ರಗಳಾಗಿರುವ ಭಾರತ, ಆಸ್ಟ್ರೇಲಿಯಾ, ಜಪಾನ್ ನಾಯಕರನ್ನೂ ಬೈಡನ್ ಭೇಟಿ ಮಾಡಲಿದ್ದಾರೆ' ಎಂದು ಸಾಕಿ ತಿಳಿಸಿದರು.

ರಾಜಪಕ್ಸ ವಜಾ ಆಗ್ರಹಿಸಿ ಪ್ರತಿಭಟನೆ

ಕೊಲಂಬೊ: ಶ್ರೀಲಂಕಾದಲ್ಲಿ ಆರ್ಥಿಕ ಬಿಕ್ಕಟ್ಟನ್ನು ಬಗೆಹರಿಸುವಲ್ಲಿ ವಿಫಲರಾಗಿರುವ ಅಧ್ಯಕ್ಷ ಗೋಟಬಯ ರಾಜಪಕ್ಸ ಮತ್ತು ಪ್ರಧಾನಿ ಮಹಿಂದಾ ರಾಜಪಕ್ಸ ಅವರು ರಾಜೀನಾಮೆ ನೀಡಬೇಕೆಂದು ಆಗ್ರಹಿಸಿ 1,000 ಕಾರ್ಮಿಕ ಸಂಘಟನೆಗಳು ಗುರುವಾರ ರಾಷ್ಟ್ರವ್ಯಾಪಿ ಮುಷ್ಕರ ನಡೆಸಿದವು.

ಆರೋಗ್ಯ, ಬಂದರು, ವಿದ್ಯುತ್, ಶಿಕ್ಷಣ, ಅಂಚೆ ಸೇರಿದಂತೆ ಹಲವು ವಲಯಗಳ ಕಾರ್ಮಿಕ ಸಂಘಟನೆಗಳು ಮುಷ್ಕರದಲ್ಲಿ ಪಾಲ್ಗೊಂಡಿವೆ.

'ಜನರು ಬೀದಿಗಿಳಿದು ಹೋರಾಟ ನಡೆಸಿದರೂ ರಾಜಪಕ್ಸ ಸರ್ಕಾರವು ಅಧಿಕಾರಕ್ಕೆ ಅಂಟಿಕೊಂಡಿದೆ' ಎಂದು ಶಿಕ್ಷಕರ ಸಂಘಟನೆಯ ವಕ್ತಾರ ಜೋಸೆಫ್ ಸ್ಟಾಲಿನ್ ಹೇಳಿದ್ದಾರೆ. ಮುಷ್ಕರದ ಪರಿಣಾಮ ಹಲವು ಮಾರುಕಟ್ಟೆಗಳು ಬಿಕೊ ಅನ್ನುತ್ತಿದ್ದವು.

ಡೇವಿಡ್ ವಾರ್ನರ್, ಪೊವೆಲ್ ಉತ್ತಮ ಬ್ಯಾಟಿಂಗ್; ಕೋಲ್ಕತ್ತ ನೈಟ್ ರೈಡರ್ಸ್‌ಗೆ ನಿರಾಸೆ

ಕುಲದೀಪ್ ಮೋಡಿ; ಡೆಲ್ಲಿಗೆ ಜಯ

ಮುಂಬೈ: ಸಾಧಾರಣ ಗುರಿ ಬೆನ್ನತ್ತಿದ ಡೆಲ್ಲಿ ಕ್ಯಾಪಿಟಲ್ಸ್ ತಂಡ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಗುರುವಾರ ಸುಲಭ ಗೆಲುವು ಸಾಧಿಸಿತು. ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಗೆಲುವಿಗೆ 147 ರನ್ ಬೇಕಾಗಿದ್ದ ಡೆಲ್ಲಿ ಇನ್ನೂ ಒಂದು ಓವರ್ ಉಳಿದಿರುವಾಗ ದಡ ಸೇರಿತು.

ತಂಡದ ಆರಂಭಿಕ ಬ್ಯಾಟರ್ ಪೃಥ್ವಿ ಶಾ ಇನಿಂಗ್ಸ್‌ನ ಮೊದಲ ಎಸೆತದಲ್ಲೇ ಔಟಾಗಿದ್ದರು. ಡೇವಿಡ್ ವಾರ್ನರ್, ಲಲಿತ್ ಯಾದವ್, ರೋವ್ಮನ್ ಪೊವೆಲ್ ಮತ್ತು ಅಕ್ಷರ್ ಪಟೇಲ್ ಅವರ ಸಮಯೋಚಿತ ಆಟ ಡೆಲ್ಲಿಗೆ ನಾಲ್ಕು ವಿಕೆಟ್‌ಗಳ ಗೆಲುವು ತಂದುಕೊಟ್ಟಿತು. ಡೆಲ್ಲಿ ಬ್ಯಾಟರ್‌ಗಳನ್ನು ಕಟ್ಟಿಹಾಕಲು ಕೋಲ್ಕತ್ತದ ಎಂಟು ಬೌಲರ್‌ಗಳು ದಾಳಿ ನಡೆಸಿದ್ದರು. ನಾಯಕ ಶ್ರೇಯಸ್ ಅಯ್ಯರ್ ಹಾಕಿದ 19ನೇ ಓವರ್‌ನ ಕೊನೆಯ ಎಸೆತವನ್ನು ಲಾಂಗ್ ಆನ್ ಮೇಲಿಂದ ಸಿಕ್ಸರ್‌ಗೆ ಎತ್ತಿದ ರೋವ್ಮನ್ ಪೊವೆಲ್ ವಿಜಯದ ರನ್ ಸಿಡಿಸಿದರು.

ಕುಲದೀಪ್ ಯಾದವ್ ಸ್ಪಿನ್ ಬಲೆ: ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಡೆಲ್ಲಿ ನಾಯಕ ರಿಷಭ್ ಪಂತ್ ಯೋಜನೆ ಫಲಿಸಿತು. ದೊಡ್ಡ ಮೊತ್ತ ಕಲೆ ಹಾಕುವ ಕೋಲ್ಕತ್ತ ನೈಟ್ ರೈಡರ್ಸ್ ಯೋಜನೆಗೆ ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಅಡ್ಡಿಯಾದರು. ಇನಿಂಗ್ಸ್‌ನ ಎಂಟನೇ ಓವರ್‌ನಲ್ಲಿ ಬಾಬಾ ಇಂದ್ರಜೀತ್, ಸುನಿಲ್ ನಾರಾಯಣ, 14ನೇ ಓವರ್‌ನಲ್ಲಿ ಶ್ರೇಯಸ್ ಅಯ್ಯರ್ ಮತ್ತು ಆಂಡ್ರೆ ರಸೆಲ್ ವಿಕೆಟ್‌ಗಳನ್ನು ಕುಲದೀಪ್ ಗಳಿಸಿದರು. ಇದರಿಂದಾಗಿ ಡೆಲ್ಲಿ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 146 ರನ್‌ಗಳ ಮೊತ್ತ ಪೇರಿಸಿತು.



ವಿಕೆಟ್ ಗಳಿಸಿದ ಸಂಭ್ರಮದಲ್ಲಿ ಕುಲದೀಪ್ ಯಾದವ್ –ಪಿಟಿಐ ಚಿತ್ರ

ಎರಡನೇ ಓವರ್‌ನಲ್ಲಿ ಚೇತನ್ ಸಕಾರಿಯಾ ಎಸೆತದಲ್ಲಿ ಆರನ್ ಫಿಂಚ್ ಕ್ಲೀನ್ ಬೌಲ್ಡ್ ಆದರು. ಐದನೇ ಓವರ್‌ನಲ್ಲಿ ಅಕ್ಷರ್ ಪಟೇಲ್ ಎಸೆತದಲ್ಲಿ ವೆಂಕಟೇಶ್ ಅಯ್ಯರ್ ಔಟಾದರು. ನಾಯಕ ಶ್ರೇಯಸ್ ಅಯ್ಯರ್ (42; 37ಎ), ನಿತೀಶ್ ರಾಣಾ (57; 34ಎಸೆತ) ಮತ್ತು ರಿಂಕು ಸಿಂಗ್ (23; 16ಎ) ಅವರನ್ನು ಬಿಟ್ಟರೆ ಉಳಿದ ಬ್ಯಾಟರ್‌ಗಳು ಒಂದಂಕಿ ಗಳಿಕೆಗೆ ಕುಸಿದರು.

ಶ್ರೇಯಸ್ ಜೊತೆಗೂಡಿದ ನಿತೀಶ್ ರಾಣಾ ಐದನೇ ವಿಕೆಟ್ ಜೊತೆಯಾಟದಲ್ಲಿ 48 ರನ್ ಸೇರಿಸಿದರು. ಈ ಪಾಲುದಾರಿಕೆ ಆಟವನ್ನೂ ಕುಲದೀಪ್ ಮುರಿದರು. 14ನೇ ಓವರ್‌ನ ಮೊದಲ ಎಸೆತದಲ್ಲಿ ಶ್ರೇಯಸ್ ವಿಕೆಟ್ ಕಬಳಿಸಿದ ಕುಲದೀಪ್, ನಾಲ್ಕನೇ ಎಸೆತದಲ್ಲಿ 'ಸಿಡಿಲಮರಿ'ಯಂತಹ ಬ್ಯಾಟರ್ ಆಂಡ್ರೆ ರಸೆಲ್ ವಿಕೆಟ್ ಉರುಳಿಸಿದರು.

ಇನ್ನೊಂದು ಬದಿಯಲ್ಲಿ ದಿಟ್ಟ ಆಟ ಆಡುತ್ತಿದ್ದ ನಿತೀಶ್ ನಾಲ್ಕು ಸಿಕ್ಸರ್ ಮತ್ತು ಮೂರು ಬೌಂಡರಿ ಸಿಡಿಸಿದರು. 34 ಎಸೆತಗಳಲ್ಲಿ 57 ರನ್ ಗಳಿಸಿದರು. ಅವರಿಗೆ ರಿಂಕು ಸಿಂಗ್ (23; 16ಎ) ಉತ್ತಮ ಜೊತೆ ನೀಡಿದರು. ಏಳನೇ ವಿಕೆಟ್ ಜೊತೆಯಾಟದಲ್ಲಿ 62 ರನ್ ಸೇರಿಸಿದ್ದರಿಂದ ತಂಡವು ಅಲ್ಪಮೊತ್ತಕ್ಕೆ ಕುಸಿಯುವುದು ತಪ್ಪಿತು.

ಬಾಬಾ ಇಂದ್ರಜೀತ್ ಈ ಪಂದ್ಯದ ಮೂಲಕ ಪದಾರ್ಪಣೆ ಮಾಡಿದರು.

ಸ್ಕೋರ್ ಕಾರ್ಡ್

ಕೋಲ್ಕತ್ತ ನೈಟ್ ರೈಡರ್ಸ್ 9ಕ್ಕೆ 146 (20 ಓವರ್)

ಫಿಂಚ್ ಬಿ ಸಕಾರಿಯಾ 3 (7 ಎ), ವೆಂಕಟೇಶ್ ಸಿ ಸಕಾರಿಯಾ ಬಿ ಅಕ್ಷರ್ 6 (12 ಎ), ಶ್ರೇಯಸ್ ಸಿ ಪಂತ್ ಬಿ ಕುಲದೀಪ್ 42 (37 ಎ, 4x4), ಇಂದ್ರಜೀತ್ ಸಿ ಪೊವೆಲ್ ಬಿ ಕುಲದೀಪ್ 6 (8 ಎ), ಸುನಿಲ್ ಎಲ್‌ಬಿಡಬ್ಲ್ಯು ಬಿ ಕುಲದೀಪ್ 0 (1 ಎ), ನಿತೀಶ್ ಸಿ ಸಕಾರಿಯಾ ಬಿ ಮುಸ್ತಫಿಜುರ್ 57 (34 ಎ, 4x3, 6x4), ರಸೆಲ್ ಸ್ಟಂಪ್ಡ್ ಪಂತ್ ಬಿ ಕುಲದೀಪ್ 0 (3 ಎ), ರಿಂಕು ಸಿ ಪೊವೆಲ್ ಬಿ ಮುಸ್ತಫಿಜುರ್ 23 (16 ಎ, 4x3), ಉಮೇಶ್ ಔಟಾಗದೆ 0 (1 ಎ) ಸೌಥಿ ಬಿ ಮುಸ್ತಫಿಜುರ್ 0 (1 ಎ), ಹರ್ಷಿತ್ ಔಟಾಗದೆ 0 (1 ಎ)

ಇತರೆ (ಲೆಗ್‌ಬೈ 5, ನೋಬಾಲ್ 1, ವೈಡ್ 3) 9

ವಿಕೆಟ್ ಪತನ: 1-4 (ಆರನ್ ಫಿಂಚ್, 1.3), 2-22 (ವೆಂಕಟೇಶ್ ಅಯ್ಯರ್, 4.3), 3-35 (ಬಾಬಾ ಇಂದ್ರಜೀತ್, 7.2), 4-35 (ಸುನಿಲ್ ನಾರಾಯಣ್, 7.3), 5-83 (ಶ್ರೇಯಸ್ ಅಯ್ಯರ್, 13.1), 6-83 (ಆಂಡ್ರೆ ರಸೆಲ್, 13.4), 7-145 (ರಿಂಕು ಸಿಂಗ್, 19.2), 8-146 (ನಿತೀಶ್ ರಾಣಾ, 19.4), 9-146 (ಟಿಮ್ ಸೌಥಿ, 19.5)

ಬೌಲಿಂಗ್: ಮುಸ್ತಫಿಜುರ್ ರೆಹಮಾನ್ 4-0-18-3, ಚೇತನ್ ಸಕಾರಿಯಾ 3-0-17-1, ಶಾರ್ದೂಲ್ ಠಾಕೂರ್ 3-0-32-0, ಅಕ್ಷರ್ ಪಟೇಲ್ 4-0-28-1, ಕುಲದೀಪ್ ಯಾದವ್ 3-0-14-4, ಲಲಿತ್ ಯಾದವ್ 3-0-32-0

ಡೆಲ್ಲಿ ಕ್ಯಾಪಿಟಲ್ಸ್ 6ಕ್ಕೆ 150 (19 ಓವರ್)

ಪೃಥ್ವಿ ಸಿ ಮತ್ತು ಬಿ ಉಮೇಶ್ 0 (1 ಎ), ವಾರ್ನರ್ ಸಿ ನಾರಾಯಣ್ ಬಿ ಉಮೇಶ್ 42 (26 ಎ, 4X8), ಮಿಚೆಲ್ ಸಿ ವೆಂಕಟೇಶ್ ಬಿ ಹರ್ಷಿತ್ 13 (7 ಎ, 4X2), ಲಲಿತ್ ಎಲ್‌ಬಿಡಬ್ಲ್ಯು ಬಿ ನಾರಾಯಣ್ 22 (29 ಎ, 4X1, 6X1), ರಿಷಭ್ ಸಿ ಇಂದ್ರಜೀತ್ ಬಿ ಉಮೇಶ್ 2 (5 ಎ), ಪೊವೆಲ್ ಔಟಾಗದೆ 33 (16 ಎ, 4X1, 6X3), ಅಕ್ಷರ್ ರನ್‌ಔಟ್ (ಶ್ರೇಯಸ್/ವೆಂಕಟೇಶ್) 24 (17 ಎ, 4X2, 6X1), ಶಾರ್ದೂಲ್ ಔಟಾಗದೆ 8 (14 ಎ)

ಇತರೆ (ಲೆಗ್‌ಬೈ 3, ನೋಬಾಲ್ 1, ವೈಡ್ 2) 6

ವಿಕೆಟ್ ಪತನ: 1-0 (ಪೃಥ್ವಿ ಶಾ, 0.1), 2-17 (ಮಿಚೆಲ್ ಮಾರ್ಷ್, 1.3), 3-82 (ಡೇವಿಡ್ ವಾರ್ನರ್, 9.3), 4-84 (ಲಲಿತ್ ಯಾದವ್, 10.6), 5-84 (ರಿಷಭ್ ಪಂತ್, 11.1), 6-113 (ಅಕ್ಷರ್ ಪಟೇಲ್, 14.6)

ಬೌಲಿಂಗ್: ಉಮೇಶ್ ಯಾದವ್ 4-0-24-3, ಹರ್ಷಿತ್ ರಾಣಾ 3-0-24-1, ಟಿಮ್ ಸೌಥಿ 4-0-31-0, ಸುನಿಲ್ ನಾರಾಯಣ್ 4-0-19-1, ನಿತೀಶ್ ರಾಣಾ 1-0-14-0, ಆಂಡ್ರೆ ರಸೆಲ್ 1-0-14-0, ವೆಂಕಟೇಶ್ ಅಯ್ಯರ್ 1-0-14-0, ಶ್ರೇಯಸ್ ಅಯ್ಯರ್ 1-0-7-0

ಫಲಿತಾಂಶ: ಡೆಲ್ಲಿ ಕ್ಯಾಪಿಟಲ್ಸ್‌ಗೆ 4 ವಿಕೆಟ್‌ಗಳ ಜಯ

ಪರ್ಪಲ್ ಕ್ಯಾಪ್
(ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	18
ಕುಲದೀಪ್	ಡೆಲ್ಲಿ	17
ಉಮ್ರಾನ್	ಹೈದರಾಬಾದ್	15

ಆರೆಂಜ್ ಕ್ಯಾಪ್
(ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	499
ರಾಹುಲ್	ಲಖನೌ	368
ಹಾರ್ದಿಕ್	ಗುಜರಾತ್	305

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	8	7	1	0	0	14	0.371
ರಾಜಸ್ಥಾನ	8	6	2	0	0	12	0.561
ಹೈದರಾಬಾದ್	8	5	3	0	0	10	0.600
ಲಖನೌ	8	5	3	0	0	10	0.334
ಬೆಂಗಳೂರು	9	5	4	0	0	10	-0.572
ಡೆಲ್ಲಿ	8	4	4	0	0	8	0.695
ಪಂಜಾಬ್	8	4	4	0	0	8	-0.419
ಕೋಲ್ಕತ್ತ	9	3	6	0	0	6	-0.006
ಚೆನ್ನೈ	8	2	6	0	0	4	-0.538
ಮುಂಬೈ	8	0	8	0	0	0	-1.000

*ಗುರುವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತ್ರೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket


ಮಯಂಕ್–ರಾಹುಲ್ ಹಣಾಹಣಿ

ಆಪ್ತಮಿತ್ರರ ಮುಖಾಮುಖಿ

ಪುಣೆ: ಕರ್ನಾಟಕ ಮತ್ತು ಭಾರತ ತಂಡದಲ್ಲಿ ಜೊತೆಯಾಗಿ ಆಡುವ, ಹೋದ ವರ್ಷದ ಐಪಿಎಲ್‌ನಲ್ಲಿ ಒಂದೇ ತಂಡಕ್ಕೆ ಇನಿಂಗ್ಸ್ ಆರಂಭಿಸುತ್ತಿದ್ದ 'ಆಪ್ತಮಿತ್ರರ ಜೋಡಿ' ಮಯಂಕ್ ಅಗರವಾಲ್ ಮತ್ತು ಕೆ.ಎಲ್. ರಾಹುಲ್ ಶುಕ್ರವಾರ ಮಹಾರಾಷ್ಟ್ರ ಕ್ರಿಕೆಟ್ ಕ್ರೀಡಾಂಗಣದಲ್ಲಿ ಮುಖಾಮುಖಿಯಾಗಲಿದ್ದಾರೆ. ಮಯಂಕ್ ನಾಯಕತ್ವದ ಪಂಜಾಬ್ ಕಿಂಗ್ಸ್ ಮತ್ತು ರಾಹುಲ್ ನಾಯಕತ್ವದ ಲಖನೌ ಸೂಪರ್‌ಜೈಂಟ್ಸ್ ಹಣಾಹಣಿ ನಡೆಸಲಿವೆ.



ಮಯಂಕ್



ರಾಹುಲ್

ಐಪಿಎಲ್‌ನಲ್ಲಿ ಸಾಧನೆ

ಪಂಜಾಬ್ ಕಿಂಗ್ಸ್	
ಪಂದ್ಯ	212
ಜಯ	98
ಸೋಲು	114

ಲಖನೌ ಸೂಪರ್‌ಜೈಂಟ್ಸ್	
ಪಂದ್ಯ	8
ಜಯ	5
ಸೋಲು	3

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್

ಫುಟ್‌ಬಾಲ್: ಫೈನಲ್‌ನತ್ತ ಲಿವರ್‌ಪೂಲ್

ಲಿವರ್‌ಪೂಲ್ (ಎಪಿ): ಲಿವರ್‌ಪೂಲ್ ತಂಡ ಚಾಂಪಿಯನ್ಸ್ ಲೀಗ್ ಫುಟ್‌ಬಾಲ್ ಟೂರ್ನಿಯ ಫೈನಲ್‌ನತ್ತ ದಾಪುಗಾಲು ಹಾಕಿದೆ. ಆನ್‌ಫೀಲ್ಡ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಮೊದಲ ಲೆಗ್ ಸೆಮಿಫೈನಲ್‌ನ ಎರಡನೇ ಪಂದ್ಯದಲ್ಲಿ ಲಿವರ್‌ಪೂಲ್ 2–0ಯಿಂದ ವಿಲಾರಿಯಲ್ ವಿರುದ್ಧ ಜಯ ಗಳಿಸಿತು.

ಬುಧವಾರ ನಡೆದ ಮೊದಲ ಲೆಗ್‌ನ ಮೊದಲ ಪಂದ್ಯದಲ್ಲಿ ಮ್ಯಾಂಚೆಸ್ಟರ್ ಸಿಟಿ ತಂಡ ರಿಯಲ್ ಮ್ಯಾಡ್ರಿಡ್ ವಿರುದ್ಧ 4–3ರಲ್ಲಿ ಗೆಲುವು ಸಾಧಿಸಿತ್ತು. ಈ ತಂಡಗಳ ನಡುವಿನ ಎರಡನೇ ಲೆಗ್‌ನ ಎರಡನೇ ಪಂದ್ಯ ಮೇ 5ರಂದು ನಡೆಯಲಿದೆ. ಮೇ 4ರಂದು ಲಿವರ್ ಪೂಲ್ ಮತ್ತು ವಿಲಾರಿಯಲ್ ನಡುವೆ ಎರಡನೇ ಲೆಗ್‌ನ ಮೊದಲ ಪಂದ್ಯ ನಡೆಯಲಿದೆ. ಆ ಪಂದ್ಯದಲ್ಲಿ ಡ್ರಾ ಮಾಡಿಕೊಂಡರೆ ಅಥವಾ ಒಂದು ಗೋಲಿನ ಅಂತರದಲ್ಲಿ ಸೋತರೂ ಲಿವರ್‌ಪೂಲ್ ಪ್ರಶಸ್ತಿ ಸುತ್ತು ಪ್ರವೇಶಿಸಲಿದೆ.

ಯುರೋಪಿಯನ್ ಚಾಂಪಿಯನ್‌ಷಿಪ್‌ಗಳಲ್ಲಿ ಆರು ಬಾರಿ ಪ್ರಶಸ್ತಿ ಗೆದ್ದಿರುವ ಲಿವರ್‌ಪೂಲ್‌ಗೆ ವಿಲಾರಿಯಲ್ ತಂಡದಿಂದ ಭಾರಿ ಸವಾಲೇನೂ ಎದುರಾಗಲಿಲ್ಲ. ಮೊದ-



ಸಡಿಯೊ ಮಾನೆ –ಎಎಫ್‌ಪಿ ಚಿತ್ರ

ಲಾರ್ಧದಲ್ಲಿ ಗೋಲು ಬಿಟ್ಟುಕೊಡದ ತಂಡ ದ್ವಿತೀಯಾರ್ಧದ ಆರಂಭದಲ್ಲೇ ಕೈಸುಟ್ಟುಕೊಂಡಿತು. ಆ ತಂಡದ ರಕ್ಷಣಾ ವಿಭಾಗದ ಪರ್ವಿಸ್ ಎಸ್ಟುಪಿನಾ ಮಾಡಿದ ಪ್ರಮಾದ ಲಿವರ್‌ಪೂಲ್‌ಗೆ ಮುನ್ನಡೆ ಗಳಿಸಿಕೊಟ್ಟಿತು.

53ನೇ ನಿಮಿಷದಲ್ಲಿ ಜೋರ್ಡನ್ ಹೆಂಡೆರ್ಸನ್ ಅವರ ಕ್ರಾಸ್‌ನಲ್ಲಿ ಚೆಂಡನ್ನು ಹೊರಗೆ ಅಟ್ಟಲು ಪ್ರಯತ್ನಿಸಿದ ಪರ್ವಿಸ್ ತಮ್ಮದೇ ತಂಡದ ಗೋಲು-ಪೆಟ್ಟಿಗೆಯೊಳಗೆ ಚೆಂಡನ್ನು ಅಟ್ಟಿದರು. ಉಡುಗೊರೆಯಾಗಿ ಲಭಿಸಿದ ಮುನ್ನಡೆಯ ಲಾಭ ಪಡೆದ ತಂಡ 55ನೇ ನಿಮಿಷದಲ್ಲಿ ಸಡಿಯೊ ಮಾನೆ ಗೋಲು ಗಳಿಸಿ ಸಂಭ್ರಮಿಸಿದರು. ಮೊಹಮ್ಮದ್ ಸಲಾ ನೀಡಿದ ಪಾಸ್‌ನಲ್ಲಿ ಸಾಡಿಯೊ ಸುಲಭವಾಗಿ ಚೆಂಡನ್ನು ಗುರಿ ಮುಟ್ಟಿಸಿದರು.

ಏಷ್ಯಾ ಬ್ಯಾಡ್ಮಿಂಟನ್: ಶ್ರೀಕಾಂತ್, ಸೈನಾಗೆ ನಿರಾಸೆ

ಕ್ವಾರ್ಟರ್‌ಗೆ ಸಿಂಧು, ಸಾತ್ವಿಕ್–ಚಿರಾಗ್

ಮನಿಲಾ, ಪಿಲಿಪ್ಪೀನ್ಸ್ (ಪಿಟಿಐ): ಎದುರಾಳಿಯನ್ನು ನೇರ ಗೇಮ್‌ಗಳಿಂದ ಮಣಿಸಿದ ಭಾರತದ ಪಿ.ವಿ. ಸಿಂಧು ಏಷ್ಯಾ ಓಪನ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ. ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಜೋಡಿಯೂ ಎಂಟರಘಟ್ಟಕ್ಕೆ ಮುನ್ನಡೆಯಿತು.

ಲಂಡನ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಸೈನಾ ನೆಹ್ವಾಲ್ ಹಾಗೂ ಕಿದಂಬಿ ಶ್ರೀಕಾಂತ್ ಅಭಿಯಾನ ಅಂತ್ಯವಾಯಿತು.

ಇಲ್ಲಿ ನಾಲ್ಕನೇ ಶ್ರೇಯಾಂಕ ಪಡೆದಿರುವ, ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ ಸಿಂಧು, ಮಹಿಳಾ ಸಿಂಗಲ್ಸ್‌ನ ಎರಡನೇ ಸುತ್ತಿನ ಪಂದ್ಯದಲ್ಲಿ 21-16, 21-16ರಿಂದ ಸಿಂಗಪುರದ ಜಾಸ್ಲಿನ್ ಹೂಯಿ ಅವರನ್ನು ಪರಾಭವಗೊಳಿಸಿದರು. ವಿಶ್ವ ಕ್ರಮಾಂಕದಲ್ಲಿ 100ನೇ ಸ್ಥಾನದಲ್ಲಿರುವ ಹೂಯಿ 42 ನಿಮಿಷಗಳಲ್ಲಿ ಸಿಂಧು ಎದುರು ಮಣಿದರು.

2014ರ ಗಿಮ್ಚಿಯೊನ್ ಆವೃತ್ತಿಯಲ್ಲಿ ಕಂಚು ಜಯಿಸಿರುವ ಸಿಂಧು, ಮುಂದಿನ ಪಂದ್ಯದಲ್ಲಿ ಚೀನಾದ ಹೆ ಬಿಂಗ್



ಪಿ.ವಿ.ಸಿಂಧು– ಎಪಿ ಚಿತ್ರ

ಜಿಯಾವೊ ಅವರನ್ನು ಎದುರಿಸಲಿದ್ದಾರೆ. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಇದೇ ಆಟಗಾರ್ತಿಯನ್ನು ಮಣಿಸಿ ಸಿಂಧು ಕಂಚು ಕೊರಳಿಗೇರಿಸಿಕೊಂಡಿದ್ದರು.

ಪುರುಷರ ಡಬಲ್ಸ್‌ನ ಎರಡನೇ ಸುತ್ತಿನ ಹಣಾಹಣಿಯಲ್ಲಿ ಸಾತ್ವಿಕ್ – ಚಿರಾಗ್ 21-17, 21-15ರಿಂದ ಜಪಾನ್ ಅಕಿರಾ ಕೊಗಾ ಮತ್ತು ತೈಚಿ ಸೈಟೊ ವಿರುದ್ಧ ಮೇಲುಗೈ ಸಾಧಿಸಿದರು.

ಪ್ರತಿಷ್ಠಿತ ಟೂರ್ನಿಯಲ್ಲಿ ನಾಲ್ಕನೇ ಬಾರಿ ಪದಕ ಜಯಿಸುವ ಸೈನಾ ಅವರ ಆಸೆ ಈಡೇರಲಿಲ್ಲ. ಜಿದ್ದಾಜಿದ್ದಿನ ಪೈಪೋಟಿಯಲ್ಲಿ ಅವರು 21–12, 7–21, 13–21ರಿಂದ 22 ವರ್ಷದ ಚೀನಾ ಆಟಗಾರ್ತಿ ವಾಂಗ್ ಜಿ ಯಿ ಎದುರು ಮಣಿದರು.

ಪುರುಷರ ಸಿಂಗಲ್ಸ್‌ನಲ್ಲಿ ಕಿದಂಬಿ ಶ್ರೀಕಾಂತ್ ಅವರಿಗೂ ನಿರಾಸೆ ಕಾದಿತ್ತು. ಎರಡನೇ ಸುತ್ತಿನ ಪಂದ್ಯದಲ್ಲಿ ಅವರು 16-21, 21-17, 17-21ರಿಂದ ಚೀನಾದ ವೆಂಗ್ ಹಾಂಗ್ ಯಾಂಗ್ ವಿರುದ್ಧ ಶರಣಾದರು.

ಬೆಂಗಳೂರಿನಲ್ಲಿ ರಣಜಿ ಟ್ರೋಫಿ ನಾಕೌಟ್ ಜೂನ್ 4ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಮತ್ತು ಉತ್ತರ ಪ್ರದೇಶ ಕ್ರಿಕೆಟ್ ತಂಡಗಳು ಜೂನ್ 4 ರಿಂದ 8ರವರೆಗೆ ನಡೆಯಲಿರುವ ರಣಜಿ ಟ್ರೋಫಿ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ವೆಬ್‌ಸೈಟ್ (ಬಿಸಿಸಿಐ ಡಾಟ್ ಟಿವಿ)ನಲ್ಲಿ ರಣಜಿ ಟ್ರೋಫಿ ನಾಕೌಟ್ ಹಂತದ ಪಂದ್ಯಗಳ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿದೆ. ಗುಂಪು ಹಂತದ ಪಂದ್ಯಗಳು ಫೆಬ್ರುವರಿ ಮತ್ತು ಮಾರ್ಚ್‌ನಲ್ಲಿ ಬೇರೆ ಬೇರೆ ನಗರಗಳಲ್ಲಿ ಆಯೋಜನೆಗೊಂಡಿದ್ದವು.

ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಗೂ ಮುನ್ನ ಈ ಪಂದ್ಯಗಳು ನಡೆದಿದ್ದವು. ಮೇ 29ರಂದು ಐಪಿಎಲ್ ಫೈನಲ್ ಮುಗಿಯಲಿದೆ. ಜೂನ್ ಮೊದಲ ವಾರದಲ್ಲಿ ರಣಜಿ ನಾಕೌಟ್ ಹಂತದ ಪಂದ್ಯಗಳನ್ನು ಆಯೋಜಿಸಲಾಗುವುದು ಎಂದು ಈ ಹಿಂದೆಯೇ ಮಂಡಳಿಯು ಹೇಳಿತ್ತು.

ಕ್ವಾರ್ಟರ್‌ಫೈನಲ್ ಪಂದ್ಯಗಳು (ಜೂನ್ 4ರಿಂದ 8)
ಕರ್ನಾಟಕ–ಉತ್ತರ ಪ್ರದೇಶ
ಬಂಗಾಳ–ಜಾರ್ಖಂಡ್
ಮುಂಬೈ–ಉತ್ತರಾಖಂಡ
ಪಂಜಾಬ್–ಮಧ್ಯಪ್ರದೇಶ
ಸೆಮಿಫೈನಲ್ ಪಂದ್ಯಗಳು (ಜೂನ್ 12ರಿಂದ 16)
ಫೈನಲ್ (ಜೂನ್ 20 ರಿಂದ 24)
ಸ್ಥಳ: ಬೆಂಗಳೂರು, ಆಲೂರು. ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಹಾಟ್‌ಸ್ಟಾರ್

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ, ಹೊರವಲಯದ ಆಲೂರಿನ ಕೆಎಸ್‌ಸಿಎ ಮೈದಾನ ಮತ್ತು ಜಸ್ಟ್ ಕ್ರಿಕೆಟ್ ಕ್ರೀಡಾಂಗಣಗಳಲ್ಲಿ ಪಂದ್ಯಗಳು ನಡೆಯುವುದು ಬಹುತೇಕ ಖಚಿತವಾಗಿದೆ. ಜೂನ್ 12ರಿಂದ 16ರವರೆಗೆ ಸೆಮಿಫೈನಲ್ ಮತ್ತು 20 ರಿಂದ 24ರವರೆಗೆ ಫೈನಲ್ ಪಂದ್ಯಗಳು ನಡೆಯಲಿವೆ.

'ಎಲ್ಲಾ ಸೋಂಕಿತರಿಗೂ ಜಿನೋಮ್ ಪರೀಕ್ಷೆ'


ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಕೋವಿಡ್ ಸೋಂಕಿತರಾಗುವ ಎಲ್ಲರಿಗೂ ವಂಶವಾಹಿ ಸಂರಚನೆ ವಿಶ್ಲೇಷಣೆಗೆ (ಜಿನೋಮ್ ಸಿಕ್ವೆನ್ಸಿಂಗ್) ಪರೀಕ್ಷೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಾಲ್ಕನೇ ಅಲೆ ಬಂದಿಲ್ಲ. ಲಸಿಕೆ ಪಡೆಯದ ಯುರೋಪ್ ರಾಷ್ಟ್ರಗಳಲ್ಲಿ ಸೋಂಕಿತರ ಪ್ರಮಾಣ ಹೆಚ್ಚಾಗುತ್ತಿದೆ. ಆದ್ದರಿಂದ ಮುನ್ನೆಚ್ಚರಿಕೆ ಕ್ರಮವಾಗಿ ರಾಜ್ಯದಲ್ಲಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳಿಗೆ ಕೋವಿಡ್ ಪರೀಕ್ಷೆ ಮಾಡಲಾಗುವುದು. ಸೋಂಕು ದೃಢಪಟ್ಟರೆ ಅವರನ್ನು ಜಿನೋಮ್ ಪರೀಕ್ಷೆಗೆ ಒಳಪಡಿಸಲಾಗುವುದು. ಇದರಿಂದ ಅವರಲ್ಲಿ ಸೋಂಕಿನ ಬೇರೆ ತಳಿಗಳಿದ್ದರೆ ಗೊತ್ತಾಗುತ್ತದೆ. ಈಗಾಗಲೇ ರಾಜ್ಯದಲ್ಲಿ 8,500 ಜನರಿಗೆ ಜಿನೋಮ್ ಪರೀಕ್ಷೆ ಮಾಡಲಾಗಿದೆ' ಎಂದರು.

'6ರಿಂದ 12 ವರ್ಷದ ಒಳಗಿನ ಮಕ್ಕಳಿಗೆ ಲಸಿಕೆ ನೀಡಲು ಪ್ರಾಥಮಿಕ ಶಾಲೆಗಳಲ್ಲಿ ಲಸಿಕಾ ಅಭಿಯಾನ ಆರಂಭಿಸಲಾಗುವುದು' ಎಂದರು.

ದೇಶದಲ್ಲಿ 3,303 ಪ್ರಕರಣ, 39 ಸಾವು



ನವದೆಹಲಿ (ಪಿಟಿಐ): ದೇಶದಲ್ಲಿ 3,303 ಕೋವಿಡ್ ಪ್ರಕರಣಗಳು ಹೊಸದಾಗಿ ದೃಢಪಟ್ಟಿದ್ದು, 39 ಮಂದಿ ಮೃತಪಟ್ಟಿದ್ದಾರೆ. ದೇಶದ ದೈನಂದಿನ ಪಾಸಿಟಿವಿಟಿ ದರ ಶೇ 0.66ಕ್ಕೆ ತಲುಪಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ದೇಶದಲ್ಲಿ 16,980 ಸಕ್ರಿಯ ಸೋಂಕು ಪ್ರಕರಣಗಳಿವೆ. ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 5,23,693ಕ್ಕೆ ಏರಿಕೆಯಾಗಿದೆ.

ಬೀಜಿಂಗ್‌ನಲ್ಲಿ ಶಾಲೆಗಳು ಬಂದ್

ಬೀಜಿಂಗ್(ಎಪಿ): ಚೀನಾದಲ್ಲಿ ಕೊರೊನಾ ಸೋಂಕು ಹೆಚ್ಚಾಗುತ್ತಿರುವ ಕಾರಣ ರಾಜಧಾನಿ ಬೀಜಿಂಗ್ ನಗರದಲ್ಲಿನ ಎಲ್ಲಾ ಶಾಲೆಗಳನ್ನು ಮುಚ್ಚಲು ಆದೇಶಿಸಲಾಗಿದೆ. ಬೀಜಿಂಗ್‌ನಲ್ಲಿ ಸೋಮವಾರದಿಂದ 3 ಹಂತಗಳಲ್ಲಿ ಎಲ್ಲರಿಗೂ ಕೊರೊನಾ ಸೋಂಕು ಪತ್ತೆ ಪರೀಕ್ಷೆ ಕೈಗೊಂಡಿರುವ ಬೆನ್ನಲ್ಲೇ, ಶಾಲೆಗಳನ್ನು ಬಂದ್ ಮಾಡಬೇಕು ಎಂದು ಆದೇಶಿಸಲಾಗಿದೆ.

ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ತರಗತಿಗಳನ್ನು ನಡೆಸಲಾಗುತ್ತದೆಯೇ ಎಂಬುದರ ಬಗ್ಗೆ ಯಾವುದೇ ಮಾಹಿತಿ ನೀಡಿಲ್ಲ.

ತೈಪೆ ವರದಿ: ತೈವಾನ್‌ನಲ್ಲಿ ಗುರುವಾರ ಒಂದೇ ದಿನ 10,000ಕ್ಕೂ ಹೆಚ್ಚು ಮಂದಿಗೆ ಕೊರೊನಾ ವೈರಸ್ ದೃಢಪಟ್ಟಿದೆ. ದೇಶದಲ್ಲಿ ಕೋವಿಡ್ ನಿಯಮಾವಳಿಯಲ್ಲಿ ಸರ್ಕಾರ ಬದಲಾವಣೆ ಮಾಡಿದ ಬಳಿಕ ಇದೇ ಮೊದಲ ಬಾರಿ ಇಷ್ಟೊಂದು ಕೋವಿಡ್ ಪ್ರಕರಣಗಳು ದೃಢಪಟ್ಟಿವೆ.

ಶಾಂಘೈ: ಸಾವಿನ ವರದಿ ಬಗ್ಗೆ ಶಂಕೆ

ಶಾಂಘೈ(ರಾಯಿಟರ್ಸ್): ಚೀನಾದ ಶಾಂಘೈನಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದ್ದರೂ, ಸಾವಿನ ಸಂಖ್ಯೆ ಕಡಿಮೆ ಇರುವ ಬಗ್ಗೆ ಅನುಮಾನ ವ್ಯಕ್ತವಾಗಿವೆ. ಮಾರ್ಚ್ ಆರಂಭದಿಂದ ಶಾಂಘೈನಲ್ಲಿ ಪ್ರಕರಣಗಳ ಸಂಖ್ಯೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗುತ್ತಿತ್ತು. ಆದರೆ ಸಾವಿನ ಸಂಖ್ಯೆ ಮಾತ್ರ ಶೂನ್ಯವಿತ್ತು. 2.5 ಕೋಟಿ ಜನಸಂಖ್ಯೆ ಇರುವ ಶಾಂಘೈನಲ್ಲಿ ಏಪ್ರಿಲ್ 17ರಿಂದ ಈವರೆಗೆ 5 ಲಕ್ಷ ಮಂದಿಯಲ್ಲಿ ಸೋಂಕು ಪತ್ತೆಯಾಗಿದ್ದು, 285 ಮಂದಿ ಸಾವಿಗೀಡಾಗಿದ್ದರು. ಹೀಗಾಗಿ ಶಾಂಘೈನ ಕೊರೊನಾ ಲೆಕ್ಕದ ಬಗ್ಗೆ ಅನುಮಾನಗಳು ವ್ಯಕ್ತವಾಗಿವೆ.

ಲಸಿಕೆ ಪರಿಣಾಮದಿಂದ ಶೇ 80ರಷ್ಟು ಸಾವಿನ ಸಂಖ್ಯೆಯಲ್ಲಿ ಇಳಿಕೆ: ವರದಿ

ವಾಷಿಂಗ್ಟನ್(ಪಿಟಿಐ): ಲಸಿಕೆಯ ಪರಿಣಾಮ ಕೋವಿಡ್‌ನಿಂದ ಸಂಭವಿಸಬಹುದಾಗಿದ್ದ ಶೇ 80ಕ್ಕಿಂತ ಹೆಚ್ಚು ಸಾವುಗಳು ನಿಯಂತ್ರಣಕ್ಕೆ ಬಂದಿವೆ ಎಂದು ಅಮೆರಿಕದ ಅಧ್ಯಯನ ವರದಿಯೊಂದು ತಿಳಿಸಿದೆ.

ಅಮೆರಿಕದ 48 ರಾಜ್ಯಗಳು ಮತ್ತು 2558 ಕೌಂಟಿಗಳನ್ನು ಒಳಗೊಂಡ ಈ ಅಧ್ಯಯನದಲ್ಲಿ ಲಸಿಕೆ ಪಡೆಯದ ಕೌಂಟಿಗಳಿಗೆ ಹೋಲಿಸಿದರೆ, ಲಸಿಕೆ ಪಡೆದ ಕೌಂಟಿಗಳಲ್ಲಿ ಸಾವಿನ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಕಡಿಮೆಯಿದೆ ಎಂದು ಉಲ್ಲೇಖಿಸಲಾಗಿದೆ.

2022ರ ಏಪ್ರಿಲ್ 11ರವರೆಗೆ ಜಾಗತಿಕವಾಗಿ 1,100 ಕೋಟಿ ಕೋವಿಡ್ ಲಸಿಕೆಗಳನ್ನು ನೀಡಲಾಗಿದೆ. 2022ರ ಮಧ್ಯಂತರ ಅವಧಿ ವೇಳೆಗೆ ವಿಶ್ವದ ಒಟ್ಟಾರೆ ಜನಸಂಖ್ಯೆಯ ಪೈಕಿ ಶೇ 70ರಷ್ಟು ಮಂದಿಗೆ ಲಸಿಕೆ ನೀಡುವುದು ವಿಶ್ವ ಆರೋಗ್ಯ ಸಂಸ್ಥೆಯ ಗುರಿಯಾಗಿದೆ.

ಲ್ಯಾಟಿನ್ ಅಮೆರಿಕ: ನಿರ್ಬಂಧ ಸಡಿಲಿಕೆ

ಬೊಗೊಟಾ(ಎಪಿ): ಏಷ್ಯಾದ ಕೆಲವು ದೇಶಗಳಲ್ಲಿ ಕೊರೊನಾ ವೈರಸ್ ಹಾವಳಿ ಮತ್ತೆ ಹೆಚ್ಚಾಗಿರುವ ಬೆನ್ನಲ್ಲೇ, ಲ್ಯಾಟಿನ್ ಅಮೆರಿಕದ ದೇಶಗಳಲ್ಲಿ ಕೋವಿಡ್ ಸೋಂಕು ನಿಯಂತ್ರಣಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ ಸೋಂಕು ಹರಡುವಿಕೆ ನಿಯಂತ್ರಣಕ್ಕೆ ಹೇರಲಾಗಿದ್ದ ಬಿಗಿ ಕ್ರಮಗಳನ್ನು ಸಡಿಲಗೊಳಿಸಲು ನಿರ್ಧರಿಸಲಾಗಿದೆ.

ಎರಡು ವರ್ಷಗಳ ಬಳಿಕ ಇದೇ ಮೊದಲ ಬಾರಿಗೆ ದಕ್ಷಿಣ ಅಮೆರಿಕದ ಚಿಲಿ ದೇಶವು ಮುಂದಿನ ವಾರದಲ್ಲಿ ತನ್ನೆಲ್ಲಾ ಗಡಿಗಳನ್ನು ಮುಕ್ತಗೊಳಿಸಲು ನಿರ್ಧರಿಸಿದೆ. ಕೊರೊನಾ ಸಾಂಕ್ರಮಿಕ ಅಂತ್ಯವಾಗಿದೆ ಎಂದು ಮೆಕ್ಸಿಕೊ ಅಧ್ಯಕ್ಷರು ಘೋಷಿಸಿದ್ದಾರೆ. ಅಲ್ಲದೆ ಲ್ಯಾಟಿನ್ ಅಮೆರಿಕದ ದೇಶಗಳಲ್ಲಿ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು ಎಂಬುದು ಸೇರಿದಂತೆ ಕೋವಿಡ್ ನಿಯಮಗಳನ್ನು ಸಡಿಲಗೊಳಿಸಲಾಗುತ್ತಿದೆ.

ಆಫ್ರಿಕಾ: ಸೋಂಕು ಹೆಚ್ಚಳ

ಜೋಹಾನ್ಸ್‌ಬರ್ಗ್/ನೈರೋಬಿ/ಡಾಕರ್ (ರಾಯಿಟರ್ಸ್): ದಕ್ಷಿಣ ಆಫ್ರಿಕಾದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ದ್ವಿಗುಣವಾಗಿರುವುದರಿಂದ ಆಫ್ರಿಕಾದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ.

ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ಎಲ್ಲರೂ ಲಸಿಕೆ ತೆಗೆದುಕೊಳ್ಳಬೇಕು ಎಂದು ವಿಶ್ವ ಆರೋಗ್ಯ ಸಂಸ್ಥೆಯ ಆಫ್ರಿಕಾ ಕಚೇರಿಯ ಸಾಂಕ್ರಾಮಿಕ ಮತ್ತು ಸಾಂಕ್ರಾಮಿಕವಲ್ಲದ ರೋಗಗಳ ನಿರ್ದೇಶಕ ಬೆನಿಡೋ ಇಂಪೌಮಾ ಹೇಳಿದರು.

ಖೇಲೊ ಇಂಡಿಯಾ ವಾರ್ಸಿಟಿ ಕ್ರೀಡಾಕೂಟ: ಒಟ್ಟು ಏಳು ಚಿನ್ನ ಗೆದ್ದ ಈಜುಪಟು; ಜೈನ್ ವಿವಿ ಮುನ್ನಡೆ

ದಾಖಲೆ ಚಿನ್ನ ಗೆದ್ದ ಶಿವ; ಶ್ರೀಹರಿ 'ಹ್ಯಾಟ್ರಿಕ್'

• ವಿಕ್ರಂ ಕಾಂತಿಕೆರೆ

ಬೆಂಗಳೂರು: ಖೇಲೊ ಇಂಡಿಯಾ ವಿಶ್ವವಿದ್ಯಾಲಯಗಳ ಕ್ರೀಡಾಕೂಟದ ಚಿನ್ನದ ಮೀನು ಬೆಂಗಳೂರಿನ ಶಿವ ಶ್ರೀಧರ್ ಅಪೂರ್ವ ದಾಖಲೆಗೆ ಒಡೆಯರಾದರು. ಈಜು ಸ್ಪರ್ಧೆಯಲ್ಲಿ 7 ಚಿನ್ನ ಮತ್ತು ಎರಡು ಬೆಳ್ಳಿ ಗೆದ್ದ ಅವರು ಕ್ರೀಡಾಕೂಟದಲ್ಲಿ ವೈಯಕ್ತಿಕವಾಗಿ ಗರಿಷ್ಠ ಚಿನ್ನ ಗೆದ್ದ ಅಥ್ಲೀಟ್ ಎನಿಸಿಕೊಂಡರು.

ಮೊದಲ ದಿನ 200 ಮೀಟರ್ಸ್ ವೈಯಕ್ತಿಕ ಮೆಡ್ಲೆಯಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನದ ಬೇಟೆ ಆರಂಭಿಸಿದ ಅವರು ಗುರುವಾರ 4x200 ಮೀ ಫ್ರೀಸ್ಟೈಲ್‌ನಲ್ಲಿ ದಾಖಲೆ ಮಾಡಿದರು. ಇದರೊಂದಿಗೆ 2020ರ ಕೂಟದಲ್ಲಿ ಸಿದ್ಧಾಂತ್ ಸೇಜ್ವಾಲ್ ಮತ್ತು ಸಾಧ್ವಿ ದುರಿ ಮಾಡಿದ್ದ ದಾಖಲೆ ಹಿಂದಿಕ್ಕಿದರು. ಅವರಿಬ್ಬರು ತಲಾ 5 ಚಿನ್ನ ಗೆದ್ದಿದ್ದರು. ಈಜುಸ್ಪರ್ಧೆಯ ಕೊನೆಯ ದಿನವಾದ ಗುರುವಾರ ಶ್ರೀಹರಿ ನಟರಾಜ್ ಎರಡು ವೈಯಕ್ತಿಕ ಸೇರಿದಂತೆ ಮೂರು ದಾಖಲೆಗಳನ್ನು ತಮ್ಮ ಹೆಸರಿಗೆ ಸೇರಿಸಿಕೊಂಡರು.

ಐದನೇ ದಿನವೂ ಆತಿಥೇಯ ಜೈನ್ ವಿವಿ ಪದಕ ಗಳಿಕೆಯಲ್ಲಿ ಮುನ್ನಡೆ ಕಾಯ್ದುಕೊಂಡಿದೆ. ಈಜು ಮತ್ತು ಬಾಕ್ಸಿಂಗ್ ಸೇರಿದಂತೆ ಕೂಟದ ಏಳು ಸ್ಪರ್ಧೆಗಳು ಮುಕ್ತಾಯಗೊಂಡಿದ್ದು ಜೈನ್ ವಿವಿ 16 ಚಿನ್ನದೊಂದಿಗೆ 24 ಪದಕಗಳನ್ನು ತನ್ನದಾಗಿಸಿಕೊಂಡಿದೆ. ಕಳೆದ ಬಾರಿಯ ಚಾಂಪಿಯನ್ ಪಂಜಾಬ್ ವಿವಿ ಚೇತರಿಕೆ ಕಂಡಿದ್ದು 9 ಚಿನ್ನದೊಂದಿಗೆ 27 ಪದಕ ಗಳಿಸಿ ಎರಡನೇ ಸ್ಥಾನದಲ್ಲಿದೆ. ಮುಂಬೈ ಮತ್ತು ಅಣ್ಣಾ ವಿವಿ ತಲಾ 6 ಚಿನ್ನ ಗಳಿಸಿವೆ. ಜೈನ್ ಸೇರಿದಂತೆ ರಾಜ್ಯದ 8 ವಿವಿಗಳು ಪದಕ ಪಟ್ಟಿಯಲ್ಲಿ ಸ್ಥಾನ ಗಳಿಸಿವೆ.


ಶಿವ ಶ್ರೀಧರ್

ಫಲಿತಾಂಶಗಳು: ಈಜು: ಪುರುಷರ 100 ಮೀ ಫ್ರೀಸ್ಟೈಲ್: ಶ್ರೀಹರಿ ನಟರಾಜ್ (ಜೈನ್ ವಿವಿ)–1. ಕಾಲ: 50.98 (ಕೂಟ ದಾಖಲೆ. ಹಳೆಯದು: 53.01, ರುದ್ರಾಂಶ್ ಮಿಶ್ರಾ); ಹೀರ್ ಶಾ (ಮುಂಬೈ ವಿವಿ)–2, ಆದಿತ್ಯ ದಿನೇಶ್ (ಅಣ್ಣಾ ವಿವಿ)–3; 50 ಮೀ ಬ್ಯಾಕ್‌ಸ್ಟ್ರೋಕ್: ಶ್ರೀಹರಿ ನಟರಾಜ್ (ಜೈನ್)–1. ಕಾಲ: 26.10 (ಕೂಟ ದಾಖಲೆ. ಹಳೆಯದು: 27.43, ಸಿದ್ಧಾಂತ್ ಸೇಜ್ವಾಲ್); ಶಿವ ಶ್ರೀಧರ್ (ಜೈನ್)–2, ಸಿದ್ಧಾಂತ್ ಸೇಜ್ವಾಲ್ (ಪಂಜಾಬ್ ವಿವಿ)–3; 100 ಮೀ ಬ್ರೆಸ್ಟ್‌ಸ್ಟ್ರೋಕ್: ಧನುಷ್ ಸುರೇಶ್ (ಅಣ್ಣಾ)–1. ಕಾಲ:1:03.36 (ಕೂಟ ದಾಖಲೆ. ಹಳೆಯದು: 1:06.30, ಅಂಶ್ ಅರೋರ); ಜಯ್ ಏಕಬೋಟೆ (ಮುಂಬೈ)–2, ಕೃತಾಯುಷ್ ಸಿಂಗ್ (ಅದಮಾಸ್)–3; 4x200 ಮೀ ಫ್ರೀಸ್ಟೈಲ್: ಜೈನ್ ವಿವಿ (ಶ್ರೀಹರಿ ನಟರಾಜ್, ಸಂಜಯ್, ಶಿವ ಶ್ರೀಧರ್, ರಾಜ್ ರೆಲೇಕರ್)–1. ಕಾಲ: 8:06.87 (ಕೂಟ ದಾಖಲೆ. ಹಳೆಯದು: 8:16.04, ಪಂಜಾಬ್ ವಿವಿ); ಪುಣೆ ವಿವಿ–2, ಮುಂಬೈ ವಿವಿ–3.


ಮಹಿಳೆಯರ ಬಾಕ್ಸಿಂಗ್‌ನಲ್ಲಿ ದೀಪಿಕಾ (ಬಲ) ಮತ್ತು ಶ್ರೇತಿಮಾ ಹಣಾಹಣಿ – ಪ್ರಜಾವಾಣಿ ಚಿತ್ರ/ಬಿ.ಎಚ್.ಶಿವಕುಮಾರ್

ಮಹಿಳೆಯರ 100 ಮೀ ಫ್ರೀಸ್ಟೈಲ್: ಖುತುಜಾ ಖಾಡೆ (ಶಿವಾಜಿ)–1, ಕಾಲ: 1:00.81 (ಕೂಟ ದಾಖಲೆ. ಹಳೆಯದು: ಸಾಧ್ವಿ ದುರಿ); ಸಾಧ್ವಿ ದುರಿ (ಪುಣೆ)–2, ಆರತಿ ಪಾಟೀಲ್ (ಮುಂಬೈ)–3; 50 ಮೀ ಬ್ಯಾಕ್‌ಸ್ಟ್ರೋಕ್: ಶೃಂಗಿ ಬಾಂದೇಕರ್ (ಜೈನ್)–1. ಕಾಲ: 32.01 (ಕೂಟ ದಾಖಲೆ. ಹಳೆಯದು: 32.95, ದಾಮಿನಿ ಗೌಡ);ಪ್ರತ್ಯಾಸ ರಾಯ್ (ಜಾಧವಪುರ್)–2, ದಾಮಿನಿ ಗೌಡ (ರಾಜೀವಗಾಂಧಿ)–3; 100 ಮೀ ಬ್ರೆಸ್ಟ್‌ಸ್ಟ್ರೋಕ್: ಜ್ಯೋತಿ ಪಾಟೀಲ್ (ಮುಂಬೈ)–1. ಕಾಲ: 1:17.17 (ಕೂಟ ದಾಖಲೆ. ಹಳೆಯದು: 1:18.12, ಜ್ಯೋತಿ ಪಾಟೀಲ್), ಆರತಿ ಪಾಟೀಲ್ (ಮುಂಬೈ)–2 ಕಲ್ಯಾಣಿ ಸಕ್ಸೇನ (ಗುಜರಾತ್)–3; 200 ಮೀ ವೈಯಕ್ತಿಕ ಮೆಡ್ಲೆ: ಶೃಂಗಿ ಬಾಂದೇಕರ್ (ಜೈನ್)–1. ಕಾಲ: 2:32.98 (ಕೂಟ ದಾಖಲೆ. ಹಳೆಯದು: 2:34.50, ಸಾಧ್ವಿ ದುರಿ), ಕಲ್ಯಾಣಿ ಸಕ್ಸೇನ (ಗುಜರಾತ್)–2, ಸೃಷ್ಟಿ ಉಪಾಧ್ಯಾಯ (ಜಾಧವಪುರ್)–3; 4x100 ಮೀ ಫ್ರೀಸ್ಟೈಲ್: ಜಾಧವಪುರ್–1, ಮದ್ರಾಸ್–2, ಜೈನ್–3.

ಬಾಕ್ಸಿಂಗ್: ಮಹಿಳೆಯರ 45-48ಕೆಜಿ ಫೈನಲ್: ಶೋಭಾ ಕೋಳಿಗೆ (ಸೋಬನ್ ಸಿಂಗ್) ಶಿಲ್ಪಾ (ಗೊರಕ್‌ಪುರ) ವಿರುದ್ಧ 5-0ಯಿಂದ ಜಯ; ಕಂಚು: ಸುನೈನಾ (ಭಗತ್ ಸಿಂಗ್), ಸೋಮವತಿ (ಚಂಡೀಗಢ); 48-50 ಕೆಜಿ ಫೈನಲ್: ಪೂಜಾಗೆ (ರಣಬೀರ್ ಸಿಂಗ್) ರಿಂಕಿ ಕಿಶೋರ್ (ಬುಂದೇಲ್‌ಖಂಡ್) ವಿರುದ್ಧ 5-0ರಲ್ಲಿ ಜಯ; ಕಂಚು: ಸಂಜೀತಾ (ಮಹರ್ಷಿ ದಯಾನಂದ್), ಆರತಿ (ಭಗತ್ ಸಿಂಗ್); 50-52 ಕೆಜಿ ಫೈನಲ್: ರೇಣುಗೆ (ಮೀರ್‌ಪುರ್) ದಿಯಾ ಬಾಚೆ (ಅಮರಾವತಿ) ವಿರುದ್ಧ 3-2ರಲ್ಲಿ ಜಯ; ಕಂಚು: ನಿಶಾ ರಾಣಿ (ದೇವಿಲಾಲ್), ನಿಕಿತಾ (ಕುರುಕ್ಷೇತ್ರ); 52-54 ಕೆಜಿ ಫೈನಲ್: ಸಂದೀಪ್ ಕೌರ್‌ಗೆ (ಚಂಡೀಗಢ) ಶಿವಾನಿ (ದೀನ್ ದಯಾಳ್) ವಿರದ್ಧು 4-1ರಲ್ಲಿ ಜಯ; ಕಂಚು: ಚೇತನಾ (ಪೂರ್ವಾಂಚಲ್), ಗಾಯತ್ರಿ (ಸೋಬನ್ ಸಿಂಗ್); 54-57 ಕೆಜಿ ಫೈನಲ್: ಪೂನಂಗೆ (ಕುರುಕ್ಷೇತ್ರ) ಕೀರ್ತಿ (ಭಗತ್ ಸಿಂಗ್) ವಿರುದ್ಧ 3-1ರಲ್ಲಿ ಜಯ; ಕಂಚು: ನಿಕಿತಾ (ದೀನ್ ದಯಾಳ್); 57-60 ಕೆಜಿ ಫೈನಲ್: ಮುಸ್ಕಾನ್‌ಗೆ (ದೀನ್ ದಯಾಳ್) ರೇಖಾ (ಇಂದಿರಾಗಾಂಧಿ) ವಿರುದ್ಧ 5-0ಯಿಂದ ಜಯ; ಕಂಚು: ವಿಂಕಾ (ಕುರುಕ್ಷೇತ್ರ), ನೇಹಾ (ಮಹಾರಾಜ); 60-63 ಕೆಜಿ ಫೈನಲ್: ದೀಪಿಕಾ ಶರ್ಮಾಗೆ (ರಣಬೀರ್ ಸಿಂಗ್) ರಾಜಬಾಲ (ರವಿಶಂಕರ್ ಶುಕ್ಲಾ) ವಿರುದ್ಧ 4-1ರಲ್ಲಿ ಜಯ; ಕಂಚು: ಪ್ರಿಯಾಂಕ (ಪಂಜಾಬ್), ಸಯಾಲಿ (ಪುಣೆ); 63-66 ಕೆಜಿ ಫೈನಲ್: ಆಶ್ತಾ ಪಹ್ವಾಗೆ (ಚರಣ್ ಸಿಂಗ್) ಸಿವಿ (ಕುರುಕ್ಷೇತ್ರ) ವಿರುದ್ಧ 4-1ರಲ್ಲಿ ಜಯ; ಕಂಚು: ಅಂಜು ದೇಸ್ವಾಲ್ (ಪಂಜಾಬ್), ನೇಹಾ (ಸೋಬನ್ ಸಿಂಗ್); 66-70 ಕೆಜಿ ಫೈನಲ್: ಕಿರಣ್‌ಗೆ (ಕುಶಾಲ್ ದಾಸ್) ಕುಸುಮ್ (ಗುರು ಜಂಬೇಶ್ವರ್) ವಿರುದ್ಧ 5-0ರಲ್ಲಿ ಜಯ; ಕಂಚು: ಲಾಶು ಯಾದವ್ (ಕುರುಕ್ಷೇತ್ರ), ಕೋಮಲ್ ಪ್ರೀತ್ (ಚಂಡೀಗಢ); 70-75 ಕೆಜಿ ಫೈನಲ್: ಶ್ವೇತಿಮಾಗೆ (ಹಿಮಾಚಲ್ ಪ್ರದೇಶ) ದೀಪಿಕಾ (ರಣಬೀರ್ ಸಿಂಗ್) ವಿರುದ್ಧ 3-2ರಲ್ಲಿ ಜಯ; ಕಂಚು: ಖುಷಿ (ಚಂಡೀಗಢ), ತಮನ್ನ (ಕುರುಕ್ಷೇತ್ರ); 75-81ಕೆಜಿ ಫೈನಲ್: ಕೋಮಲ್‌ಗೆ (ಪಂಜಾಬ್) ನೇಹಾ (ನಿರ್ವಾಣ್) ಎದುರು 5-0ರಲ್ಲಿ ಗೆಲುವು; ಕಂಚು: ಚಂದನ್ (ಲವ್ಲಿ), ಮನ್‌ಪ್ರೀತ್ (ಕುರುಕ್ಷೇತ್ರ); 81-81+ ಕೆಜಿ ಫೈನಲ್: ನೇಹಾಗೆ (ಪಂಜಾಬಿ) ದೀಪಿಕಾ (ಬನ್ಸಿ ಲಾಲ್) ವಿರುದ್ಧ 5-0ರಲ್ಲಿ ಜಯ; ಕಂಚು: ಪಲ್ವಿಂದರ್ ಕೌರ್ (ಬೂಪಿಂದರ್ ಸಿಂಗ್), ಮೆಹಕ್ ಮೊರ್ (ಪಂಜಾಬ್). ಪುರುಷರ 46-48 ಕೆಜಿ ಫೈನಲ್: ಗೋಪಿಗೆ (ಲವ್ಲಿ) ಕೃಷ್ಣ (ದೀನ್ ದಯಾಳ್) ವಿರುದ್ಧ ಜಯ 3-2; ಕಂಚು: ನೀರಜ್ (ಕುರುಕ್ಷೇತ್ರ), ಗಗನ್‌ದೀಪ್ (ಪಂಜಾಬಿ); 48-51 ಕೆಜಿ ಫೈನಲ್: ಸ್ಪರ್ಶ್ ಕುಮಾರ್‌ಗೆ (ಚಂಡೀಗಢ) ವಿವೇಕ್ (ಕುರುಕ್ಷೇತ್ರ) ವಿರುದ್ಧ 4-1ರಲ್ಲಿ ಜಯ; ಕಂಚು: ಅಂಕಿತ್ (ಮಹರ್ಷಿ ದಯಾನಂದ), ಅಮರ್‌ಜೀತ್ (ಗುರುನಾನಕ್).

ಪದಕ ಪಟ್ಟಿಯಲ್ಲಿ ಕರ್ನಾಟಕದ ವಿಶ್ವವಿದ್ಯಾಲಯಗಳು

ವಿಶ್ವವಿದ್ಯಾಲಯ	ಚಿನ್ನ	ಬೆಳ್ಳಿ	ಕಂಚು	ಒಟ್ಟು	ಸ್ಥಾನ
ಜೈನ್	16	5	3	24	1
ಬೆಂಗಳೂರು	1	1	3	5	23
ಮಂಗಳೂರು	1	-	1	2	33
ರಾಜೀವ್‌ಗಾಂಧಿ	-	1	3	4	46
ಮಣಿಪಾಲ್	-	1	-	1	60
ಕ್ರೈಸ್ಟ್	-	-	1	1	74
ರಾಮಯ್ಯ	-	-	1	1	78
ಪಿಇಎಸ್	-	-	1	1	80


ಶ್ರೀ ಹರಿ ನಟರಾಜ್, 50 ಮೀ ಫ್ರೀಸ್ಟೈಲ್‌ನಲ್ಲಿ ಚಿನ್ನ ಗೆದ್ದ ನಂತರ ಸಂಭ್ರಮಿಸಿದ ಕ್ಷಣ –ಪ್ರಜಾವಾಣಿ ಚಿತ್ರ

ಗಾಲ್ಫ್: ಮುನ್ನಡೆ ಕಾಪಾಡಿಕೊಂಡ ವಿರಾಜ್ ಮಾದಪ್ಪ

ಬೆಂಗಳೂರು: ಏಷ್ಯನ್ ಗೇಮ್ಸ್ ಗಾಲ್ಫ್ ಟ್ರಯಲ್ಸ್‌ನಲ್ಲಿ ವಿರಾಜ್ ಮಾದಪ್ಪ ಮೂರನೇ ಸುತ್ತಿನ ಬಳಿಕ ಮುನ್ನಡೆ ಕಾಯ್ದುಕೊಂಡಿದ್ದಾರೆ. ಮಹಿಳೆಯರ ವಿಭಾಗದಲ್ಲಿ ಜಾಹ್ನವಿ ಬಕ್ಷಿ ಜಂಟಿ ಮುನ್ನಡೆಯಲ್ಲಿದ್ದರು.

ಕರ್ನಾಟಕ ಗಾಲ್ಫ್ ಸಂಸ್ಥೆಯ ಅಂಗಣದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಗುರುವಾರ ವಿರಾಜ್ ಅವರು ಕರಣ್‌ದೀಪ್ ಕೊಚ್ಚಾರ್ ಅವರಿಗಿಂತ ಮುಂದಿದ್ದರು. ರಶೀದ್ ಖಾನ್ ಮತ್ತು ವೀರ್ ಅಹ್ಲಾವತ್ ಜಂಟಿ ಮೂರನೇ ಸ್ಥಾನದಲ್ಲಿದ್ದಾರೆ.

ಜಾಹ್ನವಿ ಮತ್ತು ಅವನಿ ಪ್ರಶಾಂತ್ ಅವರು ಮಹಿಳೆಯರ ವಿಭಾಗದಲ್ಲಿ ಜಂಟಿ ಮೊದಲ ಸ್ಥಾನದಲ್ಲಿದ್ದರು. ಹಿತಾಶೀ ಮೂರನೇ ಸ್ಥಾನದಲ್ಲಿದ್ದರು.

ಪ್ರತಿ ಆಟಗಾರ ಹಾಗೂ ಆಟಗಾರ್ತಿಯರು ಐದು ಸುತ್ತುಗಳನ್ನು ಆಡುವರು. ಎಲ್ಲ ಸುತ್ತುಗಳ ಬಳಿಕ ಮೊದಲ ನಾಲ್ಕು ಸ್ಥಾನ ಪಡೆಯುವವರು ಫೈನಲ್ಸ್‌ಗೆ ಅರ್ಹತೆ ಗಳಿಸಲಿದ್ದಾರೆ.


ವಿರಾಜ್ ಮಾದಪ್ಪ– ಪ್ರಜಾವಾಣಿ ಚಿತ್ರ

ಸೌರಭ್ ಮಿಂಚು

ನವದೆಹಲಿ (ಪಿಟಿಐ): ಒಲಿಂಪಿಯನ್ ಸೌರಭ್ ಚೌಧರಿ ಅವರು ರಾಷ್ಟ್ರೀಯ ಶೂಟಿಂಗ್ ಆಯ್ಕೆ ಟ್ರಯಲ್ಸ್‌ನ 50 ಮೀಟರ್ಸ್ ಪಿಸ್ತೂಲ್ ವಿಭಾಗದಲ್ಲಿ ಚಿನ್ನ ಜಯಿಸಿದ್ದಾರೆ. ನೌಕಾಸೇನೆಯ ಶೂಟರ್ ಓಂಕಾರ್ ಸಿಂಗ್ 25 ಮೀಟರ್ಸ್ ಸೆಂಟರ್ ಫೈರ್ ಪಿಸ್ತೂಲ್ ವಿಭಾಗದಲ್ಲಿ ಅಗ್ರಸ್ಥಾನ ಗಳಿಸಿದರು.

ಇಲ್ಲಿಯ ಕರ್ಣಿ ಸಿಂಗ್ ಶೂಟಿಂಗ್ ರೇಂಜ್‌ನಲ್ಲಿ ಗುರುವಾರ ಮಹಿಳೆಯರ 10 ಮೀ. ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಅಭಿಜ್ಞಾ ಪಾಟೀಲ್ ಚಿನ್ನ ಗೆದ್ದರು.